# ಪ್ರಸಾದ

## ಮಾಸಿಕ

**ವಿಶೇಷ ಸಂಚಿಕೆ**

ಸಂಪುಟ 39 ಸಂಚಿಕೆ 8 ಆಗಸ್ಟ್ 2024

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**

## 109ನೆಯ ಜಯಂತಿ ಮಹೋತ್ಸವ



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು





# ಪ್ರಸಾದ

ಸಂಪುಟ 39 : ಸಂಚಿಕೆ 8 ಆಗಸ್ಟ್ 2024

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೆಯ ಜಯಂತಿ ಮಹೋತ್ಸವದ ವಿಶೇಷ ಸಂಚಿಕೆ**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004

ಪ್ರಸಾದ






**ಸಂಸ್ಥಾಪಕರು**

ಶ್ರೀಮನ್ಮಹಾರಾಜ  ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಬಿ.ವಿ. ವಸಂತಕುಮಾರ್

ಡಾ. ವೈ.ಸಿ. ಭಾನುಮತಿ

ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)

ಶ್ರೀ ಆರ್.ಎಸ್. ಪೂರ್ಣಾನಂದ

ಶ್ರೀ ಕುಮಾರಸ್ವಾಮಿ ವಿರಕ್ತಮಠ


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---


**ದಶವಾರ್ಷಿಕ ಚಂದಾ : 500/-  *  ಬಿಡಿ ಪ್ರತಿ : 10/-**



# ಪರಿವಿಡಿ


ಗುರುವಾಣಿ 5

ಸಂಪಾದಕೀಯ 8

ಜನತಾ ಜಗದ್ಗುರು 12
ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು
ಜಗದ್ಗುರು ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಡಂಬಳ-ಗದಗ

ಮಹಾಮೇರು 14
ಕ್ಯಾತನಹಳ್ಳಿ ಶ್ರೀ ಶಿವಪ್ರಭು ಸ್ವಾಮಿಗಳು

ದೈವತಾಸ್ವರೂಪಿ 22
ಶ್ರೀ ಕುಮಾರ ನಿಜಗುಣ ಸ್ವಾಮಿಗಳು
ಶ್ರೀ ಶಂಭುಲಿಂಗನ ಕ್ಷೇತ್ರ, ಚಿಲಕವಾಡಿ

ಧರ್ಮದ ಉಸ್ತುವಾರಿ 33
ಸಿ.ಎಚ್. ವಿಜಯಶಂಕರ್
ರಾಜ್ಯಪಾಲರು, ಮೇಘಾಲಯ

ಇವ ನಮ್ಮವರೆಂದವರು 35
ಜೆ.ಹೆಚ್. ಪಟೇಲ್
ಮಾಜಿ ಮುಖ್ಯಮಂತ್ರಿಗಳು

ಸಮಾಜದ ಆಸ್ತಿ 38
ಜಗದೀಶ್ ಎಸ್. ಶೆಟ್ಟರ್
ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳು

ಸಮಾನತೆಯ ಹರಿಕಾರ 40
ಟಿ. ಎನ್. ನರಸಿಂಹಮೂರ್ತಿ
ಮಾಜಿ ಸಚಿವರು




ಧಾರ್ಮಿಕ ಧೀಮಂತ 42

ಯು.ಎಂ. ಮಾದಪ್ಪ

ಮಾಜಿ ಶಾಸಕರು

ಸದ್ಗುರು ಸ್ಮರಣೆ 47

ಎಚ್. ಗಂಗಾಧರನ್

'ದಾಸೋಹ'ದ ಅರ್ಥಕ್ಕೆ ಅನ್ವರ್ಥ 56

ಡಾ. ಎಂ. ಚಿದಾನಂದಮೂರ್ತಿ

ಮಾನವಮುಖಿಯಾದ ದೈವತ್ವ 58

ಡಾ. ಪ್ರಭುಶಂಕರ

ತ್ರಿವೇಣೀ ಸಂಗಮ 63

ಡಾ. ಕೆ. ಚಿದಾನಂದಗೌಡ

ಇದ್ದರೊಬ್ಬರು ಇಂಥ ದಿವ್ಯಚೇತನರು 69

ಕೆ.ಸಿ. ಶಿವಪ್ಪ

ವ್ಯಕ್ತಿ-ಶಕ್ತಿ-ಸಾಧನೆಗಳ ಸಂಗಮ 76

ಪ್ರೊ. ಚಂದ್ರಶೇಖರಯ್ಯ

ತಂಪು ನೆಳಲು-ಹಕ್ಕಿ ಸಾವಿರಾರು 81

ಪ್ರೊ. ಜಿ.ಎಸ್. ಜಯದೇವ್

ಮತ್ತೂ ಅಷ್ಟು ನೆನಪುಗಳು 86

ಪ್ರೊ. ಎ.ಎಸ್. ಜಯರಾಂ

ನನ್ನ ಪುಣ್ಯವಿಶೇಷ 93

ಡಾ. ಚನ್ನಬಸಪ್ಪ

ಅನನ್ಯ ವ್ಯಕ್ತಿತ್ವ 98

ಕೆ.ಎಸ್. ಚಿಕ್ಕಪುಟ್ಟಯ್ಯ

ವಾರ್ತಾವಿಹಾರ 101

ಕುಮಾರಸ್ವಾಮಿ ವಿರಕ್ತಮಠ



# ಗುರುವಾಣಿ

ಗುರುವೆ ಪರತತ್ವವು ತಾನೆ ನೋಡಾ
ಗುರುವೆ ಪರವಸ್ತುವು ತಾನೆ ನೋಡಾ
ಗುರುವೆ ಪರಬ್ರಹ್ಮವು ತಾನೆ ನೋಡಾ
ಗುರುವೆ ಪರಶಿವನು ತಾನೆ ನೋಡಾ
ಗುರುವಿನಿಂದೆ ಪರವಿಲ್ಲವೆಂದು ಸಕಲ ಶ್ರುತಿಗಳು
ಹೊಗಳುತಿಪ್ಪುವು ನೋಡಾ
ಇಂತಪ್ಪ ಶ್ರೀಗುರುವಿಂಗೆ ನಮೋ ನಮೋ ಎಂಬೆನಯ್ಯ
ಅಖಂಡೇಶ್ವರಾ

**– ಷಣ್ಮುಖ ಶಿವಯೋಗಿಗಳು**

ವಚನಕಾರರಾದ ಶ್ರೀ ಷಣ್ಮುಖ ಶಿವಯೋಗಿಗಳವರ ಈ ವಚನ ಗುರುವಿನ ಮಹತ್ವವನ್ನು ಕಣ್ಣಿಗೆ ಕಟ್ಟುವಂತೆ ತಿಳಿಸಿಕೊಡುತ್ತದೆ. ಈ ವಚನ ಸ್ಮೃತಿಪಟಲದಲ್ಲಿ ಹಾದುಹೋದಾಗಲೆಲ್ಲ, ನಮ್ಮ ಗುರುಗಳಾದ ಪರಮಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳ ದಿವ್ಯವೂ, ಭವ್ಯವೂ ಆದ ಆತ್ಮೀಯ ಚಿತ್ರ ಮನಸ್ಸಿನಲ್ಲಿ ಒಡಮೂಡುತ್ತದೆ. ಅವರು ಪರತತ್ತ್ವ, ಪರವಸ್ತು, ಪರಬ್ರಹ್ಮ, ಪರಶಿವ ಎಲ್ಲವೂ ಆಗಿದ್ದರು. ಅವರ ಸಂಪರ್ಕಕ್ಕೆ ಬಂದ ಎಲ್ಲರ ಪಾಲಿಗೂ ಅವರು ಈ ಚತುರ್ವಿಧ ತತ್ತ್ವವಾಗಿದ್ದರು. ಅವರು ಕಲಿತವರ ಕಾಮಧೇನುವೂ ಹೌದು, ಕಲಿಯದವರ ಕಲ್ಪವೃಕ್ಷವೂ ಹೌದು. ಬಹಳಷ್ಟು ಜನ ವಿದ್ವಾಂಸರು, ಜ್ಞಾನಿಗಳಿಗೂ ಅವರು ತತ್ತ್ವಸ್ವರೂಪರಾಗಿಯೇ ಗೋಚರಿಸುತ್ತಿದ್ದರು. ಶ್ರೀಸಾಮಾನ್ಯರು ಅವರ ಬಳಿ ಸುಳಿದಾಗ ಕರುಣೆಯ ಬೆಳಕಾಗಿ ತೋರುತ್ತಿದ್ದರು. ಅವರ ಬದುಕೇ ಒಂದು ಅಖಂಡ ಭಾವದ ಬೆಳಕು. ಅವರ ಜಯಂತ್ಯುತ್ಸವ ಭಕ್ತರ ಹೃನ್ಮನದಲ್ಲಿ ನಿತ್ಯೋತ್ಸವವಾಗಿದೆ ಎಂಬುದು ದಿಟ.

ಶ್ರೀಗಳವರನ್ನು ಕಾಣಲು ಬರುತ್ತಿದ್ದ ರಾಜಕಾರಣಿಗಳು, ಶ್ರೀಮಂತರು, ಶ್ರೀಸಾಮಾನ್ಯರು ಎಲ್ಲರಿಗೂ ಒಂದೇ ತೆರನಾದ ಅನುಭೂತಿ ದೊರೆಯುತ್ತಿತ್ತು. ಅದರಲ್ಲಿ ಯಾವ ಭೇದವೂ ಇರುತ್ತಿರಲಿಲ್ಲ. ಗುರುಗಳಿಗೆ ತೃಣವೂ ಒಂದೇ, ಮಹತ್ತೂ ಒಂದೇ. ಗುರುವೆಂದರೆ ಇಹ–ಪರಗಳ ಸೇತುಬಂಧವೇ ತಾನೆ! ಈ ಸೇತುಬಂಧ ಭೌತಿಕವಾದುದಲ್ಲ, ಅದೊಂದು ಬೆಳಕಿನ ಸೇತು. ಈ ಬೆಳಕು ಭಗವಂತನನ್ನು ಹೊರತುಪಡಿಸಿದ ಬೆಳಕಲ್ಲ. ಏಕೆಂದರೆ, ಭಗವಂತನೇ ಎಲ್ಲ ಬೆಳಕುಗಳ ಮೂಲವಲ್ಲವೆ! ಹಾಗಾಗಿ, ಗುರುವಿಗೆ



ಭಾರತೀಯ ಪರಂಪರೆಯಲ್ಲಿ ಅತ್ಯಂತ ಶ್ರೇಷ್ಠವಾದ ಸ್ಥಾನ. ಪೂಜ್ಯ ರಾಜೇಂದ್ರ ಶ್ರೀಗಳು ಎಲ್ಲ ರೀತಿಯಲ್ಲೂ ಎಲ್ಲರಿಗೂ ಗುರುಗಳಾಗಿದ್ದವರು.

ಷಣ್ಮುಖ ಶಿವಯೋಗಿಗಳ ವಚನದ ಪ್ರಕಾರ ಎಲ್ಲ ಶಾಸ್ತ್ರಗಳ ಪರಮ ಉದ್ದೇಶ ಮನುಷ್ಯನ ಅತ್ಯಂತಿಕ ಗುರಿಯಾದ ನಾಲ್ಕು ತತ್ತ್ವಗಳ ಸೋಪಾನವನ್ನು ಏರುವುದು. ಅದುವೇ ಪರತತ್ತ್ವ, ಪರವಸ್ತು, ಪರಬ್ರಹ್ಮ, ಪರಶಿವ. ಪರವೆಂಬುದೇ ಇಡೀ ಮಾನವ ಜೀವನದ ಗುರಿ. ಹಾಗಾದರೆ ಪರವೆಂದರೇನು? ಅದು ಅತ್ಯಂತ ಪವಿತ್ರವಾದ ಜ್ಞಾನ. ನಿಜದ ಜ್ಞಾನ. ಪರಮಾತ್ಮನ ಜ್ಞಾನ. ಅದನ್ನೊಂದು ಉನ್ನತ ತತ್ತ್ವ ಎಂದು ಹೇಳಬಹುದು. ಈ ತತ್ತ್ವವನ್ನು ಶಿವನು ತನ್ನ ಸತಿಗೆ ತಿಳಿಸಿಕೊಟ್ಟನೆಂದು ಶಿವಪುರಾಣದಲ್ಲಿ ಹೇಳಿದೆ. "ಓ ಸತಿದೇವಿಯೇ ಕೇಳು, ಪಶ್ಚಾತ್ತಾಪಗೊಂಡ ಆತ್ಮವೊಂದು ವಿಮೋಚನೆಗೊಂಡು ಮುಕ್ತವಾಗುವ ಪರತತ್ತ್ವ ಎಂಬ ಮಹಾತತ್ತ್ವವನ್ನು ವಿವರಿಸುತ್ತೇನೆ" ಎಂದು ಈ ತಂತ್ರೋಪದೇಶ ಪ್ರಾರಂಭವಾಗುತ್ತದೆ. ಈ ಶಿವಪುರಾಣಕ್ಕೆ ಕ್ಷೇಮರಾಜ ಎಂಬುವವನು 'ನೇತ್ರತಂತ್ರೋದ್ಯೋತ' ಎಂಬ ವ್ಯಾಖ್ಯಾನಗ್ರಂಥವನ್ನು ಬರೆದಿದ್ದಾನೆ. ಇದರ ಪ್ರಕಾರವೂ, ಪರತತ್ತ್ವವೆನ್ನುವುದು ಒಂದು ಅತ್ಯುನ್ನತ ತತ್ತ್ವ.

ಪರತತ್ತ್ವವೆಂಬುದು ಅನುಭಾವ ಪರವಸ್ತುವೆಂಬ ಉನ್ನತ ತತ್ತ್ವವನ್ನು ಕುರಿತಾಗಿರುತ್ತದೆ. ಪರವಸ್ತುವಿನ ಬಗೆಗಿನ ಎಲ್ಲ ಸಂಗತಿಗಳನ್ನು ಈ ತತ್ತ್ವವು ಒಳಗೊಂಡಿರುತ್ತದೆ. ಅದು ಪರವಸ್ತುವಿನ ಸಮಗ್ರ ಲಕ್ಷಣಗಳನ್ನು ಸೋದಾಹರಣವಾಗಿ ವಿವರಿಸುತ್ತದೆ. ಪರವಸ್ತು ಎಂದರೆ ಜಗತ್ತಿನಲ್ಲಿರುವ ಚರಾಚರ ಸಂಗತಿಗಳನ್ನು ಏಕತ್ರ ಅಡಕಗೊಳಿಸಿಕೊಂಡಿರುವ ತತ್ತ್ವವೆಂದು ಹೇಳಬಹುದು.

ಪರವಸ್ತುವಿನ ಕಲ್ಪನೆಯಲ್ಲಿ ತಾತ್ವಿಕ ಮತ್ತು ಧಾರ್ಮಿಕ ಎಂದು ಎರಡು ವಿಧಗಳಿವೆ. ಪರವಸ್ತುವಿನ ಧಾರ್ಮಿಕ ಕಲ್ಪನೆಯು ತಾತ್ವಿಕ ಪರಿಕಲ್ಪನೆಗಿಂತ ಭಿನ್ನ. ಲೋಕದ ಜನರಿಗೆ ಪರವಸ್ತುವಿನ ನಿರ್ಗುಣ ಸ್ವರೂಪವು ಸುಲಭವಾಗಿ ಅರ್ಥವಾಗುವುದಿಲ್ಲ. ಜನರು ಅದರ ಹಲವಾರು ಭೌತಿಕ ಆಶೆಗಳ ಪೂರೈಕೆಗಾಗಿ ಪರವಸ್ತುವಿಗೆ ಅನೇಕ ಕಲ್ಪಿತ ಉಪಾಧಿಗಳನ್ನು ಆರೋಪಿಸಿ ಅದಕ್ಕೊಂದು ರೂಪವನ್ನು ನೀಡುತ್ತಾರೆ. ನಿಜವಾದ ಸಂಗತಿಯೆಂದರೆ, ಈ ಉಪಾಧಿಗಳಾವುವೂ ಪರವಸ್ತುವನ್ನು ಸರ್ವಸಮರ್ಪಕವಾಗಿ ವಿವರಿಸಲಾರವು. ಆದರೆ ಈ ಉಪಾಧಿಗಳ ಮೂಲಕವಲ್ಲದೆ ಪರವಸ್ತುವನ್ನು ವಿವರಿಸುವುದೂ ಸಾಧ್ಯವಿಲ್ಲ. ತಾತ್ವಿಕವಾಗಿ ಪರವಸ್ತುವನ್ನು ಸಗುಣ ಮತ್ತು ನಿರ್ಗುಣ ಎಂದು ಎರಡು ಬಗೆಯಾಗಿ ವಿಂಗಡಿಸಬೇಕಾಗಿ ಬಂದುದು ಬಹುಶಃ ಈ ಕಾರಣಕ್ಕೇ. ಶುದ್ಧ ತಾತ್ವಿಕ ಚಿಂತನೆ ಯಾವಾಗಲೂ ಉಪಾಧಿರಹಿತವೇ.





ಪರವಸ್ತುವನ್ನು ಸಗುಣವಾಗಿ ಪರಿಭಾವಿಸುವವರ ಪ್ರಕಾರ, ಅದನ್ನು ಒಲಿಸಿಕೊಳ್ಳಲು, ಹೊಂದಲು ಭಕ್ತಿ, ಪೂಜೆ, ಪ್ರಾರ್ಥನೆಗಳು ಅಗತ್ಯ. ಪ್ರಕೃತಿ–ಪುರುಷ ಅದರ ವಿಶೇಷಣಗಳು. ಈ ಅಮೇಯವಾದ ಪರವಸ್ತು, ಸರ್ವಶಕ್ತ, ವಿಶ್ವಾತೀತ, ತಪೋಗಮ್ಯ ದಿವ್ಯಶಕ್ತಿಯ ಮುಂದೆ ಸೀಮಿತವಾದ ಲೌಕಿಕ ಜ್ಞಾನವು ದಿಗ್ಭ್ರಮೆಯಿಂದ ಕುಬ್ಜವಾಗಿಬಿಡುತ್ತದೆ.

ಆ ಪರವಸ್ತು ಯಾವುದೆಂದರೆ, ಅದೇ ಪರಬ್ರಹ್ಮ. ಪರಬ್ರಹ್ಮ ಎಂದರೆ ಚಿನ್ಮಯ, ಚೈತನ್ಯಸ್ವರೂಪ, ಬ್ರಹ್ಮನ್. 'ಬ್ರಹ್ಮನ್' ಎಂದರೆ 'ಬೃಹತ್ತಾದುದು, ದೊಡ್ಡದು, ಹಿರಿದಾದುದು' ಎಂದರ್ಥ. 'ಯೋ ವೈ ಭೂಮಾ ತತ್ ಸುಖಂ ನಾಲ್ಪೇ ಸುಖಮಸ್ತಿ' – 'ಯಾವುದು ಭೂಮವೋ (ದೊಡ್ಡದೋ) ಅದೇ ಸುಖ, ಅಲ್ಪವಾದುದರಲ್ಲಿ ಸುಖವಿಲ್ಲ' ಎಂಬ ಛಾಂದೋಗ್ಯೋಪನಿಷತ್ತಿನ ವಾಣಿಯಂತೆ ಪರಬ್ರಹ್ಮವೆಂಬುದು ಕೇವಲ ದೊಡ್ಡದು ಮಾತ್ರವಲ್ಲ. ಅದು ಸುಖವನ್ನೂ, ಸಂತಸವನ್ನೂ ನೀಡಬಲ್ಲ ವಿರಾಟ್ ಶಕ್ತಿ. ಪರಶಿವನು ಇಹಪರಗಳ ಅಧಿನಾಯಕ ಎಂಬ ಮಾತನ್ನು ಎಲ್ಲರೂ ಬಲ್ಲರು. 'ನೇತ್ರತಂತ್ರ'ದ ಪ್ರಕಾರ 'ಶಿವ' ಎಂದರೆ ಅತ್ಯುತ್ತಮ, ಮಂಗಳಕರ ಎಂಬರ್ಥಗಳಿವೆ. ಪರಶಿವ ಮಾತ್ರ ಪರಿಪೂರ್ಣ, ಸ್ವಯಂಪೂರ್ಣ. ಮಾನವಪ್ರಜ್ಞೆಯ ಸಾಮನ್ಯ ಗ್ರಹಿಕೆಗಳಾದ ಕಾಲ, ದೇಶ, ರೂಪಗಳನ್ನು ಮೀರಿದ ಅಸಾಮಾನ್ಯ. ಅಂಥ ಪರಶಿವನನ್ನು ಯಾರೂ ನೇರವಾಗಿ ಕಾಣಲಾಗುವುದಿಲ್ಲ. ಆದುದರಿಂದ ಗುರುವನ್ನೇ ಪರಮಶಿವನೆಂದು ಭಾವಿಸಬೇಕೆಂಬುದು ವಚನಕಾರರ ಅಭಿಮತ. ಗುರು ಲಿಂಗ ಜಂಗಮ ಒಂದೇ ಎಂಬ ಭಾವ ಅವರದು. ಈ ಎಲ್ಲ ಅರ್ಥಗಳಿಗೆ ಬರೆದ ವ್ಯಾಖ್ಯಾನದಂತೆ ಪೂಜ್ಯ ರಾಜೇಂದ್ರ ಶ್ರೀಗಳವರು ಬಾಳಿದರು.

ಷಣ್ಮುಖ ಶಿವಯೋಗಿಗಳ "ವಾರಿಕಲ್ಲ ಪುತ್ತಳಿ ಅಪ್ಪುವನೊಡಗೂಡಿದಂತೆ" ಎಂಬ ಮಾತು ಇಲ್ಲಿ ಅತ್ಯಂತ ಮನನೀಯ. "ನೀರ್ಗಲ್ಲಿನಿಂದ ನಿರ್ಮಿತವಾದ ಪುತ್ತಳಿ ನೀರನ್ನು ಒಳಗೊಳ್ಳುವಂತೆ" ರಾಜೇಂದ್ರ ಶ್ರೀಗಳವರು ಇಹಪರಗಳೆರಡನ್ನೂ ಮಂಗಳವಾಗಿ ಬೆಳೆಸಿದವರು. ಅವರು ನೀಡಿರುವ ಬೆಳಕು ಲೋಕಕ್ಕೆ ಸದಾ ಮಾರ್ಗದರ್ಶಕ. 109ನೇ ಜಯಂತ್ಯುತ್ಸವದ ಸಂದರ್ಭದಲ್ಲಿ ಅವರ ಪುಣ್ಯಸ್ಮರಣೆಯ ಸೌಭಾಗ್ಯ ಸರ್ವರಿಗೂ ದೊರೆಯಲೆಂದು ಹಾರೈಸುತ್ತೇವೆ.

**– ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**



# ಸಂಪಾದಕೀಯ

ಗರ್ವಪಡದುಪಕಾರಿ ದರ್ಪ ಬಿಟ್ಟಧಿಕಾರಿ
ನಿರ್ವಿಕಾರದ ನಯನದಿಂ ನೋಳ್ಪುದಾರಿ ।
ಸರ್ವಧರ್ಮಾಧಾರಿ ನಿರ್ವಾಣಸಂಚಾರಿ
ಉರ್ವರೆಗೆ ಗುರುವವನು – ಮಂಕುತಿಮ್ಮ ॥

ಭಾರತೀಯ ತತ್ತ್ವದರ್ಶನಗಳು ಗುರುವಿನ ಬಗ್ಗೆ ಅಪಾರವಾದ ಚಿಂತನೆಯನ್ನು ನಡೆಸಿವೆ. ಅದೊಂದು ಪರಿಪೂರ್ಣ ಹಾಗೂ ಬೆಳಗುವ ತತ್ತ್ವವೆಂದು ಮನಗಂಡಿದೆ. ಮನುಷ್ಯನ ಬದುಕಿನಲ್ಲಿ ಮಾತ್ರವಲ್ಲ, ಇಡೀ ಲೋಕದ ಬದುಕಿನಲ್ಲಿ ಕೂಡ ಗುರುವಿನದು ಬಹಳ ಎತ್ತರದ ಸ್ಥಾನ. ಗುರುವೆಂದರೆ ಆಕಾರಜ್ಞಾನ ಪಡೆದವನಲ್ಲ, ಸ್ವತಃ ತಾನೇ ಜ್ಞಾನವಾದವನು. ಬೆಳಕು ತೋರುವವನಷ್ಟೇ ಅಲ್ಲ, ಸ್ವತಃ ಬೆಳಕಾದವನು. ಪರತತ್ತ್ವವನ್ನು ಅನುಸಂಧಾನ ಮಾಡಿ ತನ್ನೊಳಗೆ ಅದನ್ನು ಸಂಪೂರ್ಣವಾಗಿ ತುಂಬಿಕೊಂಡವನು. ಜಗತ್ತಿನ ಎಲ್ಲದರಲ್ಲೂ ಪರತತ್ತ್ವವನ್ನೇ ಕಾಣುವವನು. ತನ್ನೊಳಗಿನ ಖಾಲಿತನವನ್ನೂ ಖಾಲಿ ಮಾಡಿಕೊಂಡವನು. ಅವರು ಏನನ್ನೂ ತಾವಾಗಿ ಕಲಿಸುವುದಿಲ್ಲ. ತಾವೇ ಕಲಿಕೆಯ ವಸ್ತುವಾಗುವವರು. ಪರಮಪೂಜ್ಯ ರಾಜೇಂದ್ರ ಶ್ರೀಗಳವರು ಭಾರತೀಯ ತತ್ತ್ವಜ್ಞಾನದ ಈ ಪರಿಕಲ್ಪನೆಗೆ ಅನ್ವರ್ಥವಾಗಿ ಬದುಕಿದವರು, ಜಗತ್ತಿಗೇ ಬೆಳಕಾದವರು. ಅವರೇನೂ ಬಹಳ ದೊಡ್ಡ ತತ್ತ್ವಜ್ಞಾನಿಗಳಾಗಿರಲಿಲ್ಲ, ವಾಗ್ಮಿಗಳಾಗಿರಲಿಲ್ಲ. ಆದರೆ ಅವರೇ ತತ್ತ್ವವಾಗಿದ್ದರು. ಅವರು ಹೆಚ್ಚೇನೂ ಹೇಳುತ್ತಿರಲಿಲ್ಲ. ಅವರ ಬದುಕು ಮತ್ತು ನಡವಳಿಕೆಯೇ ಒಂದು ಪ್ರಮಾಣವಾಗಿತ್ತು. ಅವರ ಇರವು ದೀಪಂಕರ ಬುದ್ಧನ ಮಾತಿಗೆ ಪ್ರತಿಬಿಂಬದಂತಿತ್ತು.

ಗೌತಮಗೋತ್ರದ ಅನುಯಾಯಿಯಾಗಿದ್ದ ಸಿದ್ಧಾರ್ಥನು ಜೀವನದ ಪರಮಗುರಿಯನ್ನು ಅರಸಿ, ತನಗಿಂತಲೂ ಬಹಳ ಮೊದಲೇ ಬುದ್ಧನಾಗಿದ್ದ ದೀಪಂಕರನ ಬಳಿಗೆ ಹೋಗಿ, ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ಪ್ರಾರ್ಥಿಸಿದ. ಆಗ ದೀಪಂಕರನು "ನೀನು ಕಲಿಯುವ ಯಾವ ವಿಷಯವೂ ನನ್ನ ಬಳಿ ಇಲ್ಲ" ಎಂದನು. "ನಿಜವಾದ ಸತ್ಯವನ್ನು ಕಾಣುವ ಬಗೆ ಹೇಗೆ ಎಂದು ತಮ್ಮ ಬಳಿ ಕಲಿಯುವುದಿದೆ" ಎಂದನು ಗೌತಮ.





ಆಗ ದೀಪಂಕರನು "ಸತ್ಯವೆಂಬುದು ಕಾಣುವ ಸಂಗತಿಯೇ ಹೊರತು ಕಲಿಯುವ ವಿಷಯವಲ್ಲ. ಸತ್ಯವನ್ನು ಒಂದು ಕಲಿಕೆಯ ವಿಷಯವೆಂದು ಭಾವಿಸಬೇಡ. ಅದು ನಿನ್ನೊಳಗೆ ಸದಾ ಕಾಲದಿಂದಲೂ ಇದ್ದೇ ಇದೆ. ಅದನ್ನು ಹೊರಗಿನ ಯಾರೂ ನಿನಗೆ ನೀಡಲಾರರು" ಎಂದು ಹೇಳಿ ಕಳುಹಿಸಿದ.

ಪರಮಪೂಜ್ಯ ಜಗದ್ಗುರು ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಲೌಕಿಕ ಅರ್ಥದಲ್ಲಿ ಕಲಿತದ್ದು ಕಡಿಮೆಯೇ. ಆದರೆ ಅವರು ಸಕಾಲದಲ್ಲಿ ಕಂಡುಕೊಂಡ ಸತ್ಯದ ಸಾಕ್ಷಾತ್ಕಾರ ಹಲವರಿಗೆ ದಾರಿದೀಪವಾಯಿತು. ಒಂದು ಹಣತೆ ಹಲವು ಹಣತೆಗಳನ್ನು ಬೆಳಗುವ ರೀತಿಯಲ್ಲಿ ಶ್ರೀಗಳವರು ತಮ್ಮ ಸನಿಹಕ್ಕೆ ಬಂದ ಎಲ್ಲರನ್ನೂ ಬೆಳೆಸಿದರು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಒಂದು ಪ್ರಸಿದ್ಧ ಕತೆಯಿದೆ. ಒಮ್ಮೆ ದೇವತೆಗಳು, ದಾನವರು, ಮಾನವರು ಎಲ್ಲರೂ ಪರಮಾತ್ಮನ ಬಳಿಗೆ ಹೋದರಂತೆ, ಪರಮಾತ್ಮನು ಅವರಿಗೆ ಮೋಡದ ರೂಪದಲ್ಲಿ ಕಾಣಿಸಿಕೊಂಡನಂತೆ. ಆ ಮೋಡದಿಂದ ಗುಡುಗಿನ ಶಬ್ದ ಹೊರಹೊಮ್ಮಿ ಅದು 'ದ' ಎಂದು ಕೇಳಿಸಿತು. ದೇವತೆಗಳು ಆ ಶಬ್ದವನ್ನು ಕೇಳಿ ಅಂದುಕೊಂಡರಂತೆ, "ನಾವು ಸ್ವರ್ಗದಲ್ಲಿ ಸುಖದ ಉತ್ತುಂಗದಲ್ಲಿದ್ದೇವೆ. ಬೇಡಿದ್ದನ್ನೆಲ್ಲ ನೀಡುವ ಕಲ್ಪವೃಕ್ಷ ಕಾಮದೇನುವಿದೆ, ಅಪ್ಸರೆಯರಿದ್ದಾರೆ. ಸಾವಿಲ್ಲದೆ, ಮುಪ್ಪಿಲ್ಲದೆ ಈ ಭೋಗದಲ್ಲಿ ನಿರತರಾಗಿರುವ ನಮಗೆ ಸಂಯಮವಿರಲಿ, ಬಯಕೆಗಳನ್ನು ದಮನ ಮಾಡಿಕೊಳ್ಳಿ" ಎಂದು ಭಗವಂತನು ಹೇಳುತ್ತಿದ್ದಾನೆ ಎಂದುಕೊಂಡರಂತೆ. ಇನ್ನು, ದಾನವರು ಅಂದುಕೊಂಡರು: "ನಮ್ಮಲ್ಲಿ ಕೊಲೆ, ಹಿಂಸೆ ಮುಂತಾದ ಪಶುತ್ವವೇ ತುಂಬಿದೆ. ಆದುದರಿಂದ ನಮ್ಮನ್ನು ದಯಾಪರರಾಗಿರಿ ಎಂದು ಭಗವಂತ ಹೇಳುತ್ತಿದ್ದಾನೆ" ಎಂದುಕೊಂಡರು. ಮಾನವರು "ನಾವು ದೇವತೆಗಳಂತೆ ಭೋಗಿಗಳೂ ಅಲ್ಲ, ದಾನವರಂತೆ ಕ್ರೂರಿಗಳೂ ಅಲ್ಲ. ನಾವು ಲೋಭಿಗಳು. ಆದುದರಿಂದ 'ನೀವು ದಾನಶೀಲರಾಗಿ' ಎಂದು ಭಗವಂತ ಹೇಳಿದ್ದಾನೆ" ಎಂದು ಭಾವಿಸಿದರು. ಪೂಜ್ಯ ರಾಜೇಂದ್ರ ಶ್ರೀಗಳನ್ನು ಹತ್ತಿರದಿಂದ ಬಲ್ಲ ಎಲ್ಲರಿಗೂ ಈ ಕಥೆಯ ತಾತ್ಪರ್ಯ ಹೊಳೆಯದಿರದು. ಶ್ರೀಗಳವರ ಬಳಿಗೆ ದೇವ, ದಾನವ, ಮಾನವ ಸ್ವಭಾವದ ಯಾರೇ ಬಂದರೂ ಅವರನ್ನು ಕಂಡಾಗ, ಮಾತನಾಡಿಸಿದಾಗ ಅವರ ಅಂತರಂಗದಲ್ಲಿ ಪರಿವರ್ತನೆ ಆಗುತ್ತಿತ್ತು. ಅವರ ಆಂತರ್ಯದ ಬೆಳಕಿನ ಬಳಿ ಯಾವ ವ್ಯಕ್ತಿ ಬಂದರೂ ಅವರಲ್ಲಿ ಪರಿವರ್ತನೆ ಆಗಿಯೇ ತೀರುತ್ತಿತ್ತು.

ಈ ಎಲ್ಲ ಕಾರಣಗಳಿಂದ ಶ್ರೀಗಳವರ ಇಡೀ ಬದುಕೇ ಗುರುತತ್ತ್ವವಾಗಿತ್ತು. ಮೇಲೆ ಪ್ರಾರಂಭದಲ್ಲಿ ಹೇಳಿರುವ ಕಗ್ಗದ ಮಾತು ಅವರಿಗೆ ಅಕ್ಷರಶಃ ಅನ್ವಯ,



ಅನ್ವರ್ಥಕ. ಅವರು ಎಷ್ಟೋ ಜನರಿಗೆ ಉಪಕಾರ ಮಾಡಿದ್ದಾರೆ. ಆದರೆ ಅದನ್ನೆಂದೂ ಯಾರ ಮುಂದೆಯೂ ಹೇಳಿಕೊಂಡವರಲ್ಲ. ಉಪಕಾರವೆಂದರೆ ತಮ್ಮ ಬಳಿ ಇರುವುದನ್ನು ಇರುವಂತೆಯೇ ಆಗಲೇ ನೀಡಿಬಿಡುವುದಲ್ಲ. ಅದರ ಅವಶ್ಯಕತೆ ತನಗಿಂತ ಎದುರಿಗಿರುವವನಿಗೆ ಬೇಕೆನಿಸಿದಾಗ ನೀಡುವುದು. ಈ ಉಪಕಾರ ಪ್ರಕೃತಿಸ್ವಭಾವದಂತೆ ಸಹಜವಾಗಿರಬೇಕು. ಗಾಳಿ ಎಂದೂ ತಾನು ಇಲ್ಲದಿದ್ದರೆ ಖಗ, ಮೃಗ, ತರು, ಲತೆಗಳಾದಿಯಾಗಿ ಯಾರೂ ಬದುಕುತ್ತಿರಲಿಲ್ಲ ಎಂಬ ಅಹಮಿಕೆಯನ್ನು ತೋರುವುದಿಲ್ಲ. ಅಂತೆಯೇ ನೀರು, ಬೆಂಕಿ, ಆಕಾಶ, ಅಷ್ಟೇ ಏಕೆ, ಈ ಪ್ರಕೃತಿಯ ಭಾಗವಾದ ತರು, ಲತೆಗಳೂ ಕೂಡ ನಾವು ಈ ಜಗತ್ತಿಗೆ ನೆರಳನ್ನು, ಸುವಾಸನೆಯನ್ನು ನೀಡುತ್ತಿದ್ದೇವೆ ಎಂಬ ಭ್ರಮೆಯನ್ನು ಹೊಂದಿರುವುದಿಲ್ಲ. ಆದರೆ ಮಾನವನಿಗೆ ಮಾತ್ರ ಈ ಉಪಕಾರದ ಅಹಂಕಾರ ತಲೆಗೇರಿರುತ್ತದೆ. ಆದರೆ ನಿಜವಾದ ಗುರು ತಾನೇ ಈ ಲೋಕದ ಉಪಕಾರದಲ್ಲಿದ್ದೇನೆ, ಅಂದಮೇಲೆ ತಾನು ಹೇಗೆ ಉಪಕಾರ ಮಾಡಬಲ್ಲೆ ಎಂಬ ಕೃತಜ್ಞತಾಭಾವದಲ್ಲಿ ಮೌನವಾಗಿ ನಿಂತಿರುತ್ತಾನೆ.

ಅಧಿಕಾರವು ಮನುಷ್ಯನಿಗೆ ಒಂದು ಬಗೆಯ ದರ್ಪವನ್ನು, ಅಹಂಕಾರವನ್ನು ತರುತ್ತದೆ. ಆದರೆ ಮಾನವ ನಿಜವಾಗಿ ಅನಧಿಕಾರಿ, ಅವನಿಗೆ ಯಾವುದರ ಮೇಲೂ ಅಧಿಕಾರವಿರುವುದಿಲ್ಲ. ಅದಕ್ಕೆ ತಾನೇ ಉದಾಹರಣೆ ಆಗಿದ್ದರೂ ಅದು ಅವನಿಗೆ ತಿಳಿಯುವುದಿಲ್ಲ. ಉದಾಹರಣೆಗೆ ನಾನು, ನನ್ನದು, ನನ್ನಿಂದಲೇ, ನನಗಾಗಿಯೇ ಎಂದು ನಾನತ್ವದಲ್ಲಿ ಮುಳುಗಿರುವವನಿಗೆ ಅವನು ಉಸಿರಾಡುವ ಪ್ರಾಣವೇ ಅವನ ಅಧೀನದಲ್ಲಿಲ್ಲ ಎಂಬುದು ಗೊತ್ತಾಗುವುದಿಲ್ಲ. ಅವನ ಉಸಿರು ಆತನ ನಿಯಂತ್ರಣದಲ್ಲಿರುವುದಿಲ್ಲ. ತನಗೆ ಬೇಕಾದಾಗ ಸ್ವೀಕರಿಸಿ, ಬೇಡವೆಂದಾಗ ಅದನ್ನು ಬಿಡಲು ಸಾಧ್ಯವಿಲ್ಲ. ದೇಹಕ್ಕೆ ಹೇಗೆ ಬೇಕೋ ಹಾಗೆ ಉಸಿರಾಟ ತಂತಾನೇ ನಡೆಯುತ್ತದೆ. ಸ್ವತಃ ನಮ್ಮ ಉಸಿರೇ ತಮ್ಮ ನಿಯಂತ್ರಣದಲ್ಲಿ ಇಲ್ಲವೆಂದ ಮೇಲೆ ಇತರ ವಸ್ತುಗಳ ಮೇಲೆ ನಮ್ಮ ಅಧಿಕಾರ ಇದೆ ಎಂದುಕೊಳ್ಳುವುದು ವ್ಯರ್ಥ ಭ್ರಮೆಯಲ್ಲವೆ!

ಜಗತ್ತನ್ನು ಅರಿಯಲು ಇರುವ ಪ್ರಧಾನ ಸಾಧನ ಕಣ್ಣು. ಖ್ಯಾತ ಕವಿ ಶ್ರೀ ಗೋಪಾಲಕೃಷ್ಣ ಅಡಿಗರು ಲೌಕಿಕದ ಕಣ್ಣನ್ನು "ಮಣ್ಣಿನ ಕಣ್ಣು" ಎನ್ನುತ್ತಾರೆ. ಇದಕ್ಕೆ ಅರಿಷಡ್ವರ್ಗಗಳಿಂದ ಮುಕ್ತವಾಗುವ ಬಗೆಯೇ ತಿಳಿಯುವುದಿಲ್ಲ. ಹೀಗೆ ದೋಷಯುಕ್ತವಾಗಿರುವುದನ್ನೇ 'ವಿಕಾರ' ಎಂದು ಕರೆಯಲಾಗುತ್ತದೆ. ಹಾಗಾಗಿ ಎಲ್ಲ ವಿಕಾರಗಳಿಗೂ ಮೂಲ ಕಾರಣ 'ಕಣ್ಣು'. ಈ ಕಣ್ಣು ಲೋಕವನ್ನು ಸಮಾನ ದೃಷ್ಟಿಯಿಂದ ನೋಡುವ ಬಗೆಯನ್ನು



ಕಲಿತುಕೊಳ್ಳಬೇಕು. ನಿರ್ವಿಕಾರತ್ವವನ್ನು ಸಾಧಿಸಬೇಕು. ಆಗ ವ್ಯಕ್ತಿಯ ನೋಟದಲ್ಲಿ ಮೇಲುಕೀಳಿನ ದೋಷವಿರದೆ ಅಲ್ಲಿ ಉದಾರತೆ ಮೈದೋರುತ್ತದೆ. ಸರ್ವಧರ್ಮಗಳನ್ನೂ ಸಮವೆಂದು ಬಗೆದು 'ಕಸವರವೆಂಬುದು ನೆರೆ ಸೈರಿಲಾರ್ಪೊಡೆ ಪರಧನಮುಂ ಪರವಿಚಾರಮುಂ' ಎಂಬ ಮಟ್ಟವನ್ನು, ಸ್ಥಿತಿಯನ್ನು ತಲುಪುತ್ತಾನೆ. ಕೊನೆಯದಾಗಿ ಹೇಳಬೇಕಾದ ವಿಷಯವೆಂದರೆ, ಮುಕ್ತಿಯೇನಿದ್ದರೂ ಏಕಾಂಗಿಯಾಗಿ ಕ್ರಮಿಸಬೇಕಾದ ಸಾಧನಾಪಥ. ಲೋಕದ ಜಂಜಾಟವೇ ಬೇಡವೆಂದು ಮುಕ್ತಿ ಸಾಧಿಸಿದ ಬುದ್ಧ, ಮಹಾವೀರ ಮುಂತಾದವರು ಸಹ ಜನರ ಮಧ್ಯೆಯೇ ಇದ್ದರಲ್ಲ ಎಂದರೆ, ಲಂಕೇಶರು ಹೇಳುವಂತೆ, ಮೋಕ್ಷದ ಹುಡುಕಾಟದ ಮೊದಲ ಹೆಜ್ಜೆ ಲೋಕದೊಂದಿಗಿನ ಪ್ರೀತಿಯನ್ನು ಅಂದರೆ ಮಮಕಾರಗಳನ್ನು ತ್ಯಜಿಸುವುದು. ಮೋಕ್ಷಕ್ಕೆ ಮೊದಲ ಹೆಜ್ಜೆಯಾಗಿ ಲೌಕಿಕತೆಯನ್ನು ತ್ಯಜಿಸಬೇಕಲ್ಲ! ಹೀಗೆ ಎಲ್ಲಾ ಹಂತಗಳನ್ನೂ ದಾಟಿದವರು ಲೋಕಕ್ಕೆ ಗುರುವಾಗುತ್ತಾರೆ. ಈ ವಿಶಾಲಾರ್ಥದಲ್ಲಿ ಪೂಜ್ಯ ರಾಜೇಂದ್ರ ಶ್ರೀಗಳವರು "ಲೋಕದ ಗುರು, ಜಗದ ಗುರು" ಆಗಿದ್ದವರು. ಆದುದರಿಂದಲೇ ಅವರು ನಮಗೆಲ್ಲ ನಿತ್ಯಸ್ಮರಣೀಯರು. ಅವರ 109ನೆಯ ಜಯಂತ್ಯುತ್ಸವದ ಅಂಗವಾಗಿ "ಪ್ರಸಾದ" ವಿಶೇಷ ಸಂಚಿಕೆಯನ್ನು ಹೊರತರುತ್ತಿರುವುದು ನಮ್ಮ ಸೌಭಾಗ್ಯ. ಇದಕ್ಕಾಗಿ 'ಘನ-ಮನ' ಗ್ರಂಥದಿಂದ ಲೇಖನಗಳನ್ನು ಆಯ್ದುಕೊಂಡು ಸಂಧರ್ಭಾನುಗುಣವಾಗಿ ಜೋಡಿಸಲಾಗಿದೆ.

**ಡಾ. ಎಂ.ಎನ್. ನಂದೀಶ್ ಹಂಚೆ**

## ರಾಜೇಂದ್ರ ಶ್ರೀವಾಣಿ

- ಜನಸಾಮಾನ್ಯರ ಆರೋಗ್ಯ ಸುಧಾರಿಸದ ಹೊರತು ದೇಶದ ಸ್ವಾಸ್ಥ್ಯ ಸುಧಾರಿಸಲಾಗದು.
- ರೋಗಿಗಳು ನಮ್ಮ ಬಂಧುಗಳು.
- ಯುವಶಕ್ತಿ ರಾಷ್ಟ್ರದ ಮಹಾಶಕ್ತಿ. ಯುವ ಶಕ್ತಿಯ ಸದುಪಯೋಗ ವಾಗದಿದ್ದಲ್ಲಿ ರಾಷ್ಟ್ರದ ಏಳಿಗೆ ಅಸಾಧ್ಯ.
- ಸಮಾಜದ ಉದ್ಧಾರ ವಿದ್ಯಾರ್ಜನೆಯಿಂದ ಮತ್ತು ಜ್ಞಾನ ಪ್ರಸರಣದಿಂದಲೇ ಸಾಧ್ಯ.



# ಜನತಾ ಜಗದ್ಗುರು

**ಜಗದ್ಗುರು ಡಾ. ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು**
**ಜಗದ್ಗುರು ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಡಂಬಳ-ಗದಗ**

**ಸು**ತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಈ ಶತಮಾನದ ಜಗದ್ಗುರುಗಳ ಶ್ರೇಣಿಯ ಅಪೂರ್ವ ವ್ಯಕ್ತಿಗಳು. ಅವರ ನುಡಿ ಒಂದು ಆದೇಶ, ನಡೆ ಒಂದು ಆದರ್ಶ. 'ತೇನ ವಿನಾ ತೃಣಮಪಿ ನ ಚಲತಿ' ಎಂಬಂತೆ ಅವರು ಧರ್ಮಸಾಮ್ರಾಜ್ಯರಲ್ಲಿ ಆಳಿದರು, ಧರ್ಮಸಾಮ್ರಾಜ್ಯವನ್ನು ಬಾಳಿದರು. ಭಕ್ತಕೋಟಿಯ ಶ್ರೇಯಸ್ಸಿಗಾಗಿ ರಾತ್ರಿಯನ್ನು ಹಗಲನ್ನಾಗಿಸಿ ದುಡಿದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು, ಮೈಸೂರು ಪ್ರಾಂತ್ಯದ ಎಲ್ಲ ಸಮಾಜಗಳ ಶಿಷ್ಯಸಮುದಾಯಕ್ಕೆ ದಕ್ಷಿಣ ಕರ್ನಾಟಕದ ದೊಡ್ಡ ರಕ್ಷಣಾ ಕೋಟೆಯೆನಿಸಿದ್ದರು.

ಸುತ್ತೂರು ಒಂದು ಸಣ್ಣ ಹಳ್ಳಿ. ಅಲ್ಲಿಯ ಶಿವರಾತ್ರೀಶ್ವರ ಮಠಕ್ಕೆ ಸುದೀರ್ಘ ಶರಣ ಪರಂಪರೆಯಿದೆ. 'ದಾಸೋಹ' ಶರಣ ಪರಂಪರೆಯ ಕೇಂದ್ರ ತತ್ವವನ್ನು ಕೇವಲ ಧರ್ಮಮುಖಿಯಾಗಿ ಬೆಳೆಸದೆ ಸಾಹಿತ್ಯ, ಶಿಕ್ಷಣ, ಜನಕಲ್ಯಾಣ ಇತ್ಯಾದಿ ಮುಖಗಳಲ್ಲಿ ಬೆಳೆಸಿದವರು ಪೂಜ್ಯ ಶ್ರೀಗಳು. ಅವರದು ದೂರದೃಷ್ಟಿ. ಇದಕ್ಕೆ ಒಂದು ಉದಾಹರಣೆ 'ಶರಣ ಸಾಹಿತ್ಯ ಪರಿಷತ್ತು'. ಅಂದು ಅವರು ಸ್ಥಾಪಿಸಿದ ಈ ಸಂಸ್ಥೆ, ಪುಸ್ತಕ ಪ್ರಕಟಣೆ, ವಿಚಾರಸಂಕಿರಣ, ಸಮ್ಮೇಳನಗಳ ಹೆಮ್ಮರವಾಗಿ ಬೆಳೆದಿದೆ. ಅದು ಜರುಗಿಸುತ್ತಿರುವ 'ಶರಣ ಸಾಹಿತ್ಯ ಸಮ್ಮೇಳನ' ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ಸಾಹಿತ್ಯ ಸಮ್ಮೇಳನ'ಗಳನ್ನು ನೆನಪಿಸುತ್ತದೆ. ಇದು ಸಾಲದು ಎಂಬಂತೆ 'ಶಿವರಾತ್ರೀಶ್ವರ ಗ್ರಂಥಮಾಲೆ'ಯನ್ನು ಸ್ಥಾಪಿಸಿ, ಬಗೆ ಬಗೆಯ ಸಾಹಿತ್ಯಕೃತಿಗಳನ್ನು ಹೊರತಂದುದು, ಹೊರತರುತ್ತಿರುವುದು ಸಣ್ಣ ಸಾಧನೆಯೇನಲ್ಲ. ದಕ್ಷಿಣ ಕರ್ನಾಟಕದಲ್ಲಿ ನೂರಾರು ಲಿಂಗಾಯತ ಮಠಗಳಿವೆ. ಆದರೆ ಶರಣ ಸಾಹಿತ್ಯ ಪ್ರಕಟಣೆಯ ವಿಷಯದಲ್ಲಿ ಪೂಜ್ಯರು ಸ್ಥಾಪಿಸಿದ ಶಿವರಾತ್ರೀಶ್ವರ ಗ್ರಂಥಮಾಲೆಯ ಕೊಡುಗೆ ಅಗ್ರಗಣ್ಯವಾದುದು.

'ಶಿಕ್ಷಣವೇ ಶಕ್ತಿ' ಎಂಬ ಉಕ್ತಿಯನ್ನು ಅರ್ಥಮಾಡಿಕೊಂಡ ಶ್ರೀಗಳು ಸ್ಥಾಪಿಸಿದ 'ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾಪೀಠ'ದ ಸಿದ್ಧಿ ಪ್ರಸಿದ್ಧಿಗಳ ಬಗ್ಗೆ ಬರೆಯಲು ಶಬ್ದಗಳು ಸಾಲವು. ಪ್ರಾಥಮಿಕ ದಿಂದ ಸ್ನಾತಕೋತ್ತರ ವರೆಗಿನ ಶಿಕ್ಷಣ ಸಂಸ್ಥೆಗಳು ಇಂದು ರಾಜ್ಯದಿಂದ





ರಾಷ್ಟ್ರದವರೆಗೂ ಬೆಳೆದಿವೆ. ವಿದೇಶದಲ್ಲಿಯೂ ತಲೆಯೆತ್ತಿವೆ. ಇದಕ್ಕೆಲ್ಲ ಭೂಮಿಯಾಗಿದ್ದ ವರು, ಬೀಜವಾಗಿದ್ದವರು ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳು. ಸರ್ಕಾರದ ಸೌಲಭ್ಯಗಳೇನೂ ಇಲ್ಲದ ಅಂದಿನ ದಿನಮಾನದಲ್ಲಿ ಶಿಕ್ಷಣ ಸಂಸ್ಥೆ, ವಿದ್ಯಾರ್ಥಿ ವಸತಿನಿಲಯ, ಅನ್ನ ದಾಸೋಹಗಳನ್ನು ಆರಂಭಿಸಿ, ಆ ಭಾಗದ ಜನವರ್ಗವನ್ನು ಸುಶಿಕ್ಷಿತರನ್ನಾಗಿ ಮಾಡಿದುದು ದಾಖಲಾರ್ಹವಾಗಿದೆ. ಭಿಕ್ಷೆ ಬೇಡಿ, ಸಾಲ ಮಾಡಿ, ಕೊನೆಗೆ ಬಂಗಾರದ ಕರಡಿಗೆಯನ್ನೂ ಮಾರಿ, ವಿದ್ಯಾರ್ಥಿಗಳನ್ನು ಪೋಷಿಸಿದ ಘಟನೆಗಳು ನಮ್ಮ ಕಣ್ಣು ತೆರೆಸುತ್ತವೆ. ವಿದ್ಯಾರ್ಥಿಗಳ ಪ್ರಸಾದ ಮೊದಲು, ಬಳಿಕ ನಮ್ಮದು. ವಿದ್ಯಾರ್ಥಿಗಳ ನಿತ್ಯಪ್ರಸಾದವೇ ನಮ್ಮ ಪ್ರಸಾದ ಇತ್ಯಾದಿ ನಡೆಗಳು ಸ್ವಾಮಿಗಳಾದ ನಮಗೆ ಆದರ್ಶಪಾಠಗಳಾಗಿವೆ. ವಿದ್ಯೆಯನ್ನರಸಿ ಬಂದ ನೂರಾರು, ಸಹಸ್ರಾರು ಬಡ ಮಕ್ಕಳಿಗೆ ತಾಯಿಯಾದ ಅವರ ಆಶ್ರಯದಲ್ಲಿ ಸಾಹಿತಿಗಳು, ವಿಜ್ಞಾನಿಗಳು, ರಾಜಕಾರಣಿಗಳು, ಸಮಾಜಕಾರ್ಯಕರ್ತರು ಬೆಳೆದುದು ಇಂದು ಇತಿಹಾಸ. ಪೂಜ್ಯರ 'ದಾಸೋಹ'ವಿರದಿದ್ದ ಪಕ್ಷದಲ್ಲಿ ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ, ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಡಿ.ಎಂ. ನಂಜುಂಡಪ್ಪನವರು ನಮಗೆ ದಕ್ಕುತ್ತಿದ್ದುದು ಸಂದೇಹ. ಶಿವರುದ್ರಪ್ಪನವರು ಕಾಲೇಜು ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಪೂಜ್ಯ ಶ್ರೀ ರಾಜೇಂದ್ರ ಸ್ವಾಮಿಗಳು ಆಶ್ರಯ ನೀಡಿದುದನ್ನು ಕೃತಜ್ಞತೆಯಿಂದ ನೆನೆದಿದ್ದಾರೆ. ನಂಜುಂಡಪ್ಪನವರಂತೂ ತಾವು ಜೀವನದಲ್ಲಿ ಮುಂದೆ ಬರಲು ಸುತ್ತೂರು ಮಠದ ಜಗದ್ಗುರುಗಳ ಆಶ್ರಯ ಹಾಗೂ ಆಶೀರ್ವಾದಗಳೇ ಕಾರಣ ಎಂದು ಮೊದಲಿನಿಂದ ನಂಬಿಕೊಂಡಿದ್ದರು. ನಿವೃತ್ತಿಯ ನಂತರ ಯಾವುದೇ ರೀತಿಯಲ್ಲಿ ಗುರುಸೇವೆಯನ್ನು ಮಾಡಿ ಕೃತಾರ್ಥರಾಗಬಯಸಿದ್ದರು. ಈ ಸಂಕಲ್ಪವನ್ನು ಸಾಕಾರಗೊಳಿಸಲೆನ್ನುವಂತೆ ಸುತ್ತೂರು ಪೂಜ್ಯರು ಆರಂಭಿಸಿದ 'ನಾಗರಿಕ ಸೇವಾ ಪರೀಕ್ಷೆ ತರಬೇತಿ ಸಂಸ್ಥೆ'ಯ ಕರ್ಣಧಾರತ್ವವನ್ನು ವಹಿಸಿಕೊಂಡರು.

ಇಂದು ಇಡೀ ದೇಶದ ಗಮನ ಈ ಸಂಸ್ಥೆಯ ಕಡೆಗೆ ತಿರುಗಿದುದು ಈಗ ಇತಿಹಾಸ. ಶಿಷ್ಯನ ಸದ್ಭಾವ ಹಾಗೂ ಗುರುವಿನ ಸತ್‌ಶಕ್ತಿ ಒಂದಾದರೆ ಎಂಥ ಅದ್ಭುತವನ್ನು ಸೃಷ್ಟಿಸಬಹುದು ಎಂಬುದಕ್ಕೆ ಡಾ. ನಂಜುಂಡಪ್ಪ ಹಾಗೂ ಸುತ್ತೂರು ಶ್ರೀಗಳು ಕಟ್ಟಿ ಬೆಳೆಸಿದ ಈ ಸಂಸ್ಥೆಯೇ ಸಾಕ್ಷಿಯಾಗಿದೆ. ಡಾ. ನಂಜುಂಡಪ್ಪನವರು ಸರ್ಕಾರದ ಮುಖ್ಯ ಹುದ್ದೆ ಗಳಲ್ಲಿದ್ದಾಗ ಸುತ್ತೂರು ಶ್ರೀಗಳು ಅವರ ಸ್ಥಾನಮಾನದ ಉಪಯೋಗವನ್ನು ತಮ್ಮ ಸಂಸ್ಥೆಗೆ ಎಂದೂ ಮಾಡಿಕೊಳ್ಳದಿದ್ದುದು ಶ್ರೀಗಳ ಪಾರದರ್ಶಕ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಇಂದಿಗೂ ನಮ್ಮ ನೆನಪಿನಲ್ಲಿ ಜೀವಂತರಾಗಿರುವ ಪೂಜ್ಯ ರಾಜೇಂದ್ರ ಶ್ರೀಗಳು ಈಗಲೂ ಬದುಕಿದ್ದಾರೆ. ಆದರ್ಶರಾಗಿ ನಿಂತು ಈಗಲೂ ನಮ್ಮ ಬದುಕನ್ನು ರೂಪಿಸುತ್ತಿದ್ದಾರೆ.

☐



# ಮಹಾಮೇರು

## ಕ್ಯಾತನಹಳ್ಳಿ ಶ್ರೀ ಶಿವಪ್ರಭು ಸ್ವಾಮಿಗಳು

**ಕ್ಯಾ**ತನಹಳ್ಳಿ ಶ್ರೀ ಶಿವಪ್ರಭುಸ್ವಾಮಿಗಳವರಿಗೆ ಈಗ 98 ವರ್ಷಗಳು. ಶ್ರೀಮಠಕ್ಕೆ ಸಂಬಂಧಿಸಿದ ಏನಾದರೂ ಪ್ರಶ್ನೆಗಳನ್ನು ಕೇಳಿದರೆ, ಏನೋ ನೆನಪಿಸಿಕೊಂಡವರಂತೆ ತುಸು ಹೊತ್ತು ಮೌನವಾಗಿದ್ದು, ಎಲ್ಲಿಯೋ ನೋಡುತ್ತಾ, ನಿಧಾನಗತಿಯಲ್ಲಿ ಮಾತನಾಡ ತೊಡಗುತ್ತಾರೆ. ಧ್ವನಿಯಲ್ಲಿ ಹಿಂದಿನ ಗಟ್ಟಿತನ ಇಲ್ಲದಿದ್ದರೂ, ವಿಚಾರಗಳ ಸ್ಪಷ್ಟತೆಯಂತೂ ಮಾಸಿದಂತೆ ಕಂಡುಬರುವುದಿಲ್ಲ. ಎದುರಿಗೆ ಕುಳಿತು ಮಾತನಾಡುವುದೇ ಒಂದು ರೋಮಾಂಚಕಾರಿ ಅನುಭವ. ಅವರ ಮಾತುಗಳನ್ನು ಹಿಂಬಾಲಿಸಿಕೊಂಡು ಹೋದಷ್ಟೂ, ಸುಮಾರು ಏಳೆಂಟು ದಶಕಗಳ ಶ್ರೀಮಠದ ಇತಿಹಾಸ ನಮ್ಮ ಕಣ್ಣುಗಳ ಮುಂದೆ ಬಿಚ್ಚಿಕೊಳ್ಳುತ್ತದೆ. ಶ್ರೀಪೀಠದ ಒಳಹೊರಗಿನ ಬೆಳವಣಿಗೆಯ ಒಂದೊಂದು ಹಂತವನ್ನೂ ನಾವು ಹತ್ತುತ್ತಾ ಹೋಗುತ್ತಿದ್ದೇವೇನೋ ಎನ್ನುವ ಅನುಭವ ಉಂಟಾಗತೊಡಗುತ್ತದೆ. ಪೂಜ್ಯ ಶ್ರೀ ಶಿವಪ್ರಭು ಸ್ವಾಮಿಗಳವರು ಶ್ರೀಪೀಠದ ಮೂರು ಜನ ಜಗದ್ಗುರುಗಳೊಡನೆ ನಿಕಟಸಂಪರ್ಕವಿಟ್ಟುಕೊಂಡು ಬಾಳಿದವರು. ಮಠದ ಕಲ್ಯಾಣಕಾರಕ ಕಾರ್ಯಕ್ರಮಗಳ ಯೋಜಕರಾಗಿ, ನಿರ್ದೇಶಕರಾಗಿ, ತನುಮನಗಳನ್ನು ಸಮರ್ಪಿಸಿಕೊಂಡು ಅಹರ್ನಿಶಿ ದುಡಿದವರು. ಅವರ ಒಂದೊಂದು ಮಾತಿನ ಹಿಂದೆ, ಲಿಂ. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೊಡನೆ ಹೆಜ್ಜೆಗೆ ಹೆಜ್ಜೆ ಹಾಕಿದ್ದರ ಸವಿನೆನಪಿನ ಸಾರ್ಥಕ್ಯ ಕಂಡುಬರುತ್ತದೆ. ಅತ್ತ ಗ್ರಾಂಥಿಕವೂ ಅಲ್ಲದ, ಇತ್ತ ಗ್ರಾಮ್ಯವೂ ಅಲ್ಲದ ಅವರ ಭಾಷೆಯ ಬನಿ ಕೇಳುಗರಿಗೆ ಒಂದು ರೀತಿಯ ವಿಶೇಷ ಅನುಭವವನ್ನು ತಂದುಕೊಡುವಂತಹುದು. ಮಠದ ಆಸ್ತಿಪಾಸ್ತಿಗಳ ವಿವರ, ಅವುಗಳನ್ನು ಪಡೆದ ರೀತಿ ಈ ಎಲ್ಲವನ್ನೂ ಚಾಚೂ ತಪ್ಪದೆ ದಿನಾಂಕ, ಗಂಟೆಗಳ ಸಮೇತ ಸವಿವರವಾಗಿ ಹೇಳುವ ಅವರ ನೆನಪಿನ ಶಕ್ತಿ ದಂಗುಬಡಿಸುತ್ತದೆ. ಮುಚ್ಚುಮರೆಯಿಲ್ಲದ ನೇರ ನುಡಿ; ತನ್ನ ಅಂದಂದಿನ ಒಂದೊಂದು ನಡವಳಿಕೆಯ ಹಿಂದಿನ ಉದ್ದೇಶಕ್ಕೆ ನಿರ್ದಿಷ್ಟವಾದ ಸಮರ್ಥನೆ ಇವುಗಳನ್ನು ಯಾರೂ ಒಪ್ಪಲೇಬೇಕು. ನಿಜಕ್ಕೂ ಕ್ಯಾತನಹಳ್ಳಿ ಶ್ರೀಗಳು ಹಿರಿಯ ಹಾಗೂ ಕಿರಿಯ ತಲೆಮಾರಿನ ಚಿಂತನೆಯ ಹದವರಿತ ಬೆಸುಗೆಯಾಗಿದ್ದಾರೆ. ಇಂದಿನ ಶ್ರೀಮಠದ ಕಾರ್ಯವ್ಯಾಪ್ತಿ ಹಾಗೂ ಕಾರ್ಯಭಾರ ಪೂಜ್ಯರಿಗೆ ಅನನ್ಯ ಆತ್ಮತೃಪ್ತಿಯನ್ನು ತಂದಿರುವುದಂತೂ ನಿಜ.

**1. ನಿಮ್ಮ ಅರಿವಿಗೆ ಬಂದಂತೆ - ಸುತ್ತೂರು ಶ್ರೀ ಜಗದ್ಗುರುಪೀಠದ ಪ್ರಗತಿಯಲ್ಲಿ ಮಂತ್ರಮಹರ್ಷಿಗಳ ಪಾತ್ರವೇನು/ಕೊಡುಗೆಗಳೇನು ?**

ನಮ್ಮ ಮಠವು ಆಧುನಿಕ ಕಾಲದ ಅವಶ್ಯಕತೆಗಳಿಗೆ ಸ್ಪಂದಿಸಲು ಪ್ರಾರಂಭವಾದದ್ದೇ ಮಂತ್ರಮಹರ್ಷಿಗಳ ಕಾಲದಲ್ಲಿ. ಅವರದು ಒಂದು ರೀತಿಯಲ್ಲಿ ತುಂಬಾ ಬಿಗಿಯಾದ ನಿಲುವು. ಆಗಾಗ ಶ್ರೀ ರಾಜೇಂದ್ರ ಸ್ವಾಮಿಗಳು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿದ ಸಂದರ್ಭವನ್ನು ನೆನೆಸಿಕೊಳ್ಳುತ್ತಿರುತ್ತೇನೆ. ನೇರವಾಗಿ ಅವರನ್ನು ಕೇಳಿ ಒಪ್ಪಿಸಿಕೊಳ್ಳುವ ಧೈರ್ಯ ಸಾಲದೆ, ರಾಜೇಂದ್ರ ಸ್ವಾಮಿಗಳು ಬೇರೆಯವರನ್ನು ಅವರ ಬಳಿಗೆ ಕಳುಹಿಸಿ ಒಪ್ಪಿಗೆ ಪಡೆಯಬೇಕಾಯಿತು. ಅದೂ ಇಂತಿಷ್ಟೇ ವಿದ್ಯಾರ್ಥಿಗಳನ್ನೂ ಸೇರಿಸಿಕೊಳ್ಳಬೇಕೆನ್ನುವ ನಿಯಮ. ಆಗತಾನೇ ಸುತ್ತೂರು ಭಾಗಕ್ಕೆ ನಾಲೆ ಬಂದಿತ್ತು. ಎಲ್ಲ ಭೂಮಿಯನ್ನು ವ್ಯವಸ್ಥಿತಗೊಳಿಸಿ, ಒಳ್ಳೆಯ ಬೆಳೆ ತೆಗೆಯಲು ತುಂಬಾ ಶ್ರಮಿಸಿದರು. ಮಠ ಆರ್ಥಿಕವಾಗಿ ಗಟ್ಟಿಯಾಗತೊಡಗಿತು. ಮಠದ ವ್ಯವಹಾರದಲ್ಲಿ ಒಂದು ಅಚ್ಚುಕಟ್ಟುತನವನ್ನು ತಂದರು. ಅದು ಈಗಲೂ ನಮಗೆ ಮಾದರಿಯಾಗಿದೆ.

**2. ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಹಾಗೂ ನಿಮ್ಮ ವಿದ್ಯಾಭ್ಯಾಸ ಕ್ರಮದ ವಿಧಿ-ವಿಧಾನಗಳೇನು?**

ರಾಜೇಂದ್ರ ಸ್ವಾಮಿಗಳವರನ್ನು ಕಂಡರೆ ಮಂತ್ರಮಹರ್ಷಿಗಳಿಗೆ ತುಂಬಾ ಪ್ರೀತಿ. ಪ್ರೀತಿಯಿಂದ ಪುಟ್ಟಸ್ವಾಮಿ ಎಂದೇ ಕರೆಯುತ್ತಿದ್ದರು. ಇವರನ್ನೂ ತುಂಬಾ ವಿದ್ಯಾವಂತರನ್ನಾಗಿಸಬೇಕೆನ್ನುವುದು ಅವರ ಹೆಬ್ಬಯಕೆಯಾಗಿತ್ತು. ಅದಕ್ಕಾಗಿಯೇ ಮೈಸೂರಿನಲ್ಲಿ ಒಂದು ಮನೆ ಮಾಡಿ ರಾಜೇಂದ್ರ ಸ್ವಾಮಿಗಳನ್ನೂ, ನನ್ನನ್ನೂ ಮೈಸೂರಿಗೆ ಕಳುಹಿಸಿದರು. ಆಗ ಅವರಿಗೆ ಹತ್ತು ವರ್ಷಗಳು. ನನಗೆ ಹದಿನಾಲ್ಕು ವರ್ಷಗಳು. ಚಿಕ್ಕ ಮಾರ್ಕೆಟ್ ಕಟ್ಟಡದ ಮೇಲ್ಭಾಗದಲ್ಲಿ 'ಶಂಕರವಿಲಾಸ ಪಾಠಶಾಲೆ' ಅಂತ ಇತ್ತು. ಶ್ರೀ ಬಸವರಾಜ ಶಾಸ್ತ್ರಿಗಳು ನಮ್ಮ ವಿದ್ಯಾಗುರುಗಳು. ಅಲ್ಲಿ ಸಂಸ್ಕೃತಾಧ್ಯಯನ ನಡೆಯುತ್ತಿತ್ತು. ಎರಡು ವರ್ಷಗಳ ವಿದ್ಯಾಭ್ಯಾಸದ ನಂತರ, ರಾಜೇಂದ್ರ ಮಹಾಸ್ವಾಮಿಗಳವರಿಗೆ ಪಟ್ಟಾಭಿಷೇಕವಾಯಿತು. ಅನಂತರ ನಮ್ಮ ವಾಸ್ತವ್ಯ ರಾಮಾನುಜ ರಸ್ತೆಯ ನಮಃ ಶಿವಾಯ ಮಠದಲ್ಲಿ. ಮುಂದೆ ಕ್ಯಾತನಹಳ್ಳಿ ಪಾಠಶಾಲೆಯಲ್ಲಿ.

**3. ತಾವು ವಿದ್ಯಾರ್ಥಿಗಳಾಗಿದ್ದಾಗಲೇ ಶ್ರೀಗಳು ಪ್ರಸಾದನಿಲಯವನ್ನು ಪ್ರಾರಂಭ ಮಾಡಿದುದಕ್ಕೆ ಒದಗಿಬಂದ ಹಿನ್ನೆಲೆಯೇನು?**

ರಾಜೇಂದ್ರ ಸ್ವಾಮಿಗಳವರಿಗೆ ಮೊದಲಿನಿಂದಲೂ ಉನ್ನತ ವಿದ್ಯೆಯ ಬಯಕೆಯ ಜೊತೆಗೆ ಗ್ರಾಮೀಣ ಪ್ರದೇಶದ ಜನತೆಯ ವಿದ್ಯಾಭ್ಯಾಸಕ್ಕೆ ಒತ್ತು ಕೊಡಬೇಕು ಎನ್ನುವ

ಬಯಕೆ. ಆಗ ಈ ಭಾಗದ ವೀರಶೈವರಲ್ಲಿ, ಕೇವಲ ಮೂರೇ ಮೂರು ಜನ ಪದವೀಧರರಾಗಿದ್ದರು. ಉಳಿದ ಅನೇಕರಿಗೆ ಆ ಭಾಗ್ಯ ಇರಲಿಲ್ಲ. ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರು ವಾಣೀವಿಲಾಸ ರಸ್ತೆಯಲ್ಲಿ ಸಂಸ್ಕೃತ ಪಾಠಶಾಲೆಯ ಜೊತೆಗೆ ಕೆಲವು ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಟ್ಟಿದ್ದರು. ರಾಜೇಂದ್ರ ಸ್ವಾಮಿಗಳು ಕಾಶಿಯಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಬೇಕೆಂದು ಹೋಗಿದ್ದು, ಶ್ರೀ ಗೌರೀಶಂಕರ ಸ್ವಾಮಿಗಳವರ ಮಾರ್ಗದರ್ಶನದಂತೆ ಹಿಂದಕ್ಕೆ ಬಂದರು. ಅಂದಿನಿಂದ ಅವರಿಗೆ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆನ್ನುವ ಆಸೆ ಹೆಚ್ಚಾಗುತ್ತಾ ಹೋಯಿತು. ಅದಕ್ಕಾಗಿ ನಂಜುಮಳಿಗೆ ಹತ್ತಿರ ಒಂದು ಕಟ್ಟಡವನ್ನು ಬಾಡಿಗೆಗೆ ಹಿಡಿದು ಹಾಸ್ಟೆಲ್ಲನ್ನು ಪ್ರಾರಂಭಿಸಿಯೇಬಿಟ್ಟರು. ಆಗಿನ ಸಮಸ್ಯೆಗಳು ಒಂದೆ, ಎರಡೆ?

**4. ಪ್ರಸಾದನಿಲಯಗಳನ್ನು ಹತ್ತಾರು ಕಡೆ ತೆರೆಯುವುದರಿಂದಾಗಿಯೇ ಸುತ್ತೂರು ಪೀಠದ ಕೀರ್ತಿಯು ಎಲ್ಲೆಡೆಯು ಪ್ರಸರಿಸುವಂತಾಯಿತು ಎನ್ನಬಹುದೆ?**

ಹೇಳಬೇಕೆಂದರೆ, ಕೀರ್ತಿ ಸಂಪಾದನೆಗಾಗಿ ನಾವು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಿಲ್ಲ. ಆದರೆ, ನಮ್ಮ ವಿದ್ಯಾರ್ಥಿನಿಲಯದ ಅನೇಕ ವಿದ್ಯಾರ್ಥಿಗಳು ಕೀರ್ತಿವಂತರಾದುದು ನಮಗೆ ತುಂಬಾ ಹೆಮ್ಮೆ ಎನಿಸುತ್ತದೆ. ಡಾ. ಡಿ.ಎಂ. ನಂಜುಂಡಪ್ಪ, ಡಾ. ಜಿ.ಎಸ್. ಶಿವರುದ್ರಪ್ಪ, ಎಲ್. ರೇವಣಸಿದ್ದಯ್ಯ, ಸಾ.ಶಿ. ಮರುಳಯ್ಯ, ಡಾ. ಯು.ಆರ್. ಅನಂತಮೂರ್ತಿ, ಡಾ. ಜಿ.ಎಸ್. ಸಿದ್ಧಲಿಂಗಯ್ಯ – ಹೀಗೆ ಇನ್ನೂ ಅನೇಕ ಜನ ಪ್ರತಿಭಾವಂತರು ನಮ್ಮಲ್ಲಿ ಇದ್ದವರು. ಹಾಗೆಯೇ ಅಸಂಖ್ಯ ಗ್ರಾಮೀಣರು ಇಲ್ಲಿ ಅಶನ, ವಸತಿಗಳನ್ನೂ ಪಡೆದಿದ್ದಾರೆ. ಶ್ರೀ ಶ್ರೀಗಳವರ ಬಯಕೆ ಇದರಿಂದ ಈಡೇರಿದೆ. ನನಗಂತೂ ಇದು ಸಂತೋಷದಾಯಕ ವಿಷಯವಾಗಿದೆ.

**5. ಅಂದಿನ ದಿನಮಾನಗಳಲ್ಲಿ ಪ್ರಸಾದನಿಲಯಗಳನ್ನು ನಡೆಸುವ ಸಂದರ್ಭದಲ್ಲಿ ರಾಜೇಂದ್ರ ಸ್ವಾಮಿಗಳು ಅನುಭವಿಸಿದ ನೋವು-ನಲಿವುಗಳ ವಿವರಗಳೇನು? ಕಷ್ಟ-ಕಾರ್ಪಣ್ಯಗಳೇನು?**

ಹೇಳಿ ಕೇಳಿ ಅದು ರೇಷನ್ ಕಾಲ. ಜೊತೆಗೆ ನಮ್ಮ ಮಠದ ಆರ್ಥಿಕ ಸ್ಥಿತಿಗತಿಗಳೂ ಅಷ್ಟು ಚೆನ್ನಾಗಿರಲಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯಂತೂ ಪ್ರತಿವರ್ಷವೂ ಹೆಚ್ಚುತ್ತಲೇ ಇತ್ತು. ಇಂದಿಗಾಯಿತು, ಇನ್ನು ನಾಳೆಗೆ ಹೇಗೆ ಎನ್ನುವ ಚಿಂತೆ ಶ್ರೀಗಳವರನ್ನು ಸದಾ ಕಾಡುತ್ತಲೇ ಇದ್ದರೂ, ಅವರು, ಹೇಗೋ ಆಗುತ್ತದೆ ಸುಮ್ಮನಿರಿ ಎನ್ನುತ್ತಿದ್ದರು. ಅವರ ಚಿನ್ನದ ಕರಡಿಗೆಯೂ ಒಮ್ಮೆ ಗಿರವಿ ಅಂಗಡಿಗೆ ಹೋಗಿತ್ತು ಎಂದ ಮೇಲೆ ಉಳಿದಿದ್ದನ್ನು ನೀವೇ ಯೋಚಿಸಿ. ದವಸ ಧಾನ್ಯ ಹಣ ಸಂಗ್ರಹಣೆಗಾಗಿ ಊರೂರು ಸುತ್ತುತ್ತಿದ್ದ ರಾಜೇಂದ್ರ

ಸ್ವಾಮಿಗಳಿಗೆ ಎಷ್ಟೋ ದಿನಗಳು ಪೂಜೆ, ಪ್ರಸಾದಗಳೇ ಇರುತ್ತಿರಲಿಲ್ಲ. ಆಗಾಗ ಗೌರೀಶಂಕರ ಸ್ವಾಮಿಗಳು ಇವರನ್ನು ಎಚ್ಚರಿಸಿ, ಕಟ್ಟುನಿಟ್ಟಿನ ಸೂಚನೆ ಕೊಡುತ್ತಿದ್ದುದೂ ಉಂಟು. ನಗರದ ಅನೇಕ ಅಂಗಡಿಗಳವರು, ನಾವು ನಿಗದಿತ ಸಮಯಕ್ಕೆ ಮರುಪಾವತಿ ಮಾಡುವುದಿಲ್ಲ ಎಂದುಕೊಂಡು, ಸಾಲ ಕೊಡಲೂ ಹಿಂಜರಿಯುತ್ತಿದ್ದರು. ಕೆಲವೊಮ್ಮೆ ಹಗುರವಾಗಿ ಮಾತನಾಡುತ್ತಿದ್ದುದೂ ಉಂಟು.

**6. ಶ್ರೀಗಳಿಗೂ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರಿಗೂ ಇದ್ದ ಗುರು-ಶಿಷ್ಯ ಬಾಂಧವ್ಯದ ಸ್ವರೂಪವೇನು?**

ಅರಮನೆಗೂ ಶ್ರೀ ಗೌರೀಶಂಕರ ಮಠಕ್ಕೂ ಆಗ ಬಹಳ ಒಳ್ಳೆಯ ಸಂಬಂಧವಿತ್ತು. ಅವರ ಮೂಲಕ ನಮ್ಮ ಮಠದ ಪರಿಚಯ ಮಹಾರಾಜರಿಗೆ ಉಂಟಾಯಿತು. ಮುಂದೆ ಮಹಾರಾಜರಿಗೂ, ರಾಜೇಂದ್ರ ಸ್ವಾಮಿಗಳಿಗೂ ಹೆಚ್ಚಿನ ಬಾಂಧವ್ಯ ಬೆಳೆಯುವುದಕ್ಕೆ ಕಾರಣರಾದವರು. ಎ.ಡಿ.ಸಿ. ಮಹದೇವಯ್ಯನವರು. ನಜರ್‌ಬಾದ್‌ನಲ್ಲಿರುವ ಬೇಸಿಗೆ ಅರಮನೆಯಲ್ಲಿ ಇವರುಗಳು ಸೇರುತ್ತಿದ್ದರು. ಮುಂದೆ ರಾಜೇಂದ್ರ ಸ್ವಾಮಿಗಳಿಂದ, ಮಹಾರಾಜರು ಎಷ್ಟು ಪ್ರಭಾವಿತರಾದರೆಂದರೆ, ತಮ್ಮ ಅನೇಕ ವ್ಯವಹಾರಗಳನ್ನು ಇವರ ಗಮನಕ್ಕೆ ತಂದೇ ಮಾಡುತ್ತಿದ್ದರು. ತಮ್ಮ ಬಳಿಗೆ ಬರುತ್ತಿದ್ದ ಅನೇಕ ನ್ಯಾಯತೀರ್ಮಾನಗಳನ್ನು ಮಹಾರಾಜರು, ರಾಜೇಂದ್ರ ಸ್ವಾಮಿಗಳ ಸಮ್ಮುಖದಲ್ಲಿಯೇ ಮಾಡುತ್ತಿದ್ದರು. ತಮ್ಮ ಅನೇಕ ವೈಯಕ್ತಿಕ ಸಮಸ್ಯೆಗಳನ್ನು ಮುಕ್ತ ಮನಸ್ಸಿನಿಂದ ಶ್ರೀಗಳವರ ಮುಂದೆ ನಿವೇದಿಸಿಕೊಳ್ಳುತ್ತಿದ್ದರು. ಜಯಚಾಮರಾಜ ಒಡೆಯರಿಗಂತೂ ನಮ್ಮ ಗುರುಗಳ ಬಗ್ಗೆ ತುಂಬಾ ಭಕ್ತಿ ಇತ್ತು.

**7. ರಾಜೇಂದ್ರ ಜಗದ್ಗುರುಗಳವರ ಚಿರಸಂಗಾತಿಗಳಾಗಿದ್ದರೂ ನೀವು ಕ್ಯಾತನಹಳ್ಳಿ ಶ್ರೀಗಳು ಎಂದೇ ಖ್ಯಾತರಾದುದಕ್ಕೆ ಕಾರಣವೇನು?**

ಈಗಲೂ ನನ್ನ ಕ್ಯಾತನಹಳ್ಳಿ ಸ್ವಾಮಿಗಳೆಂದೇ ಜನ ಕರೆಯುತ್ತಾರೆ. ಹಾಗೆ ನೋಡಿದರೆ ನಾನು ಕ್ಯಾತನಹಳ್ಳಿ (ಪಾಂಡವಪುರ ತಾಲ್ಲೂಕು)ಯ ಮಠದಲ್ಲಿ ಇದ್ದವನೇ ಅಲ್ಲ. ಮಂತ್ರಮಹರ್ಷಿಗಳು ನನಗೆ ಪಟ್ಟಾಧಿಕಾರ ಮಾಡುವಾಗಲೇ ಈ ಷರತ್ತನ್ನು ಹಾಕಿದ್ದರು. ಏಕೆಂದರೆ ನಾನು ಇಲ್ಲಿ ರಾಜೇಂದ್ರ ಸ್ವಾಮಿಗಳವರ ನೆರಳಿನಂತೆ ಇರಬೇಕಾಗಿತ್ತು. ಅವರನ್ನು ಬಿಟ್ಟು ನಾನು ಒಂದು ದಿನವೂ ಇರುತ್ತಿರಲಿಲ್ಲ. ನನಗೆ ಅದು ಸಾಧ್ಯವೂ ಆಗುತ್ತಿರಲಿಲ್ಲ. ಆದ್ದರಿಂದ ನಾನು ಸಂದರ್ಭ ಒದಗಿದಾಗ ಮಾತ್ರ ಅಲ್ಲಿಗೆ ಹೋಗಿ ಒಂದೆರಡು ದಿನ ಇದ್ದು ಬರುತ್ತಿದ್ದೆ ಅಷ್ಟೆ. ಅದೂ ಹೆಚ್ಚಾಗಿ ಸಾಹುಕಾರ್ ಸಿದ್ಧಲಿಂಗಯ್ಯನವರ ಮನೆಯಲ್ಲಿಯೇ ವಾಸ್ತವ್ಯ. ಮುಂದೆ ಅದೂ ತಪ್ಪಿಹೋಯಿತು. ಆದರೂ ನನ್ನ ಹೆಸರಿನ



ಜೊತೆ ಕ್ಯಾತನಹಳ್ಳಿ ಎನ್ನುವುದು ಸೇರಿಕೊಂಡಿತು. ಎಷ್ಟರವಮಟ್ಟಿಗೆ ಅದು ಅಂಟಿಕೊಂಡಿತೆಂದರೆ, ಎಷ್ಟೋ ಜನಕ್ಕೆ ಈಗಲೂ ನನ್ನ ಹೆಸರೇ ಗೊತ್ತಿಲ್ಲ. ಕ್ಯಾತನಹಳ್ಳಿ ಸ್ವಾಮಿಗಳು ಎಂದೇ ಕರೆಯುತ್ತಾರೆ. ಅವರ ಹೆಸರೇನು ಎಂದು ಕೇಳಿದರೆ, ಸ್ವಲ್ಪ ಹೊತ್ತು ನೆನಪಿಸಿಕೊಳ್ಳುವ ಸ್ಥಿತಿ ಉಂಟಾಗಿದೆ.

**8. ರಾಜೇಂದ್ರ ಜಗದ್ಗುರುಗಳವರ ಎಡೆಬಿಡದೆ ಒಡನಾಡಿಗಳಾಗಿದ್ದರೂ ಅವರನ್ನು ನೀವು ಸಂಪೂರ್ಣ ಅರ್ಥಮಾಡಿಕೊಂಡಿದ್ದಿರೋ ಹೇಗೆ? ನೀವು ಕಂಡಂತೆ ರಾಜೇಂದ್ರ ಗುರುಗಳು – ಏನು, ಹೇಗೆ?**

ಅವರನ್ನು ನಾನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೆ. ನನ್ನನ್ನು ಅವರು ಸಂಪೂರ್ಣ ಅರ್ಥಮಾಡಿಕೊಂಡಿದ್ದರು. ಆದ್ದರಿಂದಲೇ ನಾವಿಬ್ಬರೂ ಅಷ್ಟು ದೀರ್ಘಕಾಲ ಒಡನಾಡಿಗಳಾಗಿರಲು ಸಾಧ್ಯವಾದದ್ದು. ಅವರದ್ದು ತುಂಬಾ ಸಂಕೋಚದ ಸ್ವಭಾವ. ದಾಕ್ಷಿಣ್ಯಕ್ಕೆ ಒಳಗಾಗಿ ಕೆಲವು ನೇರವಾದ ಮಾತುಗಳನ್ನು ಹೇಳಲು ಹಿಂಜರಿಯುತ್ತಿದ್ದರು. ಎಷ್ಟೋ ತಪ್ಪುಗಳನ್ನು ಮಾಡಿದವರನ್ನೂ ಬಹಳ ಬೇಗ ಕ್ಷಮಿಸಿ ಬಿಡುತ್ತಿದ್ದರು. ತಮಗೇ ನೂರೆಂಟು ಸಮಸ್ಯೆಗಳು ಇದ್ದರೂ, ಮತ್ತೊಬ್ಬರ ಸಮಸ್ಯೆಗಳನ್ನು ಹೇಗಾದರೂ ಪರಿಹರಿಸಬೇಕೆಂದು ಚಡಪಡಿಸುತ್ತಿದ್ದರು. ನಮ್ಮ ವಿದ್ಯಾರ್ಥಿನಿಲಯದ ವಿದ್ಯಾರ್ಥಿಯೊಬ್ಬ ಉನ್ನತ ಮಟ್ಟಕ್ಕೆ ಹೋದರೆ, ಅದನ್ನು ಅವರು ಹತ್ತಾರು ಜನಕ್ಕೆ ಹೇಳಿಕೊಂಡು ಸಂತೋಷಿಸುತ್ತಿದ್ದರು. ಅಷ್ಟು ಹೃದಯವೈಶಾಲ್ಯ ಅವರದ್ದು (ಈ ಮಾತುಗಳನ್ನು ಹೇಳುವಾಗ ಕ್ಯಾತನಹಳ್ಳಿ ಶ್ರೀಗಳು ಸ್ವಲ್ಪ ಹೊತ್ತು ಗದ್ಗದಿತರಾದರು). ಎಂತಹ ಇಕ್ಕಟ್ಟಿನ ಸಂದರ್ಭಗಳಲ್ಲಿಯೂ ಅವರು ಸಮಚಿತ್ತದಿಂದ ಇರುತ್ತಿದ್ದರು. ಅದು ಅವರಿಗೆ ಮಾತ್ರ ಸಾಧ್ಯವಾಗುತ್ತಿದ್ದ ಸ್ಥಿತಿ. ಎಂತಹ ಅಪರಾಧಿಯೂ ಅವರ ಮುಂದೆ ಧೈರ್ಯವಾಗಿ ನಿಂತುಕೊಂಡು ತನ್ನ ತಪ್ಪನ್ನು ಹೇಳಿಬಿಡು ತ್ತಿದ್ದ. ಅವರು ಕ್ಷಮಿಸಿಯೇ ಕ್ಷಮಿಸುತ್ತಾರೆ ಎನ್ನುವ ನಂಬಿಕೆ ಅವನಿಗೆ ಇರುತ್ತಿತ್ತು. ಹಾಗೆಯೇ ಎಂತಹ ಕೋಪಿಷ್ಠನೂ ಅವರ ಮುಂದೆ ಸೌಮ್ಯವಾಗಿಬಿಡುತ್ತಿದ್ದ. ಅವರ ವ್ಯಕ್ತಿತ್ವವೇ ಅಂಥದಾಗಿತ್ತು.

**9. 'ದೇವರು ವರ ಕೊಟ್ಟರೂ ಪೂಜಾರಿ ಕೊಡುವುದಿಲ್ಲ' – ಎಂಬ ನಾಣ್ಣುಡಿಯಂತೆ ರಾಜೇಂದ್ರರು ಮುಕ್ತಹಸ್ತರಾದರೂ ನೀವು ಬಿಗಿಹಸ್ತದವರೆಂಬ ಕೆಲವರ ಟೀಕೆಯನ್ನು ನೀವು ಸಂತೋಷದಿಂದಲೇ ಸ್ವಾಗತಿಸುತ್ತಿದ್ದಿರಿ ಎನ್ನಬಹುದಲ್ಲವೆ?**

[ಈ ಪ್ರಶ್ನೆ ಕೇಳಿದಾಗ ಕ್ಯಾತನಹಳ್ಳಿ ಶ್ರೀಗಳು ಸ್ವಲ್ಪ ಹೊತ್ತು ನಕ್ಕರು]. ನೋಡಪ್ಪ, ಕನ್ನಡದಲ್ಲಿ ಒಂದು ಮಾತಿದೆ. ಏನಾದರೂ ಕೇಳುವ ಸಂದರ್ಭದಲ್ಲಿ "ನೀನೇನು ನಿಮ್ಮ ಅಪ್ಪನ ಮನೆಯಿಂದ ಕೊಡುತ್ತೀಯಾ" ಎಂದು. ಇದರ ಅರ್ಥವೇನು? ನಿಮ್ಮ ಅಪ್ಪನ

ಮನೆಯದಾದರೆ ವ್ಯರ್ಥವಾಗಿ ಹಣವನ್ನು ಪೋಲು ಮಾಡಬೇಡ ಎಂದು ಅರ್ಥ. ಅಂದರೆ ಅಪ್ಪ ಹಣವನ್ನು ಕಷ್ಟಪಟ್ಟು ಸಂಪಾದಿಸಿರುತ್ತಾನೆ. ಆ ಕಷ್ಟವನ್ನು ತಿಳಿದುಕೊಂಡು ಮಗ ಹಣವನ್ನು ಸರಿಯಾಗಿ ಬಳಸಬೇಕು. ನಿನ್ನಂತಹವನಿಗೆ ಇದನ್ನು ಮತ್ತಷ್ಟು ವಿಸ್ತರಿಸುವ ಅವಶ್ಯಕತೆಯಿಲ್ಲ ಎಂದು ಕಾಣುತ್ತದೆ. ಮಠದ ಪ್ರತಿಯೊಂದು ಪೈಸೆಯೂ ಕಷ್ಟಪಟ್ಟು ಸಂಪಾದಿಸಿದ್ದು; ಭಕ್ತಾದಿಗಳ ಕಷ್ಟದ ಬೆವರು ಇದರಲ್ಲಿ ಬೆರೆತಿದೆ. ಅದು ಸದ್ವಿನಿಯೋಗ ವಾಗುವುದು ಬೇಡವೇ? ರಾಜೇಂದ್ರ ಸ್ವಾಮಿಗಳು ಸ್ವಲ್ಪ ಮಾತೃಹೃದಯ ದವರು, ಕರುಣೆಯ ಗುಣವುಳ್ಳವರು. ತಮಗೆ ಕಷ್ಟವೆಂದುಕೊಂಡು ಯಾರೇ ಬರಲಿ, ಆ ಕಷ್ಟವನ್ನು ಕೇಳಿ ಅವರು ಕರಗಿಬಿಡುತ್ತಿದ್ದರು. ಅವರ ಸಹಾಯಕ್ಕೆ ಮುಂದಾಗುತ್ತಿದ್ದರು. ಸ್ವಾಮಿಗಳ ಈ ಗುಣವನ್ನು ತಿಳಿದಿದ್ದವರಲ್ಲಿ ಕೆಲವರು ಅದನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೂ ಮುಂದಾಗುತ್ತಿದ್ದರು. ಜನರಲ್ಲಿ ಎಲ್ಲ ತರದವರೂ ಇರ್ತಾರೆ ನೋಡು. ಭಾವುಕ ಸ್ವಭಾವದ ಶ್ರೀಗಳು, ಸುಣ್ಣ ಬೆಣ್ಣೆಗಳ ವ್ಯತ್ಯಾಸವನ್ನು ಅಷ್ಟಾಗಿ ವಿಶ್ಲೇಷಿಸುತ್ತಿರಲಿಲ್ಲ. ಆರಂಭದ ದಿನಗಳಲ್ಲಿ ನಾನೂ ಸಹ ಅವರೊಡನೆ ಹಾಗೆಯೇ ಸ್ಪಂದಿಸುತ್ತಿದ್ದೆ. ಅನಂತರದ ದಿನಗಳಲ್ಲಿ ವಾಸ್ತವ್ಯದ ಸೂಕ್ಷ್ಮಗಳು  ಅರ್ಥವಾಗತೊಡಗಿದಂತೆ, ನಾನು ಸ್ವಲ್ಪ ಭಿನ್ನವಾದೆ. ಅದು ವ್ಯಾವಹಾರಿಕವಾಗಿ ಅನಿವಾರ್ಯವಾಗಿತ್ತು. ನನ್ನೊಳಗೆ ಇನ್ನಾವ ಉದ್ದೇಶವೂ ಇರಲಿಲ್ಲ. ಇದು ಗೊತ್ತಿರುವವರಿಗೇ ಗೊತ್ತು. ಬರಿಯ ಮೇಲ್ಪದರದಲ್ಲಿ ಚಿಂತಿಸುವವರಿಗೆ ನಾನು ಹಾಗೆ ಕಂಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಅದರಿಂದ ನನಗೆ ಬೇಸರವೂ ಇಲ್ಲ. ಈಗಲೂ ನಾನು ಹಾಗೆಯೇ ಚಿಂತಿಸುವಂತಹವನು. ಇದರಲ್ಲಿ ನನಗೆ ತಪ್ಪೇನೂ ಕಾಣುವುದಿಲ್ಲ. ತನಗೆ ಇಷ್ಟವಾದ ಆಹಾರವನ್ನು ತಿನ್ನುವುದಕ್ಕೆ ಬಿಡುತ್ತಿಲ್ಲವಲ್ಲ ಎಂದು ರೋಗಿಗೆ, ವೈದ್ಯನ ಮೇಲೆ ಕೋಪ ಸಹಜವಾದದ್ದೇ. ಹಾಗೆಂದುಬಿಟ್ಟು, ವೈದ್ಯ ರೋಗಿಯ ಇಚ್ಛೆಯಂತೆ ನಡೆಯುವುದಕ್ಕೆ ಸಾಧ್ಯವೂ ಇಲ್ಲ, ನಡೆಯಲೂಬಾರದು. ಇರಲಿ, ಜನ ನನ್ನನ್ನು ಏನೇ ಕರೆಯಲಿ, ನನಗೆ ಅದು ಸಂತೋಷದಾಯಕ ವಾದದ್ದೇ. ಇಂದಿನ ನಮ್ಮ ಮಠದ ಬೆಳವಣಿಗೆಯನ್ನು ನೋಡಿದರೆ, ನನಗೆ ಉಳಿದೆಲ್ಲವೂ ಮರೆತೇಹೋಗುತ್ತದೆ. ಇದರಲ್ಲಿ ನನ್ನ "ಪೂಜಾರಿ ಗುಣ"ದ ಪಾಲೂ ಇದೆ ಎನ್ನುವುದು ನನ್ನ ನಂಬಿಕೆ. ನನಗೆ ಆ ತೃಪ್ತಿಯೇ ಸಾಕು. ನಾನು ಹಾಗೆ ನಡೆದುಕೊಳ್ಳುತ್ತಿದ್ದುದು ನನಗಾಗಿಯಂತೂ ಅಲ್ಲ. ಎಲ್ಲಾ ನಿಮಗಾಗಿ.

**10. ಸುತ್ತೂರು ಮಠದ ಸೇವೆಯಲ್ಲಿಯೆ ಸಂಪೂರ್ಣ ಸವೆದ ನಿಮ್ಮ ತುಂಬು ಜೀವನ ಸಂತೃಪ್ತಿಯನ್ನು ತಂದಿದೆ ಎಂದು ನಂಬಬಹುದಲ್ಲವೆ?**

ದೊಡ್ಡ ಸೇವೆ ಮಾಡಿದವರು ರಾಜೇಂದ್ರ ಸ್ವಾಮಿಗಳು. ನಾನು ಕೇವಲ ಅವರಿಗೆ ಒತ್ತಾಸೆಯಾಗಿದ್ದೆ ಅಷ್ಟೆ. ನಾನು ಏನು ಸೇವೆ ಮಾಡಿದ್ದೇನೆ ಎಂದು ನನಗೇ ತಿಳಿಯದು.

ಹೊಲ ಗದ್ದೆಗಳ ವ್ಯವಸಾಯ ನಿರ್ವಹಣೆಯಲ್ಲಿ, ಕೆಲವು ಕಟ್ಟಡಗಳನ್ನು ಕಟ್ಟುವ ದಿನಗಳಲ್ಲಿ, ರಾಜೇಂದ್ರ ಸ್ವಾಮಿಗಳನ್ನು ದರ್ಶನ ಮಾಡಲು ಬರುತ್ತಿದ್ದ ಭಕ್ತಾದಿಗಳ ಪೂರ್ವಾಪರಗಳನ್ನು ವಿಚಾರಿಸಿ, ಏನಾದರೂ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಂದರ್ಭಗಳಲ್ಲಿ ಸ್ವಲ್ಪ ಸಲಹೆ ಸೂಚನೆಗಳನ್ನು ಕೊಡುತ್ತಿದ್ದೆ. ಇರಲಿ. ಇವೆಲ್ಲಾ ನಾನು ಮಾಡಬೇಕಾಗಿದ್ದ ಕೆಲಸಗಳೇ ಆಗಿದ್ದುವು. ಏಕೆಂದರೆ ಎಲ್ಲವನ್ನೂ ಬುದ್ಧಿಯವರೇ ನೋಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ಯೋಚನೆ ಮಾಡಿದರೆ, ಅವರೊಡನೆ ಇದ್ದು ಸೇವೆ ಮಾಡುವ ಅವಕಾಶ ಸಿಕ್ಕಿದ್ದು ನನಗೆ ನಿಜಕ್ಕೂ ಸಂತೃಪ್ತಿಯನ್ನು ತಂದಿದೆ.

**11. ಶ್ರೀಗಳೊಂದಿಗಿನ ವಿದೇಶಿ ಪ್ರವಾಸದ ಅನುಭವಗಳೇನು?**

ನನಗೆ ಅಲ್ಲಿ ಅಂತಹ ಅನುಭವಗಳೇನೂ ಆಗಲಿಲ್ಲ. ಹೊರಗಡೆ ನಾನು ಸುತ್ತಾಡಿದ್ದು ತುಂಬಾ ಕಡಿಮೆಯೆಂದೇ ಹೇಳಬೇಕು. ನಾನು ಸದಾ ಗುರುಗಳ ಜೊತೆಯಲ್ಲಿಯೇ ಇರುತ್ತಿದ್ದೆ. ಅವರ ಆಹಾರ, ಪೂಜೆ ಮುಂತಾದವುಗಳ ಉಸ್ತುವಾರಿ ಮಾಡುತ್ತಿದ್ದೆ. ಹೊರಕ್ಕೆ ಹೋದರೂ ಶ್ರೀಗಳವರ ಜೊತೆ ಮಾತ್ರ. ಬೇರೆ ಬೇರೆ ಭಕ್ತರ ಮನೆಗಳಲ್ಲಿ ಪೂಜೆ ಇರುತ್ತಿತ್ತು. ಅಲ್ಲಿಗೆ ಮಾತ್ರ ಹೋಗುತ್ತಿದ್ದೆವು. ಆ ಭಕ್ತರಲ್ಲಿ ಕೆಲವರು ನಮ್ಮ ವಿದ್ಯಾರ್ಥಿನಿಲಯದವರು ಎಂದು ತಿಳಿದಾಗಲಂತೂ, ಅಲ್ಲಿನ ಅವರ ಸ್ಥಿತಿಗತಿಗಳನ್ನು ನೋಡಿ ತುಂಬಾ ಸಂತೋಷವಾಗುತ್ತಿತ್ತು. ನಾವು ಇಲ್ಲಿ ಹಾಸ್ಟೆಲ್ ನಡೆಸಲು ಪಡುತ್ತಿದ್ದ ಶ್ರಮ ಸಾರ್ಥಕವಾಯಿತು ಎಂದು ಆಗ ನನಗೆ ಅನಿಸುತ್ತಿತ್ತು. ಆ ದೇಶದ ಕಟ್ಟಡಗಳನ್ನು ನೋಡಿದಾಗ, ಸಮಯಪ್ರಜ್ಞೆಯ ಬಗ್ಗೆ ಕೇಳಿದಾಗ, ದುಡಿಮೆಗೆ ಪ್ರಥಮ ಪ್ರಾಶಸ್ತ್ಯ ಎನ್ನುವ ಅಂಶಗಳನ್ನು ತಿಳಿದಾಗ, ನಮ್ಮಲ್ಲಿ ಇರುವ ಕೊರತೆಯಾದರೂ ಏನು ಎನ್ನುವ ಪ್ರಶ್ನೆ ನನ್ನನ್ನು ಆಗಾಗ ಕಾಡುತ್ತಿದೆ.

**12. ಅಂದಿನಿಂದ ಇಂದಿನವರೆಗೆ ಸುತ್ತೂರು ಶ್ರೀಕ್ಷೇತ್ರದ ಸೇವಾಕ್ಷೇತ್ರ ಗಳ ವ್ಯಾಪ್ತಿ-ವಿಸ್ತಾರಗಳನ್ನು ಹೆಜ್ಜೆಹೆಜ್ಜೆಗೂ ಕಂಡಿದ್ದೀರಿ. ನಿಮಗೆ ಇಂದು ಅದರ ಬೆಳವಣಿಗೆಯನ್ನು ಕುರಿತು ನಿಮ್ಮ ಅನಿಸಿಕೆಗಳೇನು?**

ಇಂದು ನಮ್ಮ ಸಂಸ್ಥೆ ಅಗಾಧವಾಗಿ ಬೆಳೆದಿದೆ. ಅಂದಿನ ಸಮಸ್ಯೆಯ ಸ್ವರೂಪಗಳನ್ನು ಇಂದಿನದಕ್ಕೆ ಹೋಲಿಸಲು ಸಾಧ್ಯವಿಲ್ಲ. ಆ ದಿನಗಳಲ್ಲಿ ಒಂದು ಸಣ್ಣ ಸಂಸ್ಥೆಯನ್ನು ಪ್ರಾರಂಭಿಸಬೇಕಾದರೂ ನಾವು ಹತ್ತಾರು ಬಾರಿ ಯೋಚಿಸುತ್ತಿದ್ದೆವು. ಇಂದು ನಮ್ಮ ಬೃಹತ್ ಸಂಸ್ಥೆಯನ್ನು ನಿರ್ವಹಿಸುವ ಜವಾಬ್ದಾರಿ ಇನ್ನೂ ಹೆಚ್ಚಿನದಾಗಿದೆ. ಇಡೀ ದೇಶದಲ್ಲಿಯೇ ಇದೊಂದು ಪ್ರತಿಷ್ಠಿತ ಸಂಸ್ಥೆಯಾಗಿರುವುದು ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ. ಈಗಿನ ನಮ್ಮ ಗುರುಗಳಂತೂ ಅಗಾಧ ಶಕ್ತಿ ಇರುವಂತಹವರು. ಆದರೆ ಅವರು ಒಬ್ಬರೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ ಎನ್ನುವುದನ್ನೂ ಎಲ್ಲರೂ ತಿಳಿದುಕೊಳ್ಳಬೇಕು.



**13. ಶ್ರೀಮಠದ ಭಕ್ತಸಮೂಹದಲ್ಲಿ ಅಂದಿಗೂ ಇಂದಿಗೂ ಕಂಡು ಬಂದಿರುವ ಬದಲಾವಣೆಗಳೇನು? ಏನಾದರೂ ಗಮನಿಸಿದ್ದೀರಾ?**

ಆಗ ಸುತ್ತೂರು ಮಠದಲ್ಲಿ ಹೆಚ್ಚಾಗಿ ಧರ್ಮಸಂಬಂಧಿಯಾದ ಚಟುವಟಿಕೆಗಳು ಮಾತ್ರ ನಡೆಯುತ್ತಿದ್ದುವು. ಜಾತ್ರೆ, ಜಯಂತಿ - ಇವುಗಳಲ್ಲಿ ಪ್ರಮುಖವಾದುವು. ಆಗ ಸಹಜವಾಗಿಯೇ ಅಕ್ಕಪಕ್ಕದ ಗ್ರಾಮಸ್ಥರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಪ್ರತಿಯೊಬ್ಬರೂ ನಮಗೆ ವೈಯಕ್ತಿಕವಾಗಿ ಪರಿಚಯವಿದ್ದವರೇ ಆಗಿರುತ್ತಿದ್ದರು. ಈಗ ಮಠದ ಕಾರ್ಯಕ್ಷೇತ್ರದ ವೈಶಾಲ್ಯಕ್ಕೆ ಅನುಗುಣವಾಗಿ ಭಕ್ತರ ಸಂಖ್ಯೆಯೂ ಹೆಚ್ಚಾಗಿದೆ. ಸಮಾಜದ ಬೇರೆ ಬೇರೆ ವರ್ಗಗಳಿಂದ, ಸ್ತರಗಳಿಂದ ಜನ ಬರುತ್ತಿದ್ದಾರೆ. ನಮಗೆ ವೈಯಕ್ತಿಕವಾಗಿ ಅಷ್ಟು ಪರಿಚಯವಿಲ್ಲದಿದ್ದರೂ, ಅವರುಗಳು ತುಂಬಾ ಭಕ್ತಿಯಿಂದ, ಅಭಿಮಾನದಿಂದ ಬಂದು ಭಾಗವಹಿಸುತ್ತಾರೆ. ಇವರ ಜೊತೆಗೆ ನಮ್ಮ ನೌಕರವರ್ಗ, ಅಪಾರ ಸಂಖ್ಯೆಯ ವಿದ್ಯಾರ್ಥಿ ಸಮುದಾಯವಂತೂ ಇದ್ದೇ ಇರುತ್ತದೆ. ಎಷ್ಟೋ ಜನರನ್ನೂ ನಾವು ವೈಯಕ್ತಿಕವಾಗಿ ಭೇಟಿ ಮಾಡಲು ಸಾಧ್ಯವೇ ಆಗುವುದಿಲ್ಲ. ಆದರೂ ಅವರಲ್ಲಿ ಭಕ್ತಿ, ಗೌರವಗಳು ಎಂದಿನಂತೆಯೇ ಇವೆ. ಅದೇ ನನಗೆ ಸಂತೋಷ ತರುವ ವಿಚಾರ. ಅಂದಂದಿನ ರೀತಿ ಅಂದಂದಿಗೆ ಅಲ್ವಾ?

**14. ತೊಂಬತ್ತೆಂಟರ ತುಂಬು ವಯಸ್ಸಿನ ಈ ಶುಭ ಸಂದರ್ಭದಲ್ಲಿ ತಾವು ನೀಡಲಿರುವ ಆದೇಶ-ಸಂದೇಶಗಳೇನು?**

ನಾನೇನು ತಾನೇ ಸಂದೇಶ ನೀಡಲಿ? ಸಂದೇಶ ನೀಡುವಷ್ಟು ದೊಡ್ಡವನೇನಲ್ಲ ನಾನು. ಆದರೂ ಕೇಳ್ತಾ ಇದ್ದೀರಿ. ಮಠ ಮತ್ತು ಭಕ್ತರು ಪರಸ್ಪರ ಒಬ್ಬರಿಗಾಗಿ ಮತ್ತೊಬ್ಬರು ಎನ್ನುವುದನ್ನು ಮರೆಯಬಾರದು. ಜನತೆಯ ಉದ್ಧಾರಕ್ಕೆ ಮಠ ಶ್ರಮಿಸಬೇಕು. ಮಠದ ಬೆಳವಣಿಗೆಗೆ ಜನತೆ ಶ್ರಮಿಸಬೇಕು. ಆಗಲೇ ಅದಕ್ಕೆ ಅರ್ಥ ಬರುವುದು. ನಮ್ಮ ಮಠ ಮೊದಲಿನಿಂದಲೂ ಹಾಗೆಯೇ ಬಂದಿದೆ. ಅದು ಹೀಗೆಯೇ ಮುಂದುವರಿಯಬೇಕು ಎನ್ನುವುದು ನನ್ನ ಒಂದೇ ಒಂದು ಬಯಕೆ. ಈಗಿನ ಜಗದ್ಗುರುಗಳವರ ಶ್ರಮ ಎಷ್ಟಿದೆ ಎಂಬುದನ್ನು ಅರ್ಥ ಮಾಡಿಕೊಂಡು ಎಲ್ಲರೂ ಜೊತೆಯಾಗಿ ಹೋಗಬೇಕು. ನಾನೂ ನೀನೂ ಶಾಶ್ವತವಲ್ಲ. ಮಠ ಶಾಶ್ವತ. ಅದನ್ನು ಯಾರೂ ಮರೆಯಬಾರದು. ಈ ಎಲ್ಲದರ ಹಿಂದೆ ಸ್ಫೂರ್ತಿಯಾಗಿರುವ ಶ್ರೀ ರಾಜೇಂದ್ರ ಸ್ವಾಮಿಗಳವರ ಕ್ರಿಯಾಶಕ್ತಿಗೆ ನಾವೆಲ್ಲಾ ಎಂದೆಂದಿಗೂ ತಲೆಬಾಗಬೇಕು. ಅವರ ಸೇವೆಯನ್ನು ನೆನೆಸಿಕೊಳ್ಳುವುದೇ ಒಂದು ಪುಣ್ಯಪ್ರದವಾದ ಕೆಲಸ. ಅವರು ನನಗೆ ಪ್ರಾತಃಸ್ಮರಣೀಯರು.

□



# ದೈವತಾಸ್ವರೂಪಿ


**ಶ್ರೀ ಕುಮಾರ ನಿಜಗುಣ ಸ್ವಾಮಿಗಳು**
**ಶ್ರೀ ಶಂಭುಲಿಂಗನ ಕ್ಷೇತ್ರ, ಚಿಲಕವಾಡಿ**


1950ರಲ್ಲಿ ನಾನು ಎಸ್‌ಎಸ್‌ಎಲ್‌ಸಿಯನ್ನು ಮುಗಿಸಿದಾಗ ನಮ್ಮ ಕೊಳ್ಳೇಗಾಲ ತಾಲ್ಲೂಕು ಆಗಿನ ಮದ್ರಾಸು ಪ್ರಾಂತ್ಯಕ್ಕೆ ಸೇರಿದ್ದುದರಿಂದ ಅಲ್ಲಿಯೇ ಓದಬೇಕೆಂಬ ಆಸೆ ನನ್ನಲ್ಲಿ ಬೇರೂರಿತ್ತು. ಅದಕ್ಕೆ ನೀರೆರೆದು ಉತ್ತೇಜನ ಕೊಟ್ಟವರು ಅಂದಿನ ನಮ್ಮ ಸಮಾಜದ ಹಿತೈಷಿಗಳೂ ಮುಖಂಡರೂ ಆಗಿದ್ದ ತಿಮ್ಮರಾಜೀಪುರದ ಮಾನ್ಯ ಶ್ರೀ ಶಿವಮಲ್ಲೇದೇವರವರು. ಅವರ ಪ್ರೋತ್ಸಾಹದಿಂದ ಮದ್ರಾಸ್ ಸೇರಿ ಅಂದಿನ ಇಂಟರ್‌ಮೀಡಿಯಟ್, ಬಿಎಸ್‌ಸಿ., ಹಾಗೂ ಬಿ.ಎಲ್ ಪದವಿಯನ್ನು ಓದಿ ಮುಗಿಸಿದೆ. ಈ ಮಧ್ಯೆ 1-11-1956 ರಂದು ಕೊಳ್ಳೇಗಾಲವು ಭಾಷಾವಾರು ಪ್ರಾಂತ್ಯರಚನೆಯ ಕಾಯಿದೆಯ ಪ್ರಕಾರ ವಿಶಾಲ ಮೈಸೂರು ಪ್ರಾಂತ್ಯಕ್ಕೆ ಸೇರ್ಪಡೆಯಾಗಿತ್ತು.

ಹೀಗಾಗಿ ನಾನು ವಕೀಲವೃತ್ತಿಯ ತರಬೇತಿಗಾಗಿ ಅಂದಿನ ಮೈಸೂರಿಗೆ ಬರಬೇಕಾಯ್ತು. ಓದುವಾಗ ಅಂದಿನ ಡಿ.ಎಂ.ಕೆ. ಪ್ರಭಾವಕ್ಕೆ ಒಳಗಾಗಿ ನನ್ನಲ್ಲಿ ನಾಸ್ತಿಕತೆ ತಳವೂರಿತ್ತು. 16-6-1957 ರಂದು ಮೈಸೂರಿಗೆ ಬಂದು ಅಂದು ಖ್ಯಾತ ವಕೀಲರಾಗಿದ್ದ ಮಾನ್ಯ ಶ್ರೀ ಬಿ. ರಾಮರಾಯರ ಕಛೇರಿಗೆ ತರಬೇತಿಗಾಗಿ ಸೇರಿದ್ದಾಯಿತು. ಊಟ ಹಾಗೂ ವಸತಿಗೆ ಅಂದು ಜೆಎಸ್‌ಎಸ್ ವಿದ್ಯಾಪೀಠವು ಲಕ್ಷ್ಮೀಪುರದ ನಂಜುಮಳಿಗೆಯ ಆರ್.ಪಿ. ಮಲ್ಲಪ್ಪನವರ ಕಟ್ಟಡದಲ್ಲಿ "ತಲೆಮೇಲೆ ಭಾರ ಹೊರುವ ಪದ್ಧತಿ"ಯಂತೆ ನಡೆಸುತ್ತಿದ್ದ ಹಾಸ್ಟೆಲ್ಲಿಗೆ ಸೇರಿದೆ. ಅಂದು ಪ್ರಾಚ್ಯವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧಕರಾಗಿದ್ದ ಹೊನ್ನೂರಿನ ಶ್ರೀ ಎಚ್.ಪಿ. ಮಲ್ಲೇದೇವರು ಅವರ ಪರಿಚಯವಾಯಿತು. ಅವರು ಸಂಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪರಮಭಕ್ತರು. ತುಂಬಾ ಚುರುಕಾಗಿ ಲವಲವಿಕೆಯಿಂದ ಓಡಾಡುತ್ತಿದ್ದ ಮದ್ರಾಸ್ ಪದವೀಧರನಾದ ನನ್ನನ್ನು ಜಗದ್ಗುರುಗಳಿಗೆ ಪರಿಚಯಿಸಬೇಕೆಂದು ಅವರು ನನ್ನನ್ನು ನಯವಾಗಿ ಪ್ರತಿ ಭಾನುವಾರವೂ ಒತ್ತಾಯಿಸುತ್ತಿದ್ದರು. ನನ್ನ ನಾಸ್ತಿಕ ಸ್ವಭಾವ ಅದಕ್ಕೆ ಒಪ್ಪುತ್ತಿರಲಿಲ್ಲ. ಅವರ ಈ ಒತ್ತಾಯ ಸುಮಾರು ಆರು ತಿಂಗಳು ಸಾಗಿತ್ತು. ಕೊನೆಗೆ ಅವರ ಒತ್ತಾಯಕ್ಕೆ ಮಣಿದು, "ನೋಡ್ರಿ, ಬುದ್ಧಿಯವರಿಗೆ ನಾನು ನಮಸ್ಕರಿಸುವುದಿಲ್ಲ. ನೀವು ತಪ್ಪಾಗಿ ಭಾವಿಸಬಾರದು. ಅವರೂ

ಸಹ ತಪ್ಪಾಗಿ ತಿಳಿಯಬಾರದು. ಹಾಗಿದ್ದರೆ ಮಾತ್ರ ಬರುತ್ತೇನೆ; ಕೇಳಿ ಬನ್ನಿ" ಎಂದೆ. ಹೋಗಿ, ಜಗದ್ಗುರುಗಳನ್ನು ಕೇಳಿ ಬಂದು, "ಹಾಗೆಯೇ ಆಗಲಿ ಬನ್ನಿ" ಎಂದರು. ಹೋದೆ.

ಮದ್ರಾಸ್ ಪದವೀಧರನೆಂಬ ಗತ್ತು, 24 ವರ್ಷದ ಯೌವನದ ಮತ್ತು ನಾಸ್ತಿಕತೆಯ ಅಮಲಿನ ಬಿತ್ತು, ಈ ಮೂರೂ ಸೇರಿಕೊಂಡು ನಾನೊಂದು ರೀತಿಯಲ್ಲಿ ಅರೆ ಉನ್ಮತ್ತನಾಗಿದ್ದೆ. ಅಂದು ಪೂಜ್ಯ ಜಗದ್ಗುರುಗಳು "ಸಿದ್ದಪ್ಪ ವೃತ್ತ"ದ ಒಂದು ಭೋಗ್ಯದ ಮನೆಯಲ್ಲಿ ವಾಸವಾಗಿದ್ದರು. ಎಚ್.ಪಿ. ಮಲ್ಲೇದೇವರೊಡನೆ ಅಲ್ಲಿಗೆ ಹೋದೆ. ಮೊದಲೇ ಹೇಳಿದ್ದಂತೆ ನಾನು ನಮಸ್ಕರಿಸಲಿಲ್ಲ. ಸುಮ್ಮನೆ ನಿಂತಿದ್ದೆ. "ಏಕೆ ನಿಂತಿದ್ದೀರಿ, ಕುಳಿತುಕೊಳ್ಳಿ" ಎಂದು ಮೊದಲ ಮೃದು ಚಾಟಿಯೇಟಿತ್ತರು; ಕುಳಿತೆ. ತಾವು ಕೇವಲ 40 ಮೈಲಿ ಪಕ್ಕದಲ್ಲಿದ್ದ ಮೈಸೂರನ್ನು ಬಿಟ್ಟು ಒಂದು ಸಣ್ಣ ತರಗತಿಯನ್ನೋದಲು ಅದೇಕೆ ಅಷ್ಟು ದೂರದ ಮದ್ರಾಸಿಗೆ ಹೋದಿರಿ? ಹಾಗೆ, ಹೀಗೆ ಎಂದು ಕೇಳುತ್ತಾ, ತಾವು, ತಾವು ಎಂದು ಸಂಬೋಧಿಸಿ ನನ್ನ ಅಹಂಕಾರಕ್ಕೆ ಮೃದುವಾಗಿಯೇ ಚಾಟಿ ಬೀಸುತ್ತಾ ಹೊರಟರು. ಅವರ ಪ್ರಸನ್ನವದನ, ಮೃದುಮಧುರ ವಚನ ಹಾಗೂ ಮಾತೃಹೃದಯದ ಕರುಣಾಮೃತಸಿಂಚನ ನನ್ನನ್ನು ಮೂರು ಗಂಟೆಗಳಲ್ಲಿ ಅವರ ಭಕ್ತನಾಗಿ ಪರಿವರ್ತಿಸಿತ್ತು. ಬರುವಾಗ ದೀರ್ಘದಂಡ ನಮಸ್ಕಾರ ಮಾಡಿ ಹೊರಬಂದೆ. ಇದು ಆ ಪೂಜ್ಯರ ಮಹತ್ವ. ಅವರ ಕರುಣಾಕಟಾಕ್ಷವು ಎಂತಹ ದುಷ್ಟನನ್ನೂ ಶಿಷ್ಟನನ್ನಾಗಿಸುವ, ದುರಹಂಕಾರಿಯನ್ನು ನಿರಹಂಕಾರಿಯನ್ನಾಗಿಸುವ ಪಾವನ ಸಂಜೀವಿನಿಯಾಗಿತ್ತು. ಅವರ ಮುಗುಳ್ನಗೆಯೊಂದೇ ಬಂದವರ ಸಂಕಟ ಪರಿಹರಿಸುವ ಮಾಂತ್ರಿಕ ಶಕ್ತಿ ಪಡೆದಿತ್ತು.

ಅಂತೆಯೇ ಇನ್ನೊಮ್ಮೆ ಒರಟಾಗಿ ನಡೆದುಕೊಂಡೆ. ಆದರೂ ಆ ಪುಣ್ಯಾತ್ಮರು ಬೇಸರಿಸಲಿಲ್ಲ. ಅದು ಹೀಗಾಯಿತು, ಏನನ್ನೋ ವಿಚಾರಿಸಲಿಕ್ಕೆಂದು ಆಸ್ಥಾನವಿದ್ವಾಂಸರಾಗಿದ್ದ ದಿವಂಗತ ಎಂ.ಜಿ. ನಂಜುಂಡಾರಾಧ್ಯರ ಮನೆಗೆ ಹೋದೆ. ಅಲ್ಲಿ ಬಾಡಾಲ ರಾಮಯ್ಯ ಎಂಬ ಆಂಧ್ರ ಕವಿ ಆರಾಧ್ಯರೊಡನೆ ಬಸವಣ್ಣನವರ ವಚನಗಳ ಬಗ್ಗೆ ವಿಚಾರವಿನಿಮಯ ನಡೆಸುತ್ತಿದ್ದರು. ಅವರು ಅಣ್ಣನವರ ಸಂಪೂರ್ಣ ವಚನಗಳನ್ನು ತೆಲುಗಿಗೆ ಅನುವಾದಿಸಿದ್ದರು. ಮೇಲ್ಮಟ್ಟದ ಗಮಕಿಗಳು, ಒಂದು ವಚನವನ್ನು ತುಂಬಾ ಸುಶ್ರಾವ್ಯವಾಗಿ ಹಾಡಿದರು. ಅವರ ಹಾಡಿಗೆ ಮೂಕವಿಸ್ಮಿತನಾದೆ. ಅವರು ಎದ್ದು ಮನೆಗೆ ಹೊರಟರು. ನಾನೂ ಸಹ ಅವರ ಹಿಂದುಗಡೆ ಸಾಗಿದೆ. ಆ ಭಾವುಕರು ಮನೆಯ ಗೇಟ್ ಹಾಕಲು ಹಿಂದಕ್ಕೆ ತಿರುಗಿದಾಗ ನನ್ನನ್ನು ನೋಡಿದರು. "ನೀವಾರು? ಏಕೆ ಬಂದಿರಿ ?" ಎಂದರು. ನನ್ನ ಪರಿಚಯ ಹೇಳಿ, ಆರಾಧ್ಯರ ಮನೆಯಲ್ಲಿ ಹಾಡಿದ ವಚನವನ್ನು ಮತ್ತೊಮ್ಮೆ ಹಾಡಲು ಕೇಳಿದೆ. ಮನೆಯೊಳಕ್ಕೆ ಕರೆದು ಕುಳ್ಳಿರಿಸಿ, ತುಂಬಾ ಭಾವ ತುಂಬಿ ಅಲ್ಲಿಗಿಂತಲೂ ಚೆನ್ನಾಗಿ ಹಾಡಿ ಗದ್ಗದಿತರಾದರು. ಏಕೆ ಉದ್ವಿಗ್ನರಾದಿರಿ ಎಂದು ಕೇಳಿದೆ. ಆಗ ಅವರು ಕರ್ನಾಟಕದ ತುಂಬಾ ವೀರಶೈವರಿದ್ದೀರಿ,

ಸಾಕಷ್ಟು ಜನ ಬಸವಣ್ಣನವರ ಅನುಯಾಯಿಗಳು, ಬಸವಧರ್ಮವನ್ನು ವಿಶ್ವಧರ್ಮವೆಂದು ಸಾರುತ್ತೀರಿ. ಆದರೆ ಅದು ಕರ್ನಾಟಕ ಬಿಟ್ಟು ಪಕ್ಕದ ರಾಜ್ಯಗಳಿಗೂ ಸಹ ಹೋಗಲಿಲ್ಲ. ನಾನು ವಚನಗಳನ್ನು ತೆಲುಗಿಗೆ ಅನುವಾದಿಸಿ ಆರು ವರ್ಷಗಳಾದುವು. ನಾನೊಬ್ಬ ಬಡ ಟ್ಯೂಟರ್, ಕೇವಲ 250 ರೂ. ಸಂಬಳ ಬರುತ್ತದೆ. ನನಗೆ ಪ್ರಕಟಿಸಲು ಸಾಧ್ಯವಿಲ್ಲದೆ ಹಲವಾರು ಜನರನ್ನು ಕಾಡಿದೆ, ಬೇಡಿದೆ. ಯಾರೂ ಪ್ರಕಟಿಸಲು ಮುಂದೆ ಬರಲಿಲ್ಲ" ಎಂದು ತುಂಬಾ ನೊಂದು ನುಡಿದರು. "ಚಿಂತಿಸಬೇಡಿ, ನಾನು ಪ್ರಯತ್ನಿಸುತ್ತೇನೆ. ಯಾರೂ ಬಾರದಿದ್ದರೆ ನನ್ನ ಆಸ್ತಿ ಮಾರಿ, ನಿಮ್ಮ ಅನುವಾದವನ್ನು ಪ್ರಕಟಿಸುತ್ತೇನೆ" ಎಂದೆ. ಆರು ತಿಂಗಳು ಕಾಲಾವಕಾಶ ಕೊಡಿ ಎಂದೆ.

ಆಶ್ವಾಸನೆ ಕೊಟ್ಟು ನೇರ ಪೂಜ್ಯ ಜಗದ್ಗುರುಗಳವರ ನಿವಾಸಕ್ಕೆ ಹೋದೆ. ತಾವು ಧರ್ಮಾಧಿಕಾರಿಗಳು, ಧರ್ಮಪ್ರಸಾರವೇ ತಮ್ಮ ಕಾಯಕವಾಗಬೇಕು. ಅದನ್ನು ಬಿಟ್ಟು ಸರ್ಕಾರ ಮಾಡಬೇಕಾದ ಸಮಾಜಮುಖೀ ಕಾರ್ಯಕ್ರಮವಾದ ಶಾಲೆ-ಕಾಲೇಜುಗಳನ್ನು ಕಟ್ಟುತ್ತಾ ಸಾಗುತ್ತಿದ್ದೀರಿ ಅದರ ಕಡೆ ಗಮನ ಕಡಿಮೆ ಮಾಡಿ, ಈ ಕಡೆ ಗಮನ ಕೊಟ್ಟು ಈ ಅದ್ಭುತ ವಚನಗಳನ್ನು ಪ್ರಕಟಿಸಿರೆಂದು ಆವೇಶಭರಿತನಾಗಿ ಬಿನ್ನವಿಸಿದೆ. ನನ್ನ ಆವೇಶಕ್ಕೆ ಬೇಸರಿಸದೆ, ನನ್ನ ಸಮಾಧಾನಕ್ಕಾಗಿ "ಎರಡು ತಿಂಗಳು ಕಳೆದು ಬನ್ನಿ, ನೋಡೋಣ" ಎಂದರು. ಎರಡು ತಿಂಗಳು ಕಳೆದು ಮತ್ತೆ ಹೋದೆ. "ಈಗ ಸಾಧ್ಯವಿಲ್ಲ, ಇನ್ನೂ ಎರಡು ತಿಂಗಳು ಕಳೆದು ಬನ್ನಿ, ಪ್ರಯತ್ನಿಸೋಣ" ಎಂದರು. ಮತ್ತೆಯೂ ಹೋದೆ. ಆಗಲೂ ಅದೇ ರೀತಿ ಹೇಳಿದರು. ಆಗ ಉದ್ವೇಗಕ್ಕೊಳಗಾಗಿ "ನೋಡಿ! ಬುದ್ಧಿ, ಸುಮ್ಮನೆ ಕಾಲ ತಳ್ಳಬೇಡಿ, ನಾನು ಅವರಿಗೆ ಆರು ತಿಂಗಳುಗಳಲ್ಲಿ ಪ್ರಕಟಿಸುವುದಾಗಿ ಭರವಸೆ ನೀಡಿದ್ದೇನೆ; ಆಗುತ್ತದೆ ಎನ್ನಿ ಅಥವಾ ಇಲ್ಲವೆನ್ನಿ" ಎಂದು ಆಗ್ರಹವಾಗಿಯೇ ಕೇಳಿದೆ. "ನೋಡ್ರಿ, ನಮ್ಮ ತಾಪತ್ರಯಗಳೇ ಮುಗಿದಿಲ್ಲ, ಆರ್ಥಿಕ ಮುಗ್ಗಟ್ಟಿದೆ. ನೀವು ಆತುರಪಡಿಸಿದರೆ ಈಗ ಸಾಧ್ಯವಿಲ್ಲವೆನ್ನ ಬೇಕಾಗುತ್ತದೆ" ಎಂದು ಮುಗುಳ್ನಗುತ್ತಲೇ ಕೋಪಿಸಿಕೊಳ್ಳದೆ ಬೇಸರಿಸದೆ ಉತ್ತರಿಸಿದರು. ಇದು ಅವರ ಕ್ಷಮಾಗುಣದ ಔನ್ನತ್ಯ. ಅನಂತರ ಯಾರನ್ನೋ ಹಿಡಿದೆ, ಹೇಗೋ ಅದು ಪ್ರಕಟಗೊಂಡಿತು. ಅವರಿಗೆ ಡಿ.ಲಿಟ್. ಪದವಿಯೂ ಸಿಕ್ಕಿ, ಕೇವಲ ಟ್ಯೂಟರ್ ಆಗಿದ್ದ ಅವರು ಪ್ರಾಧ್ಯಾಪಕರಾಗಿ ನೇಮಕವಾದರು. ಆ ಮಾತು ಬೇರೆ. ಇಷ್ಟೆಲ್ಲಾ ನಾನು ದುಡುಕಿದರೂ ನನ್ನ ಮೇಲೆ ಅವರ ವಾತ್ಸಲ್ಯ ಕಡಿಮೆಯಾಗಲಿಲ್ಲ. ಅವರ ಕರುಣಾರಸದಲ್ಲಿ ಮಿಂದು ಬೆಳೆಯುತ್ತಲೇ ಬಂದೆ.

ಮುಂದೆ ಪೂಜ್ಯ ಜಗದ್ಗುರುಗಳವರ ಮೇಲ್ವಿಚಾರಣೆಯಲ್ಲಿ ದುಗ್ಗಹಟ್ಟಿಯ ಶ್ರೀ ಪಿ. ವೀರಭದ್ರಪ್ಪನವರು ಬಿಳಿಗಿರಿರಂಗನ ಬೆಟ್ಟದಲ್ಲಿ ಶಿಥಿಲವಾಗಿದ್ದ ಗಂಗಾಧರೇಶ್ವರನ ಗುಡಿಯನ್ನು ಜೀರ್ಣೋದ್ಧಾರ ಮಾಡಿ ಅದರ ಕುಂಭಾಭಿಷೇಕಕ್ಕೆ ಪೂಜ್ಯ ಜಗದ್ಗುರುಗಳನ್ನು





ಆಹ್ವಾನಿಸಿದ್ದರು. ಆಗತಾನೇ ಛಂದೋಬದ್ಧ ಕವಿತೆಯನ್ನು ಬರೆಯಲು ಪ್ರಾರಂಭಿಸಿದ್ದ ನಾನು, ಕೆಳಕಂಡ ಪದ್ಯಮಾಲಿಕೆಯನ್ನು ಭಕ್ತಿಪೂರ್ವಕವಾಗಿ ಬರೆದು ಸ್ವಾಗತ ಕೋರಿದೆ. 1-6-1968ರ ಆ ದಿನ ಹೃದಯಾಂತರಾಳದಿಂದ ಆಶೀರ್ವದಿಸಿದರು.

### ಗಂಗಾಧರೇಶ್ವರ ರಕ್ಷಿಸು

ಪಾಡುತಲಿ ಪದ್ಯವನು ಆರತಿಯ ಬೆಳಗಿ
ನೀಡುವೆವು ಸ್ವಾಗತವ ಗುರುವರ್ಯಗೆರಗಿ || ಪ ||

**ಗಂ**ಗಾಧರೇಶ್ವರನ ಅಂಗಣಕೆ ಬಂದ
ಸಂಗಮೇಶನ ತೆರದಿ ಕಂಗೊಳಿಸಿ ನಿಂದ
ರಂಗನಾಥನ ನೆಲೆಗೆ ಹೊಂಗಳೆಯ ತಂದ
ಜಂಗಮಶ್ರೇಷ್ಠರೇ ಸ್ವಾಗತವು ತಮಗೆ || 1 ||

**ಗಾ**ನಮೂರುತಿ ಶಿವನೊಳಗನವರತ ಬೆರೆದ
ಮಾನವರನುದ್ಧರಿಸೆ ಈ ಬುವಿಗೆ ಇಳಿದ
ಜ್ಞಾನನಿಧಿಯೆಂದೆನಿಸಿ ಭವವನ್ನು ಗೆಲಿದ
ದೀನಜನವರಬಂಧು ಸ್ವಾಗತವು ತಮಗೆ || 2 ||

**ಧ**ರ್ಮವನು ಬೋಧಿಸುವ ಕಾಯಕವ ಗೈವ
ಕರ್ಮ ನಿಷ್ಕಾಮವಿರಬೇಕೆಂದು ಪೇಳ್ವ
ಮರ್ಮಭೇದವನರುಹಿ ಶಿವಪಥವ ತೋರ್ವ
ಶರ್ಮಸಾಗರಲೋಲ ಸ್ವಾಗತವು ತಮಗೆ || 3 ||

**ರೇ**ಣುಕರ ಶಿವಮತವ ಜನಕೆ ಪಸರಿಸುವ
ಸ್ಥಾಣುವಿನ ಚಿತ್ಪ್ರಭೆಯ ಜಗಕೆಲ್ಲ ಬೀರ್ವ
ಮಾಣವರ್ಗುಚಿತಾನ್ನ ಬಿಜ್ಜೆಯನು ಕೊಡುವ
ಏಣಾಂಕಧರರೂಪ ಸ್ವಾಗತವು ತಮಗೆ || 4 ||

**ಶ್ವ**ಪಚಸಾತ್ವಿಕರೆಂಬ ಭೇದವೇನಿರದ
ವಿಪರೀತಭಾವ ತೊಡೆದುಪದೇಶ ಗೈದ
ಉಪಕಾರವೆಸಗುತಲಿ ದೀನರನು ಪೊರೆದ
ಅಪರಿಮಿತಗುಣಸಿಂಧು ಸ್ವಾಗತವು ತಮಗೆ || 5 ||

ರಜತಾದ್ರಿಯೊಡೆಯನನು ಘನಮನದಿ ನೆಟ್ಟ
ಬಿಜಯಿಸುತ್ತೆಮಗೆಲ್ಲ ಸಂತಸವ ಕೊಟ್ಟ
ನಿಜಪಥವ ತೋರಿಸುವ ಸತ್ಪಥದೊಳಿಟ್ಟ
ಸುಜನಗಣಸುರಧೇನು ಸ್ವಾಗತವು ತಮಗೆ ॥ 6 ॥

ರವಿ ಕಾಣದುದ ಕಾಣ್ಬ ಚಕ್ಷುವಾಂತಿರುವ
ಸವಿಯುತ್ತ ವಚನಗಳ ಮಧುರದಿಂದುಲಿವ
ಬುವಿಜನರ ಮಂಗಳಕೆ ಪಗಲಿರುಳು ದುಡಿವ
ಕವಿಜನರ ಕಲ್ಪತರು ಸ್ವಾಗತವು ತಮಗೆ ॥7॥

ಕ್ಷಿತಿಯೊಳುತ್ತಮರೆನಿಸುತತಿಶಯದಿ ಮೆರೆವ
ಮತಭೇದವೆಣಿಸದೆಯೆ ಸರ್ವರೊಂದೆನುವ
ಮತಿಗೆಟ್ಟ ಮಾನವರ ಮಲಿನವನು ಕಳೆವ
ಪತಿತಜನಪಾಲಕರೆ ಸ್ವಾಗತವು ತಮಗೆ ॥ 8 ॥

ಸುತ್ತಮುತ್ತಲ ಜನಕೆ ಸತ್ತ್ವಥವ ತಿಳಿಪ
ಮತ್ತೆ ಶರಣಾದವಗೆ ಸದ್ಗತಿಯ ಸಲಿಪ
ತತ್ತ್ವಳಿಪ ಜಗಕೆಲ್ಲ ಚಿರಶಾಂತಿ ಬಯಪ
ಸುತ್ತೂರು ಸದ್ಗುರುವೆ ಸ್ವಾಗತವು ತಮಗೆ ॥ 9 ॥

"ಗಂಗಾಧರೇಶ್ವರ ರಕ್ಷಿಸು" ಎಂಬ ಈ ಶೀರ್ಷಿಕೆಯ ಪ್ರತಿಯಕ್ಷರದಿಂದ ಪ್ರಾರಂಭವಾಗುವ ಪ್ರತಿ ಚರಣದ ಚಿತ್ರಕವಿತೆಯ ಕಂಡು ಸಂತೋಷಗೊಂಡು ಗುರುಗಳು ನನ್ನನ್ನು ಆಶೀರ್ವದಿಸಿದರು. "ಪಂಚಮಾತ್ರಾಗಣಗಳ ಹೊಂದಾಣಿಕೆ ತುಂಬಾ ಹದವಾಗಿ ಕೂಡುತ್ತಿವೆ. ಇದರಲ್ಲಿಯೇ ಆಳವಾಗಿ ಮುಳುಗಿ. ಮುಂದೆ ಹೆಸರು ಗಳಿಸುತ್ತೀರಿ" ಎಂದು ಹರಸಿದರು. ಅವರ ಆದೇಶ ದಂತೆ 1968ರಿಂದ ಕನ್ನಡ ಸಾಹಿತ್ಯದ ತೀವ್ರತರವಾದ ಅಭ್ಯಾಸಕ್ಕೆ ಪ್ರಾರಂಭಿಸಿದೆ. ಕೇವಲ ಎರಡು ಮೂರು ವರ್ಷಗಳಲ್ಲಿ ಪಂಚಮಾತ್ರಾಗಣದ ವಾರ್ಧಕ ಷಟ್ಪದಿಯು ಒಂದು ರೀತಿಯಲ್ಲಿ ಹಿಡಿತಕ್ಕೆ ಬಂತು. 'ಸಂಧಾನ ಸೇವಾಪುರಾಣ' ವೆಂಬ ಸಂಸ್ಕೃತದ ಲಘುವಾದ ಶೃಂಗಾರಕಾವ್ಯವನ್ನು "ಪಾರ್ವತೀ ಪ್ರಣಯಕಲಹಂ" ಎಂದು ವಾರ್ಧಕಕ್ಕೆ ಅನುವಾದಿಸಿದೆ. ಅಂತೆಯೇ ಕಾಳಿದಾಸನ "ಮೇಘದೂತ"ವನ್ನೂ ಸಹ "ಮೇಘ ಸಂದೇಶ"ವೆಂದು ವಾರ್ಧಕದಲ್ಲಿ ಅನುವಾದಿಸಿದೆ. ನನ್ನ ಸಾಮರ್ಥ್ಯಕ್ಕಿಂತಲೂ ಆ ಅನುವಾದ ಕಾರ್ಯಗಳು ನಡೆದುದು ಅವರ ಆಶೀರ್ವಾದಬಲವೆಂದೇ ನಂಬಿದ್ದೇನೆ.

ಮುಂದೆ 1971ರಲ್ಲಿ ನಿಜಗುಣ ಶಿವಯೋಗಿ ಪಾತ್ರವನ್ನು ಮಾಡಿದೆ. ಆ ನಾಟಕದಲ್ಲಿ ಅವರೇ ಅಧ್ಯಕ್ಷತೆ ವಹಿಸಿದ್ದರು. ರಾಜ ಸನ್ಯಾಸಿಯಾದ ತಕ್ಷಣವೇ ಜಗದ್ಗುರುಗಳವರ ಆಶೀರ್ವಾದಕ್ಕೆ ಅಣಿ ಮಾಡಿದ್ದರು. ಅದೇ ವೇಷದಲ್ಲಿ ಬಂದು ಅವರಿಗೆ ಹಾರ ಸಮರ್ಪಿಸಿದೆ. ಅವರ ಆಶೀರ್ವಾದಭಾಷಣದಲ್ಲಿ "ಓ ಬಸವಣ್ಣ ಸನ್ಯಾಸಿಯಾದರು" ಎಂದು ಉದ್ಗಾರವೆತ್ತಿದರು. ಅವರ ಆಶೀರ್ವಾದಪ್ರಭಾವದಿಂದ ನನ್ನಲ್ಲಿ ವೈರಾಗ್ಯವಂಕುರಿಸಿ, ಬೆಳೆಬೆಳೆದು 1980ಕ್ಕೆ ಮನೆ ಬಿಟ್ಟು ನಿಜಗುಣರ ಗವಿ ಸೇರಿದೆ. ನನ್ನ ಸನ್ಯಾಸವೂ ಕೂಡ ಅವರ ಆಶೀರ್ವಾದದ ಫಲವೇ.

ಇಷ್ಟೆಲ್ಲಾ ಆದರೂ ನನ್ನ ದುಡುಕು ಹಾಗೂ ಸಿಡುಕು ಕಡಿಮೆಯಾಗಲೇ ಇಲ್ಲ. ಇದು ನನ್ನ ದೌರ್ಭಾಗ್ಯ. 1976ರಲ್ಲಿ ಆ ಮಹಾನುಭಾವರಲ್ಲಿ ಮತ್ತೆ ಒರಟಾಗಿ ವರ್ತಿಸಿದೆ. ಅದು ನನ್ನನ್ನು ಇನ್ನೂ ಕೂಡ ಬಾಧಿಸುತ್ತಿದೆ. ನನ್ನ ಒರಟು ಸ್ವಭಾವದಿಂದ ಆ ಮೃದುಸ್ವಭಾವದ ಗುರುಶ್ರೇಷ್ಠರ ಮನಸ್ಸನ್ನು ನೋಯಿಸಿದೆನಲ್ಲಾ ಎಂದು ಈಗಲೂ ಪಶ್ಚಾತ್ತಾಪದ ದಳ್ಳುರಿಯಲ್ಲಿ ಬೇಯುತ್ತಿದ್ದೇನೆ. ಆ ಮಹಾನುಭಾವರು ನನ್ನ ಭಕ್ತಿಭಾವವನ್ನು, ಸಂಘಟನಾಸಾಮರ್ಥ್ಯವನ್ನು ಕಂಡು ನನ್ನನ್ನು ಶಿವರಾತ್ರೀಶ್ವರ ಜಯಂತಿ ಸಮಿತಿಯ ಉಪಾಧ್ಯಕ್ಷನನ್ನಾಗಿ ನೇಮಿಸಿದ್ದರು. ಆ ಸನ್ನಿವೇಶ ಹೀಗೆ ನಡೆಯಿತು.

1976ರಲ್ಲಿ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಯವರು ಕೊಳ್ಳೇಗಾಲದಲ್ಲಿ ಅಕ್ಕಮಹಾದೇವಿಯ ಬಗ್ಗೆ ಪ್ರವಚನ ಮಾಡುತ್ತಿದ್ದರು. ಆವಾಗ ಪ್ರವಚನದ ಮಧ್ಯೆ ಸಸ್ಯಾಹಾರಕ್ಕೆ ಹೊಂದಿಕೊಳ್ಳುವ ಯಾರು ಬಂದರೂ ಸರಿಯೇ, ಲಿಂಗದೀಕ್ಷೆ ಕೊಡುತ್ತೇನೆಂದು ಸಾರಿದರು. ನಾನೇ ಆ ಪ್ರವಚನದ ಸಂಚಾಲಕನಾಗಿದ್ದುದರಿಂದ ಪೂಜಾರಿ ಶಿವಣ್ಣನೆಂಬ ಒಬ್ಬ ಒಕ್ಕಲಿಗ ಗೌಡರು ನನ್ನ ಹತ್ತಿರ ಬಂದು ಅವರ ಕುಟುಂಬಕ್ಕೆ ಲಿಂಗದೀಕ್ಷೆ ಕೊಡಿಸುವಂತೆ ಕೇಳಿದರು. ಅವರನ್ನು ನಾನು ಲಿಂಗವಂತರೆಂದೇ ಭಾವಿಸಿದ್ದೆ. ಆಗಲೆಂದು ಪೂಜ್ಯರಲ್ಲಿ ಬಿನ್ನವಿಸಿದೆ. ತುಂಬಾ ಸಂತೋಷ, ಕೊಡೋಣವೆಂದು ಹೇಳಿದರು. ರಾತ್ರಿಯೆಲ್ಲಾ ಅದರ ಪರಿಣಾಮದ ಬಗ್ಗೆ ಚಿಂತಿಸಿದೆ. ಮುಂದೆ ಲಿಂಗವಂತ ಸಮಾಜ ಆ ಕುಟುಂಬದೊಡನೆ ಬೆರೆಯದೆ ಹೋದಲ್ಲಿ ಅವರ ಪಾಡೇನು ಎನ್ನಿಸಿತು. ಆದುದರಿಂದ ಊರ ಗೌಡರನ್ನು ಕೇಳಿ ಅವರ ಒಪ್ಪಿಗೆಯನ್ನು ಪಡೆಯೋಣವೆನ್ನಿಸಿತು. ಹೋಗಿ ಅವರಿಗೆ ವಿಷಯ ತಿಳಿಸಿದೆ. ಅವರ ಪಕ್ಕದ ಮನೆಯವರೇ ಆದ ಶಿವಣ್ಣನ ಆಚಾರ ವಿಚಾರದ ಬಗ್ಗೆ ಅವರಿಗೆ ತುಂಬಾ ಗೌರವ. 'ಆಗಲಿ ಅದಕ್ಕೇನು? ನಮಗಿಂತಲೂ ಆತನೇ ಶ್ರೇಷ್ಠ, ಹತ್ತು ಕೈಯ್ಯಲ್ಲಿ ಕೊಡಬಹುದು" ಎಂದರು. ನನಗೆ ತುಂಬಾ ಖುಷಿಯಾಯಿತು. ಆದರೆ ಶಿವಣ್ಣನವರಿಗೆ ವಿರೋಧಿಯಾಗಿದ್ದ ಒಬ್ಬ ಸ್ವಾಮಿಗಳ ಮಾತನ್ನು ಕೇಳಿ, ಮಾರನೆಗೆ ಆ ಗೌಡರು ಏಕೋ ಬೇಡವೆಂದರು ಎಂದು ಸ್ವಲ್ಪ ತಕರಾರು ತೆಗೆದರು. ಮೊದಲೇ ಒರಟಾದ ನಾನು ಅವರ ವಿರೋಧವನ್ನು ಲೆಕ್ಕಿಸದೆ, ಆ ಕುಟುಂಬಕ್ಕೆ ಲಿಂಗದೀಕ್ಷೆ ಕೊಡಿಸಿದೆ.

ಲಿಂಗದೀಕ್ಷೆಯಾದ ಮೇಲೆ ಆ ಸ್ವಾಮಿಗಳು ಶ್ರೀ ಲಿಂಗಾನಂದರಿಗೆ ಲಿಂಗದೀಕ್ಷೆ ಕೊಡಲು ಅಧಿಕಾರವೇನಿದೆ? ಜಗದ್ಗುರುಗಳು ಕೊಟ್ಟರೆ ಇಡೀ ಸಮಾಜವು ಒಪ್ಪುತ್ತದೆಂದು ಉದ್ಗಾರವೆತ್ತಿದರು. ಸಮಾಜದ ದೃಷ್ಟಿಯಿಂದ ಅದು ಸರಿಯೇನೋ ಎನ್ನಿಸಿತು. ಅದಕ್ಕಾಗಿ ಜಗದ್ಗುರುಗಳಲ್ಲಿ ನಡೆದ ವಿಚಾರ ತಿಳಿಸಿ, ಆ ಕುಟುಂಬಕ್ಕೆ ತಾವೇ ಲಿಂಗದೀಕ್ಷೆ ಕೊಡಬೇಕೆಂದು ಬಿನ್ನವಿಸಿದೆ. 'ಅದಕ್ಕೇನಂತೆ, ಕೊಡೋಣ'ವೆಂದು ಒಪ್ಪಿ, ಒಂದು ನಿಶ್ಚಿತವಾದ ತಾರೀಖನ್ನು ತಿಳಿಸಿದರು. ಆ ತಾರೀಖನ್ನು ಹೇಗೋ ತಿಳಿದ ಆ ಸ್ವಾಮೀಜಿ ಪರಮಪೂಜ್ಯ ಜಗದ್ಗುರುಗಳಿಗೆ ಇಲ್ಲಸಲ್ಲದ ವಿಚಾರ ಹೇಳಿ ದೀಕ್ಷೆ ಕೊಡಬಾರದೆಂದು ವಿನಂತಿಸಿದರಂತೆ. ಅದಕ್ಕಾಗಿ ಪೂಜ್ಯರು ನನ್ನನ್ನು ಕರೆಸಿಕೊಂಡು, ಬೇರೆ ನೆಪ ಹೇಳಿ, ಆ ತಾರೀಖನ್ನು ಒಂದು ತಿಂಗಳ ಕಾಲ ಮುಂದೂಡಿದರು. ಸರಿ, ಆಗಲೆಂದು ನಾನೂ ಸಹ ಸಮ್ಮತಿಸಿದೆ. ಆದರೆ ಒಂದು ತಿಂಗಳ ನಂತರ ಮತ್ತೆ ಮುಂದೂಡಿದರು. ಹೀಗೆ ಸುಮಾರು ನಾಲ್ಕೈದು ಬಾರಿ ಮುಂದೂಡಿ ಮುಂದೂಡಿ ಐದಾರು ತಿಂಗಳು ತಳ್ಳಿದರು.

ಅಲ್ಲಿಗೆ ಜಯಂತಿ ಮಹೋತ್ಸವದ ಸಮಯ ಬಂತು. ಉಪಾಧ್ಯಕ್ಷನಾಗಿದ್ದ ನನಗೆ ಪೂರ್ವಭಾವಿ ಸಭೆಯ ನೋಟೀಸ್ ಬಂತು. ಆ ಸ್ಥಾನಕ್ಕೆ ರಾಜೀನಾಮೆ ನೀಡಿದೆ. ಸಿಡಿಮಿಡಿಗೊಂಡು ಅವರ ವಾತ್ಸಲ್ಯ, ಘನತೆ, ಗೌರವ, ಅವರ ಸಮಾಜದ ಕಳಕಳಿ, ಅವರ ವರ್ಚಸ್ಸು ಎಲ್ಲವನ್ನೂ ಮರೆಸಿತು ನನ್ನ ಒರಟುತನ. ಸುಮಾರು ನಾಲ್ಕು ಪುಟದ ಪತ್ರವನ್ನು ಕಟುಪದಗಳ ಪ್ರಯೋಗ ಮಾಡಿ (ಆಗಿನ ಪದಪ್ರಯೋಗವನ್ನು ಈಗ ನೆನೆಯಲೂ ಸಹ ನಾಚಿಕೆಯಾಗುತ್ತಿದೆ) ಸಿಕ್ಕಾಬಟ್ಟೆ ಹಂಗಿಸಿ, ನನ್ನ ಕೋಪತಾಪಗಳನ್ನು ಪ್ರದರ್ಶಿಸಿ ಬರೆದೆ. ತುಂಬಾ ನೊಂದುಕೊಂಡರೇ ಹೊರತು, ನನ್ನ ಬಗ್ಗೆ ಕೋಪಿಸಿಕೊಳ್ಳಲಿಲ್ಲ. ಅದು ಅವರ ದೊಡ್ಡತನ. ದಿವಂಗತ ಎಚ್. ನಾಗಪ್ಪನವರನ್ನು ಕಳುಹಿಸಿ ನನ್ನನ್ನು ಕರೆದುಕೊಂಡು ಬರುವಂತೆ ತಿಳಿಸಿದರು. ಮುಗ್ಧ ನಾಗಪ್ಪನವರು ಬಂದು ಜಗದ್ಗುರುಗಳು ಬರಹೇಳಿದ್ದಾರೆ ಬನ್ನಿರೆಂದರು. ಅವರಿಗೂ ಸಾಕಷ್ಟು ಛೀಮಾರಿ ಮಾಡಿ ಬರುವುದಿಲ್ಲವೆಂದು ಹಠಮಾಡಿದೆ. ಅವರೂ ಸಹ ನೀವು ಏನೇ ಹೇಳಿದರೂ ಬರಲೇಬೇಕೆಂದು ಹಠ ಹಿಡಿದರು. ಸರಿ ನಡೆಯಿರಿ, ನೋಡೋಣವೆಂದು ಹೊರಟೆ. ಕಾಗದವನ್ನು ಹಿಡಿದೇ ಕುಳಿತಿದ್ದರು. ನನ್ನ ಸಿಟ್ಟಿನ ಉನ್ಮತ್ತಾವಸ್ಥೆಯಲ್ಲಿ ಪೂಜ್ಯರಿಗೆ ನಮಸ್ಕರಿಸಲೂ ಇಲ್ಲ. "ಹೀಗೆ ಬರೆಯುತ್ತಾರೇನು" ಎಂದರು. "ಅದು ಕಡಿಮೆ" ಎಂದೆ. ಮಾತಿಗೆ ತಪ್ಪಬಾರದೆಂದು ಬೋಧಿಸುವ ತಾವೇ ಮಾತಿಗೆ ತಪ್ಪಿದರೆ ಹೇಗೆ? ಹಾಗೆ ಹೀಗೆ ಎಂದು ಸಿಕ್ಕಾಬಟ್ಟೆ ಪ್ರತಿವಾದಿಸಿದೆ. ನಾನು ಏನೇ ಹೇಳಿದರೂ ಆ ದಿವ್ಯಮೂರ್ತಿ ಸಿಟ್ಟುಗೊಳ್ಳಲಿಲ್ಲ. ನಾನು ಬರೆದಿದ್ದ ಪತ್ರದ ಒಕ್ಕಣೆಗೂ, ನಾನು ಅಂದು ಆಡಿದ ಮಾತುಗಳಿಗೂ ಅವರು ನನ್ನನ್ನು ಕಂಬಕ್ಕೆ ಕಟ್ಟಿಸಿ ಚಾಟಿಯಿಂದ ಹೊಡೆಸಬಹುದಿತ್ತು. ನನ್ನನ್ನು ಕೇಳುವವರಾರಿದ್ದರು? ಅಂತಿತ್ತು ಅವರಿಗೆ ಶಕ್ತಿಸಾಮರ್ಥ್ಯ! ಆದರೆ ಅವರು ಅಂದು ತೋರಿದ ಕರುಣೆ, ಸಹನೆ ಬಣ್ಣಿಸಲಸಾಧ್ಯ. ಅಷ್ಟೆಲ್ಲಾ ನಾನು ಹಾರಾಡಿದರೂ ಏನೊಂದೂ ಭಾವಿಸದೆ ಕೊಳ್ಳೇಗಾಲಕ್ಕೆ ಬಂದು, ಆ ಕುಟುಂಬಕ್ಕೆ ದೀಕ್ಷೆ

ಕೊಡಲು ಒಪ್ಪಿ, ಒಂದು ತಾರೀಖನ್ನು ನಿಗದಿ ಮಾಡಿದರು ; ಬಂದರು, ದೀಕ್ಷೆ ನೀಡಿದರು. ಸುಮಾರು 18-20 ಮಠಾಧ್ಯಕ್ಷರು ಸೇರಿದ್ದರು. ತಾಲ್ಲೂಕಿನ ಹಲವಾರು ಹಳ್ಳಿಗಳ ಮುಖಂಡರುಗಳನ್ನು ಆಹ್ವಾನಿಸಿದ್ದೆ. ತುಂಬಾ ವಿಜೃಂಭಣೆಯಿಂದ ದೀಕ್ಷಾಸಂಸ್ಕಾರ ಸಾಗಿತು. ಸುಮಾರು 1500 ಜನ ಸೇರಿತ್ತು. ಅವರ ಪೂರ್ಣ ಕೃಪೆಯಿಂದ ಆ ಸಂಸಾರ ಉದ್ಧಾರವಾಯಿತು; ಲಿಂಗವಂತಸಮಾಜದೊಡನೆ ಈಗ ಬೆರೆತುಹೋಗಿ ತುಂಬಾ ಸಂತಸದಿಂದ ಸಾಗುತ್ತಿದೆ. ಇದು ಪೂಜ್ಯರ ಕೃಪಾಶೀರ್ವಾದ ಹಾಗೂ ಒಂದು ರೀತಿಯಲ್ಲಿ ನನ್ನ ಭಾಗ್ಯ. ಅಂದಿನಿಂದ ಅವರು ನನ್ನ ಭಾಗಕ್ಕೆ ಭಗವಂತನೇ ಆದರು.

15-8-1980ರಂದು ನಿಜಗುಣರ ಗವಿಗೆ ಬೆಳಗಿನ ಜಾವ 5 ಗಂಟೆಗೆ ಬಂದೆ. ಅದರ ಹಿಂದಣ ದಿವಸ ಪ್ರಸಾದಗೈಯಲು ಒಂದು "ಪ್ರಷರ್ ಕುಕ್ಕರ್" ತೆಗೆದುಕೊಳ್ಳಬೇಕೆಂದು ಮೈಸೂರಿಗೆ ಬಂದೆ. ಆರ್ಗೇಟ್‌ನಲ್ಲಿ ಇಳಿದ ತಕ್ಷಣವೇ, ಏಕೋ ಏನೋ, ಕಾಲು ಮಠದ ಕಡೆ ಎಳೆಯಿತು. ಹೋದೆ; ನಮಸ್ಕರಿಸಿದೆ. "ಏನು ಸಮಾಚಾರ" ಎಂದರು. ಬುದ್ಧಿ! ನಾಳೆ ನಾನು ಗವಿಗೆ ಹೊರಟಿದ್ದೇನೆ, ತಾವು ಸಹಸ್ರ ಸದಸ್ಯ ಮಕ್ಕಳಿಗೆ ಅಶನವಸತಿಯನ್ನಿತ್ತು ಕಾಪಾಡಿದ್ದೀರಿ. ನನ್ನನ್ನೂ ಸಹ ಆಶೀರ್ವದಿಸಿ ಒಂದು "ಪ್ರಷರ್ ಕುಕ್ಕರ್" ತೆಗೆದುಕೊಡಿ ಎಂದೆ. ಎಷ್ಟಾಗುತ್ತದೆ ಎಂದರು ; ಗೊತ್ತಿಲ್ಲ ವೆಂದೆ. ಮುನ್ನೂರು ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡು ಬನ್ನಿರೆಂದರು. ಹೋಗಿ ಇನ್ನೂರೈವತ್ತಮೂರು ಕೊಟ್ಟು ತೆಗೆದು ಕೊಂಡು ಬಂದು ಆ ಪಾತ್ರೆಯನ್ನೂ ಉಳಿದ ಹಣವನ್ನು ಅವರಿಗೆ ಅರ್ಪಿಸಿದೆ. ಅವೆರಡನ್ನೂ ಹಿಂದಕ್ಕೆ ನನಗೆ ಕೊಟ್ಟು ಎರಡು ಬಾಳೆ ಹಣ್ಣುಗಳನ್ನಿತ್ತು ಸಾಧನೆ ಮಾಡಿ, ಭಗವಂತ ಕರುಣಿಸಲೆಂದು ಆಶೀರ್ವದಿಸಿದರು. ಮತ್ತೆ ಮಾರ್ಕೆಟ್ಟಿಗೆ ಹೋಗಿ ಹಣ್ಣುಗಳನ್ನು ಹಾಕಲು ಉಪಯೋಗಿಸುವ ಒಂದು ಕಬ್ಬಿಣದ "ವೈರ್" ಬುಟ್ಟಿಯೊಂದನ್ನು ಖರೀದಿಸಿ ಅದಕ್ಕೆ ಅವರು ಆಶೀರ್ವದಿಸಿದ್ದ ಹಣ್ಣು ಗಳನ್ನು ಹಾಕಿ, ಊರಿಗೆ ಹೋದೆ. ಆ ಬುಟ್ಟಿ ನಮ್ಮ ನಿಜಗುಣಾನುಭವ ಮಂಟಪವು 1994ರಲ್ಲಿ ತೆರೆಯಲ್ಪಡುವ ತನಕ ತುಂಬಾ ತುಂಬಿತ್ತು, ಎಂದೂ ಖಾಲಿಯಾಗಲಿಲ್ಲ. ಅವರ ನಡೆ ಪರುಷ, ನುಡಿ ಪರುಷ, ಹಸ್ತ ಪರುಷ. ಅವರು ಹೇಳಿದ್ದೆಲ್ಲಾ ನಿಜವಾಗುತ್ತಿತ್ತು. ಅವರು ಮುಟ್ಟಿದ್ದೆಲ್ಲಾ ಹೊನ್ನಾಗುತ್ತಿತ್ತು. ಹೀಗೆ ಬಣ್ಣನೆಗೆ ನಿಲುಕದ ದಿವ್ಯಮೂರುತಿ, ಸಾಕ್ಷಾತ್ ಭಗವಂತನೇ ಅವರು.

1983ಕ್ಕೆ ನಿಜಗುಣಾನುಭವಮಂಟಪ ಕಟ್ಟಲು ಪ್ರಾರಂಭಿಸಿದೆ. ಮಠಕ್ಕೆ ಹೋಗಿ ಅಡಿಪಾಯ ಕಟ್ಟಿಸುತ್ತಿದ್ದೇನೆ ಬುದ್ಧಿ ಎಂದು ವಿನಂತಿಸಿದೆ. 5,000 ರೂಪಾಯಿಗಳನ್ನು ಕೊಟ್ಟು ಸಾಧ್ಯವಾದಷ್ಟು ಬೇಗ ಮುಗಿಸಿರೆಂದು ಆಶೀರ್ವದಿಸಿದರು. ಬರಿಗೈಯಲ್ಲಿ ಗವಿಗೆ ಬಂದ

ನಾನು ಅವರ ಕೃಪಾಶೀರ್ವಾದದಿಂದ ಹೆಚ್ಚಿನ ಆತಂಕವಿಲ್ಲದೆ ನಿರುಪಮಜ್ಞಾನಿ ನಿಜಗುಣರಿಗೆ ಸೂಕ್ತ ಸ್ಮಾರಕವನ್ನು ನಿರ್ಮಿಸಲು ನೆಪವಾದೆ. ನಾನು ಏನೂ ಮಾಡಿದರೂ ಅವರು ನನ್ನ ಬೆನ್ನುಹಿಂದೆ ಆಶೀರ್ವದಿಸುತ್ತಲೇ ಇದ್ದರು. ನನ್ನ ಸರ್ವಶಕ್ತಿಯೂ ಅವರದ್ದೇ. ಅವರ ಕೃಪಾಶೀರ್ವಾದ ನನ್ನ ಮೇಲೆ "ಸಾಸಿವೆ ಮೇಲೆ ಸಾಗರ ಹರಿದಂತೆ" ಹರಿದಿದೆ.

ಅವರ ಪೂಜಾವಿಧಾನವನ್ನು ಬಣ್ಣಿಸಲು ಅಸಾಧ್ಯ. ತಮ್ಮ ಇಷ್ಟಲಿಂಗದಲ್ಲಿ ಬೆರೆತುಹೋಗುತ್ತಿದ್ದರು. ಅವರು ಪಾದಪೂಜೆಗೆ ಕುಳಿತರೆ ಚಿನ್ನದ ಬೊಂಬೆಯಂತೆ ಸ್ವಲ್ಪವೂ ಅಲುಗದೆ ತನ್ಮಯರಾಗುತ್ತಿದ್ದರು. ಆ ದಿವ್ಯಪೂಜೆಯನ್ನು ನೋಡಿ ತದೇಕಚಿತ್ತದಿಂದ ಆನಂದಿಸಿದವನು ನಾನು. ಅದಕ್ಕೆ ಮಾರುಹೋಗಿ 1983ರಿಂದ ಅವರು ಐಕ್ಯವಾಗುವವರೆಗೆ ಸುಮಾರು 50-60 ಬಾರಿ ಅವರೊಡನೆ ಪೂಜೆಯಲ್ಲಿ ಪಾಲ್ಗೊಂಡಿದ್ದೇನೆ. ಅದಕ್ಕಾಗಿಯೇ ರಾತ್ರಿಗೆ ಬಂದು ತಂಗಿ, ಬೆಳಗ್ಗೆ ನಾಲ್ಕೂವರೆಯಿಂದ ಏಳೂವರೆಯವರೆಗೆ ಅವರು ಮಾಡುತ್ತಿದ್ದ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದೆ. ಅದು ನನ್ನ ಸೌಭಾಗ್ಯ. ಆ ತನ್ಮಯತೆ, ಲಿಂಗನಿಷ್ಠೆಯನ್ನು ನಾನೆಲ್ಲಿಯೂ ಕಾಣಲಿಲ್ಲ. ಕೊನೆಯದಾಗಿ ಅವರ ಪಾದಪೂಜೆಯ ಭಾಗ್ಯ ನನಗೆ ದೊರೆತದ್ದು ರಾಮಾಪುರದ ಮಠದಲ್ಲಿ. ಬಹುಶಃ ಅದು 30-11-1986ರಂದು ಎಂಬ ನೆನಪು. ಅಂದು ಅವರು ಸಾಕ್ಷಾತ್ ಪರಶಿವನಂತೆಯೇ ಕಂಡರು. ಚಿನ್ನದ ಬೊಂಬೆಯಂತೆ ಕುಳಿತಿದ್ದರು. ಆ ತಾದಾತ್ಮ್ಯತೆ ಅವರಲ್ಲಿ ಒಡಮೂಡಿತ್ತು. ನನಗಾದ ಆನಂದ ಅಷ್ಟಿಷ್ಟಲ್ಲ.

ಇದಕ್ಕೆ ಮೊದಲು ಮೂರ್‍ನಾಲ್ಕು ತಿಂಗಳ ಹಿಂದೆ ಅಮೆರಿಕ, ಇಂಗ್ಲೆಂಡ್ ದೇಶಗಳಿಗೆ ಭೇಟಿಯಿತ್ತು ಮೈಸೂರಿಗೆ ವಾಪಸ್ಸಾದರು. ಅಂದು ನಡೆದ ಅವರ ಮೆರವಣಿಗೆ "ನ ಭೂತೋ ನ ಭವಿಷ್ಯತಿ" ಎನ್ನುವಂತಿತ್ತು. ಮೈಸೂರು ಜಿಲ್ಲೆಯ ಭಕ್ತರ ಸಂಭ್ರಮ ಅಂದು ಹೇಳತೀರದು. ಗುರುಗಳು ಕಾಲ್ನಡಿಗೆಯಲ್ಲಿಯೇ ದಯಮಾಡಿದರು. ಆ ಬೃಹತ್ಸಭೆಯಲ್ಲಿ ಅವರಿಗೆ ಕೆಳಕಂಡಂತೆ ಸ್ವಾಗತಮಾಲಿಕೆ ಹಾಡಿದೆ:

ಸ್ವಾಗತವು ಹೃತ್ಪೂರ್ಣಸ್ವಾಗತವು ಗುರುವರಗೆ
ಯೋಗಮಾರ್ಗವನರುಹಿ ಜಯಭೇರಿ ಹೊಡೆದವಗೆ || ಪ ||

ಅಮೆರಿಕೆಯ ವಿಜ್ಞಾನಪರಿಣತಬೃಹತ್ಸಭೆಗೆ
ಸುಮಬಾಣನಂ ಜಯಿಪ ಪರಿಣತಿಯ ಕಲಿಸಿದಗೆ
ವಿಮಲಲಿಂಗಾರ್ಚನೆಯ ಸತ್ಫಲವ ತಿಳುಪಿದಗೆ
ಕ್ರಮಮುಕ್ತಿಪಡೆವಂಥ ಮಾರ್ಗ ಬೋಧಿಸಿದವಗೆ || 1 ||

ನ್ಯೂಯಾರ್ಕ್‌ಮಹಾನಗರದೈಸಿರಿಯ ಸಭ್ಯರಿಗೆ
ಮಾಯೆಯನು ಸಲೆಮೆಟ್ಟಿ ನಿಲ್ವ ಪರಿ ಪೇಳಿದಗೆ
ಕಾಯಭಾವವನಳಿವ ಸದುಪಾಯವರುಹಿದಗೆ
ಕಾಯಕದ ಮಹತಿಯನು ಕೂರ್ಮೆಯಿಂದೊರೆದವಗೆ || 2 ||

ಎಸೆವ ಲಾಸೇಂಜಲ್ಸ್ನ ಸುಖಭೋಗಮರ್ತ್ಯರಿಗೆ
ದೆಸೆಗೆಡಿಸುವರಿಕುಳವ ಗೆಲ್ವ ತೆರನರುಪಿದಗೆ
ವ್ಯಸನವೇಳನು ಕಳೆವ ಹೊಸ ಹಾದಿ ತೋರಿದಗೆ
ಬಸವಧರ್ಮವನರುಹಿ ಅಸಮಯಶ ಗಳಿಸಿದವಗೆ || 3 ||

ಭೂರಿವಾಷಿಂಗ್ಟನಿನ ಭೂಧನದ ಸಂತತಿಗೆ
ಧಾರುಣಿಯ ಸೊಗಕಾಗಿ ಹೋರಾಡಿರೆಂದವಗೆ
ಭಾರತದ ನಿಜರಾಯಭಾರತ್ವ ವಹಿಸಿದವಗೆ
ವೀರಶೈವದ ಮಹತಿ ಮೆರೆಯಿಸಿದ ಮಹಿಮನಿಗೆ || 4 ||

ಕುಜನಮಾರ್ಗದಿ ಗಮಿಸಿ ಅಳಿಯುತಿಹ ಈ ಬುವಿಗೆ
ನಿಜಧರ್ಮವುಳಿದನ್ಯಮಾರ್ಗವಿಲ್ಲೆಂದವಗೆ
ಸುಜನಮಾರ್ಗವ ತಿಳುಪಿ ಲಂಡನಿನ ಲೋಗರಿಗೆ
ವಿಜಯದುಂದುಭಿ ಮೊಳಗಿ ಬಿಜಯಿಸಿದ ಗುರುವರಗೆ || 5 ||

ಎಂದು ಮನದುಂಬಿ ಮೈಪುಳುಕವಂತೆ ಹಾಡಿದೆ. ಅಂತೆಯೇ ಅವರು ಐಕ್ಯವಾದಂದು ಸುತ್ತೂರಿನಲ್ಲಿಯೂ ಇಡೀ ರಾತ್ರಿ ಹಾಡಿ ನನ್ನ ದುಃಖವನ್ನು ಭಾವಪೂರ್ಣವಾಗಿ ಹರಿಸಿದೆ. ಅಂದು ಅವರು ಐಕ್ಯರಾಗಿಲ್ಲ; ನನ್ನ ಮುಂದೆ ಕೇಳುತ್ತಾ ಕುಳಿತಿದ್ದಾರೆಂದೇ ಭಾವಿಸಿ ಭಾವಪೂರ್ಣವಾಗಿ ಬಾಷ್ಪಾಂಜಲಿ ಸಲ್ಲಿಸಿ ಕೃತಾರ್ಥನಾದೆ.

ಐಕ್ಯರಾದ ಮೇಲೆ ಒಂದು ದಿವಸ ಅಂದರೆ 22-3-1988 ರಂದು ಅವರ ಶಿವಯೋಗಸಮಾಧಿ ಬಳಿ ಹೋದೆ. ಭಾವೋನ್ಮತ್ತನಾದೆ. ಅವರನ್ನೇ ಸಮಾಧಿ ಮೇಲೆ ಕಂಡಂತಾಯಿತು. ಆ ದಿವ್ಯದರ್ಶನವನ್ನು ಕೆಳಕಂಡಂತೆ ಬರೆದೆ :

ರತ್ನಕಾಂತಿಯೊಳೆಸೆವ ರಾಜೇಂದ್ರನಂ ಕಂಡೆ
ಸುತ್ತೂರು ಶಿವಯೋಗಮಂಟಪದಿ ನಾ ಕಂಡೆ || ಪ ||

ಜ್ಯೋತಿರೂಪನ ಕಂಡೆ ಖ್ಯಾತನಾಮನ ಕಂಡೆ
ಮಾತುಮನಸಾದಿಗಳ ಮೀರಿನಿಂತನ ಕಂಡೆ || ಅ.ಪ. ||



ಗಗನದೆತ್ತರ ಬೆಳೆದ ಜ್ಞಾನಮೂರುತಿ ಕಂಡೆ
ಸುಗುಣವೇ ಮೈವೆತ್ತ ಸುಂದರಾಂಗನ ಕಂಡೆ
ಮಗುಮನದ ಮುನಿಮತಿಯ ಮಂತ್ರಮುಗ್ಧನ ಕಂಡೆ
ನಗೆ ಬೀರುತಿಹ ರಾಜಗುರುತಿಲಕನಂ ಕಂಡೆ || 1 ||

ಹೊನ್ನಮೈ ಮಾಣಿಕ್ಯದೀಪ್ತಿತೇಜನ ಕಂಡೆ
ಕಣ್ಣುಗಳ ಕೋರೈಪ ಕಾವಿಯುಟ್ಟವನ ಕಂಡೆ
ಬಣ್ಣನೆಗೆ ನಿಲುಕದಿಹ ಭವ್ಯಮೂರುತಿ ಕಂಡೆ
ಚೆನ್ನಶಿವಯೋಗದೊಳಗೋಲಾಡುವನ ಕಂಡೆ || 2 ||

ಅಂಗಸರ್ವಸ್ವವೂ ಲಿಂಗವಾದವನ ಕಂಡೆ
ಲಿಂಗವೇ ತಾನಾದ ಮಂಗಳಾಂಗನ ಕಂಡೆ
ತುಂಗಕೀರ್ತಿಯ ಧವಳಶಿಖರವೇರ್ದನ ಕಂಡೆ
ಮಂಗಳವನೆಲ್ಲರ್ಗೆ ನೀಡಿ ನಗುವನ ಕಂಡೆ || 3 ||

ತನುಮೋಹವನ್ನಳಿದ ತ್ಯಾಗಮೂರುತಿ ಕಂಡೆ
ವನಿತೆವಿತ್ತವನುಳಿದ ವೀರವಿರತನ ಕಂಡೆ
ವಿನಯವಾರಿಧಿಯಾದ ವಿಶ್ವಮಾನ್ಯನ ಕಂಡೆ
ಜನಮನದ ಪೀಠದಲಿ ಮೂರ್ತಗೊಂಡನ ಕಂಡೆ || 4 ||

ಭವಮರಣಗಳ ಗೆಲಿದ ಬಹುಬಲ್ಲಿದನ ಕಂಡೆ
ಬುವಿಗಿಳಿದ ಶಿವನೀತನೆಂಬ ನಿಜವನು ಕಂಡೆ
ಶಿವರಾತ್ರಿಗುರುಚರಣದಡಿ ನಿಂದವನ ಕಂಡೆ
ಶಿವರಾತ್ರಿದೇಶಿಕೇಂದ್ರರನಿತ್ತುದನು ಕಂಡೆ || 5 ||

ಈ ನಾಡು ಕಂಡ ದಿವ್ಯಚೇತನರು ಆ ಮಹಾಂತರು. ನಾಡಿನುದ್ಧಾರಕ್ಕಾಗಿಯೇ ಅವತರಿಸಿದ ಕಾರಣಿಕಪುರುಷರು. ಆ ಪೂತೆ ಮರಮ್ಮಣ್ಣಿಯವರ ಪುಣ್ಯಗರ್ಭದಿಂದ ಈ ಬುವಿಗಿಳಿದ ಭಾಗ್ಯಜ್ಯೋತಿಯವರು. ಸುತ್ತೂರು ಶ್ರೀಮಠವನ್ನು ಭದ್ರವಾಗಿ ಪುನರುದ್ಧರಿಸಲು ಪಣತೊಟ್ಟ ಮಂತ್ರಮಹರ್ಷಿಗಳು ಕರುಣಿಸಿದ ಕಾರುಣ್ಯಶಿಶುವಾಗಿದ್ದ ಅವರು ಈ ನಾಡು ಕಂಡ ಅಪೂರ್ವ ಮಹಿಮಾನ್ವಿತರು ; ಮಾತೃ ಹೃದಯದ ದೇವತಾಸ್ವರೂಪರು.

□



# ಧರ್ಮದ ಉಸ್ತುವಾರಿ

**ಸಿ.ಎಚ್. ವಿಜಯಶಂಕರ್**
**ರಾಜ್ಯಪಾಲರು, ಮೇಘಾಲಯ**

**12**ನೇ ಶತಮಾನದಲ್ಲಿ ಶರಣರು ಕಂಡಂಥ ಕನಸು ಬಹಳ ಅಪರೂಪವಾದುದು. ಒಂದು ಸಾಮಾಜಿಕ ನ್ಯಾಯದಡಿಯಲ್ಲಿ ಇಡೀ ಸಮಾಜದಲ್ಲಿ ತಮ್ಮನ್ನು ತಾವು ಸಮರ್ಪಣೆ ಮಾಡಿಕೊಂಡಂಥ ದಿನಗಳನ್ನು ಅವರ ಬದುಕಿನಲ್ಲಿ ನಾವು ಕಾಣ್ತೇವೆ. ಒಂದು ಸಮಾಜ ವನ್ನು ಹೇಗೆ ಕಟ್ಟಬೇಕು. ಒಂದು ಸಮಾಜದ ರೂಪುರೇಷೆಗಳು ಹೇಗಿರಬೇಕು, ಒಂದು ಜೀವನದ ಪದ್ಧತಿ ಹೇಗೆ ನಡೆಯಬೇಕು, ಭೌತಿಕ ಬದುಕಿನ ಜೊತೆಗೆ ಪಾರಮಾರ್ಥಿಕ ಬದುಕು ಯಾವ ರೂಪದಲ್ಲಿ ಮನುಷ್ಯನಲ್ಲಿ ರೂಪುಗೊಳ್ಳಬೇಕು. ಧಾರ್ಮಿಕ ಅಷ್ಟೇ ಅಲ್ಲ, ಶೈಕ್ಷಣಿಕ ಅಷ್ಟೇ ಅಲ್ಲ, ಲೌಕಿಕ ಬದುಕಿನ ವಿಚಾರಗಳು ಅಷ್ಟೇ ಅಲ್ಲ, ಬದುಕಿನ ಎಲ್ಲಾ ರಂಗಗಳನ್ನು ತಿದ್ದಿತೀಡಿ ಸಮಾಜಕ್ಕೆ ಒಂದು ನಿರ್ದಿಷ್ಟವಾದ ಗುರಿಯನ್ನು, ಬದುಕನ್ನು ಕೊಟ್ಟುಹೋದಂಥ ಕಾರ್ಯವನ್ನು ನಾವು ಶರಣರ ಬದುಕಲ್ಲಿ ಕಾಣುತ್ತೇವೆ. ಅವರು ಮಾಡಿದಂತಹ ತಪಸ್ಸು ಏನಿದೆ, ಆ ತಪಸ್ಸು ಯಾವುದೇ ಕಾರಣಕ್ಕೂ ನಿಷ್ಫಲವಾಗುವುದಿಲ್ಲ ಎನ್ನುವುದು ಸತ್ಯ. ಅದು ನಮ್ಮನ್ನು ಸದಾಕಾಲವೂ ಕಾಪಾಡುತ್ತೆ. ನಾವು ಮಾಡಬೇಕಾದಂಥ ಕಾರ್ಯ ವಸ್ತುನಿಷ್ಠವಾಗಿದ್ದರೆ ಆ ಶಕ್ತಿ ನಮ್ಮ ಜೊತೆ ಇದ್ದು ಮುನ್ನಡೆಸುತ್ತದೆ. ರಾಜೇಂದ್ರ ಮಹಾಸ್ವಾಮಿಗಳು ನಮಗೆ ಕೊಟ್ಟಿರುವಂಥ ಮಾರ್ಗ ಶರಣ ಮಾರ್ಗ. ಅದು ಸಾರ್ಥಕವಾಗಿದೆ ಅನ್ನೋದನ್ನು ನಾನು ಅತ್ಯಂತ ಜವಾಬ್ದಾರಿಯಿಂದ ಹೇಳಲಿಕ್ಕೆ ಬಯಸುತ್ತಿದ್ದೇನೆ.

ನನ್ನ ಚಿಕ್ಕ ವಯಸ್ಸಿನಲ್ಲಿ ಪರಮಪೂಜನೀಯ ರಾಜೇಂದ್ರ ಮಹಾಸ್ವಾಮಿಗಳನ್ನು ಕಾಣುವಂಥ ಭಾಗ್ಯ ಲಭ್ಯವಾಗಿತ್ತು. ನಾನು ಅವರನ್ನು ಬಹಳ ಹತ್ತಿರದಿಂದ ಕಂಡಂಥ ಅನೇಕ ಸಂದರ್ಭಗಳಿವೆ. ಅವರ ಮಾತು ಅತ್ಯಂತ ಕಠಿಣವಾಗಿತ್ತು. ಆದರೆ ಹೃದಯ ಅತ್ಯಂತ ಮೃದುವಾಗಿತ್ತು. ಆ ಪ್ರೀತಿ ತಾಯಿ ಪ್ರೀತಿಯನ್ನು ನೆನಪಿಸುತ್ತಿತ್ತು. ಯಾರನ್ನೇ ಆದರೂ ಬಹಳ ಪ್ರೀತಿಯಿಂದ ಹತ್ತಿರಕ್ಕೆ ಕರೆದು ಮಾತನಾಡಿಸುತ್ತಿದ್ದರು. ಬಹಳ ಅಪರೂಪವಾದ ಮಾತುಗಳವು. ಹುಟ್ಟು ಎಷ್ಟು ಆಕಸ್ಮಿಕವಾಗಿ ಲಭ್ಯವಾಗಿದೆಯೋ, ಸಾವು ಅಷ್ಟೇ ನಿಷ್ಪಕ್ಷಪಾತವಾಗಿ ಕಾದಿದೆ. ಹಾಗಾದರೆ ಈ ಬದುಕಿನಲ್ಲಿ ಉಳಿಯುವುದು ಯಾವುದು ಎಂದು ಯೋಚನೆ ಮಾಡೋ ಸಂದರ್ಭದಲ್ಲಿ ಸಾಧನೆ ಒಂದೇ ಉಳಿಯುವಂಥದ್ದು. ಮಗುವಿಗೂ



ಕೂಡ ತಿಂಗಳಿಗೊಂದು ಪರೀಕ್ಷೆ ಪ್ರಾರಂಭವಾಗಿದೆ. ವರ್ಷದಲ್ಲಿ ಒಂದು ಮಗು ಓದಿದ ಮೇಲೆ ಆ ಮಗು ಪರೀಕ್ಷೆಯಲ್ಲಿ ಪಾಸಾದರೆ ಆ ಮಗುವನ್ನು ಮುಂದಿನ ತರಗತಿಗೆ ಕಳುಹಿಸುತ್ತಾರೆ. ಪಾಸಾಗಲಿಲ್ಲ ಅಂದ್ರೆ ಆ ಮಗುವನ್ನು ಅಲ್ಲೇ ಇರಿಸುತ್ತಾರೆ. ಒಂದೆರಡು ಸಾರಿ ಆ ಮಗು ಅಲ್ಲೇ ಫೇಲ್ ಆಯ್ತು ಅಂದ್ರೆ ಆ ಮಗುವನ್ನು ಕ್ಲಾಸಿಗೆ ಬರಬೇಡಪ್ಪಾ ಅಂತ ಹಿಂದಕ್ಕೆ ಕಳುಹಿಸುತ್ತಾರೆ. ನೀನು ಓದುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ನೀನು ಮನೆಯಲ್ಲಿ ಇದ್ದುಬಿಡು ಅಂತ ಆ ಮಗುವನ್ನು ಮನೆಗೆ ಕಳುಹಿಸುತ್ತಾರೆ.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಎಂದರೆ ಶಿವರಾತ್ರಿ ಎಂದರೆ ರಾತ್ರಿ ಕತ್ತಲೆಯನ್ನು ಕಳೆದ ಶಿವನ ರೂಪ. ಅವರು ಪ್ರತಿಯೊಬ್ಬರ ಬಾಳಿನಲ್ಲಿದ್ದ ಕತ್ತಲೆಯನ್ನು ದೂರ ಮಾಡಿ ಎಲ್ಲರ ಮನೆಬಾಗಿಲಿನಲ್ಲಿ ದೀಪ ಬೆಳಗಿಸಿದಂಥವರು. ಹೀಗಾಗಿ ರಾಜೇಂದ್ರ ಮಹಾಸ್ವಾಮಿಗಳು ಅವರ ಬದುಕಿನ ಮೂಲಕ ನಮಗೇನು ಒಂದು ವಿಚಾರವನ್ನು ಕೊಟ್ಟುಹೋಗಿದ್ದಾರೆ, ಆದರ್ಶ ಕೊಟ್ಟುಹೋಗಿದ್ದಾರೆ, ಅವರ ತಪಸ್ಸಿನ ಮೂಲಕ ಪರಂಪರೆಯನ್ನು ಬಿಟ್ಟುಹೋಗಿದ್ದಾರೆ, ಅದು ಹಿಮಾಲಯದ ಎತ್ತರಕ್ಕೆ ಬೆಳೆದಿದೆ ಎಂದರೆ ಅದರ ಬೇರುಗಳು ಎಷ್ಟು ಆಳಕ್ಕೆ ಹೋಗಿದೆ, ಅದರ ಬಾಹುಗಳು ಎಷ್ಟು ವಿಶಾಲವಾಗಿ ಹೆಮ್ಮರವಾಗಿ ಬೆಳೆದಿದೆ ಅವರ ಸೇವೆ ಕೇವಲ ನಮ್ಮ ಜಿಲ್ಲೆಯನ್ನು ಆವರಿಸಿಲ್ಲ. ಅವರ ಸೇವಾಕೈಂಕರ್ಯಗಳು, ಸೇವಾವಿಚಾರಗಳು, ಅದು ಕೇವಲ ನಗರಕ್ಕೆ ಮಾತ್ರವಲ್ಲ, ಕೇವಲ ರಾಜ್ಯ ಮಾತ್ರ ಅಲ್ಲ, ಅದು ಭರತಖಂಡವಲ್ಲ, ಇಡೀ ಜಗತ್ತಿನ ಮನುಕುಲವನ್ನು ತಲುಪುವ ಮಟ್ಟಕ್ಕೆ ಹೋಗಿರುವುದನ್ನು ನಾವು ಕಾಣ್ತೇವೆ. ಸೇವೆ ಅನ್ನುವುದು ಬದುಕಿನ ಅನಿವಾರ್ಯ ಅಂಗ. ಅದೇ ರೀತಿ ಶ್ರೀಮಠದ ಸೇವೆಯನ್ನು ನಾವೇನು ಪಡೆದೆವೋ ಅದನ್ನು ಸ್ಮರಣೆ ಮಾಡುವಂಥದ್ದು ಕೂಡ ನಮ್ಮ ಸಂಸ್ಕೃತಿಯ ಒಂದು ಭಾಗ. ನಮ್ಮ ಸಂಸ್ಕೃತಿಯ ಫಲವೇ ಶ್ರೀಮಠದ ಸೇವೆಯನ್ನು, ರಾಜೇಂದ್ರ ಮಹಾಸ್ವಾಮಿಗಳ ಸೇವೆಯನ್ನು ಸಮಾಜಕ್ಕೆ ಅವರು ನೀಡಿದ ಕೊಡುಗೆಯನ್ನು ಸ್ಮರಣೆ ಮಾಡುವಂಥದ್ದು ನಮ್ಮ ಸಂಸ್ಕೃತಿಯ ಭಾಗ. ಅವರ ಬದುಕಿನುದ್ದಕ್ಕೂ ಕೊಟ್ಟಂತಹ ವಿಚಾರಧಾರೆ ಏನಿದೆ, ಅವರ ತಪಸ್ಸಿನ ಸೇವೆಯನ್ನು ಮೆಲುಕು ಹಾಕುವುದರ ಮೂಲಕ ಜೀವನದ ಗುರಿಯನ್ನು ಅವರ ಜೀವನದ ಆದರ್ಶಗಳನ್ನು ನಾವು ಅರ್ಥ ಮಾಡಿಕೊಂಡು ಆ ದಿಕ್ಕಿನಲ್ಲಿ ನಡೆದು ಹೋಗುವ ಪ್ರಯತ್ನ ಮಾಡೋಣ.

□



# ಇವ ನಮ್ಮ ವರೆಂದವರು

**ಜೆ.ಹೆಚ್. ಪಟೇಲ್**
**ಮಾಜಿ ಮುಖ್ಯಮಂತ್ರಿಗಳು**

ಕೆಲವು ಭಾವನೆಗಳು ಪ್ರತಿಯೊಬ್ಬ ಮನುಷ್ಯನಿಗೂ ಬರುತ್ತವೆ. ಭಾವನೆಗಳು ಏಕೆ ಬರುತ್ತವೆ ಎನ್ನುವ ವಿಚಾರಕ್ಕೆ ಹೋಗುವುದಿಲ್ಲ. ನಮ್ಮ ಸುತ್ತಮುತ್ತ ವಾತಾವರಣ ಯಾವ ಸಂದರ್ಭದಲ್ಲಿ ಹೇಗಿರುತ್ತದೆಯೋ ಅದಕ್ಕೆ ತಕ್ಕಂತೆ ನಮ್ಮ ಭಾವನೆಗಳು ಬರುತ್ತವೆ. ಕ್ರೀಡಾಂಗಣದಲ್ಲಿ ಕುಳಿತು ಆಟವನ್ನು ನೋಡುವಾಗ ಒಂದು ರೀತಿ ಭಾವನೆ ಇರುತ್ತದೆ. ಒಳ್ಳೆಯ ಸಾಹಿತ್ಯದ ವಿಚಾರಗಳು ನಡೆಯುತ್ತಿರು ವಾಗ ಅಲ್ಲಿ ಒಂದು ರೀತಿ ಭಾವನೆ ಬರುತ್ತದೆ. ಯಾವುದಾದರೂ ಒಂದು ಕೆಟ್ಟ ಸಿನಿಮಾ ನೋಡುವಾಗ ಮತ್ತೊಂದು ಭಾವನೆ ಬರುತ್ತದೆ. ಆದರೆ ಜಗದ್ಗುರುಗಳ ಸನ್ನಿಧಾನದಲ್ಲಿ ಏನೋ ಒಂದು ಗಂಭೀರತೆ ಇರುತ್ತದೆ. ಅದು ಸ್ವಾಭಾವಿಕವಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ನಾನು ಏನಾದರೂ ಅವರಿಂದ ತಿಳಿದುಕೊಳ್ಳಬೇಕು ಅಂತ ಇಚ್ಛೆ ಪಡುತ್ತೇನೆಯೇ ಹೊರತು, ಅಸೆಂಬ್ಲಿಗಳಲ್ಲೋ ಅಥವಾ ಪಬ್ಲಿಕ್ ಟಿ.ವಿ.ಗಳಲ್ಲೋ ರಾಜಕೀಯವಾಗಿ ನಮ್ಮ ವಿಚಾರ ಹೇಳುವಂತೆ ಹೇಳುವುದಿಲ್ಲ. ಆದರೆ ಇಂತಹ ಕಡೆ ನಾವು ಇವರಿಂದ ಏನು ತಿಳಿದು ಕೊಳ್ಳಬೇಕು. ನಾನು ಸರ್ಕಾರ ನಡೆಸುತ್ತಾ ಇದ್ದೇನೆ. ನನ್ನ ಸಹೋದ್ಯೋಗಿಗಳೆಲ್ಲ ಇಲ್ಲಿದ್ದಾರೆ. ಈ ಸಂಸ್ಥೆ ರಾಜೇಂದ್ರ ಮಹಾಸ್ವಾಮಿಗಳು ಕಟ್ಟಿದಂತಹ ಸಂಸ್ಥೆ. ಅವರ ಹಿಂದಿನವರು ಹಾಕಿಕೊಟ್ಟಂತಹ ಪರಂಪರೆ. ಈಗ ಈ ಸಂಸ್ಥೆ ಕೆಲಸ ಮಾಡುತ್ತಿರುವುದು ಒಟ್ಟು ಜನತೆಯ ಮೇಲೆ ಮಹತ್ವದ ಪರಿಣಾಮ ಬೀರಿದೆ. ರಾಜ್ಯದ ಒಂದು ಸಮಗ್ರ ಸಾಂಸ್ಕೃತಿಕ ಬೆಳವಣಿಗೆಗೆ, ಬೌದ್ಧಿಕ ಬೆಳವಣಿಗೆಗೆ, ಎಷ್ಟು ಕೊಡುಗೆ ಕೊಟ್ಟಿದೆ ಎನ್ನುವುದನ್ನು ಅಳೆಯುವುದಕ್ಕೆ ಆಗುವುದಿಲ್ಲ. ಸಿದ್ಧಗಂಗಾ ಮಠದವರಾಗಲಿ, ಸುತ್ತೂರು ಮಠದವರಾಗಲಿ, ಸಿರಿಗೆರೆ ಮಠದವರಾಗಲಿ, ಚಿತ್ರದುರ್ಗದ ಮುರುಘರಾಜೇಂದ್ರ ಮಠದವರಾಗಲಿ, ಜನರ ಹಿತದೃಷ್ಟಿಯಿಂದ ಒಳ್ಳೆಯ ಆರೋಗ್ಯಕರ ಸಮಾಜ ಬೆಳೆಯಬೇಕು, ನಮ್ಮ ಎದುರಿಗೆ ಅಶಾಂತಿ, ಅಸಮಾಧಾನ ಇರಬಾರದು ಎನ್ನುವ ಸದುದ್ದೇಶದಿಂದ. ಕರ್ನಾಟಕದಲ್ಲಿ ಒಂದು ವಿಶಿಷ್ಟ ಗುಣ ಎಂದರೆ ನೂರು ವರ್ಷದ ಹಿಂದೆ ಈ ವೀರಶೈವ ಮಠಗಳು ವಿದ್ಯಾಭ್ಯಾಸದ ಕಡೆಗೆ ಗಮನ ಕೊಟ್ಟವು. ಬೇರೆ ಯಾವ ರಾಜ್ಯದಲ್ಲೂ ಈ ರೀತಿ ಯಾರೂ ಮಾಡಿಲ್ಲ.

ಬಹಳಷ್ಟು ಹಿಂದೆ ಕ್ರಿಶ್ಚಿಯನ್ನರು ಶಿಕ್ಷಣಕ್ಕೆ ಗಮನ ಕೊಟ್ಟಿದ್ದರು. ಕ್ರಿಶ್ಚಿಯನ್ ಮಿಶಿನರಿಯವರು ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ವಹಿಸಿದ್ದರು. ಆದರೆ ಅವರ ಉದ್ದೇಶ ಇಂಗ್ಲಿಷ್ ಭಾಷೆಯನ್ನು ಪ್ರಚಾರ ಮಾಡಬೇಕು ಅನ್ನುವುದಿತ್ತು. ಏಸು ಕ್ರಿಸ್ತನ ಬಗ್ಗೆ ಈ ಜನರ ಮನಸ್ಸನ್ನು ಆಕರ್ಷಣೆ ಮಾಡಬೇಕು. ಯಾಕೆಂದರೆ ಹಿಂದುಸ್ಥಾನ ಏಸುಕ್ರಿಸ್ತ ಬರೋದಕ್ಕೆ ಮುಂಚೆ, ಸಾವಿರಾರು ವರ್ಷಗಳ ಹಿಂದೆ ಬಹಳ ದೊಡ್ಡ ದೊಡ್ಡ ಸಮಾಜಸುಧಾರಕರು, ಬುದ್ಧ, ಮಹಾವೀರರಂತಹವರು ಬಂದಿದ್ದರು. ಇವರುಗಳು ಸುಮಾರು ಎರಡು ಸಾವಿರ ವರ್ಷಗಳ ಮುಂಚೆ ಮಾನವ ಕಲ್ಯಾಣದ ಬಗ್ಗೆ ಅಧ್ಯಾತ್ಮಿಕತೆ ಈ ದೇಶದ ಸಂಸ್ಕೃತಿ ಅನ್ನುವುದನ್ನು ಹೇಳಿದ್ದರು. ನಮ್ಮ ಸಮಾಜದಲ್ಲಿ ಸಾಕಷ್ಟು ಜಾತಿಯಾಗಿ, ಉಪಜಾತಿಯಾಗಿ ಛಿದ್ರವಾಗಿಬಿಟ್ಟಿತ್ತು. ಅರಬ್ಬರು ಭಾರತಕ್ಕೆ ಬರುವ ಹೊತ್ತಿಗೆ, ಈ ಪ್ರಭುತ್ವವನ್ನು ಸ್ಥಾಪನೆ ಮಾಡುವ ಹೊತ್ತಿಗೆ ನಮ್ಮ ಸಂಸ್ಕೃತಿ ಹರಿದು ಹಂಚಿ ಹಲವಾರು ಜಾತಿಗಳಾಗಿ, ಆ ಜಾತಿಗಳು ಉಪಜಾತಿಗಳಾಗಿವೆ. ಈಗ ನಾನು ಲಿಂಗಾಯಿತನಾಗಿ ಹುಟ್ಟಿದ್ದೇನೆ. ಆದರೆ ಬೇರೆ ವಿಚಾರದಲ್ಲಿ ಬೆಳೆದಿರಬಹುದು. ಎಲ್ಲ ಜಾತಿಗಳೂ ಒಂದೇ ಎನ್ನುವ ಧರ್ಮವೇ ಬಸವಧರ್ಮ. ಆ ಒಂದು ಸಂದೇಶದಿಂದಲೇ. ಲಿಂಗಾಯಿತರು ಇವತ್ತು ಎಲ್ಲರನ್ನೂ ಪ್ರೀತಿಸುತ್ತಾರೆ, ಅವರಿಗೂ ನಮಗೂ ವ್ಯತ್ಯಾಸವಿಲ್ಲ ಅಂತ ಬೇರೆ ಜಾತಿಯವರಿಗೆ ಅನ್ನಿಸಬೇಕು. ನಾವು ಅವರನ್ನು ಪ್ರೀತಿಸುತ್ತೇವೆ ಅಂತ ಹೇಳುವುದಲ್ಲ. ಅವರಿಗೆ ಇವರು ನಮ್ಮನ್ನು ರಕ್ಷಣೆ ಮಾಡತಕ್ಕಂತಹ ನಾಯಕತ್ವ, ಜನಾಂಗ ಎನ್ನುವ ಭಾವನೆ ಬರಬೇಕು. ಆದರೆ, ದುರದೃಷ್ಟವಶಾತ್ ನಾನು ಯಾರ ಹೆಸರನ್ನೂ ಹೇಳುವುದಿಲ್ಲ. ಈ ಲಿಂಗಾಯತರು ಒಕ್ಕಲಿಗರ ವಿರುದ್ಧ ಏನಾದರೂ ಒಂದನ್ನು ಕಟ್ಟಬೇಕು ಎನ್ನುವ ರಾಜಕಾರಣ ಕರ್ನಾಟಕದಲ್ಲಿ ಅದು ಬಹಳ ಯಶಸ್ವಿಯಾಯ್ತು. ಹಿಂದುಳಿದವರು, ಅಲ್ಪಸಂಖ್ಯಾತರು, ಹರಿಜನ ಗಿರಿಜನರ ಬಗ್ಗೆ, ಯಾವುದರಲ್ಲೂ ನಾವು ಚಿಂತನೆಯಲ್ಲಿ, ವರ್ತನೆಯಲ್ಲಿ ಕಮ್ಮಿ ಇಲ್ಲ. ಆದರೂ ರಾಜಕೀಯವಾಗಿ ಏನಾದರೂ ಒಂದು ಶಕ್ತಿಯನ್ನು ಕಟ್ಟಬೇಕು ಅಂದರೆ, ಇದರ ಪರ ಅಂತ ಕಟ್ಟುವುದಕ್ಕಿಂತ, ಇದರ ವಿರುದ್ಧ ಕಟ್ಟುವುದು ಬಹಳ ಸುಲಭವಾಗುತ್ತದೆ.

ಘರ್ಷಣೆಯಿಂದ ಸಮಾಜ ಯಾವಾಗ ದುರ್ಬಲ ಆಗುತ್ತದೆ. ಅದು ಇನ್ನುಳಿದ ಜಾತಿಗೆ ಪ್ರೋತ್ಸಾಹ ಕೊಡುವುದಕ್ಕೆ ಅನುಕೂಲವಾಗುತ್ತದೆ ಅನ್ನುವುದನ್ನು ಶ್ರೀಮತಿ ಇಂದಿರಾ ಗಾಂಧಿಯವರು ಯಶಸ್ವಿಯಾಗಿ ಪ್ರಯೋಗ ಮಾಡಿದ್ದಷ್ಟೇ ಅಲ್ಲ, ಅದು ಎಲ್ಲ ಕಡೆ ಪ್ರಗತಿಯಾಯ್ತು. ಅದಕ್ಕೊಂದು ಇತಿಹಾಸ ಇದೆ. ಯಾಕೆ ಇಷ್ಟೆಲ್ಲ ಆಯ್ತು. ಕುರುಬರಿಗೂ ಲಿಂಗಾಯತರಿಗೂ ಯಾಕೆ ಜಗಳವಾಗುತ್ತದೆ. ಹರಿಜನರಿಗೂ ಕುರುಬರಿಗೂ ಯಾಕೆ ಜಗಳ ಆಗುತ್ತದೆ? ಈ ಜಗಳ ಆಗೋದು ಸೈದ್ಧಾಂತಿಕ ಕಾರಣಕ್ಕೆ ಅಲ್ಲ. ಕೆಲವು ಸ್ಥಳೀಯ ವಿದ್ಯಮಾನಗಳಾದ ಜಮೀನಿನ ಬಗ್ಗೆ ಇರಬಹುದು, ಆಸ್ತಿಪಾಸ್ತಿ ಬಗ್ಗೆ ಇರಬಹುದು. ಕೆಲವು





ಮುಖ್ಯಮಂತ್ರಿಗಳು ಅದೇ ವಿಚಾರಧಾರೆಯನ್ನು ಮುಂದುವರೆಸಿಕೊಂಡು ಹೋಗುವುದು ಸಾಧು ಅಂತ ನೋಡಿದರು. ಆದರೆ ಅದಾಗಲಿಲ್ಲ. ಪಶ್ಚಿಮ ಬಂಗಾಳದಲ್ಲಿ ಒಂದು ರೀತಿಯಾದರೆ, ಒರಿಸ್ಸಾದಲ್ಲಿ ಮತ್ತೊಂದು ಪರಿಸ್ಥಿತಿ ರೀತಿ ಇದೆ. ತಮಿಳುನಾಡಿನಲ್ಲಿ ಒಂದು ರೀತಿಯಾದರೆ ಕರ್ನಾಟಕದಲ್ಲಿ ಮತ್ತೊಂದು ರೀತಿ ಇದೆ. ಆದರೆ ನಮ್ಮೆಲ್ಲರ ಮನೋಭಾವ ಒಂದೇ ಆಗಿದೆ. ಪರಸ್ಪರ ಅವನು ಆ ಜಾತಿ, ಇವನು ಈ ಜಾತಿ ಅಂತ ಹೋಗಬಾರದು. ಆ ರೀತಿ ಹೋಗತಕ್ಕಂತಹ ಒಂದು ರಾಜಕಾರಣವನ್ನು, ರಾಜ್ಯಶಕ್ತಿಯನ್ನು ಆ ಆಧಾರದಲ್ಲಿ ಕಟ್ಟುವುದು ನಮ್ಮ ನಾಡಿನಲ್ಲಿ ಸಾಧ್ಯ. ಆ ರೀತಿ ಶಕ್ತಿಯನ್ನು ಕಟ್ಟಿದಂತಹ ರಾಜ್ಯ ಇದು. ಬೇರೆ ರಾಜ್ಯಗಳಲ್ಲಿರುವಂತೆ ಕ್ರೌರ್ಯ, ಅಸಮಾನತೆ ಪ್ರಧಾನವಾಗಿ ಬಂದಂತಹ ರಾಜ್ಯ ಅಲ್ಲ. ಕರ್ನಾಟಕ ರಾಜ್ಯಕ್ಕೆ ತನ್ನದೇ ಆದಂತಹ ಒಂದು ಸಂಸ್ಕೃತಿ ಇದೆ. ಇಂತಹ ಮಹಾಸಂಸ್ಕೃತಿಗೆ ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರು ದೊಡ್ಡ ಕೊಡುಗೆಯನ್ನು ನೀಡಿದ್ದಾರೆ.

□

## ರಾಜೇಂದ್ರ ಶ್ರೀವಾಣಿ

- ಸಮಾಜಕ್ಕೆ ಒಳಿತನ್ನು ಮಾಡಿಯೂ, ಏನೂ ಮಾಡದಂತಿರುವ ಶ್ರೇಷ್ಠ ಮನಃಸ್ಥಿತಿಯನ್ನು ಬೆಳೆಸಿಕೊಳ್ಳಬೇಕು.
- ವ್ಯಕ್ತಿಗಿಂತ ಸಮಷ್ಟಿ ದೊಡ್ಡದು.
- ಇನ್ನೊಬ್ಬರಿಗೆ ಆದರ್ಶವನ್ನು ಹೇಳುವವನು ತಾನು ಮೊದಲು ಉನ್ನತ ಧ್ಯೇಯಗಳಿಂದ, ವಿನಯಸಂಪತ್ತಿನಿಂದ ಆದರ್ಶನೀಯನಾಗಿರಬೇಕು.
- ಜನರ ಸೇವೆ ಮಾಡುವ ಅವಕಾಶ ನಮಗೆ ಲಭಿಸಿದಾಗ ಅದು ನಮಗೆ ದೇವರು ಕೊಟ್ಟ ವರ ಎಂದು ಭಾವಿಸಬೇಕು.
- ಸ್ವಾಮಿಗಳಾದವರು ಎಲ್ಲರನ್ನೂ ಪ್ರೀತಿಸಬೇಕು, ಅದು ಅವರ ಕರ್ತವ್ಯ.
- ಸರ್ವರನ್ನು ಸಮಭಾವದಿಂದ ಕಾಣದವರು ಸನ್ಯಾಸಿಗಳಾಗಲಾರರು; ಸನ್ಯಾಸಿಗಳಿಗೆ ಯಾವ ಜಾತಿಬಂಧನವೂ ಇರುವುದಿಲ್ಲ.



# ಸಮಾಜದ ಆಸ್ತಿ

**ಜಗದೀಶ್ ಎಸ್. ಶೆಟ್ಟರ್**
**ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳು**

**ಪೂ**ಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ 100ನೇ ಜಯಂತಿಯ ಈ ಸಂದರ್ಭದಲ್ಲಿ ಅವರು ನಾಡಿಗೆ, ಸಮಾಜಕ್ಕೆ ಕೊಟ್ಟಂತಹ ಮಾರ್ಗದರ್ಶನ, ಸಂದೇಶ, ಕೊಡುಗೆಗಳನ್ನು ನಾವು ನೆನಪು ಮಾಡಿಕೊಳ್ಳಬೇಕು. ಮುಂದಿನ ನಮ್ಮ ದಿಕ್ಸೂಚಿಗಳನ್ನು, ದಾರಿಗಳನ್ನು ಸರಿಯಾದ ದಿಕ್ಕಿನಲ್ಲಿ ನಾವು ಒಯ್ಯಬೇಕು ಅನ್ನೋದನ್ನು ಈ ಸಂದರ್ಭ ದಲ್ಲಿ ನಾನು ಹೇಳಬಯಸುತ್ತೇನೆ. 1916ನೇ ಇಸವಿಯಲ್ಲಿ ಪೂಜ್ಯ ರಾಜೇಂದ್ರ ಮಹಾಸ್ವಾಮೀಜಿಯವರು ಹುಟ್ಟಿದ ನಂತರ ಅವರು 16ನೇ ವಯಸ್ಸಿನಲ್ಲಿ ಭವ್ಯ ಇತಿಹಾಸವುಳ್ಳ ಈ ಒಂದು ಸುತ್ತೂರು ಮಠದ 23ನೇ ಪೀಠಾಧಿಪತಿಗಳಾಗಿ ಗದ್ದುಗೆಯನ್ನು ಏರಿದ ಮೇಲೆ ಅಣ್ಣ ಬಸವಣ್ಣನವರ ಒಂದು ಮಾರ್ಗದರ್ಶನದಲ್ಲಿ ಆ ದಾಸೋಹದ ಪರಿಕಲ್ಪನೆ ಯನ್ನು, ಅನ್ನ, ಜ್ಞಾನ, ಆರೋಗ್ಯ ಮುಂತಾದ ಎಲ್ಲಾ ಕ್ಷೇತ್ರಗಳಲ್ಲೂ ಮಾಡಿದ್ದಾರೆ.

ಇವತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಇಡೀ ನಾಡಿನಲ್ಲಿ, ಇಡೀ ರಾಷ್ಟ್ರದಲ್ಲಿ, ರಾಷ್ಟ್ರವನ್ನು ಬಿಟ್ಟು ಬೇರೆ ದೇಶದಲ್ಲಿ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿದೆ. ಈ ಒಂದು ಶಿಕ್ಷಣ ಸಂಸ್ಥೆಯನ್ನು 1954ರಲ್ಲಿ ಪ್ರಾರಂಭ ಮಾಡಿದಂಥೋರು ಪೂಜ್ಯ ರಾಜೇಂದ್ರ ಮಹಾಸ್ವಾಮೀಜಿಯವರು. ಇವತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಅತ್ಯಂತ ದೊಡ್ಡ ಶಿಕ್ಷಣ ಸಂಸ್ಥೆಯಾಗಿ ಬೆಳೆದು ಬಂದಿದೆ. ಸುಮಾರು 60 ಸಾವಿರ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಎಲ್ಲಾ ಹಂತದ ಶಿಕ್ಷಣ ಲಭಿಸುತ್ತಿದೆ. 350 ಕ್ಕೂ ಹೆಚ್ಚು ಅಧಿಕ ಶಿಕ್ಷಣ ಸಂಸ್ಥೆಗಳು ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವತ್ತು ಸರ್ಕಾರ ಮಾಡುವಂಥ ಕೆಲಸವನ್ನು ಜೆಎಸ್‌ಎಸ್ ಶಿಕ್ಷಣಸಂಸ್ಥೆ ಮಾಡುತ್ತಿದೆ. ಜಗದ್ಗುರು ರಾಜೇಂದ್ರ ಮಾಹಾಸ್ವಾಮೀಜಿ ಗಳಿರಬಹುದು, ಇವತ್ತಿನ ದೇಶಿಕೇಂದ್ರ ಮಹಾಸ್ವಾಮಿಗಳಿರಬಹುದು. ಶಿಕ್ಷಣರಂಗಕ್ಕೆ ಎಷ್ಟು ಮಹತ್ವ ಕೊಟ್ಟಿದ್ರು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆ ವ್ಯವಸ್ಥೆಯನ್ನು ಮೀರಿ 1954ರಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ರಾಜೇಂದ್ರ ಸ್ವಾಮಿಗಳು ಸ್ಥಾಪನೆ ಮಾಡಿದರು.

ಒಂದು ಸಮಾಜದಲ್ಲಿ ಶೈಕ್ಷಣಿಕವಾಗಿ ಬೆಳೆದ ಬಹಳಷ್ಟು ಜನ ಇದ್ದರೆ ಇಡೀ ಸಮಾಜಕ್ಕೆ ಒಂದು ಗೌರವ ಬರಲಿಕ್ಕೆ ಸಾಧ್ಯವಿದೆ. ಹೀಗಾಗಿ ಇವತ್ತು ಯಾವ ಸಮಾಜ ಶೈಕ್ಷಣಿಕವಾಗಿ





ಹಿಂದೆ ಇರುತ್ತದೆಯೋ ಆ ಸಮಾಜದ ವ್ಯಕ್ತಿಗಳೂ ಸಹಿತ ಆರ್ಥಿಕ, ಸಾಮಾಜಿಕವಾಗಿ ಹಿಂದೆ ಇರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಇದಕ್ಕಾಗಿ ನಾವು ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ಆ ಮಹತ್ವದೊಂದಿಗೆ ಇವತ್ತು ನಮ್ಮ ನಾಗರಿಕರು ಹೆಚ್ಚಿನ ರೀತಿಯಲ್ಲಿ ಉತ್ತಮವಾದ ಶಿಕ್ಷಣವನ್ನು ಪಡೆಯುವ ಮುಖಾಂತರ ಸಮಾಜದ ಆಸ್ತಿಯಾಗಿ ಬೆಳೆಯಬೇಕು. ಆ ಒಂದು ಕೆಲಸವನ್ನು ಶ್ರೀಮಠ ಮಾಡಿದೆ. ರಾಜೇಂದ್ರ ಜಗದ್ಗುರುಗಳು ಮಾಡಿದ್ದಾರೆ. ನಾವು ಎಲ್ಲರಿಗೂ ಬೇಕು, ನಮಗೆ ಎಲ್ಲರೂ ಬೇಕು. ನುಡಿದು ಅದರಂತೆ ನಡೆದಂಥ ಪೂಜ್ಯರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅನುಷ್ಠಾನ ಮಾಡಿದಂಥ ಆದರ್ಶ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮುಖಾಂತರ ನಾವು ಅವರಿಗೆ ನಿಜವಾದಂಥ ಅರ್ಥಪೂರ್ಣವಾದಂಥ ಕೃತಜ್ಞತೆಗಳನ್ನು ನಮ್ಮ ಸ್ಮರಣೆಗಳನ್ನು ಸಲ್ಲಿಸಬೇಕಾಗಿದೆ. ವಿದ್ಯಾಭ್ಯಾಸದ ಮೂಲಕ ಸಮಾಜದ, ಸರ್ವಾಂಗೀಣ ಅಭಿವೃದ್ಧಿ ಎಂಬ ಪ್ರಬುದ್ಧ ಆಶಯದೊಂದಿಗೆ ಇವತ್ತೇನು ಮಠ ಮುನ್ನಡೆಯುತ್ತಿದೆಯೋ ಇದೇ ರೀತಿಯಾದಂಥ ಹೆಚ್ಚಿನ ಸೇವೆಯನ್ನು ಸಮಾಜಕ್ಕೆ ಸಲ್ಲಿಸಲಿ ಎಂದು ಆಶಿಸೋಣ. ಪೂಜ್ಯ ರಾಜೇಂದ್ರ ಮಹಾಸ್ವಾಮೀಜಿಯವರು ಹಾಕಿಕೊಟ್ಟಂತಹ ಮಾರ್ಗ ಏನಿದೆ ಅದನ್ನು ನಾವು ನಿಜವಾಗಿ ಅನುಷ್ಠಾನ ಮಾಡಿದಾಗ ಮಾತ್ರ. ಸಮಾಜ ಸೇವೆ ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡಲು ಸಾಧ್ಯವಾಗುತ್ತದೆ.

□

## ರಾಜೇಂದ್ರ ಶ್ರೀವಾಣಿ

- ಸತ್ಯಶುದ್ಧವಾದ ಕಾಯಕನಿಷ್ಠೆಯನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
- ಯಾವುದೇ ಕಾಯಕವಾಗಲಿ, ಅತ್ಯಂತ ಶ್ರದ್ಧೆ ಮತ್ತು ನಿಷ್ಠೆಯಿಂದ ಮಾಡಿದರೆ ಫಲ ಖಂಡಿತ ಲಭಿಸುತ್ತದೆ.
- ಒಳ್ಳೆಯ ಕೆಲಸವನ್ನು ಮಾಡಬೇಕು ಎನ್ನಿಸಿದ ಕೂಡಲೇ ಮಾಡ ಬೇಕು,  ನಾಳೆ ನೋಡೋಣ ಎಂದು ಮುಂದೆ ಹಾಕಬಾರದು.



# ಸಮಾನತೆಯ ಹರಿಕಾರ

**ಟಿ. ಎನ್. ನರಸಿಂಹಮೂರ್ತಿ**
**ಮಾಜಿ ಸಚಿವರು**

**ಪ**ರಮಪೂಜ್ಯ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರಿಗೆ ನಾವೆಲ್ಲರೂ ಕೂಡ ಭಕ್ತಿಪೂರ್ವಕವಾಗಿ ಗೌರವವನ್ನು ಸಲ್ಲಿಸತಕ್ಕಂತ ಹದ್ದು, ಪೂಜ್ಯ ಸ್ವಾಮೀಜಿಯವರು ಸಮಾಜಕ್ಕೆ ಸಲ್ಲಿಸಿರತಕ್ಕಂತಹ ಮಹಾಸೇವೆಯನ್ನು ಸ್ಮರಿಸಿ, ನಮ್ಮ ನಿತ್ಯ ಜೀವನದಲ್ಲಿ ಅವರು ಬಿಟ್ಟು ಹೋಗಿರತಕ್ಕಂತಹ ಆದರ್ಶವನ್ನು ಜಾರಿಗೊಳಿಸುವಂತಹದ್ದು ಸ್ವಾಮೀಜಿ ಯವರಿಗೆ ಸಲ್ಲಿಸುವಂತಹ ಏಕೈಕ ಕೊಡುಗೆ ಅಂತ ನಾನು ತಿಳಿದುಕೊಂಡಿದ್ದೇನೆ. ಈ ಮಹಾಪೀಠದ ಇತಿಹಾಸ ಎಲ್ಲರಿಗೂ ಗೊತ್ತಿದೆ. ಪೂಜ್ಯ ಬಸವೇಶ್ವರರ ತತ್ವದ ದಿವ್ಯಸಂದೇಶದ ಹಾದಿಯಲ್ಲಿ ಮಾನವನ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವಂತಹ ಒಂದು ಮಹಾಪೀಠ. ಇದು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ ದೇಶವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದೆ ಎಂಬುದನ್ನು ಎಲ್ಲರೂ ಕೂಡ ತಿಳಿದುಕೊಂಡಿರ ತಕ್ಕಂತಹದ್ದೇ. ನಾನೂ ಕೂಡ ಈ ಮಹಾ ವಿದ್ಯಾಪೀಠದ ಭಕ್ತನಾಗಿ, ಇಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳನ್ನೂ ಕೂಡ ಒಬ್ಬ ನಾಗರಿಕನಾಗಿ, ಒಬ್ಬ ಶಾಸಕನಾಗಿ ಮತ್ತು ನಿಮ್ಮೆಲ್ಲರ ಆಶೀರ್ವಾದದಿಂದ ಒಬ್ಬ ಮಂತ್ರಿಯಾಗಿ ಅತಿ ಎಚ್ಚರಿಕೆಯಿಂದ ಗಮನಿಸುತ್ತಿದ್ದೇನೆ. ವರ್ಗಾತೀತ ಹಾಗೂ ಜಾತ್ಯತೀತ ಸಮಾಜದ ಕನಸಿನ ಭಾರತವನ್ನು ಕಟ್ಟುವಂತಹ ಪೂಜ್ಯ ಬಸವೇಶ್ವರರ ತತ್ವಗಳನ್ನು ಮತ್ತು ಇಪ್ಪತ್ತನೇ ಶತಮಾನದಲ್ಲಿ ಪೂಜ್ಯ ಗಾಂಧೀಜಿಯವರು ಕಂಡಂತಹ ಕನಸನ್ನು ನನಸಾಗಿ ಮಾಡುವುದೇ ರಾಜೇಂದ್ರ ಶ್ರೀಗಳ ಮಹಾಕಾರ್ಯವಾಗಿತ್ತು. ಈ ದೇಶ ಒಂದು ಪುಣ್ಯದೇಶ ಅಂತ ತಿಳಿದುಕೊಂಡು ನಾವೆಲ್ಲರೂ ಕೂಡ ನಾಗರಿಕರಾಗಿ ಅದನ್ನು ಗೌರವಿಸುತ್ತಿದ್ದೇವೆ. ಈ ಒಂದು ದೊಡ್ಡ ದೇಶದಲ್ಲಿ ಒಂದೇ ಧರ್ಮವಲ್ಲ, ಅನೇಕ ಧರ್ಮಗಳಿವೆ. ಪ್ರತಿಯೊಂದು ಧರ್ಮಕ್ಕೂ ಸೇರಿರುವಂತಹವರೆಲ್ಲ ಇಲ್ಲಿ ಸೇರಿದ್ದೇವೆ. ಇವತ್ತು ನಾವು ಜಾತ್ಯತೀತ ರಾಷ್ಟ್ರವನ್ನು ನಿರ್ಮಾಣ ಮಾಡಬೇಕು ಅನ್ನತಕ್ಕಂತಹ ಈ ಪರ್ವಕಾಲದಲ್ಲಿ ನಮ್ಮ ಧರ್ಮ, ನಮ್ಮ ಭಾಷೆಗಳು ರಾಷ್ಟ್ರದ ಐಕ್ಯತೆ, ರಾಷ್ಟ್ರದ ಸಮಗ್ರತೆ, ರಾಷ್ಟ್ರದ ಒಗ್ಗಟ್ಟಿಗೆ ಯಾವತ್ತೂ ಧಕ್ಕೆ ಬಾರದೆ ಇರುವ ಹಾಗೆ ರಾಜೇಂದ್ರ ಶ್ರೀಗಳು ಸಮಾಜವನ್ನು ಮುನ್ನಡೆಸುತ್ತಿದ್ದರು ಎಂಬುದನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ಸಮಾಜದ ಸುಧಾರಣೆಗೆ ನಾವೆಲ್ಲರೂ ಕೂಡ

ರಾಜಕೀಯವಾಗಿ ಎಲ್ಲ ಧರ್ಮಗಳಿಗೂ ಸರಿಸಮಾನತೆಯನ್ನು ಕೊಟ್ಟಿದ್ದೇವೆ. ಆದರೆ ಎಲ್ಲ ಧರ್ಮಗಳಲ್ಲೂ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಸಮಾನತೆಗಳನ್ನು ಗಮನಿಸಿ, ಈ ಮಹಾಪೀಠವು ಶೈಕ್ಷಣಿಕ ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧ ಪೂಜ್ಯ ಬಸವೇಶ್ವರರು ಕಂಡಂತಹ ಸಮಾಜದ ನಿರ್ಮಾಣದತ್ತ ಮಾಡುತ್ತಿರುವ ಸೇವೆಗಳನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕು. ಪೂಜ್ಯ ರಾಜೇಂದ್ರ ಮಹಾಸ್ವಾಮಿಗಳವರು ಬಿಟ್ಟು ಹೋಗಿರುವುದನ್ನು ನಾವುಗಳು ಮುನ್ನಡೆಸಬೇಕಾಗಿದೆ. ಕೇಂದ್ರಸರ್ಕಾರ, ರಾಜ್ಯಸರ್ಕಾರ, ಸಾರ್ವಜನಿಕರು ಹಾಗೂ ನಾವೆಲ್ಲರೂ ಕೂಡ ಈ ಭವ್ಯ ಪೀಠಕ್ಕೆ ಎಲ್ಲ ರೀತಿಯಲ್ಲೂ ಸಹಕರಿಸಬೇಕು. ಶ್ರೀ ರಾಜೇಂದ್ರ ಸ್ವಾಮೀಜಿಯವರ ಅನುಯಾಯಿಯಾಗಿ ಅವರ ಬಗ್ಗೆ ಅಪಾರ ಗೌರವವನ್ನು ಇಟ್ಟುಕೊಂಡಿದ್ದೇನೆ. ಅವರ ದೇಹ ನಮ್ಮ ಮುಂದೆ ಇಲ್ಲದಿದ್ದರೂ ಅವರು ಬಿಟ್ಟುಹೋದಂತಹ ಗುರಿ ಹಾಗೂ ಆದರ್ಶ ಯಾವತ್ತಿಗೂ ಕೂಡ ಜೀವಂತ ವಾಗಿದೆ. ಯಾಕೆಂದರೆ ಅವರಿಗೆ ಸಾವಿಲ್ಲ. ಅವರ ಮಾರ್ಗದರ್ಶನ, ಆದರ್ಶ, ಅವರು ಬಿಟ್ಟುಹೋಗಿರುವ ಕೆಲಸಗಳು ನಮಗೆ ಮಾರ್ಗದರ್ಶನವಾಗಲಿ. ಆ ರೀತಿಯಲ್ಲಿ ನಾವುಗಳೆಲ್ಲರೂ ಸೇವೆ ಸಲ್ಲಿಸೋಣ.

□

## ರಾಜೇಂದ್ರ ಶ್ರೀವಾಣಿ

- ಪುರಾತನ ಸಂಸ್ಕೃತಿ, ಪುಣ್ಯಕ್ಷೇತ್ರಗಳ ಉಳಿವಿಗಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು.
- ರಾಷ್ಟ್ರದ ಅಭಿಮಾನ ಎಲ್ಲರಲ್ಲಿಯೂ ಬೆಳೆಯಬೇಕು, ರಾಷ್ಟ್ರ ಉಳಿದರೆ ಮಾತ್ರ ಎಲ್ಲರ ಉಳಿವು.
- ದುಡಿಯದೇ ಸುಖ ಬಯಸುವ ಮನೋಭಾವವನ್ನು ಬಿಟ್ಟು, ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಿದರೆ ಸಮಸ್ಯೆಗಳು ಉದ್ಭವಿಸುವುದಿಲ್ಲ.



# ಧಾರ್ಮಿಕ ಧೀಮಂತ

**ಯು.ಎಂ. ಮಾದಪ್ಪ**

**ಮಾಜಿ ಶಾಸಕರು**

**ಚಾ**ಮರಾಜನಗರ ಜಿಲ್ಲೆ ಮತ್ತು ತಾಲ್ಲೂಕಿಗೆ ಸೇರಿದ ಉಡಿಗಾಲ ನನ್ನ ಊರು. ಲೋಯರ್ ಸೆಕೆಂಡರಿವರೆಗಿನ ವಿದ್ಯಾಭ್ಯಾಸವನ್ನು ನನ್ನ ಊರು ಮತ್ತು ಚಾಮರಾಜನಗರದಲ್ಲಿ ಮುಗಿಸಿದ ಮೇಲೆ ಪ್ರೌಢಶಾಲಾ ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದು ಬನುಮಯ್ಯ ಸ್ಕೂಲ್‌ಗೆ ಸೇರಿದೆ. ಈ ಅವಧಿಯಲ್ಲಿ ನಮ್ಮ ಅಣ್ಣ ಯು.ಎಂ. ಗುರುಮಲ್ಲಪ್ಪನವರು ಬುದ್ಧಿಯವರಿಗೆ ನನ್ನನ್ನು ಪರಿಚಯಿಸಿದ್ದರು. ಆಗ ಬುದ್ಧಿಯವರು ವಾಣಿವಿಲಾಸ ರಸ್ತೆಯಲ್ಲೊಂದು ಬಾಡಿಗೆ ಮನೆಯಲ್ಲಿದ್ದರು. ಅವರ ಜೊತೆಯಲ್ಲಿ ಕ್ಯಾತನಹಳ್ಳಿ ಬುದ್ಧಿಯವರು, ಇಂದಿನ ಜಗದ್ಗುರುಗಳ ತಂದೆಯವರೂ ಇದ್ದರು. ನಾನು ನಮ್ಮ ಸಂಬಂಧಿಗಳೊಬ್ಬರ ಮನೆಯಲ್ಲಿದ್ದುಕೊಂಡು ವ್ಯಾಸಂಗ ಮಾಡುತ್ತಿದ್ದೆ. ನಮ್ಮ ಅಣ್ಣ ಆಗ್ಗೆ ಮೈಸೂರು ಜಿಲ್ಲಾ ಬೋರ್ಡ್‌ನ ಉಪಾಧ್ಯಕ್ಷರಾಗಿದ್ದು ರಾಜಕೀಯ ಕ್ಷೇತ್ರದಲ್ಲಿ ಸಾಕಷ್ಟು ಹೆಸರುವಾಸಿಯಾಗಿದ್ದರು. ಇವರು ಬುದ್ಧಿಯವರೊಡಗೂಡಿ ನಮ್ಮ ಕಡೆಯ ಅನೇಕ ಹಳ್ಳಿಗಳಿಗೆ ಧಾನ್ಯದ ಭಿಕ್ಷೆಗೆ ಹೋಗುತ್ತಿದ್ದರು. ನಮ್ಮ ತಾತ ಒಳ್ಳೆಯ ಸಮಾಜಸೇವಕ ರಾಗಿದ್ದವರು. ಆಗಿನ ಕಾಲದಲ್ಲಿ ಜನರು ಯಾರನ್ನು ನಿಷ್ಠಾವಂತ ಸಮಾಜಸೇವಕರು ಅಂತ ಗುರುತಿಸುತ್ತಿದ್ದರೋ ಅವರನ್ನು ಮಹಾರಾಜರು ಆಗ ಇದ್ದ 'ಪ್ರಜಾಪ್ರತಿನಿಧಿ ಸಭೆ'ಗೆ ಸದಸ್ಯರನ್ನಾಗಿ ನೇಮಕ ಮಾಡುತ್ತಿದ್ದರು. ನಮ್ಮ ತಾತ ಒಂದು ಸಾರಿ ಹೀಗೆ ನೇಮಕ ಗೊಂಡಿದ್ದರು ಮತ್ತು ಮತ್ತೊಂದು ಸಾರಿ ಚುನಾಯಿತ ಸದಸ್ಯರಾಗಿದ್ದರು. ಇದಲ್ಲದೆ ನಮ್ಮದು ಸ್ಥಿತಿವಂತ ಕುಟುಂಬವೂ ಹೌದು. ನಮ್ಮ ಕಡೆ ಜನ ಈಗಲೂ ನಮ್ಮನ್ನು ಸಾಹುಕಾರ ರೆಂದೇ ಕರೆಯುತ್ತಿದ್ದಾರೆ. ಹೀಗೆ ಒಂದಿಷ್ಟು ಹೆಸರುವಾಸಿಯಾಗಿದ್ದ ನಮ್ಮ ಮನೆತನದವರ ಸಮಾಜಸೇವೆಯನ್ನು ಮನಗಂಡು ಶ್ರೀಗಳವರು ನಮ್ಮ ಜೊತೆ ನಿಕಟಸಂಪರ್ಕವಿಟ್ಟು ಕೊಂಡವರಾಗಿದ್ದರು. ಈ ಕಾರಣದಿಂದಲೇ ನಮ್ಮ ಊರಿಗೂ ಬರುತ್ತಿದ್ದರು. ನಾನು ಅವರ ಹಾಸ್ಟೆಲ್‌ನಲ್ಲಿ ಇರಲಿಲ್ಲವಾದ್ದರಿಂದ ಹಾಸ್ಟೆಲ್‌ನಲ್ಲಿ ವಿಶೇಷ ಕಾರ್ಯಕ್ರಮ ಇದ್ದಾಗ (ಕೆಲವು ಕಾಲ ಅವರಿದ್ದ ಮನೆಗೂ) ನನ್ನನ್ನು ಕರೆಯಿಸಿಕೊಂಡು ಒಳ್ಳೊಳ್ಳೆ ರುಚಿರುಚಿಯಾದ ಊಟ ತಿಂಡಿ ತಿನ್ನಿಸಿ ಪ್ರೀತಿಯಿಂದ ಮಾತನಾಡಿ ಕಳುಹಿಸುತ್ತಿದ್ದರು. ಹೀಗೆ ಅವರ ಸಂಸ್ಥೆಯ ಹಾಸ್ಟೆಲ್ಲು ಗಳ, ಸಭೆ ಸಮಾರಂಭಗಳ ಕಾರ್ಯಕ್ರಮಗಳಿಗೆ ಹೋಗುತ್ತಿದ್ದುದರಿಂದಲೇ ನಾನು ಅವರ





ಹಾಸ್ಟೆಲ್ ವಿದ್ಯಾರ್ಥಿಯಲ್ಲದಿದ್ದರೂ ಅವರು ಗ್ರಾಮಾಂತರ ವಲಯದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಅನೇಕ ಹಾಸ್ಟೆಲ್ಲುಗಳನ್ನು ನಾಡಿನ ಅನೇಕ ಕಡೆ ತೆರೆದು ಅಪಾರ ಪರಿಶ್ರಮದಿಂದ ಅವುಗಳನ್ನು ನಡೆಸುತ್ತಿದ್ದುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾದದ್ದು.

ಎಸ್‌ಎಸ್‌ಎಲ್‌ಸಿ ಓದಿಯಾದ ಮೇಲೆ ನಾನು ಮಹಾರಾಜ ಕಾಲೇಜಿಗೆ ಸೇರಿದೆ. ಇಲ್ಲಿ ಓದುತ್ತಿದ್ದಾಗ ಜೆಎಸ್‌ಎಸ್ ಪ್ರಸಾದ ನಿಲಯಗಳ ಅನೇಕ ವಿದ್ಯಾರ್ಥಿಗಳು ನನ್ನ ಜೊತೆ ಓದುತ್ತಿದ್ದರು. ಗ.ಸ. ಹಾಲಪ್ಪ ಮತ್ತು ಇನ್ನೂ ಅನೇಕರು ಒಳ್ಳೆಯ ಚರ್ಚಾಪಟುಗಳಾಗಿದ್ದು ಜೆಎಸ್‌ಎಸ್ ಹಾಸ್ಟೆಲ್‌ಗೆ ಕೀರ್ತಿ ತಂದಿದ್ದರು. ಆ ಕಾಲಕ್ಕೆ ಜೆಎಸ್‌ಎಸ್ ಹಾಸ್ಟೆಲ್ಲುಗಳು ಅನೇಕ ಸಾಹಿತ್ಯ, ಸಂಸ್ಕೃತಿಪರವಾದ ಚಟುವಟಿಕೆಗಳಿಗೆ ಹೆಸರುವಾಸಿಯಾಗಿದ್ದವು. ಅನೇಕ ಜನ ವಿದ್ಯಾರ್ಥಿಗಳು ಜೆಎಸ್‌ಎಸ್ ಹಾಸ್ಟೆಲ್‌ಗೇ ಸೇರಬೇಕು ಅಂತ ಮುಗಿಬೀಳುತ್ತಿದ್ದುದು ಇದೇ ಕಾರಣಕ್ಕೆ ಅನ್ನುವುದನ್ನು ಮರೆಯಲಾಗದು. ಆಗ ಸಾಕಷ್ಟು ಜನರಿಗೆ ಗೊತ್ತಿರುತ್ತಿದ್ದಂತಹ (ಇವರಲ್ಲಿ ಕೆಲವರು ಈಗಿಲ್ಲ) ಎಚ್.ವೈ. ಶಾರದಾಪ್ರಸಾದ್, ಎಂ.ವಿ. ಕೃಷ್ಣಪ್ಪ, ಭೀಮಪ್ಪ, ಎಸ್.ವಿ. ಪಟ್ಟಾಭಿರಾಮನ್, ಶಾಂತವೇರಿ ಗೋಪಾಲಗೌಡ ಇವರೆಲ್ಲ ನನ್ನ ಸಮಕಾಲೀನರು. ನಾನು, ಇವರು ಮತ್ತು ಜೆಎಸ್‌ಎಸ್ ಹಾಸ್ಟೆಲ್‌ನ ಅನೇಕ ನನ್ನ ಸ್ನೇಹಿತರು ಒಟ್ಟುಗೂಡಿ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದೆವು. ಬುದ್ಧಿಯವರು ನಮ್ಮ ಈ ಚಟುವಟಿಕೆ ಗಳನ್ನು ನೋಡಿ ಮೆಚ್ಚಿದವರಾಗಿದ್ದರು. ಆಗಿನ ನಮ್ಮ ಯುವಕರ ಗುಂಪೆಲ್ಲಾ ಹೆಚ್ಚಾಗಿ ಕಾಂಗ್ರೆಸ್‌ವಿರೋಧಿ ಗುಂಪಿನವರಾಗಿತ್ತು.

ನಾನು ಬಿ.ಎ. ಓದುತ್ತಿದ್ದಾಗ ಅಗ್ರಹಾರದಲ್ಲಿರುವ ನಮಃಶಿವಾಯ ಮಠದ ಎದುರಿಗಿನ ಪಾರ್ಕ್‌ನಲ್ಲಿ ಲಿಂಗಾಯಿತೇತರರನ್ನು ಕಲೆಹಾಕಿ ಬಸವ ಜಯಂತಿ ಆಚರಣೆಗೆ ಪ್ರಾರಂಭಿಸಿದೆ. ಆಗ ನಮ್ಮ ಸಮಾಜದವರು ನನ್ನ ಬಗ್ಗೆ ತೀರಾ ಅಸಮಾಧಾನಗೊಂಡು ರೊಚ್ಚಿಗೆದ್ದಿದ್ದರು. 1946 ರಲ್ಲಿ ಮತ್ತೊಮ್ಮೆ ಬಸವ ಜಯಂತಿ ಆಚರಿಸುವಾಗ ಒಂದು ತಂತ್ರ ಹೂಡಿದೆ. ಆ ಸಲ ಶ್ರೀ ಗೌರೀಶಂಕರ ಸ್ವಾಮಿಗಳನ್ನು ಆಹ್ವಾನಿಸಿ ಉಪನ್ಯಾಸ ಏರ್ಪಡಿಸಿ ಅವರ ಬಾಯನ್ನೆಲ್ಲಾ ಮುಚ್ಚಿಸಿದ್ದೆ. ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ನಾನು ಈ ತಂತ್ರ ಅನುಸರಿಸಿದ್ದನ್ನು ಮೆಚ್ಚಿ ಹೊಗಳಿದ್ದರು. ಆಗಲೇ ನನಗೆ ಅವರೆಂತಹ ಜಾತ್ಯತೀತ ಮನೋಭಾವದವರಾಗಿದ್ದರೆಂಬುದು ಅರ್ಥವಾದದ್ದು. ಅಂದಿನಿಂದ ನನ್ನ ಮನಸ್ಸಿನಲ್ಲಿ ಅವರಿಗೆ ವಿಶೇಷ ಸ್ಥಾನ ಕೊಟ್ಟಿದ್ದೆ. ನಿಜ ಹೇಳಬೇಕು ಅಂದ್ರೆ ಈ ನಾಲ್ಕೈದು ವರ್ಷಗಳಲ್ಲಿ ಬುದ್ಧಿಯವರು ನನ್ನ ಮನಸ್ಸನ್ನು ಗೆದ್ದವರಾಗಿದ್ದರು, ಆದರ್ಶವಾಗಿದ್ದರು. ಅವರೊಬ್ಬರೇ ನನಗೆ ತುಂಬಾ ದೊಡ್ಡವರಾಗಿದ್ದವರು. ಇದಿಷ್ಟು ಮೈಸೂರಿನಲ್ಲಿ ಎಸ್‌ಎಸ್‌ಎಲ್‌ಸಿ ಯಿಂದ ಬಿ.ಎ. ಮುಗಿಸುವ ತನಕ ನಾನು ಶ್ರೀಗಳವರ ಬಗ್ಗೆ ಹೇಳಬಹುದಾದ ಸಂಗತಿಗಳು.

ಬಿ.ಎ. ಮುಗಿಸಿದ ಮೇಲೆ ಎಲ್‌ಎಲ್‌ಬಿ ಓದಲು ಬೆಳಗಾಂಗೆ ಹೋದೆ. ಒಂದು ವರ್ಷ ಓದಿ ಪರೀಕ್ಷೆ ಬರೆದು ಊರಿಗೆ ಬಂದಿದ್ದೆ. ಆ ಸಮಯದಲ್ಲಿ ಆಚಾರ್ಯ

ಕೃಪಲಾನಿಯವರು ಪ್ರಾರಂಭಿಸಿದ ಕಿಸಾನ್ ಮಜ್ದೂರ್ ಪಾರ್ಟಿಗೆ ನನ್ನನ್ನು ಸೇರುವಂತೆ ಒಪ್ಪಿಸಲು ಜೆ.ಎಂ. ಇಮಾಂ (ಮಾಜಿ ಮಂತ್ರಿ) ಅವರು ತುಮಕೂರು ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಆಗಿದ್ದ ಹುಚ್ಚೇಗೌಡ ಹಾಗೂ ಸಿದ್ದಪ್ಪ ಎನ್ನುವವರು ನಮ್ಮ ಮನೆಗೆ ಬಂದಿದ್ದರು. ನಮ್ಮ ಅಣ್ಣನವರು ಈ ಪಾರ್ಟಿ ಕಟ್ಟಲು ಸಾಕಷ್ಟು ಶ್ರಮಿಸಿದವರಾಗಿದ್ದರಿಂದ ಈ ಪಾರ್ಟಿಯ ಮೂಲಕ ರಾಜಕೀಯರಂಗಕ್ಕೆ ಬಂದೆ. 1952 ರಲ್ಲಿ ಮೊದಲನೆಯ ಬಾರಿ ಕಿಸಾನ್ ಮಜ್ದೂರ್ ಪಾರ್ಟಿಯಿಂದ ನಿಂತು ಎಂಎಲ್ಎ ಆದೆ. ಎರಡನೆಯ ಬಾರಿಗೆ ಪಿಎಸ್‌ಪಿಯಿಂದ ಗೆದ್ದು (ಪ್ರಜಾ ಸೋಷಿಯಲಿಸ್ಟ್ ಪಾರ್ಟಿ) 1952-57ರ ವರೆಗೆ ಎಂಎಲ್ಎ ಆಗಿದ್ದೆ. ಮೊದಲ ಬಾರಿ ಗೆದ್ದಾಗ ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿದ್ದ ಕ್ರೆಸೆಂಟ್ ಹೌಸ್‌ನಲ್ಲಿರುತ್ತಿದ್ದೆ. ಎರಡನೆ ಬಾರಿ ಗೆದ್ದಾಗ ಶಾಸಕರ ಭವನದಲ್ಲಿ ಉಳಿದುಕೊಳ್ಳುತ್ತಿದ್ದೆ. ಈ ಸಮಯದಲ್ಲಿ ಶ್ರೀಗಳು ಸರ್ಕಾರಿ ಕಛೇರಿಗಳ ಕೆಲಸಕ್ಕೆ ಬಂದಾಗ ಮತ್ತು ಮಂತ್ರಿಗಳನ್ನು ಕಾರ್ಯಾರ್ಥ ನೋಡಲು ಬರುತ್ತಿದ್ದಾಗ ವಿಧಾನಸೌಧದ ಹತ್ತಿರ ಬಂದು ಡ್ರೈವರ್ ಮೂಲಕ ತಾವು ಬಂದಿರುವುದನ್ನು ನನಗೆ ತಿಳಿಸುತ್ತಿದ್ದರು. ಆಗ ನಾನು ಅವರ ಜೊತೆಯಲ್ಲಿ ಹೋಗಿ ಅವರು ಹೇಳುತ್ತಿದ್ದ ಕೆಲಸಗಳನ್ನು ಮಾಡಿಸಿಕೊಡುತ್ತಿದ್ದೆ. 1953ರಲ್ಲಿ ಒಂದು ಟರ್ಮ್ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯನೂ ಆಗಿದ್ದೆ. ಬೆಂಗಳೂರಿನಲ್ಲಿ ಯಾವ ಕೆಲಸ ಆಗಬೇಕಾದರೂ ನನ್ನನ್ನು ಬಿಡದೆ ತಮ್ಮ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಬನಶಂಕರಿಯಲ್ಲಿ ಇವರದ್ದೊಂದು ಜಾಗ ಇತ್ತು. ಅಲ್ಲಿ ಬುದ್ಧಿಯವರು ಉಳಿದುಕೊಳ್ಳುವುದಕ್ಕೆ ಇನ್ನೂ ಸೂಕ್ತ ವ್ಯವಸ್ಥೆಯಾಗಿರಲಿಲ್ಲ. ಒಂದು ದಿನ ನಾವು ಬೆಂಗಳೂರಲ್ಲಿ ಈ ಬನಶಂಕರಿ ಜಾಗದಲ್ಲೇ ಉಳಿಯುವಂತಾಯಿತು. ನೀವು ನಂಬ್ತೀರೋ ಇಲ್ವೋ, ಹಳೆಯ ದಿನಪತ್ರಿಕೆಗಳನ್ನು ನೆಲದ ಮೇಲೆ ಹಾಸಿಕೊಂಡು ನಾನು ಮಲಗಿದೆ. ಅವರೂ ಕೂಡ ಅಲ್ಲಿದ್ದ ದಿವಾನ್ ಕಾಟ್ ಮೇಲೆ ಹರಡಿಕೊಂಡು ಮಲಗಿದ್ದರು. ಸಂಸ್ಥೆಯನ್ನು ಕಟ್ಟುವುದಕ್ಕೆ ಅವರು ಎಷ್ಟೊಂದು ಅರ್ಪಿಸಿಕೊಂಡವರಾಗಿದ್ದರು, ಏನೇನು ಕಷ್ಟಪಡುತ್ತಿದ್ದರು, ಓಡಾಡುತ್ತಿದ್ದರು ಎನ್ನುವುದನ್ನು ಇಂತಹ ಉದಾಹರಣೆಗಳಿಂದ ಅರ್ಥ ಮಾಡಿಕೊಳ್ಳಬೇಕಾಗಿದೆ.

ಇದೇ ರೀತಿ ಒಂದು ಸಾರಿ ಬೆಂಗಳೂರಿಗೆ ಬಂದಿದ್ದ ಪೂಜ್ಯರು ರಾತ್ರಿ ಹನ್ನೊಂದೂವರೆ ಗಂಟೆ ಸಮಯದಲ್ಲಿ ಬೆಂಗಳೂರಿನ ಕೆಲಸ ಗಳನ್ನು ನನ್ನೊಡನೆ ಮುಗಿಸಿಕೊಂಡು ಮೈಸೂರಿಗೆ ಹೊರಟು ಹೋಗೋಣ ಅಂತ ನನ್ನನ್ನು ಒಪ್ಪಿಸಿ ತಮ್ಮ ಕಾರಿನಲ್ಲಿ ಕೂರಿಸಿಕೊಂಡರು. ಹೊರಟು ಬಿಡದಿ ಹತ್ತಿರ ಬಂದೆವು. ಸುಮಾರು ಹನ್ನೆರಡೂವರೆ ಗಂಟೆಯಿದ್ದಿರಬಹುದು. ಇದ್ದಕ್ಕಿದ್ದಂತೆ ಚಲಿಸುತ್ತಿದ್ದ ಕಾರು ಮೂರು ಸುತ್ತು ಸುತ್ತಿ ರಸ್ತೆ ಮಧ್ಯದಲ್ಲಿಯೇ ನಿಂತಿತು. ಡ್ರೈವರ್ ಮತ್ತು ನನಗೆ ಏನಾಯ್ತು ಅಂತ ಅರ್ಥವಾಗಲೇ ಇಲ್ಲ. ಅದೊಂದು ರೀತಿಯ ರೋಮಾಂಚಕಾರಿ ಅನುಭವ. ನಾವಿಬ್ಬರೂ ತುಂಬಾ ಗಾಬರಿಯಾಗಿ ಕಾರು ನಿಂತ ಮೇಲೆ ಕೆಳಗೆ ಇಳಿದು ಕಾರಿನ ಚಕ್ರ ನೋಡಿದೆವು, ರಸ್ತೆಯ ಹಿಂದೆ ಮುಂದೆ ನೋಡಿ ಏನಾಯ್ತು





ಏನಾಯ್ತು ಅಂತ ಪರದಾಡುತ್ತಾ ಅತ್ತ ಇತ್ತ ನೋಡುತ್ತಿದ್ದೆವು. ಬುದ್ಧಿಯವರು ಮಾತ್ರ ಒಳಗೆ "ಮಾದೇವ ಮಾದೇವ" ಅಂತ ಕಣ್ಮುಚ್ಚಿ ಧ್ಯಾನಾಸಕ್ತರಾಗಿಬಿಟ್ಟಿದ್ದರು. ನಾವು ಬುದ್ಧಿ ಬುದ್ಧಿ ಅಂತ ಕೂಗೋವರೆಗೂ ಅವರು ಹಾಗೆಯೇ ಧ್ಯಾನಾಸಕ್ತರಾಗಿದ್ದರು. ಎಚ್ಚರ ಆದ ಮೇಲೆ "ಅಲ್ಲಾ ಬುದ್ಧಿ ನಾವು ಅಷ್ಟೊತ್ತಿನಿಂದ ಏನಾಯ್ತು ಅಂತ ಪರದಾಡುತ್ತಿದ್ದರೆ ನೀವು ಮಾದೇವ ಮಾದೇವ ಅಂತ ಕುಳಿತಿದ್ದೀರಲ್ಲ" ಅಂದದ್ದಕ್ಕೆ ಅವ್ರು "ಹೌದಪ್ಪ, ನಾನು ಮಾದೇವ ಮಾದೇವ ಅಂತ ಧ್ಯಾನ ಮಾಡಿದ್ದಕ್ಕೆ ತಾನೆ ಅವನು ಎಲ್ಲರನ್ನೂ ಉಳಿಸಿದ್ದು" ಅಂದ್ರು. ಸರಿ, ಸ್ವಲ್ಪ ಹೊತ್ತಾದ ಮೇಲೆ ಪ್ರಯಾಣ ಮುಂದುವರೆಸಿದೆವು. ಬುದ್ಧಿಯವರು ನಾನು ಇಬ್ಬರೂ ನಿದ್ದೆ ಹೋಗಿದ್ದೆವು. ಬೆಳಗಿನ ಜಾವ ಐದೂವರೆ ಗಂಟೆ ಸಮಯ. ಯಾರೋ ಕೂಗಿದ ಹಾಗಾಯಿತು, ಎಚ್ಚರವಾಯಿತು. ಕಾರು ಶ್ರೀರಂಗಪಟ್ಟಣದ ಹತ್ತಿರ ನಿಂತಿದೆ. ಡ್ರೈವರ್ ಸ್ಟೇರಿಂಗ್ ಒರಗಿಕೊಂಡು ಮಲಗಿದ್ದಾನೆ. ನಮ್ಮನ್ನು ಎಬ್ಬಿಸಿದ್ದವರು ಒಬ್ಬ ಜಡ್ಜ್. ಬೆಳಗಿನ ವಾಯುವಿಹಾರಕ್ಕೆ ಬಂದಿದ್ದ ಅವರು ಬುದ್ಧಿಯವರ ಕಾರನ್ನು ಗುರುತಿಸಿ ನಮ್ಮನ್ನು ಎಬ್ಬಿಸಿದ್ದರು. ಈ ಎರಡು ವಿಸ್ಮಯಕಾರಿ ಘಟನೆಗಳನ್ನು ಅವರೊಡನೆ ತಿಳಿಸಿ ಮತ್ತೆ ಮೈಸೂರಿನತ್ತ ಪ್ರಯಾಣ ಬೆಳೆಸಿದೆವು.

ಮತ್ತೊಂದು ಘಟನೆ. 1959ರಲ್ಲಿ ಚಾಮರಾಜನಗರದಲ್ಲಿ ದೊಡ್ಡದೊಂದು ಹಾಸ್ಟೆಲ್ ತೆರೆಯಬೇಕೆಂದು ಮನಸ್ಸು ಮಾಡಿದ ಅವರು ಜಯಚಾಮರಾಜ ಒಡೆಯರ್‌ರವರಿಂದ ಆ ಹಾಸ್ಟೆಲ್ ಜಾಗದ ಗುದ್ದಲಿ ಪೂಜೆ ಮಾಡಿಸಲು ನಿರ್ಧರಿಸಿ ಈ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಸಿದ್ಧತಾ ಕೆಲಸಗಳನ್ನು ಮಾಡುತ್ತಿದ್ದ ಕಾಲದಲ್ಲಿ 7-8 ದಿನಗಳ ಕಾಲ ಹೊಟ್ಟೆಗೆ ಏನೂ ಸ್ವೀಕರಿಸದೆ ಇದ್ದುಬಿಟ್ಟಿದ್ದರು. ನಾವು ಸಂಜೆತನಕ ಮಾಡುವುದನ್ನೆಲ್ಲಾ ಮಾಡಿ ಮುಗಿಸಿ ನಮ್ಮ ನಮ್ಮ ಊರುಗಳಿಗೆ ಹೊರಟು ಹೋಗುತ್ತಿದ್ದುದರಿಂದ ಇದು ನಮಗೆ ಗೊತ್ತಾಗಲೇ ಇಲ್ಲ. ಇದು ಗೊತ್ತಾದ ಮೇಲೆ ನಾಲ್ಕೈದು ಜನ ಸೇರಿಕೊಂಡು ಅವರನ್ನು ಮರಿಯಾಲದ ಮಠಕ್ಕೆ ಕರೆದುಕೊಂಡು ಹೋಗಿ ಸ್ನಾನ, ಪೂಜೆ ಮಾಡಿಸಿ ಪ್ರಸಾದ ಸ್ವೀಕರಿಸುವಂತೆ ಮಾಡಿದೆವು. ಕೆಲಸದಲ್ಲಿ ಅತ್ಯಂತ ನಿಷ್ಠೆ, ಅರ್ಪಣಾ ಮನೋಭಾವದಿಂದ ತೊಡಗುತ್ತಿದ್ದ ಅವರು ಯಾವತ್ತೂ ನಿದ್ರೆ, ಆಹಾರ ಇತ್ಯಾದಿ ತಮ್ಮ ಸ್ವಂತದ್ದು ಎನ್ನುವುದನ್ನು ಕಿಂಚಿತ್ತೂ ಯೋಚಿಸುತ್ತಿರಲಿಲ್ಲ.

ಆ ಕಾಲಕ್ಕೆ ನಮ್ಮ ಚಾಮರಾಜನಗರ ವಲಯದಲ್ಲಿ ಅಲ್ಲಲ್ಲಿ ಪ್ರೈಮರಿ ಸ್ಕೂಲ್‌ಗಳು ಇದ್ದುವು ಅಷ್ಟೆ. ಚಾಮರಾಜನಗರದಲ್ಲಿ ಮಾತ್ರ ಹೈಸ್ಕೂಲ್ ಇತ್ತು. ನಾನು 1953-54 ರಲ್ಲಿ ಇಂಟರ್‌ಮೀಡಿಯಟ್ ಕಾಲೇಜನ್ನು ಪ್ರಾರಂಭಿಸುವವರೆಗೂ ಇಲ್ಲಿ ಯಾವುದೇ ಕಾಲೇಜು ಇರಲಿಲ್ಲ. ಸೈನ್ಸ್ ಕಾಲೇಜನ್ನು ತೆರೆದು ಶ್ರೀಗಳವರು ನಡೆಸುತ್ತಿದ್ದ ಹಾಸ್ಟೆಲ್ ಆವರಣದ ಕೆಲವು ಕೊಠಡಿಗಳಲ್ಲಿ ಹನ್ನೆರಡು ವರ್ಷ ನಡೆಯಿಸಿದ್ದೆ. ಇದನ್ನು 1965 ರಲ್ಲಿ ಎಲ್ಲಾ ವ್ಯವಸ್ಥೆಗಳೊಡನೆ (ಪರಿಕರಗಳು, ಸೇವಾ ಸಿಬ್ಬಂದಿಗಳು, ಬ್ಯಾಂಕ್ ಬ್ಯಾಲೆನ್ಸ್ ಹತ್ತು ಸಾವಿರ ರೂಪಾಯಿ) ಸಂಪೂರ್ಣವಾಗಿ ಬುದ್ಧಿಯವರಿಗೆ ಸಮರ್ಪಿಸಿಬಿಟ್ಟೆ. ಇದೇ ಮುಂದೆ

ಬುದ್ಧಿಯವರು ಪದವಿ ಕಾಲೇಜನ್ನು ತೆರೆಯಲು ಆಸ್ಪದ ಮಾಡಿಕೊಟ್ಟಿತು. ಚಾಮರಾಜನಗರ ತಾಲ್ಲೂಕಿನ ಅನೇಕರ ಇದು ವರವಾಗಿ ಪರಿಣಮಿಸಿತು. ಜನಪ್ರತಿನಿಧಿಯಾಗಿದ್ದ ನನಗೆ ಇದು ತುಂಬಾ ಸಂತೋಷಕೊಟ್ಟ ಸಂಗತಿಯಾಗಿತ್ತು.

ಅಂದಹಾಗೆ ನಾನು ಬುದ್ಧಿಯವರೊಡಗೂಡಿ ದವಸಧಾನ್ಯ ಸಂಗ್ರಹ ಕಾರ್ಯಕ್ಕೂ ಹೋಗುತ್ತಿದ್ದೆ. ನಾನು ಹೋಗುವುದರಿಂದ ಹೆಚ್ಚು ಹೆಚ್ಚು ಧಾನ್ಯ ಸಂಗ್ರಹಿಸಬಹುದೆಂಬುದು ಅವರ ಅಭಿಪ್ರಾಯವಾಗಿತ್ತು ಅನ್ನಿಸುತ್ತಿದೆ. ಚಾಮರಾಜನಗರ ತಾಲ್ಲೂಕಿನ ಚಂದಕವಾಡಿ ಹೋಬಳಿ, ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಹೋಬಳಿಯಲ್ಲಿನ ಜನ ತುಂಬಾ ಉದಾರವಾಗಿ ಕೊಡುತ್ತಿದ್ದರು. ಒಂದು ವರ್ಷ ಸಾವಿರಾರು ಪಲ್ಲದಷ್ಟು ದವಸಧಾನ್ಯ ಸಂಗ್ರಹವಾಗಿತ್ತು. ಆಗ ನಾನು ಇಷ್ಟೆಲ್ಲಾ ಧಾನ್ಯ ಏನು ಮಾಡುವುದು ಬುದ್ಧಿ ಅಂತ ಕೇಳಿದ್ದೆ. ಅದಕ್ಕೆ ಅವರು ಇದನ್ನೆಲ್ಲಾ ಮಾರಿ ಊಟಿಯಲ್ಲಿ ಒಂದು ಜಾಗ ತೆಗೆದುಕೊಳ್ಳಬೇಕು ಅಂತಿದ್ದೀವಿ. ಅದಕ್ಕೆ ಇದನ್ನು ಮಾರಿ ಬಂದ ಹಣ ಉಪಯೋಗಿಸಿಕೊಳ್ಳೋಣ ಅಂದುಕೊಂಡಿದ್ದೇವೆ ಎಂದರು. ಬುದ್ಧಿಯವರ ಈ ಆಸೆಯನ್ನು ದೂರದೃಷ್ಟಿಯನ್ನು ಕಂಡು ನಾನು ಸ್ತಂಭೀಭೂತನಾಗುತ್ತಿದ್ದೆ. ಆ ಸಲ ಸಂಗ್ರಹವಾಗಿದ್ದ ಧಾನ್ಯವನ್ನೆಲ್ಲಾ ಹರಾಜಿಗೆ ಹಾಕಿದೆವು. ಸಾಕಷ್ಟು ಹಣ ಬಂತು. ಬುದ್ಧಿಯವರು ಪುನಃ ನಾಳೆಗೆ ಆ ಹಣದ ಜೊತೆ ನನ್ನನ್ನು ಊರಿಗೆ ಕರೆದುಕೊಂಡು ಹೋದರು. ಇದೇ ಹಣದಿಂದಲೆ ಊಟಿಯಲ್ಲಿ ಅವರು ಪ್ರಪ್ರಥಮವಾಗಿ ಜಾಗ ಕೊಂಡುಕೊಳ್ಳಲು ಮಾತು ಮುಗಿಸಿ ಮುಂಗಡ ಕೊಟ್ಟು ಬಂದದ್ದು. ಈ ಜಾಗ ತೆಗೆದುಕೊಳ್ಳುವಾಗ ನಡೆಯಿಸಿದ ಪತ್ರವ್ಯವಹಾರಕ್ಕೆ ನಾನು ಕೂಡ ಒಬ್ಬ ಸಾಕ್ಷಿಯಾಗಿ ಅದಕ್ಕೆ ಸಹಿ ಹಾಕಿದ್ದೇನೆ.

ಬನ್ನಿಮಂಟಪದ ಜಾಗ ಸರ್ಕಾರಿ ಜಾಗ. ಅದನ್ನು ಕೊಂಡುಕೊಳ್ಳುವಾಗ (ಆಗ ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿ) ಬಹಳ ಅಡ್ಡಿಯುಂಟಾಗಿತ್ತು. ಈ ಜಾಗವನ್ನು ಬುದ್ಧಿಯವರಿಗೆ ಕೊಡಿಸುವಾಗಲೂ ಒಂದಿಷ್ಟು ಹೋರಾಟ ಮಾಡಿದ ತೃಪ್ತಿ ನನಗೆ ಇದೆ.

1984ರಲ್ಲಿ ನಮ್ಮ ಊರಿಗೆ ಪ್ರೌಢಶಾಲೆಯಾಗಬೇಕೆಂಬುದು ಊರಿನವರ ಇಚ್ಛೆಯಾಗಿತ್ತು. ಬುದ್ಧಿಯವರ ಜೊತೆ ಸಮಾಲೋಚಿಸಿ ನಮ್ಮೂರಿನಲ್ಲಿ ಜೆಎಸ್‌ಎಸ್ ಪ್ರೌಢಶಾಲೆ ಪ್ರಾರಂಭಿಸಿದ್ದೇನೆ. ಸರ್ಕಾರದ ಯಾವ ಅಧಿಕಾರವನ್ನೂ ನಾನು ಅನುಭವಿಸಿಲ್ಲವಾದರೂ ಸಮಾಜಸೇವೆ ಮಾಡಿದ ತೃಪ್ತಿ ನನಗಿದೆ. ಅದು ಬೇರೆಯ ವಿಚಾರ. ಆದರೆ ಪರಮಪೂಜ್ಯರು ಮಾಡುತ್ತಿದ್ದ ಮಹತ್ಕಾರ್ಯಗಳಿಗೆ ಹೆಗಲು ಕೊಟ್ಟು ಅವರ ಮೂಲಕ ನಾನು ಮಾಡಿದ ಸಮಾಜಸೇವೆ ನನಗೆ ತುಂಬಾ ತೃಪ್ತಿ ತಂದುಕೊಟ್ಟಿದೆ. ಅವರಂತಹ ಧೀಮಂತ ಸಮಾಜಸೇವಕರು, ಹುಟ್ಟಿ ಬರುವುದು ಅಪೂರ್ವ. ಅವರೊಬ್ಬ ಅವತಾರಪುರುಷರು. ಒಬ್ಬ ಸಮಾಜಸೇವಕನಿಗೆ ಏನೇನು ಗುಣ ಇರಬೇಕು ಎನ್ನುವುದನ್ನೆಲ್ಲಾ ನಾನು ಅವರಿಂದ ಕಲಿತಿದ್ದೆ.

□



# ಸದ್ಗುರು ಸ್ಮರಣೆ

**ಎಚ್. ಗಂಗಾಧರನ್**

**ಹ**ತ್ತು ಶತಮಾನದ ಹಿಂದೆ ಎತ್ತಣಿಂದ ಎತ್ತಲೊ ಬಂದು ಮೈಸೂರು ಜಿಲ್ಲೆಯ ಸುತ್ತೂರು ಶ್ರೀಕ್ಷೇತ್ರದಲ್ಲಿ ವೀರಶೈವರ ವೀರಸಿಂಹಾಸನವನ್ನು ಸಂಸ್ಥಾಪಿಸಿ ರಾಜಗುರುಗಳಾಗಿ ರಾಜ್ಯಗಳ ಕಲ್ಯಾಣವನ್ನು ಎಸಗಿದ ಮಹಾ ಶಿವಯೋಗಿಗಳು ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರರು. ಆ ಪೀಠದ ಪರಂಪರೆಯಲ್ಲಿ ಬೆಳಗಿದ ಅನೇಕ ಮಹಾನುಭಾವರು ಸ್ಮರಣೀಯರು. ಅಂತೆಯೇ ಶ್ರೀಪೀಠದ 23ನೆಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು 1916ನೇ ಇಸವಿ ಆಗಸ್ಟ್ 29ರಂದು ಲಿಂಗಪೂಜಾನಿಷ್ಠ ದಂಪತಿಗಳ ಶಿಶುವಾಗಿ ಸಂಜನಿಸಿದರು. ಶ್ರೀಪೀಠದ 22ನೆಯ ಜಗದ್ಗುರುಗಳಾದ ಮಂತ್ರಮಹರ್ಷಿಗಳಾದ ಜಗದ್ಗುರು ಶ್ರೀ ಶಿವರಾತ್ರೀಶ್ವರರ ಕರಕಮಲದಲ್ಲಿ ಬೆಳೆದು ಬೆಳಗಿದರು. ಜಗದ ಜಂಜಡ ವನ್ನು ಕಂಡರಿಯದ ತಮ್ಮ ಎಂಟನೆಯ ವಯಸ್ಸಿನಲ್ಲಿ ಶ್ರೀಪೀಠದ ಧರ್ಮ ಮಕುಟಮುದ್ರೆಯನ್ನು ಪಡೆದರು. ಅಧ್ಯಯನಕ್ಕಾಗಿ ಮೈಸೂರು ನಗರಕ್ಕೆ ಬಂದರು.

ಅವರು ಶಿವಪೂಜಾನಿಷ್ಠರಾಗಬೇಕು; ಪೂಜಾಮಂತ್ರಗಳ ವಿಧಾನವನ್ನು ಅರಿತು ಅನುಭಾವಿಗಳಾಗಬೇಕು; ಶ್ರೀಮಠದ ಕೀರ್ತಿಯನ್ನು ಬೆಳಗುವ ವ್ಯವಹಾರಚತುರರಾಗಬೇಕು ಎಂದು ಅವರ ಗುರುಗಳು ಆಶಿಸಿದ್ದರು. ಅದಕ್ಕಾಗಿ ಅವರು ಕಟ್ಟುನಿಟ್ಟಾದ ತಪಸ್ಸನ್ನೇ ಆಚರಿಸಿ ದರು. ಆದಿ ಜಗದ್ಗುರುಗಳಲ್ಲಿ ಅನವರತ ತಮ್ಮ ಹಂಬಲವನ್ನು ವ್ಯಕ್ತಪಡಿಸುತ್ತಲಿದ್ದರು. ಅದರಂತೆ ಶೈಶವದಲ್ಲಿ ಪರಮಪೂಜ್ಯರಿಗೆ ವಿದ್ವಾಂಸರಾಗಬೇಕೆಂಬ ಬಯಕೆಯು ಮೂಡಿಬಂತು. ಮೈಸೂರು ಜಿಲ್ಲೆಯನ್ನು ಬಿಟ್ಟು ಎಂದೂ ಸ್ವತಂತ್ರವಾಗಿ ಬೇರೊಂದೆಡೆಗೆ ಹೋದವ ರಲ್ಲ. ಅವರ ಗುರುಗಳಿಗೆ ಇವರು ಕೇವಲ ಉತ್ತರಾಧಿಕಾರಿಗಳು ಮತ್ತು ಶಿಷ್ಯರು ಎಂಬ ಭಾವನೆ ಇರಲಿಲ್ಲ. ಅವರನ್ನು ತಮ್ಮ ಪ್ರಾಣವೆಂದೇ ಭಾವಿಸಿದ್ದರು. ಪೂಜ್ಯರಿಗಾದರೊ ತಮ್ಮ ಗುರುಗಳು ಮಾತೃವೇ ಆಗಿದ್ದರು. ಏಕೆಂದರೆ ಅವರಿಗೆ ಅರಿವು ಬರುವವರೆವಿಗೂ ಅವರ ಪಾಲನೆ, ಪೋಷಣೆಗಳು ಶ್ರೀಗುರುವಿನ ಕರಕಮಲದಿಂದಲೇ ನಡೆದುಬಂದಿತು. ಈಗಿದ್ದರೂ ಸಹ ಜ್ಞಾನಾರ್ಜನೆಯ ಬಯಕೆ ಒಮ್ಮೆ ಬಾಂಧವ್ಯದ ಸಂಕೋಲೆಯನ್ನು ಕಿತ್ತು ಒಗೆದಿತ್ತು.

ಆಗ ಕಾಶಿಕ್ಷೇತ್ರದಲ್ಲಿ ನೆಲೆಸಿದ್ದ ಜ್ಞಾನಾರ್ಜನೆಯಲ್ಲಿ ಗೌರಿಶಂಕರ ಶಿಖರದಷ್ಟು ಎತ್ತರಕ್ಕೆ ಬೆಳೆದಿದ್ದ ಮೈಸೂರಿನ ಗವಿಮಠದ ಪರಮ ಪೂಜ್ಯ ಪ್ರಣವಸ್ವರೂಪಿಗಳಾದ ಶ್ರೀ ಗೌರೀಶಂಕರ



ಮಹಾಸ್ವಾಮಿಗಳ ವರ ರೂಪು ಅವರನ್ನು ಆಕರ್ಷಿಸಿತು. ಏಕಾಂಗಿಯಾಗಿ ಕಾಶಿಗೆ ತೆರಳಿದ್ದರು. ಶ್ರೀಗಳವರು ಕಾಣೆಯಾಗಿರುವ ಸುದ್ದಿ ಅವರ ಗುರುಗಳಿಗೆ ಸಿಡಿಲಾಗಿ ಎರಗಿತ್ತು. ಶ್ರೀಮಠದಲ್ಲಿ ಎಲ್ಲರ ಕಂಬನಿಯ ಹನಿಗಳು ವಾಹಿನಿಯಾಗಿ ಅರಿದು, ಸುಳಿವು ತಿಳಿದ ಮಂತ್ರಮಹರ್ಷಿಗಳು ಆದಿ ಜಗದ್ಗುರುಗಳವರ ಆಶೀರ್ವಾದ ಪಡೆದು ಉಪವಾಸವ್ರತನಿಷ್ಠರಾಗಿ ಕಾಶಿ ಕ್ಷೇತ್ರವನ್ನು ತಲುಪಿದರು. ಅಲ್ಲಿ ಗೌರೀಶಂಕರ ಮಹಾಸ್ವಾಮಿ ಗಳವರು ಪರಮಪೂಜ್ಯರಿಗೆ ಮಹತ್ವದ ತತ್ವ ಉಪದೇಶವನ್ನು ಮಾಡಿದರು. "ವಿದ್ಯೆ ಕಲಿತು ಪಂಡಿತರಾಗುವವರು ಬಹಳ ಜನರು ದೊರೆಯಬಹುದು. ಪಾಮರರನ್ನು ಪರಿಪಾಲಿಸಿ ಪುಣ್ಯಶೀಲರನ್ನಾಗಿ ಮಾಡುವ ಮಹಾನುಭಾವರು ದೊರೆಯುವುದು ಅತಿ ವಿರಳ. ಭಗವಂತ ಆ ಶಕ್ತಿಯನ್ನು ನಿಮಗೆ ಕರುಣಿಸಿದ್ದಾನೆ. ಲೋಕಕಲ್ಯಾಣಕ್ಕೆ ನಿಮ್ಮ ಜೀವನ ಮೀಸಲಾಗಬೇಕು" ಎಂದು ಹರಸಿ ಹಿಂದಕ್ಕೆ ಕಳುಹಿಸಿದರು.

ಮತ್ತೆ ಮೈಸೂರಿಗೆ ಬಂದ ಶ್ರೀಗಳವರ ಸಂಸ್ಕೃತ ವಿದ್ಯಾಭ್ಯಾಸ ಮುಂದುವರಿದಿತ್ತು. ಪೂಜ್ಯರಿಗೆ ತಮ್ಮ ಬೆಳವಣಿಗೆಗೆ ಎಲ್ಲ ಸೌಲಭ್ಯಗಳು ಲಭ್ಯವಿದ್ದವು. ಆದರೆ ಆರ್ಥಿಕ ಸ್ವಾತಂತ್ರ್ಯವಿರಲಿಲ್ಲ. ಜೀವನದ ವ್ಯವಹಾರ ವೆಲ್ಲ ತಮ್ಮ ಗುರುಗಳ ನೇತೃತ್ವದಲ್ಲಿ, ಭ್ರಾತೃತ್ವದಲ್ಲಿ ನಡೆಯುತ್ತಿತ್ತು. ವಿದ್ಯಾರ್ಥಿಯಾಗಿ ತಮ್ಮ ಪೀಠದ ಪರಮ ಶಿಷ್ಯರಾದ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯ ನವರ ಸಮರ್ಪಣದ ಕೊಡುಗೆಯಾದ ವಾಣೀವಿಲಾಸ ರಸ್ತೆಯಲ್ಲಿರುವ ಸಂಸ್ಕೃತ ಪಾಠಶಾಲೆಯ ನಿರ್ವಹಣೆಯ ನೇತೃತ್ವ ಅವರಿಗೆ ಲಭ್ಯವಾಗಿತ್ತು. ಆದರೆ ಆ ಸಂಸ್ಥೆಯಲ್ಲಿ ಸಂಸ್ಕೃತಾ ಭ್ಯಾಸ ಮಾಡಿ ಮಠಾಧಿಕಾರಿಗಳಾಗುವವರಿಗೆ, ಪುರೋಹಿತರಾಗುವವರಿಗೆ ಅಂದರೆ ವೀರಶೈವರಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿತ್ತು. ಆದರೆ ಪೂಜ್ಯರ ಮನಸ್ಸು ಜಾತಿ, ಮತ, ಪಂಥಗಳ ಮೇರೆಯನ್ನು ಮೀರಿತ್ತು. ಸಂಸ್ಕೃತದ ಜೊತೆಗೆ ಆಧುನಿಕ ಶಿಕ್ಷಣದ ಸಂಪತ್ತನ್ನು ಜನಮನದಲ್ಲಿ ಬಿತ್ತಿ ಬೆಳೆಯಬೇಕೆಂಬ ಬಯಕೆಯು ಬೆಳೆದು ನಿಂತಿತ್ತು. ಅದರ ಕಾರಣ ಮೊಟ್ಟಮೊದಲ ಬಾರಿಗೆ ಶ್ರೀಮಠ ಪರವಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಅನ್ನದಾನದ ವಿದ್ಯಾರ್ಥಿನಿಲಯ ಒಂದು ಸ್ಥಾಪನೆಗೊಂಡಿತು. ನಂತರ ಅದರ ಸಾಹಸ ಸಾಧನೆ ಸಮದರ್ಶಿತ್ವದ ಫಲವಾಗಿ ಜಿಲ್ಲಾದ್ಯಂತ ಸರ್ವರಿಗಾಗಿ ವಿದ್ಯಾರ್ಥಿನಿಲಯಗಳು, ವಿದ್ಯಾಸಂಸ್ಥೆಗಳು ಸ್ಥಾಪನೆಗೊಂಡವು.

ಪ್ರಾರಂಭದ ಸಮಯದಲ್ಲಿ ಶ್ರೀಮಠದ ಆರ್ಥಿಕ ಸ್ಥಿತಿ ಇಂತಹ ಸಂಸ್ಥೆಗಳನ್ನು ಸ್ಥಾಪಿಸಲು ಪ್ರೇರಿಸುವಂತಹ ಸ್ಥಿತಿಯಲ್ಲಿ ಇರಲಿಲ್ಲ. ಸ್ಥಾಪಿಸಿದ ಸಂಸ್ಥೆಗಳು ಸ್ಥಗಿತಗೊಂಡರೆ ಧರ್ಮ ಪೀಠದ ಧವಳಕೀರ್ತಿಗೆ ಕಳಂಕ ಬರುವುದೆಂಬ ಶಂಕೆ ಅವರ ಗುರುಗಳನ್ನು ಶಿಷ್ಯಪರಂಪರೆಯನ್ನು ಕಾಡಿತ್ತು. ಅಂತಹ ಪ್ರಸಂಗದಲ್ಲಿ ಅಣ್ಣನವರ ವಾಣಿ ಅವರಿಗೆ ಶ್ರೀರಕ್ಷೆಯಾಗಿತ್ತು.





ಎನ್ನ ವಾಮ ಕ್ಷೇಮ ನಿಮ್ಮದಯ್ಯಾ
ಎನ್ನ ಹಾನಿ-ವೃದ್ಧಿ ನಿಮ್ಮದಯ್ಯಾ,
ಎನ್ನ ಮಾನಾಪಮಾನವೂ ನಿಮ್ಮದಯ್ಯಾ
ಬಳ್ಳಿಗೆ ಕಾಯಿ ದಿಮ್ಮಿತ್ತೆ,
ಕೂಡಲಸಂಗಮದೇವಾ

ಎಂಬ ವಚನ ಅವರ ಭಾವನೆಗಳಿಗೆ ಬೆಳಕಾಗಿತ್ತು. ಕೇಳಿದವರಿಗೆ ಇದೇ ಉತ್ತರವನ್ನು ನೀಡುತ್ತಿದ್ದರು. "ಶ್ರೀ ಗುರುಕೃಪೆಯಿಂದ ಈ ಕಾರ್ಯವನ್ನು ಕೈಗೊಂಡಿದ್ದೇನೆ. ಅದರಿಂದ ನನಗೆ ಮಾನ-ಅಪಮಾನದ, ಲಾಭ-ನಷ್ಟದ ಬಯಕೆ ಇಲ್ಲ. ಶ್ರೀಗುರು ಏನು ಮಾಡಿಸುವನೊ ಎಲ್ಲಿವರೆವಿಗೂ ನಡೆಸುವನೊ ಅಲ್ಲಿಯವರೆವಿಗೆ ನಡೆಯುತ್ತೇನೆ. ಶ್ರೀ ಗುರು ಕೊಟ್ಟ ಜೋಳಿಗೆ ಈ ದೇಹದ ಪಾಲಿಗಿದೆ. ಕೊಡುವ ಒಡೆಯರನ್ನು ತೋರಿಸುವವರು ಅವರಿಂದ ಕೊಡಿಸುವವರು ಅದರಂತೆ ನನ್ನನ್ನು ನಡೆಸುವವರು ಶ್ರೀಗುರುವೇ" ಎಂದು ಸ್ಥಿರವಾಗಿ ನಂಬಿದ್ದರು. ಅದರ ಪರಿಣಾಮವೇ ಇಂದು ಈ ಸಂಸ್ಥೆ ಬೃಹತ್ತಾಗಿ ಬೆಳೆಯಲು ಕಾರಣ ವಾಗಿದೆ. ತನ್ನ ಸೇವೆಯಿಂದ ಜಗದಲ್ಲಿ ಜನಜನಿತವಾಗಿದೆ.

ಅವರ ಸಾಧನೆಯ ಕೆಲವು ಘಟನೆಗಳನ್ನು ಮಾತ್ರ ಇಲ್ಲಿ ಸ್ಮರಿಸಬಯಸುತ್ತೇನೆ. ಆರಂಭದ ದಿನಗಳಲ್ಲಿ ಅನ್ನದಾನದ ವಿದ್ಯಾರ್ಥಿ ನಿಲಯಗಳನ್ನು ಮಾತ್ರ ಪ್ರಾರಂಭಿಸಲಾಗುತ್ತಿತ್ತು. ಮೊದಲ ಬಾರಿಗೆ ಅನೇಕ ಶಿಷ್ಯರ ಕೋರಿಕೆಯಂತೆ ಮೈಸೂರು ನಗರದಲ್ಲಿ ಪ್ರೌಢಶಾಲೆಯನ್ನು ಪ್ರಥಮ ಬಾರಿಗೆ ತೆರೆಯಲಾಯಿತು. ಅದರಂತೆ ಕೆಲವೆಡೆ ವಿದ್ಯಾಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಒಂದು ಸಂದರ್ಭದಲ್ಲಿ ಎರಡು ರೀತಿಯ ಸಂಸ್ಥೆಗಳ ಅನುಭವವನ್ನು ಪಡೆದ ಅವರ ಆತ್ಮದ ಚಿಂತನೆ ಭಿನ್ನವಾಗಿತ್ತು. ಹಸಿವಿನಿಂದ ಬಳಲಿದರು, ಜ್ಞಾನದಾಹದಿಂದ ಬಳಲುತ್ತಿದ್ದ ಮಕ್ಕಳಿಗೆ ಅನ್ನ ನೀಡುವುದರಿಂದ ಆಗುವ ಆನಂದ ಅನ್ಯ ಸಂಸ್ಥೆಗಳನ್ನು ಸ್ಥಾಪಿಸುವುದರಿಂದ ಆಗುತ್ತಿಲ್ಲ ಎಂಬ ಅಳಲು ಅವರದ್ದಾ ಗಿತ್ತು. ಅದರಲ್ಲಿ ನಿಗೂಢ ಅರ್ಥವಿದೆ. ವಿದ್ಯಾರ್ಥಿನಿಲಯದಲ್ಲಿ ಬೆಳೆದ ವಿದ್ಯಾರ್ಥಿಗಳು ತಾನು ಸಮಾಜದ ಅನ್ನಕ್ಕೆ ಋಣಿಯಾಗಿದ್ದೇನೆ ಎಂಬ ಭಾವನೆಯಿಂದ ಕೆಲವರಾದರೂ ಸಮಾಜಮುಖಿಗಳಾಗಿರುವುದು ಅವರಿಗೆ ತಿಳಿದಿತ್ತು. ವಿದ್ಯಾಸಂಸ್ಥೆಗಳಲ್ಲಿ ದುಡಿಯುವವರು ಮತ್ತು ಓದುವವರು ಬಹುಪಾಲು ಜನ ಸ್ವಾರ್ಥಮುಖಿಗಳಾಗಿರುವುದು ಅವರ ಅರಿವಿಗೆ ಬಂದಿತ್ತು. ಈ ಮಾತನ್ನು ಅನೇಕ ವೇಳೆ ಪ್ರಸ್ತಾಪಿಸುತ್ತಿದ್ದರು. ಆದುದರಿಂದ ವಿದ್ಯಾಸಂಸ್ಥೆಗಳಲ್ಲಿ ಕಲಿಯುವವರಿಗೆ ದುಡಿಯುವವರಿಗೆ, ಜನಸೇವೆ ದೃಷ್ಟಿಯನ್ನು ನೀಡುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ರೂಪಿಸುತ್ತ ಬಂದರು. ಅದರಿಂದ ಸಾಕಷ್ಟು ಪರಿಣಾಮವಾಗಿ ಕೊನೆಯಲ್ಲಿ ನೆಮ್ಮದಿಯನ್ನು ತಂದಿತು.



ನೂರಾರು ಸಂಸ್ಥೆಗಳನ್ನು ಸ್ಥಾಪಿಸಿ ಸಾವಿರಾರು ಮಕ್ಕಳಿಗೆ ಅಶನ-ವಸತಿ ಭಾಗ್ಯವನ್ನು ಒದಗಿಸುವುದು ಅತ್ಯಂತ ಕಠಿಣ ತಪಸ್ಸಾಗಿತ್ತು. ಅದರಲ್ಲಿ ಸಿದ್ಧಿಯನ್ನು ಪಡೆದರು. ಅದಕ್ಕೆ ಅವರಿದ್ದ ಶ್ರೀರಕ್ಷೆ ಆದಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯ ಮತ್ತು ಅವರಿಗೆ ಶ್ರೀಗುರುವಿನೊಡನೆ ಬೆಳೆದುಬಂದಿದ್ದ ಅವಿನಾಭಾವಸಂಬಂಧ.

**ಅದಕ್ಕೆ ನಿದರ್ಶನವೆಂಬಂತೆ ಒಂದು ಘಟನೆ ಸ್ಮರಣೀಯ:** ಅಂದಿನ ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರವರು ಜಗದ್ಗುರುಗಳವರನ್ನು ಅತ್ಯಂತ ಪೂಜ್ಯಭಾವನೆಯಿಂದ ಕಾಣುತ್ತಿದ್ದರು. ಅವರಿಗೆ ಬರುತ್ತಿದ್ದ ಮಾನಸಿಕ ಕಷ್ಟಗಳಲ್ಲಿ ಜಗದ್ಗುರುಗಳವರ ಸಾನ್ನಿಧ್ಯ, ಸತ್ಸಂಸಂಗ, ಸಂವಾದಗಳು ಶಾಂತಿಯನ್ನು ನೀಡುತ್ತಿದ್ದವು. ರಾಷ್ಟ್ರದ ಸ್ವಾತಂತ್ರ್ಯಾನಂತರ ಅವರು ಮದ್ರಾಸಿನ ರಾಜ್ಯಪಾಲರಾಗಿ ನೇಮಕಗೊಂಡರು. ಆ ಸಮಯದಲ್ಲಿ ಅವರಿಗೆ ಆತ್ಮೀಯವಾದ ಆಶಾಕಿರಣವಾದ ಪೂಜ್ಯವಾದ ವಸ್ತುವೆಂದರೆ ಅವರ ಪೂಜ್ಯ ಮಾತೃಶ್ರೀಯವರು. ಅವರನ್ನು ಕಾಣದ ದಿನ ಅವರೊಡನೆ ಮಾತನಾಡದ ದಿನ ಅಸಂತೃಪ್ತಿಯ ದಿನ. ಆದುದರಿಂದ ಅವರ ಮಾತೃಶ್ರೀಯವರನ್ನೇ ಮದ್ರಾಸಿಗೆ ಕರೆದೊಯ್ಯಲು ನಿರ್ಧರಿಸಿದರು. ಆ ಸಮಯದಲ್ಲಿ ಸುತ್ತೂರು ಕ್ಷೇತ್ರದಲ್ಲಿ ನಡೆಸುವ ಜಾತ್ರಾ ಮಹೋತ್ಸವದ ಸಿದ್ಧತೆ ನಡೆದಿತ್ತು. ಆಗ ಶ್ರೀಮನ್ ಮಹಾರಾಜರು ಜಗದ್ಗುರುಗಳವರು ಮದರಾಸಿಗೆ ಆಗಮಿಸಿ ಪೂಜೆ ನಡೆಸಿ, ತೀರ್ಥಪ್ರಸಾದವನ್ನು ಕೊಟ್ಟ ನಂತರವೇ ತಾವು ಅಧಿಕಾರವನ್ನು ಸ್ವೀಕರಿಸುವುದಾಗಿ ಬಿನ್ನವಿಸಿದರು. ಆಗ ಜಗದ್ಗುರುಗಳು ಜಾತ್ರಾ ಮಹೋತ್ಸವಕ್ಕೆ ತನುಮನವನ್ನೆಲ್ಲ ಅರ್ಪಿಸಿಕೊಂಡಿದ್ದರು. ಆದರೆ ಮಂತ್ರಮಹರ್ಷಿಗಳು ಮಹಾರಾಜರ ಬಯಕೆಯನ್ನು ಈಡೇರಿಸಲೇಬೇಕೆಂದು ಜಗದ್ಗುರುಗಳವರಿಗೆ ಒತ್ತಾಯಪೂರ್ವಕ ಅಪ್ಪಣೆಯನ್ನು ಮಾಡಿದರು. ಜಾತ್ರೆಯನ್ನು ಬಿಟ್ಟು ಅವರು ಹೋಗಲೇಬೇಕಾದ ಕ್ಷಣ ಅವರನ್ನು ತಲ್ಲಣಗೊಳಿಸಿತು. ಹೃದಯ ಕಂಪಿಸತೊಡಗಿತ್ತು. ಕಂಬನಿ ತುಂಬಿ ಬಂದಿತ್ತು. ಅವರ ನಾಲಗೆಯಿಂದ ನುಡಿಯೊಂದು ಹೊರಬಂದಿತ್ತು. ಅದೇನೆಂದರೆ ಈ ಸಮಯದಲ್ಲಿ 'ನನಗೆ ಹೃದಯವೆಂಬುದು ಇದ್ದರೆ ಅದು ಒಡೆದು ಹೋಗಬೇಕಿತ್ತು.' ನಂತರ ಅನಿವಾರ್ಯವಾಗಿ ಅವರು ಪ್ರಯಾಣ ಬೆಳೆಸಿದರು. ಸೂತ್ರಧಾರರಿಲ್ಲದಿದ್ದರೂ ಸಂಕುಚಿತವಾಗಿ ಸುತ್ತೂರು ಜಾತ್ರೆ ನಡೆದಿತ್ತು. ಮದರಾಸಿಗೆ ಹೋದವರು ಮೊದಲಿನಂತೆ ಬರಲಿಲ್ಲ. ಹೃದಯದ ವೇದನೆ ಉಲ್ಬಣಗೊಂಡು ಚಿಕಿತ್ಸೆ ಪಡೆದು ಮೈಸೂರಿಗೆ ಆಗಮಿಸಿದರು. ಅಂದಿನಿಂದ ಹೃದಯ ಶಕ್ತಿ ಕುಗ್ಗುತ್ತಲೇ ಬಂದಿತು. ದೇಹ ಶಕ್ತಿಹೀನವಾಗುತ್ತಲೇ ಬಂದಿತು. ದೇವರ ಸೇವೆಗೆ ಮೀಸಲಾದ ದೇಹ, ದೀನದಲಿತರಿಗಾಗಿ, ಬಡವರ ಉದ್ಧಾರಕ್ಕಾಗಿ ದುಡಿಯುತ್ತ ಸವೆಯುತ್ತ ಬಂದಿತು. ಎಡಬಿಡದೆ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.





### ಅಂತಿಮ ದಿನಗಳು

ಜಗದ್ಗುರುಗಳವರು 70 ಸಂವತ್ಸರಗಳ ಸಾರ್ಥಕ ಜೀವನವನ್ನು ಸ್ಮರಿಸಿ ಅಮೃತ ಮಹೋತ್ಸವವನ್ನು ನಡೆಸಲು ಸಿದ್ಧತೆ ನಡೆದಿತ್ತು. ಆ ವೇಳೆಗೆ ಪಾಶ್ಚಾತ್ಯ ರಾಷ್ಟ್ರಗಳ ಶ್ರೀಮಠದ ಭಕ್ತಮಂಡಳಿಯಿಂದ ವಿದೇಶಕ್ಕೆ ಆಗಮಿಸಿ ದರ್ಶನಾಶೀರ್ವಾದ ನೀಡಬೇಕೆಂಬ ಬಲವಾದ ಬೇಡಿಕೆ ಬಂದಿತ್ತು. ಎಲ್ಲರಂತೆ ದೇಶಗಳನ್ನು ನೋಡುವ ವ್ಯಾವಹಾರಿಕ ಬಯಕೆ ಅವರದಾಗಿರಲಿಲ್ಲ. ಭಕ್ತರ ಕೋರಿಕೆ ಅವರನ್ನು ಕರೆದೊಯ್ದಿತು. ಇಂಗ್ಲೆಂಡಿನ ಅನೇಕ ಭಕ್ತರ ಮನೆಗಳಲ್ಲಿ ಲಿಂಗಪೂಜೆ ನಡೆದಿತ್ತು. ನೆಪಮಾತ್ರಕ್ಕೆ ಪ್ರೇಕ್ಷಣೀಯ ಸ್ಥಳಕ್ಕೆ ಭೇಟಿ ನೀಡಿದ್ದರು. ಅವೇನೂ ಅವರನ್ನು ಆಕರ್ಷಿಸಲಿಲ್ಲ. ಅಮೆರಿಕೆಗೆ ತೆರಳಿದರು. ಅಲ್ಲಿಯೂ ಅನೇಕ ಮನೆಗಳಲ್ಲಿ ಪೂಜೆ ನಡೆದಿತ್ತು. ಅಲ್ಲಿರುವಾಗ ಜಗದ್ಗುರುಗಳು ಅಮೆರಿಕದಲ್ಲಿರುವ ಸುದ್ದಿ ಪ್ರಕಟವಾಗಿತ್ತು. ಜಾತಿ-ಮತ, ಪಂಥ, ದೇಶ, ಭಾಷೆ ಯಾವ ಭೇದವಿಲ್ಲದೆ ಅನೇಕರು ಬಂದು ದರ್ಶನಾಶೀರ್ವಾದ ವನ್ನು ಪಡೆದರು. ಸ್ಮರಣೀಯ ಸಂಗತಿ ಎಂದರೆ ಸಾವಿರಾರು ಮೈಲಿ ದೂರದಲ್ಲಿರುವ ಅಪರಿಚಿತ ವ್ಯಕ್ತಿಯ ಆರ್ತನಾದ ಶ್ರೀಗಳವರ ಹೃದಯವನ್ನು ಮುಟ್ಟಿತ್ತು. ಅನೇಕ ಸಂಕಷ್ಟಗಳಿಗೆ ಒಳಗಾದ ಅಮೆರಿಕನ್ ವೃದ್ಧ ಮಹಿಳೆ ದೂರವಾಣಿಯ ಮೂಲಕ ತನ್ನ ಕೌಟುಂಬಿಕ ಸಂಕಷ್ಟಗಳನ್ನು ನಿವೇದಿಸಿಕೊಂಡು ಅನುಗ್ರಹವನ್ನು ಬೇಡಿದಳು. ಅಂದು ಜಗದ್ಗುರು ಗಳು ಆ ಕುಟುಂಬದ ಸಂರಕ್ಷಣೆಗಾಗಿ ವಿಶೇಷ ಪೂಜೆಯನ್ನು ನೆರವೇರಿಸಿ, ದೂರವಾಣಿ ಮೂಲಕವೇ ಆಶೀರ್ವದಿಸಿದರು. ಅದರಿಂದ ಅವರ ಬಹುಪಾಲು ಸಮಸ್ಯೆಗಳು ಪರಿಹಾರಗೊಂಡ ಸಂತಸ ಸುದ್ದಿ ಶ್ರೀಗಳವರು ಅಮೆರಿಕೆಯಲ್ಲಿರುವಾಗಲೇ ಮುಟ್ಟಿತು. ಅನೇಕ ಸಂಘಸಂಸ್ಥೆಗಳಲ್ಲಿ ಭಾಗವಹಿಸಿ ಅವರಿಗೆ ದರ್ಶನಾಶೀರ್ವಾದ ನೀಡುತ್ತಿದ್ದ ಅಂಶವೇ ಶ್ರೀಗಳವರ ಆರೋಗ್ಯದ ಭಾಗ್ಯವಾಗಿತ್ತು. ಆದರೆ ದೇಹ ತನ್ನ ಸ್ವಾಸ್ಥ್ಯವನ್ನು ಕಳೆದುಕೊಂಡಿತು. ಮೂರು ಮೆಟ್ಟಿಲನ್ನೂ ಏರುವ ಶಕ್ತಿ ದೇಹಕ್ಕಿರಲಿಲ್ಲ. ದೀರ್ಘಕಾಲ ಲಿಂಗಪೂಜೆಗೆ ಕುಳಿತುಕೊಳ್ಳುವುದು ಕಷ್ಟಸಾಧ್ಯವಾಗುತ್ತಿತ್ತು. ಅಂತಹ ಸಮಯದಲ್ಲಿ ಜೊತೆಗಿದ್ದವರೊಡನೆ ಈ ದೇಹವಿರುವುದರಿಂದ ನಿಮ್ಮೆಲ್ಲರ ಸೇವೆಯನ್ನು ಪಡೆದುಕೊಳ್ಳಬೇಕಾಯಿತಲ್ಲ ಎಂದು ಕಂಬನಿ ತುಂಬಿದ ಪ್ರಸಂಗಗಳು ಮಿಂಚಿಹೋದವು. ಜಗತ್ತಿನ ವ್ಯಾಪಾರದಲ್ಲಿ ಮನಸ್ಸು ನಿರಾಸಕ್ತವಾಗಿತ್ತು. ಜಗತ್‌ಪ್ರಸಿದ್ಧ ಡಿಸ್ನಿಲ್ಯಾಂಡ್‌ನ ನೋಟಕ್ಕಾಗಿ ಎಲ್ಲರ ಜೊತೆ ಬಂದರಾದರೂ, ಆ ಬಾಹ್ಯ ಆನಂದವನ್ನು ಪಡುವ ಅಪೇಕ್ಷೆ ಅವರದಾಗಲಿಲ್ಲ. ಜೊತೆ ಇದ್ದವರು ಆ ಪ್ರದರ್ಶನವನ್ನು ನೋಡಿ ಬರುವವರೆವಿಗೂ ಮನವನ್ನು ದೇವನಲ್ಲಿ ಲೀನಗೊಳಿಸಿದ್ದರು.



ಅನೇಕ ವೇಳೆ ವೈದ್ಯರ ತಪಾಸಣೆಯ ಕಾರಣವಾಗಿ, ಜೊತೆಯಲ್ಲಿದ್ದವರಿಗೆ ಶ್ರೀಗಳವರ ದೈಹಿಕ ಆರೋಗ್ಯದ ಬಗ್ಗೆ ಆತಂಕ ಉಂಟುಮಾಡಿತ್ತು. ಬೇಗ ಭಾರತಕ್ಕೆ ಹಿಂದಿರುಗುವ ಚಿಂತನೆಯೂ ನಡೆದಿತ್ತು. ಆ ಸಮಯದಲ್ಲಿ ಒಂದು ದಿನ ರಾತ್ರಿ ಜಗತ್ತಿನ ಮಹಾ ಸಂತರಲ್ಲಿ ಒಬ್ಬರಾದ ಸ್ವಾಮಿ ರಾಮರವರ ಸಂದರ್ಶನ ಪಡೆಯುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಆದರೆ ಅಲ್ಲಿಗೆ 400 ಮೈಲಿ ಪ್ರಯಾಣ ಮಾಡಬೇಕಾಗಿತ್ತು. ಅವರ ದೈಹಿಕ ಸ್ಥಿತಿ ಅಸಮರ್ಪಕವಾಗಿದ್ದರಿಂದ ಅವರ ಆಲೋಚನೆಗೆ ಯಾರಿಂದಲೂ ಒತ್ತಾಸೆ ದೊರೆತಿರಲಿಲ್ಲ. ಅದನ್ನು ವಿನಂತಿಸಿಕೊಂಡಾಗ ಹೋಗಲೇಬೇಕೆಂದು ಅಪ್ಪಣೆಯನ್ನು ಮಾಡಿದರು. ಆಯೋಜಕರ ಮೌನವನ್ನು ನೋಡಿ "ಹೋದರೆ ಹೋಗುವುದು ಹೋಗಲೇಬೇಕಾದ ದೇಹ. ಈಗಲೇ ಪ್ರಯಾಣದ ವ್ಯವಸ್ಥೆ ಮಾಡಿ" ಎಂದರು. ಮರುದಿನ ಪ್ರಯಾಣ ಸಿದ್ಧತೆ ನಡೆಯಿತು. ಆದರೆ ಒಂದೆರಡು ತಿಂಗಳ ಪೂರ್ವಭಾವಿ ಒಪ್ಪಿಗೆಯಿಲ್ಲದೆ ಸ್ವಾಮಿ ರಾಮಾರವರ ಸಂದರ್ಶನ ದೊರೆಯುವುದು ದುರ್ಲಭವೆಂಬ ಸುದ್ದಿ ಬಂದಿತು. ಆದರೆ ಶ್ರೀಗಳವರ ಸಂಕಲ್ಪ ಅವರ ಸಂದರ್ಶನಕ್ಕೆ ಅನುಮತಿ ನೀಡಿತ್ತು. ಸ್ವಾಮಿರಾಮಾರವರ ಪೆನ್ಸಿಲ್ವೇನಿಯಾದಲ್ಲಿರುವ ಹಿಮಾಲಯ ಸಾಂಸ್ಕೃತಿಕ ಸಂಸ್ಥೆಯತ್ತ ಪ್ರಯಾಣ ಸಾಗಿತ್ತು.

ಮಾರ್ಗಮಧ್ಯದಲ್ಲಿ ಭಾರತೀಯ ಮಹಿಳಾ ಸಂಸ್ಕೃತಿಯಿಂದ ಪ್ರೇರಣೆಗೊಂಡಿದ್ದ ಮಹಿಳಾ ಸಂಸ್ಥೆಯೊಂದು ಜಗದ್ಗುರುಗಳನ್ನು ಭಕ್ತಿಪೂರ್ವಕವಾಗಿ ಆಶ್ರಮಕ್ಕೆ ಕರೆದೊಯ್ದು ತಮ್ಮ ಭಕ್ತಿಕೈಂಕರ್ಯವನ್ನು ಸಲ್ಲಿಸಿತು. ಮುಂದೆ ಸಾಗಿದ ಪ್ರಯಾಣ ನಿಗದಿತ ವೇಳೆಗೆ 15 ನಿಮಿಷ ತಡವಾಗಿ ಸ್ವಾಮಿ ರಾಮಾರವರ ಆಶ್ರಮವನ್ನು ತಲುಪಿತು. ಸಂದರ್ಶಕರು ದರ್ಶನಕ್ಕಾಗಿ ಕಾಯಬೇಕಾದ ಸ್ಥಳದಲ್ಲಿ ಪೂಜ್ಯ ಸ್ವಾಮಿ ರಾಮಾರವರೇ ಜ್ಞಾನಮಂದಿರದಿಂದ ಹೊರಗೆ ಬಂದು ಜಗದ್ಗುರುಗಳವರ ಆಗಮನ ವನ್ನು ನಿರೀಕ್ಷಿಸಿದುದು ಒಂದು ಅಪೂರ್ವದ ಸಂಗತಿ. ಅದೊಂದು ಅಪೂರ್ವ ಸಂಗಮ. ನಂತರ ಅತ್ಯಂತ ಪ್ರೀತಿವಾತ್ಸಲ್ಯಗಳಿಂದ ಸ್ವಾಮಿ ರಾಮಾರವರು ಶ್ರೀಗಳವರನ್ನು ಆಶ್ರಮದೊಳಕ್ಕೆ ಕರೆದೊಯ್ದು ಪರಸ್ಪರ ಕುಶಲೋಪರಿ ಪರಿಚಯ ಮಾಡಿಕೊಂಡ ನಂತರ ಶ್ರೀಗಳವರು ತಮಗೆ ಮೋಕ್ಷಮಾರ್ಗ ದರ್ಶನ ಮಾಡಿಸಬೇಕೆಂದು ಸ್ವಾಮಿ ರಾಮಾರವರಲ್ಲಿ ವಿನಂತಿಸಿದರು. ಅದಕ್ಕೆ ಸ್ವಾಮಿ ರಾಮಾರವರು ಇಷ್ಟು ಬೇಗ ಅದನ್ನೇಕೆ ಅಪೇಕ್ಷಿಸುತ್ತೀರಿ? ಇನ್ನೂ ಈ ಲೋಕಕ್ಕಾಗಿ ನಿಮ್ಮಿಂದ ಅನೇಕ ಕಾರ್ಯ ವಾಗಬೇಕಾಗಿದೆ ಎಂದಾಗ, "ಶ್ರೀಗಳವರು ನನಗೆ ನನ್ನ ಗುರು ತೋರಿದಷ್ಟು ಕಾರ್ಯವನ್ನು ಮಾಡಿದ್ದೇನೆ. ಮುಕ್ತನಾಗುವ ಬಯಕೆ ಹೆಚ್ಚುತ್ತಿದೆ. ಅದಕ್ಕಾಗಿ ಈ ನಿವೇದನೆಯನ್ನು ತಮ್ಮಲ್ಲಿಡುತ್ತಲಿರುವೆ" ಎಂದರು. ಆಗ ಸ್ವಾಮಿ ರಾಮಾರವರು "ನೀವು

ಮೋಕ್ಷವನ್ನು ಬಯಸಿದಾಗ ನನ್ನನ್ನು ನೆನಪು ಮಾಡಿಕೊಳ್ಳಿ. ಆಗ ನಾನು ನಿಮಗೆ ಕಾಣಿಸಿಕೊಳ್ಳುತ್ತೇನೆ" ಎಂದು ಹೇಳಿ ತಮ್ಮ ಆಶ್ರಮದಲ್ಲಿಯೇ ಪೂಜೆ, ಪ್ರಸಾದಗಳು ನಡೆಯಬೇಕೆಂದು ಸ್ವಾಮಿ ರಾಮಾರವರು ಕೇಳಿಕೊಂಡರು. ಅದರಂತೆ ಪೂಜೆ ಮತ್ತು ಫಲಾಹಾರವನ್ನು ಪಡೆದು ಶ್ರೀಗಳವರು ಬೆಳಗಿನ ಜಾವಕ್ಕೆ ನ್ಯೂಯಾರ್ಕ್ ತಲುಪಿದರು. ಮರುದಿನ ಜಗದ್ಗುರುಗಳವರು ಪೂಜೆಗೆ ತೆರಳಿದಾಗ ಅವರ ಮುಖದಲ್ಲಿ ಒಂದು ರೀತಿಯ ಆನಂದ ತುಂಬಿದ ಭಾವ ಪ್ರಕಟಗೊಂಡಿತ್ತು.

ವಿದೇಶದಿಂದ ಜಗದ್ಗುರುಗಳು ಭಾರತಕ್ಕೆ ಆಗಮಿಸಿದರು. ಮೈಸೂರಿಗೆ ಬಂದಾಗ ಜಿಲ್ಲೆಯ ಭಕ್ತಾದಿಗಳು ಸಹಸ್ರ ಸಂಖ್ಯೆಯಲ್ಲಿ ಸೇರಿ ಸಯ್ಯಾಜಿರಾವ್ ರಸ್ತೆಯಲ್ಲಿ ಮೆರವಣಿಗೆ ಮೂಲಕ ಜಗನ್ಮೋಹನ ಅರಮನೆಗೆ ಕರೆದೊಯ್ದು ಜಗದ್ಗುರುಗಳವರ ಯಶಸ್ವಿ ವಿದೇಶಯಾತ್ರೆಯನ್ನು ಸ್ಮರಿಸಿ ಅಭಿನಂದಿಸಿದರು. ಕೆಲವು ದಿನದ ನಂತರ ಶ್ರೀಗಳವರ ಅಮೃತ ಮಹೋತ್ಸವವನ್ನು ಅತ್ಯಂತ ವೈಭವದಿಂದ ಆಚರಿಸಲಾಯಿತು. ತದನಂತರ ದೇಹದ ಶಕ್ತಿ ಕುಂದುತ್ತಾ ಬಂದಿತು. ಅಮೃತೋತ್ಸವದ ಸಂದರ್ಭದಲ್ಲಿ ಶ್ರೀಗಳವರು ಭಕ್ತಸಮುದಾಯವನ್ನು ಆಶೀರ್ವದಿಸುತ್ತಾ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ್ನು ಸಂಸ್ಥಾಪಿಸಿ ಅದನ್ನು ನಾಡಿಗೆ ಅರ್ಪಿಸಿದರು. ಪರಿಷತ್‌ನ್ನು ಉದ್ಘಾಟಿಸಿದ ಸಂದರ್ಭ ಸ್ಮರಣೀಯ. ವಿದೇಶಕ್ಕೆ ತೆರಳುವ ಮುನ್ನ ಶ್ರೀಕ್ಷೇತ್ರದ ಮೂಲಗುರುಗಳ ಸನ್ನಿಧಿ ಯಲ್ಲಿ ಶುಭದಿನದಂದು ಇಂದಿನ ಜಗದ್ಗುರುಗಳವರಿಗೆ ಉಪದೇಶ ದೀಕ್ಷೆಯನ್ನು ನೀಡಿ ತಮ್ಮ ಎಲ್ಲ ಕಾರ್ಯಕ್ಷೇತ್ರದ ಹೊಣೆ ಹೊರುವ ಕಾರ್ಯದೀಕ್ಷೆಯನ್ನು ಅನುಗ್ರಹಿಸಿದರು. ಅನಂತರ ಪ್ರತಿನಿತ್ಯವೂ ಜಗದ್ಗುರುಗಳು ಪವಡಿಸುವ ವೇಳೆಗೆ ತಮ್ಮ ಉತ್ತರಾಧಿಕಾರಿಗಳಾದ ಇಂದಿನ ಜಗದ್ಗುರುಗಳು ಅವರ ಚರಣವನ್ನು ಒತ್ತುವ ಕೈಂಕರ್ಯವನ್ನು ಭಕ್ತಿಯಿಂದ ಸಾಧಿಸುತ್ತಿದ್ದರು. ಈ ಸೇವೆ ಜಗದ್ಗುರುಗಳವರಿಗೆ ಒಂದು ನೆಪ. ಆದರೆ ಇಂದಿನ ಜಗದ್ಗುರುಗಳವರಿಗೆ ಅದು ವರವಾಗಿ ಪರಿಣಮಿ ಸಿತು. ಏಕೆಂದರೆ ಆ ಸಮಯವನ್ನು ಸದುಪಯೋಗಪಡಿಸಿಕೊಂಡು ಶ್ರೀಮಠದ ಮತ್ತು ತಮ್ಮ ಎಲ್ಲ ಸಂಸ್ಥೆಗಳ ಕಾರ್ಯನಿರ್ವಹಣೆಯ ರೀತಿ ನೀತಿಗಳನ್ನು ಆತ್ಮೀಯವಾಗಿ ಬೋಧಿಸುತ್ತಿದ್ದರು. ತಮ್ಮ ಅಭಿಲಾಷೆ ಅಭಿಪ್ರಾಯಗಳನ್ನು ವಾತ್ಸಲ್ಯದಿಂದ ತಿಳಿಸುತ್ತಿದ್ದರು. ಕ್ಷಣ ಕ್ಷಣಕ್ಕೂ ಅವರಿಗೆ ಯಶಸ್ಸಿನ ಆಶೀರ್ವಾದದ ಅಮೃತಧಾರೆಯನ್ನು ಎರೆಯುತ್ತಿದ್ದರು.

ಅಮೃತ ಮಹೋತ್ಸವದ ದಿನದಂದು ಜಗದ್ಗುರುಗಳವರು ಸಿಂಹಾಸನಾರೋಹಣ ಮಾಡಿದ್ದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ್ನು ಉದ್ಘಾಟಿಸುವ ಸಲುವಾಗಿ ಜ್ಯೋತಿ ಬೆಳಗಿಸಿದರು. ಸಿಂಹಾಸನದಿಂದ ಇಳಿದು ಬರದೇ ಜ್ಯೋತಿಯನ್ನು ಬೆಳಗಿಸುವ ಮೇಣದ ಬತ್ತಿಯನ್ನು ಹಚ್ಚಿಸಿ ತಮ್ಮ ಕೈಯಲ್ಲಿ ಹಿಡಿದುಕೊಂಡು ಅದನ್ನು ತಮ್ಮ

ಉತ್ತರಾಧಿಕಾರಿಗಳ ಕೈಗಿತ್ತು ಅವರಿಂದ ಪರಂಜ್ಯೋತಿಯನ್ನು ಬೆಳಗಿಸಿದರು. ಇನ್ನು ಮುಂದೆ ಶ್ರೀಮಠದ ಕಾರ್ಯಕ್ಷೇತ್ರ ನಿಮ್ಮಿಂದಲೇ ಬೆಳಗಲಿ ಎಂಬ ಭಾವಪೂರ್ಣವಾದ ಆಶೀರ್ವಾದದ ಅಮೃತಧಾರೆ ಯನ್ನು ಎರೆದಿದ್ದರು. ಈ ಒಂದು ಭವ್ಯ ದೃಶ್ಯ ಭಕ್ತರನ್ನು ಸಂತೋಷಗೊಳಿಸಿತ್ತು.

1986ನೇ ಇಸವಿ ನವೆಂಬರ್ ಮಾಹೆಯಲ್ಲಿ ಆರೋಗ್ಯ ಸ್ಥಿತಿ ಇಳಿಮುಖವಾಗಿತ್ತು. ಔಷಧೋಪಚಾರದಲ್ಲಿದ್ದರು. ಡಿಸೆಂಬರ್ ಮೊದಲ ವಾರದಲ್ಲಿ ದೇಹಸ್ಥಿತಿ ತುಂಬಾ ಶಿಥಿಲಗೊಳ್ಳುತ್ತಾ ಬಂದಿತು. 5ನೇ ತಾರೀಖು ಸಂಜೆವರೆಗೆ ಔಷಧೋಪಚಾರ ನಡೆಯಿತು. ಉಪಚಾರ ಮುಗಿದಾಗ ಅಲ್ಲಿದ್ದ ಭಕ್ತರತ್ತ ಮಂದಹಾಸ ಬೀರಿ ಮೌನ ತಾಳಿದರು. ಎಲ್ಲರಿಗೂ ಶ್ರೀಗಳವರ ಆರೋಗ್ಯ ಸುಧಾರಿಸಿದೆ ಎಂಬ ಭಾವ ಮೂಡಿಬಂದಿತ್ತು. ಅವರ ಮನಸ್ಸು ಚಿಂತನೆಯಿಂದ ದೂರವಾಗಿತ್ತು. 6ನೇ ತಾರೀಖು ಬ್ರಾಹ್ಮಿ ಮುಹೂರ್ತದಲ್ಲಿ ಆರೋಗ್ಯ ಸ್ಥಿತಿ ಕೈಮೀರಿತು. ಜೆಎಸ್‌ಎಸ್ ಆಸ್ಪತ್ರೆಯ ಪ್ರಸಿದ್ಧ ಹೃದ್ರೋಗ ತಜ್ಞರಾಗಿದ್ದ ಡಾ. ರಾಮಶೆಟ್ಟಿಯವರು ಇತರ ವೈದ್ಯರೊಡನೆ ಚಿಕಿತ್ಸೆ ನೀಡತೊಡಗಿದ್ದರು. ಆಗ ಕೊಡುತ್ತಿದ್ದ ವೈದ್ಯಕೀಯ ಉಪಚಾರದಲ್ಲಿ ಯಾವ ಬದಲಾವಣೆ ಕಂಡುಬರುತ್ತಿರಲಿಲ್ಲ. ನೋಡಿದವರಿಗೆ ಆ ದೇಹಕ್ಕೆ ಹಿಂಸೆ ಕೊಡುವ ಉಪಚಾರ ನಡೆದಿದೆ ಎನಿಸುತ್ತಿತ್ತು. ಆ ಯಾವ ಉಪಚಾರವೂ ಅವರ ಮುಖದ ಮೇಲೆ ಸಂಕಟದ ಭಾವನೆಯನ್ನು ಮೂಡಿಸಿರಲಿಲ್ಲ. ಆ ವೇಳೆಗೆ ಜಗತ್ತಿಗೆ ಬೆಳಕು ನೀಡುವ ಸೂರ್ಯ ಉದಯಿಸತೊಡಗಿದ್ದ. ಆದರೆ ಇಲ್ಲಿ ಬಹುಜನರ ಬಾಳಿಗೆ ಬೆಳಕಾಗಿದ್ದ ಗುರುಸೂರ್ಯರು ಅಸ್ತಮಿಸಿದರು.

ಸುದ್ದಿ ಬಹುಬೇಗ ದೇಶದ ಎಲ್ಲ ಕಡೆಗೂ ಮುಟ್ಟಿತ್ತು. ಕೊನೆಯದಾಗಿ ವೈದ್ಯರು ತಮ್ಮ ಚಿಕಿತ್ಸೆಯ ವಿಧಾನಗಳನ್ನು ಮುಕ್ತಗೊಳಿಸಿ ಉಪಕರಣಗಳನ್ನು ದೇಹದಿಂದ ತೆಗೆದು ಆ ಕೊಠಡಿಯಿಂದ ನಿರ್ಗಮಿಸಿದರು. ಇಂದಿನ ಶ್ರೀಗಳವರು, ಕ್ಯಾತನಹಳ್ಳಿ ಶಿವಪ್ರಭುಸ್ವಾಮಿಗಳವರು ದುಃಖತಪ್ತರಾಗಿದ್ದರು. ಆ ಸಮಯದಲ್ಲಿ ನಾನು, ಕುಂದೂರು ಶ್ರೀಮಠದ ಶ್ರೀಗಳವರು ಮತ್ತು ಶ್ರೀಗಳವರಿಗೆ ಅನೇಕ ವರ್ಷಗಳಿಂದ ಸೇವೆಯನ್ನು ಮಾಡಿದ ಶಿವರಾಮು ಮೂರು ಜನ ಮಾತ್ರ ಒಳಗಿದ್ದೆವು. ಜಗದ್ಗುರುಗಳವರಿಗೆ ಚಿಕಿತ್ಸೆ ಪ್ರಾರಂಭವಾದ ಕ್ಷಣದಿಂದಲೂ ನಾನು ಮೃತ್ಯುಂಜಯ ಮಂತ್ರದ ಜಪ ನಡೆಸುತ್ತಾ ಅವರ ಪಾದದ ಬಳಿಯಲ್ಲಿ ನಿಂತಿದ್ದೆ. ಆ ಸಮಯದಲ್ಲಿ ಜಗದ್ಗುರುಗಳ ಶಿರಸ್ಸು ಪೂರ್ವಕ್ಕೂ, ಪಾದವು ಪಶ್ಚಿಮಕ್ಕೂ ಇತ್ತು. ವೈದ್ಯಕೀಯ ಉಪಚಾರವನ್ನು ನಡೆಸುವಾಗ ಅವರ ಬಾಯಿಗೆ ಕೊಳವೆಯೊಂದನ್ನು ಇಟ್ಟು ಅದನ್ನು ಹೊರಕ್ಕೆ ತೆಗೆದ ಕಾರಣ ಬಾಯಿ ತೆರೆದಿತ್ತು. ಆ ವೇಳೆಗೆ ಜಗದ್ಗುರುಗಳ ಆತ್ಮ ಈ ದೇಹವನ್ನು ಬಿಟ್ಟಿದೆ ಎಂದು ವೈದ್ಯರು ಘೋಷಿಸಿ ಹತ್ತು ನಿಮಿಷವಾಗಿತ್ತು. ಆ ಸಮಯದಲ್ಲಿ ಕುಂದೂರು ಮಠದ ಶ್ರೀಗಳವರು ಬಾಯಿ ಸ್ವಲ್ಪ





ತೆರೆದಿರುವುದನ್ನು ಪ್ರಸ್ತಾಪಿಸಿದರು. ಆ ಸಮಯದಲ್ಲಿ ಶಿವರಾಮು ಜಗದ್ಗುರುಗಳವರ ಎಡಭಾಗದ ಶಿರಸ್ಸಿನ ಬಳಿಗೆ ಬಂದು ನಿಂತರು. ನಾನು ಬಲಭಾಗದ ಬಳಿ ಬಂದು ಶಿರಸ್ಸಿಗೆ ಪ್ರಣಾಮ ಸಲ್ಲಿಸಿದಾಗ ಜಗದ್ಗುರುಗಳವರು ಕಣ್ಣು ತೆರೆದು ನಮ್ಮನ್ನು ವೀಕ್ಷಿಸಿದರು. ಬಲಭಾಗದ ಕಣ್ಣಿನಿಂದ ಕ್ಷಣಾರ್ಧದಲ್ಲಿ ದಿವ್ಯ ಜ್ಯೋತಿಯೊಂದು ಹೊರಬಂದು ಅಗೋಚರವಾಯಿತು. ಆ ಸತ್ಯದರ್ಶನವಾದ ಕ್ಷಣ ನಿರಂತರ ಸ್ಮರಣೆಯ ಪೂಜ್ಯ ಜಗದ್ಗುರುಗಳವರ ಆತ್ಮದರ್ಶನದ ಭಾಗ್ಯ ನನ್ನದೆಂದು ಭಾವಿಸಿದ್ದೇನೆ.

ಕೊನೆಯದಾಗಿ, ಲೋಕಕಲ್ಯಾಣಕ್ಕಾಗಿ ದೇಹವನ್ನು ದೇಗುಲವಾಗಿಸಿಕೊಂಡು ಬಹುಜನರನ್ನು ಉದ್ಧರಿಸಿದಂತಹ ದೇಹ ಜನಸಂಪರ್ಕವನ್ನು ಕಳಚಿಕೊಂಡಿತು. ಆದರೆ ಸೇವಾಕ್ರಿಯೆ ಇಂದಿಗೂ ಸಹಸ್ರಾರು ಜನಕ್ಕೆ ಅದರ ರೂಪ ದರ್ಶನ, ಸ್ಮರಣೆಗಳ ಸೌಭಾಗ್ಯವನ್ನು ಕರುಣಿಸುತ್ತಿದೆ. ಆ ದೇಹದೇಗುಲದಲ್ಲಿ ಎಪ್ಪತ್ತು ಸಂವತ್ಸರಗಳ ಕಾಲ ವಿರಾಜಮಾನವಾಗಿ ಬೆಳಗಿದ ಜೀವದೇವನಿಗೆ ಪ್ರಣಾಮ.

□

## ರಾಜೇಂದ್ರ ಶ್ರೀವಾಣಿ

- ಮಹಾನುಭಾವರ ಮಾರ್ಗಗಳು ಬೇರೆಬೇರೆಯಾಗಿದ್ದರೂ ಗುರಿ ಒಂದೇ, ಅದುವೇ ಪರಮಾತ್ಮನ ಸಾಕ್ಷಾತ್ಕಾರ.
- ನಾನು ಮಾಡುತ್ತೇನೆ, ನನ್ನಿಂದಾಯಿತು, ನನ್ನ ಸ್ವ ಶಕ್ತಿಯಿಂದ ಎಲ್ಲಾ ಸಾಧಿಸುತ್ತೇನೆ ಎನ್ನುವ ಹಮ್ಮು ಬಿಮ್ಮು ಬಿಡಬೇಕು.
- ಮನುಷ್ಯನ ಜನ್ಮ ದೊಡ್ಡದು, ಇಲ್ಲಿ ಮೇಲು-ಕೀಳು ಎಂಬ ಭೇದಭಾವನೆಯಿಲ್ಲ.



# 'ದಾಸೋಹ'ದ ಅರ್ಥಕ್ಕೆ ಅನ್ವರ್ಥ

ಡಾ. ಎಂ. ಚಿದಾನಂದಮೂರ್ತಿ

ನನ್ನ ಶಿವಮೊಗ್ಗ-ದಾವಣಗೆರೆ ಪ್ರದೇಶದ ಜನರು ಪೂಜ್ಯ ಮಠಾಧೀಶರನ್ನು "ಸ್ವಾಮಿಗಳು" ಎಂದು ಕರೆಯುತ್ತಿದ್ದರೆ, ಮೈಸೂರು ಪ್ರದೇಶದ ಜನರು "ಬುದ್ಧಿಯವರು" (ಬುದ್ಧ್ಯೋರು) ಎಂದು ಕರೆಯುತ್ತಿದ್ದುದು 1950ರಲ್ಲಿ ಮೈಸೂರಿಗೆ ವಿದ್ಯಾರ್ಥಿಯಾಗಿ ಹೋಗಿ ಸುತ್ತೂರು ಉಚಿತ ವಿದ್ಯಾರ್ಥಿನಿಲಯ ಸೇರಿದ್ದ ನನಗೆ ವಿಲಕ್ಷಣವಾಗಿ ಕಂಡಿತ್ತು. ಅಂದು ಶ್ರೀ ಸುತ್ತೂರು ಮಹಾ ಸಂಸ್ಥಾನದ ಪೀಠಾಧ್ಯಕ್ಷರಾಗಿದ್ದ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, "ದೊಡ್ಡ ಬುದ್ಧಿ"ಯವರು ನಮ್ಮನ್ನು, ಹುಡುಗರನ್ನು ಬಹು ಪ್ರೀತಿಯಿಂದ ಕಂಡು ಬೆಳೆಸಿದರೆಂಬುದು ನನ್ನ ನೆನಪಿನ ಗಣಿಯ ಅನರ್ಘ್ಯರತ್ನಗಳ ಲ್ಲೊಂದು. "ಬುದ್ಧಿಯವರು" ಬಹು ಉಚಿತವಾದ ಮಾತು : ಸಮಾಜಕ್ಕೆ ಮಾರ್ಗದರ್ಶನ ವಾಗಬಲ್ಲ ಬದುಕನ್ನು ಬದುಕಿ ಸಾಮಾನ್ಯರಿಗೆ ಬುದ್ಧಿ ಕಲಿಸಬೇಕಾದವರು ಪೂಜ್ಯ ಸ್ವಾಮಿಗಳು ತಾನೇ! ಆ ಅರ್ಥದಲ್ಲಿ ಅವರು ನಿಜವಾದ "ಬುದ್ಧಿಯವರು", "ದೊಡ್ಡ ಬುದ್ಧಿಯವರು" ("ದೊಡ್ಡ ಬುದ್ಧ್ಯೋರು").

ವೀರಶೈವ ಪರಿಭಾಷೆಯಲ್ಲಿ "ದಾಸೋಹ" ಪದಕ್ಕಿರುವ ನಿಜವಾದ ಅರ್ಥವನ್ನು ಬಹಳ ಜನ ಅರಿಯರು. "ಶಿವೋಹಂ", "ಸೋಹಂ" : "ನಾನು ಶಿವನೇ ಆಗಿದ್ದೇನೆ", "ಅವನೇ, ಅದೇ, ಆ ಪರವಸ್ತುವೇ ಆಗಿದ್ದೇನೆ" ಎಂಬುದು ಆ ಪದಗಳಿಗಿರುವ ಅರ್ಥ ; ಅದು ಅದ್ವೈತದ ಸ್ಥಿತಿಯನ್ನು ಧ್ವನಿಸುವ ಪರಿಭಾಷೆ. ಆ ಪದಗಳಿಗೆ ಪರ್ಯಾಯವಾದುವಲ್ಲ, ಆ ಪದಗಳ ಸಾಮ್ಯದ ಮೇಲೆ ಹುಟ್ಟಿಕೊಂಡ ಪದ. 'ದಾಸೋಹ'. ದಾಸೋಹ ಎಂದರೆ ಜನಪ್ರಿಯಾರ್ಥದಲ್ಲಿ ಹಲವು ಜನರಿಗೆ ಊಟಕ್ಕೆ ಹಾಕುವುದು, ಅನ್ನವನ್ನು ನೀಡುವುದು ಎಂದೇ ತಾನೇ ! 'ದಾನ'ಕ್ಕೆ ಪರ್ಯಾಯವಾಗಿ ಹುಟ್ಟಿಕೊಂಡ ಪದ ಅದು ಎಂದರೆ ತಪ್ಪಿಲ್ಲ.

ನೂರಾರು ಜನಕ್ಕೆ ಅನ್ನವನ್ನು ನೀಡುವಲ್ಲಿ ಎರಡು ಸ್ಪಷ್ಟ ಪಂಗಡಗಳಿವೆ : ಒಂದು, ದಾನ ಮಾಡುವವನು ; ಮತ್ತೊಂದು, ದಾನ ಸ್ವೀಕರಿಸುವವರು. ಒಂದು, ನೀಡುವ ಕೈ; ಇನ್ನೊಂದು, ಬೇಡುವ ಕೈ. ನೀಡುವವನಿಗೆ ತಾನು ಮೇಲು ಎಂಬ, ಸ್ವೀಕರಿಸುವವನಿಗೆ ಕೀಳು ಎಂಬ ಭಾವನೆ ಇಲ್ಲದಿದ್ದರೂ 'ಕೆಳ' ಎಂಬ ಭಾವನೆ ಇರುತ್ತದೆ; ಸೂಕ್ಷ್ಮವಾಗಿ ಯಾದರೂ ಇರುತ್ತದೆ. ಕೊಡುವವನು ಶ್ರೀಮಂತ, ಸ್ವೀಕರಿಸುವವನು ಬಡವ ಎಂಬುದು



ಸ್ಪಷ್ಟ. ಆದ್ದರಿಂದ ದಾನಕ್ರಿಯೆಯಲ್ಲಿ ಈ ತರತಮ ಭಾವನೆಯನ್ನು ಸಾಮಾನ್ಯವಾಗಿ ಕಾಣಬಹುದು. ಒಂದು, ನೀಡುವ ಮೇಲುಗೈ; ಇನ್ನೊಂದು, ಸ್ವೀಕರಿಸುವ ಕೆಳಗೈ.

ದಾಸೋಹದಲ್ಲಿಯೂ ಕೊಡುವವರು, ಸ್ವೀಕರಿಸುವವರು ಇದ್ದೇ ಇರುತ್ತಾರೆ. ಆದರೆ ದಾಸೋಹದ ಮೂಲ ಪರಿಕಲ್ಪನೆಯ ಪ್ರಕಾರ, ಯಾವನು ದಾಸೋಹ ನಡೆಸುವನೋ ಅವನು ತಾನು ದಾಸ – "ದಾಸೋಹಂ" – ನಾನು ದಾಸನೆಂದೇ ಭಾವಿಸಬೇಕು. ದಾಸೋಹದ ನೆಪದಲ್ಲಿ ಅನ್ನಸಂತರ್ಪಣೆಯನ್ನು ಮಾಡುತ್ತಿರುವ ಅವನು ಆ ಅನ್ನಸಂತರ್ಪಣೆಯಲ್ಲಿ ಭಾಗಿಯಾಗಲು ಬಂದಿರುವವರೇ ನಿಜವಾದ ಯಜಮಾನರು, ತಾನು ಅವರ ದಾಸನೆಂಬ ಭಾವನೆ ಇರಬೇಕು. ತಾನು ಕರುಣೆಯಿಂದ ಅನ್ನ ನೀಡುತ್ತಿಲ್ಲ, ತನ್ನ ಕೈಯ ಅನ್ನವನ್ನು ಸ್ವೀಕರಿಸಲು ಬಂದಿರುವ ಜನರು ತನ್ನ ಮೇಲೆ ಕರುಣೆ ಇಟ್ಟು ಬಂದಿರುವವರು ಎಂಬ ವಿನೀತ ಭಾವನೆ ಅವನಲ್ಲಿರಬೇಕು. ತಾನು ಕೊಟ್ಟ ಅನ್ನಕ್ಕಿಂತ ಅವರ ಕೃಪೆ ಕರುಣೆ ದೊಡ್ಡದು ಎಂದೇ ಅವನು ಭಾವಿಸುತ್ತಾನೆ. ದಾನಕ್ರಿಯೆಯ ಪಾತ್ರಧಾರಿಗಳು ದಾಸೋಹಕ್ರಿಯೆಯಲ್ಲಿ ತಮ್ಮ ಪಾತ್ರಗಳನ್ನು ಬದಲಾಯಿಸಿಕೊಳ್ಳುತ್ತಾರೆ. ತನ್ನ ದಾಸೋಹಕ್ಕೆ ಬಂದಿರುವ ಜನರೆಲ್ಲ ಶಿವಸ್ವರೂಪಿಗಳೆಂದೇ ನಿಜವಾದ ದಾಸೋಹಿಯ ಭಾವನೆ.

ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಆ ಅರ್ಥದಲ್ಲಿ ನಿಜವಾದ ದಾಸೋಹಿಗಳು. ಅವರು ವಿದ್ಯಾರ್ಥಿನಿಲಯದಲ್ಲಿ ನೀಡುತ್ತಿದ್ದ ಆಹಾರವನ್ನು ನಾವು ಸ್ವೀಕರಿಸಿ ಕೃತಜ್ಞರಾಗುತ್ತಿದ್ದರೆ, ತಮ್ಮ ವಿದ್ಯಾರ್ಥಿನಿಲಯಕ್ಕೆ ಬಂದು ಊಟ ಮಾಡುತ್ತಿದ್ದ ನಾವು ತಮ್ಮ ಮೇಲೆ ಕರುಣೆಯಿಟ್ಟು ಬಂದವರೆಂದೇ ಅವರು ಮನಸ್ಸಿನ ಆಳದಲ್ಲಿ ಭಾವಿಸುತ್ತಿದ್ದರೆ ಆಶ್ಚರ್ಯವಿಲ್ಲ. 'ತಾವು ನೀಡಿದವರು' ಎಂಬ ಅಹಂಕಾರದ ಭಾವನೆ ಆ ಮಹಾತ್ಮರಿಗೆ ಸುಳಿಯಲು ಸಾಧ್ಯವೇ ಇರಲಿಲ್ಲ. ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಎಲ್ಲ ದೃಷ್ಟಿಯಿಂದ ಶರಣರ "ದಾಸೋಹ" ಪರಿಕಲ್ಪನೆಯ ಪ್ರತ್ಯಕ್ಷ ಅವತಾರ. ಆ 'ದೊಡ್ ಬುದ್ಧ್ಯೋರು" ಈಗ ಇಲ್ಲ – ಅವರಿಂದ ನಾವು ದೊಡ್ಡ ಬುದ್ಧಿಯನ್ನಂತೂ ಕಲಿತೆವು.

ಇನ್ನೊಂದು ವಿಶೇಷವಾಗಿ ಗಮನಿಸಬೇಕಾದ್ದು – ಅವರು ಎಂದೂ ವೇದಿಕೆಯಿಂದ ಭಾಷಣ ಮಾಡಿದ್ದನ್ನು ನನ್ನ ಮೂರು ವರ್ಷಗಳ ಸುತ್ತೂರು ವಿದ್ಯಾರ್ಥಿನಿಲಯದ ವಾಸ್ತವ್ಯದ ಅವಧಿಯಲ್ಲಿ ಕಂಡದ್ದು, ಕೇಳಿದ್ದು ನೆನಪಿಲ್ಲ.

□



# ಮಾನವಮುಖಿಯಾದ ದೈವತ್ವ

ಡಾ. ಪ್ರಭುಶಂಕರ

**ಕೆ**ಲವರ ಮೂರ್ತಿ ಜೀವನದುದ್ದಕ್ಕೂ ನಮ್ಮ ಹೃದಯಮಂದಿರ ದಲ್ಲಿ ಚಿರಂತನವಾಗಿ, ದಶಕಗಳ ಕಾಲ, ನಂದಾದೀಪದಂತೆ ಬೆಳಕನ್ನು ಚೆಲ್ಲುತ್ತಾ ಉಳಿದಿರುತ್ತದೆ. ಮರ ಗಿಡ ಬಳ್ಳಿಗಳಿಲ್ಲದ ಕಡೆಯಲ್ಲೂ ಇದ್ದಕ್ಕಿದ್ದಂತೆ ಹೊಮ್ಮುವ ಮಲ್ಲಿಗೆಯ ಕಂಪಿನಂತೆ ಅವರ ಉಸಿರು ನಮ್ಮ ಉಸಿರಾಗುತ್ತದೆ. ಬದುಕಿನ ಯಾವುದೋ ಜಂಜಾಟದಿಂದ ನಮ್ಮ ಶ್ವಾಸೋಚ್ಛ್ವಾಸ ನಿಂತೇಹೋಯಿತು ಎಂದಾಗ ಅವರ ಅಸ್ತಿತ್ವ ನಮಗೆ ಆಮ್ಲಜನಕವಾಗಿ ಜೀವದಾನ ಮಾಡುತ್ತದೆ. ಅವರ ಔದಾರ್ಯ ನಮ್ಮ ಕಡುಲೋಭಿತನವನ್ನು ಕುಟ್ಟಿ ಪುಡಿ ಪುಡಿ ಮಾಡಿ ಅದನ್ನು ದಾನಧರ್ಮಗಳಿಗೆ ಒದಗುವ ವಜ್ರವೈಡೂರ್ಯವನ್ನಾಗಿಸುತ್ತದೆ. ದೇವಮನೋಹರವಾದವರ ಮಂದಹಾಸ ಲೌಕಿಕವಾದ ಹಿಂಸೆ, ನೋವುಗಳಿಂದ ರಕ್ತ ಸುರಿಸುವ ನಮ್ಮ ಹೃದಯ ಹಾಲು ಚೆಲ್ಲುವಂತೆ ಮಾಡುತ್ತದೆ. ಅಂಥವರು ನಮ್ಮ ಅಭವ ಬಂಧುಗಳು, ಬಾಳಿಗೊಂದು ನಂಬಿಕೆಯನ್ನು ನೀಡುವಂಥವರು; ಬಾಳಿನ ನೌಕೆಯನ್ನು ಮುಳುಗಿಸಲು ಬಂದ ಬಿರುಗಾಳಿಯನ್ನು ತಮ್ಮ ಶಿವತ್ವದಿಂದ ತಂಗಾಳಿಯನ್ನಾಗಿ ಮಾಡುವಂಥವರು. ಹೀಗೆ ನನಗೆ ಆತ್ಮೀಯರಾದವರಲ್ಲಿ ಪೂಜ್ಯಶ್ರೀ ರಾಜೇಂದ್ರ ಸ್ವಾಮಿಗಳು ಒಬ್ಬರು.

ಹಾಗೆ ನೋಡಿದರೆ ನನಗೂ ಅವರಿಗೂ ಕೊಡುವ ಪಡೆಯುವ ಯಾವ ಸಂಬಂಧವೂ ಇರಲಿಲ್ಲ. ಮಹಾರಾಜ ಕಾಲೇಜಿನಲ್ಲಿ ಮೊದಲ ವರ್ಷದ ಬಿ.ಎ. ಆನರ್ಸ್‌ಗೆ ಸೇರಿದ ನಾನು ಊಟ-ವಸತಿಗಳ ವಿಷಯಕ್ಕೆ ಏನು ಮಾಡುವುದು ಎಂದು ತಿಳಿಯದೆ ಅವರಲ್ಲಿಗೆ ನಾಲ್ಕಾರು ಬಾರಿ ಹೋಗಿದ್ದು ಉಂಟು. ಯಾವ ಉಂಟು, ಇಲ್ಲಗಳನ್ನೂ ನಿರ್ದಿಷ್ಟವಾಗಿ ಹೇಳದೆ ಮತ್ತೆ ಮತ್ತೆ ಅವರು ಓಡಾಡಿಸಿದಾಗ ನಾನು ಬೇಸರಪಟ್ಟುಕೊಂಡದ್ದೂ ಹೌದು. ಆದರೆ ಅವರು ಹಾಗೆ ಮಾಡುತ್ತಿದ್ದದ್ದು ನಿಜವಾಗಿಯೂ ಅನ್ನ-ವಸತಿಗಳ ಅವಶ್ಯಕತೆ ಇರುವ ವ್ಯಕ್ತಿಗಳನ್ನು ಕಂಡುಹಿಡಿಯುವುದಕ್ಕಾಗಿ ಎಂಬುದನ್ನು, ಅನೇಕ ವರ್ಷಗಳ ಅನಂತರ ಅವರ ಜೀವನವನ್ನು ವ್ಯಾಖ್ಯಾನಿಸಿದ ಡಾ. ತಿಪ್ಪೇರುದ್ರಸ್ವಾಮಿಯವರಿಂದ ತಿಳಿದು ನನಗಾದ ಭ್ರಾಂತಿ ದೊಡ್ಡ ಪ್ರಮಾಣದ್ದು.





ನಾನೇನೋ ನನ್ನ ದೊಡ್ಡಪ್ಪನವರ ಆರ್ಥಿಕ ನೆರವಿನಿಂದ ಮಹಾರಾಜ ಕಾಲೇಜು ಹಾಸ್ಟೆಲಿನಲ್ಲಿ ನೆಮ್ಮದಿಯಿಂದ ಕಾಲ ಕಳೆದೆ. ನನಗೆ ಸೀಟು ಕೊಡದೆ ಸ್ವಾಮೀಜಿ ದೊಡ್ಡ ಉಪಕಾರವನ್ನೇ ಮಾಡಿದರು. ಆದರೂ ರಾಜೇಂದ್ರ ಸ್ವಾಮಿಯವರ ದಾಸೋಹಕಾರ್ಯವನ್ನು, ಸಹಸ್ರಾರು ಸಹಸ್ರಾರು ವಿದ್ಯಾರ್ಥಿಗಳ ಜೀವನ ಅವರಿಂದ ರೂಪುಗೊಂಡದ್ದನ್ನು ಹತ್ತಿರದಿಂದ ಅಧ್ಯಯನ ಮಾಡುವ ನನ್ನ ಕುತೂಹಲ ದಣಿವನ್ನೇ ಕಾಣದೆ ಹೋಯಿತು. ನನಗೆ ತೀರ ಆಪ್ತರಾದ ಡಾ. ಜಿ.ಎಸ್. ಶಿವರುದ್ರಪ್ಪ, ಡಾ. ಎಂ. ಚಿದಾನಂದಮೂರ್ತಿ, ಡಾ. ಡಿ.ಎಂ. ನಂಜುಂಡಪ್ಪ ಮುಂತಾದ ಪ್ರತಿಭಾಶಾಲಿಗಳು ಸ್ವಾಮೀಜಿಯವರ ಕೃಪಾಹಸ್ತದ ನೆರಳಿನಲ್ಲಿ ಬಾಳಿ, ಅವರ ಔದಾರ್ಯದ ತಂಬಿಸಿಲಿನಲ್ಲಿ ಅರಳಿ, ನಮ್ಮ ಸಾರಸ್ವತ, ಬೌದ್ಧಿಕ ವಲಯಗಳನ್ನು ಬೆಳಗದೆ ಹೋಗಿದ್ದರೆ ಆಗುತ್ತಿದ್ದ ಅಪಾರವಾದ ನಷ್ಟವನ್ನು ನೆನೆದು ನನ್ನ ಹೃದಯ ಈಗಲೂ ಮೆಲ್ಲನೆ ಕಂಪಿಸುತ್ತದೆ. ಈ ದೃಷ್ಟಿಯಿಂದ ರಾಜೇಂದ್ರ ಸ್ವಾಮೀಜಿಯವರದ್ದು ಲೋಕದ ದುಃಖದುಮ್ಮಾನಗಳಿಗೆ ಸ್ಪಂದಿಸದ ಅಲಿಪ್ತ, ನೀರಸ, ನಿರ್ಜೀವ ವೈರಾಗ್ಯವಲ್ಲ. ಸದಾ ಲೋಕಾನುಕಂಪೆಯಿಂದ ಅನ್ಯರಿಗಾಗಿಯೇ ಮಿಡಿಯುವ, ಯಾರನ್ನು ಅಥವಾ ಯಾವುದನ್ನು ಪರಮರಸ ಎಂದು ಕರೆಯುತ್ತೇವೆಯೋ ಆ ಪರಮ ಕರುಣಾರಸದಿಂದ ಆರ್ದ್ರವಾದ, ಜೀವಮುಖಿಯಾದ ವೈರಾಗ್ಯ.

ಶ್ರೀ ಕುವೆಂಪುರವರನ್ನು ಬಿಟ್ಟರೆ ಮಹಾರಾಜ ಕಾಲೇಜಿನಲ್ಲಿ ನನಗೆ ತುಂಬ ಆತ್ಮೀಯರಾದ ಗುರುಗಳೆಂದರೆ ಶ್ರೀ ತ.ಸು. ಶಾಮರಾಯರು. ರಾಜೇಂದ್ರ ಸ್ವಾಮಿಗಳು ಅವರಿಗೆ ಮಾಡಿದ ಉಪಕಾರವನ್ನು, ಹೊತ್ತಲ್ಲದ ಹೊತ್ತಿನಲ್ಲಿ ಅವರನ್ನು ವೈಸ್‌ಚಾನ್ಸಲರ್ ಬಂಗಲೆಗೆ ಕರೆದೊಯ್ದು ಅವರ ಉದ್ಯೋಗವನ್ನು ಉಳಿಸಿಕೊಟ್ಟು ಅವರ ಬಾಳಿಗೆ ದಿಕ್ಕಾದುದನ್ನು ಶಾಮರಾಯರು ಎಷ್ಟೋ ಸಲ ಗದ್ಗದ ಧ್ವನಿಯಲ್ಲಿ ನನಗೆ ನಿರೂಪಿಸಿದ್ದಾರೆ.

ನನಗೆ ಆಪ್ತಮಿತ್ರರಾದ ಕೆ.ಸಿ. ಶಿವಪ್ಪ ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಶಿಕ್ಷಣ ಬಿಟ್ಟು ಮತ್ತೆ ಮೈಸೂರಿಗೆ ಬಂದು, ಮಹಾರಾಜ ಕಾಲೇಜಿನಲ್ಲಿ ಮೊದಲೇ ಕೊಟ್ಟಿದ್ದ ಬಿಎಸ್‌ಸಿ ಆನರ್ಸ್ ಸೀಟು ಕೈತಪ್ಪಿಹೋಗಿ, ಒಂದು ವರ್ಷದ ಉನ್ನತ ವಿದ್ಯಾಭ್ಯಾಸದ ಅವಕಾಶವನ್ನು ಕಳೆದುಕೊಳ್ಳುವುದರಲ್ಲಿದ್ದರು. ಆಗ ಪೂಜ್ಯ ಶ್ರೀಗಳವರು ಅವರನ್ನು ವೈಸ್‌ಚಾನ್ಸಲರ್ ಅವರ ಮನೆಗೆ ಕರೆದೊಯ್ದರು, ಆಗಿದ್ದ ತೊಂದರೆಯನ್ನು ತಿಳಿಸಿದರು. ಆ ಮಹನೀಯರು ಅನುಕೂಲವನ್ನು ಕಲ್ಪಿಸಿ ಈತ ಒಂದು ವರ್ಷ ಕಳೆದುಕೊಳ್ಳದಂತೆ ಮಾಡಿದರು. ಸ್ವಾಮೀಜಿಯವರ ಅಂತಃಕರಣಪೂರಿತ ಸಕಾಲಿಕ ನೆರವು ಇಂತಹ ನೂರಾರು ಉಪಕಾರಗಳಿಗೆ ಕಾರಣವಾದುದನ್ನು ನೆನೆಯುತ್ತಲೇ ನಾನು ಅನೇಕ ಬಾರಿ ರೋಮಾಂಚನವನ್ನು ಅನುಭವಿಸಿದ್ದೇನೆ.



ಶ್ರೀ ರಾಜೇಂದ್ರ ಸ್ವಾಮಿಗಳಿಗೂ ನನಗೂ ಆತ್ಮೀಯತೆ ಬೆಳೆದದ್ದು ಹೇಗೆ ಎಂಬುದನ್ನು ನೆನಪು ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಮೊದಲ ಮಗಳು ನಿವೇದಿತಾ ಹುಟ್ಟಿದಾಗ, ಅವಳು ಎರಡು ತಿಂಗಳ ಮಗುವಾಗಿದ್ದಾಗ, ಅವಳನ್ನು ತೋರಿಸಲೆಂದು ನಾನು ಮತ್ತು ನನ್ನ ಶ್ರೀಮತಿ ಡಾ. ಶಾಂತಾ ಅವರ ಬಳಿಗೆ ಹೋದೆವು. ಆಗ ಸ್ವಾಮೀಜಿ ಇದ್ದದ್ದು ಮಠ ಎಂದು ಕರೆಯಲಾಗದ ಹಳೆಯ ಮನೆಯಲ್ಲಿ. ಸ್ವಾಮೀಜಿ ಹೃದಯತುಂಬಿ ಮಗುವನ್ನು ಆಶೀರ್ವದಿಸಿದ್ದು ಮಾತ್ರವಲ್ಲ, ನಮ್ಮ ಮೂವರನ್ನು ಅಲ್ಲೇ ಇನ್ನೊಂದು ಕೊಠಡಿಗೆ ಕರೆದೊಯ್ದರು. ಅಲ್ಲಿ ಮಂತ್ರಮಹರ್ಷಿಗಳು ಎಂದು ಜನರು ಕರೆಯುತ್ತಿದ್ದ ಹಿರಿಯರಾದ ಶಿವರಾತ್ರಿ ಸ್ವಾಮಿಗಳು ಕುಳಿತು ಶಿವಪಂಚಾಕ್ಷರಿಯನ್ನು ಬರೆಯುವ ತಪಸ್ಸಿನಲ್ಲಿ ತೊಡಗಿದ್ದರು. ಬಾಗುಬೆನ್ನಿನ, ಜೀರ್ಣಕಾಯದ ಆ ತೇಜಸ್ಸಿನ ಪುಂಜವನ್ನು ಕಂಡು ನಾನು ಮುಗ್ಧನಾಗಿ ನೆಲಕ್ಕೆ ಅಂಟಿ ನಿಂತೆ. ವಿಚಾರದಿಂದ ನಿಶಿತವಾದದ್ದು ಎಂದು ನಾನು ತಿಳಿದಿದ್ದ ನನ್ನ ಮತಿ ಕೆಲವು ನಿಮಿಷಗಳ ಕಾಲ ಕೆಲಸ ಮಾಡುವುದನ್ನು ಮರೆತು ಮಣಿಯಿತು. ಅಷ್ಟೇನೂ ಆರ್ಥಿಕ ಬೆಂಬಲವಿಲ್ಲದ ರಾಜೇಂದ್ರ ಸ್ವಾಮಿಗಳು ನೂರಾರು ಜನರಿಗೆ ಊಟ ವಸತಿಗಳನ್ನು ಒದಗಿಸುವುದಕ್ಕೆ ಸಾಹಸ ಮಾಡಿದ್ದು ಹೇಗೆ ಎಂಬುದು ಫಳಾರನೆ ಹೊಳೆಯಿತು. ತಮ್ಮ ಬೆನ್ನ ಹಿಂದೆ ಈ ತಪಸ್ಸಿನ ತವನಿಧಿ ಇರುವಾಗ ಆ ಸಂಪತ್ತನ್ನು ವ್ಯವಹಾರ ಜಗತ್ತಿಗೆ ಹರಿಸುವುದಷ್ಟೇ ರಾಜೇಂದ್ರ ಸ್ವಾಮಿಯವರ ಕೆಲಸ ಎಂಬುದನ್ನು ಅರ್ಥಮಾಡಿಕೊಂಡೆ. ತಮ್ಮನ್ನು ನಂಬಿಕೊಂಡಿದ್ದ ವಿದ್ಯಾರ್ಥಿಗಳಿಗೆ ಊಟ ಒದಗಿಸಲು ಸಾಧ್ಯವಾಗದಾಗ ಸ್ವಾಮೀಜಿ ತಮ್ಮ ಚಿನ್ನದ ಕರಡಿಗೆಯನ್ನು ಅಡವಿಟ್ಟು ಆಹಾರಪದಾರ್ಥಗಳನ್ನು ತರಿಸಿದರು ಎಂಬುದನ್ನು ಮುಂದೊಮ್ಮೆ ಓದಿದಾಗ ನನಗೆ ಆಶ್ಚರ್ಯವಾಗಲಿಲ್ಲ. ಮಂತ್ರಮಹರ್ಷಿಗಳ ಕೃಪೆಯಿಂದ ಅವರಿಗೆ ಚಿನ್ನದ ಕರಡಿಗೆ ದೊರೆತಿತ್ತು ಎಂಬ ಕಾರ್ಯಕಾರಣಸಂಬಂಧ ಸ್ಪಷ್ಟವಾಯಿತು, ಅಷ್ಟೆ. ಅಷ್ಟೇ ಅಲ್ಲ, ಚಿನ್ನದ ಕರಡಿಗೆಯಿಂದ ಬಿಡುಗಡೆ ಹೊಂದಿದ ಸಂತೋಷದಲ್ಲಿ ಆ ಇಷ್ಟಲಿಂಗವು ಸ್ವಾಮೀಜಿಗೆ ಹೊನ್ನಿನ ಹೊಳೆಯನ್ನು ಹರಿಸುವ ತೀರ್ಮಾನವನ್ನೂ ಮಾಡಿರಬಹುದು!

ಸ್ವಾಮೀಜಿಯ ಮತ್ತು ನನ್ನ ಸಂಬಂಧ ಬೆಳೆಯಿತು. ಯಾರಿಗಾದರೂ ನನ್ನ ಮೂಲಕ ಏನಾದರೂ ಸಹಾಯ ದೊರೆಯಬಹುದಾಗಿದ್ದ ಸಂದರ್ಭದಲ್ಲಿ ಅವರು ನನಗೆ ಹೇಳಿ ಕಳುಹಿಸುತ್ತಿದ್ದರು. ಅಥವಾ ನಮಗೇ ಏನಾದರೂ ಅವರನ್ನು ನೋಡಬೇಕು ಎನಿಸಿದಾಗ ಅವರನ್ನು ನೋಡಲು ಹೋಗುತ್ತಿದ್ದೆವು. ನಮ್ಮ ಇಬ್ಬರು ಹೆಣ್ಣುಮಕ್ಕಳೂ ಅವರ ಎಂಜಿನಿಯರಿಂಗ್ ಕಾಲೇಜಿನಲ್ಲಿಯೇ ಶಿಕ್ಷಣ ಪಡೆದರು. ಆ ಸಂದರ್ಭದಲ್ಲಿ ಅವರು ನೀಡಿದ ನೆರವು ಚಿರಸ್ಮರಣೀಯವಾದದ್ದು.

ಅವರಿಗೊಮ್ಮೆ ತೀವ್ರವಾದ ಅನಾರೋಗ್ಯ ಉಂಟಾಗಿ ಬೆಳಗ್ಗೆ ಬೇಗ ಅವರಿಗೆ ಇಂಜೆಕ್ಷನ್ ಕೊಡಬೇಕಾಗುತ್ತಿತ್ತು. ನನ್ನ ಶ್ರೀಮತಿ ಆ ಕೆಲಸ ಮಾಡುತ್ತಿದ್ದರು. ಒಂದು ದಿನ ಸ್ವಾಮೀಜಿ ನಮ್ಮ ಮನೆಯವರನ್ನು ಕುರಿತು ಹೇಳಿದರು : "ನೀವು ನಮ್ಮನ್ನು ನೋಡಲು ಬರಬೇಕಾದರೆ ನಮ್ಮ ಆರೋಗ್ಯ ಬಿಗಡಾಯಿಸಬೇಕು ಎನ್ನಿ!" ಅವರ ಮಾತನ್ನು ಕೇಳಿ ನಮ್ಮ ಕರುಳು ಚುಳ್ ಎಂದಿತು. "ಇಲ್ಲ ಸ್ವಾಮೀಜಿ, ದಿನಾ ಬರುತ್ತೇವೆ" ಎಂದೆವು. ಹಾಗೆ ಅನೇಕ ದಿನಗಳ ಕಾಲ ಪ್ರತಿದಿನ ಅವರ ದರ್ಶನ ಪಡೆದೆವು.

1976. ನಾನು ಹೆಂಡತಿ ಮಕ್ಕಳ ಸಮೇತ ಕಾಶಿಗೆ ಎರಡು ವರ್ಷಕ್ಕೆಂದು ಹೊರಡುವ ಸಮಯ. ಪೂಜ್ಯರಿಗೆ ನಮ್ಮ ರಾಮಕೃಷ್ಣ ವಿದ್ಯಾಶಾಲೆಯನ್ನು ತೋರಿಸಬೇಕೆಂಬ ಉತ್ಸುಕತೆ ನನಗೆ. ನೋಡಬೇಕೆಂಬ ಬಯಕೆ ಅವರಿಗೆ. ಅವರನ್ನು ಅವರ ಪರಿವಾರ ಸಮೇತ – ಅದರಲ್ಲಿ ಯಾರು ಯಾರು ಇದ್ದರು ಎಂಬುದು ಈಗ ನೆನಪಿಗೆ ಬರುತ್ತಿಲ್ಲ - ವಿದ್ಯಾಶಾಲೆಯ ಆವರಣಕ್ಕೆ ಕರೆದುಕೊಂಡು ಹೋದೆ. ಆ ಸಸ್ಯಕಾಶಿಯನ್ನು ನೋಡಿ ಅವರಿಗಾದ ಆನಂದಕ್ಕೆ ಪಾರವೇ ಇರಲಿಲ್ಲ. ಜೊತೆಗೆ ಶಾಲೆಯ ಮಕ್ಕಳ ಶಿಸ್ತುಬದ್ಧ ಜೀವನ ಅವರ ಮೇಲೆ ತುಂಬ ಪರಿಣಾಮ ಬೀರಿತು. ಅಲ್ಲಿನ ಪ್ರಾರ್ಥನಾಮಂದಿರದಲ್ಲಿ ಮಕ್ಕಳನ್ನು ಉದ್ದೇಶಿಸಿ ಪುಟ್ಟ, ಆದರೆ ಹೃದಯಸ್ಪರ್ಶಿಯಾದ ಭಾಷಣ ಮಾಡಿದರು. ಆಗ ಅವರು ಹೇಳಿದ್ದು: "ಇದನ್ನೆಲ್ಲ ನೋಡಿ ನಮಗೆ ಅನ್ನಿಸುತ್ತಿದೆ. ನಾವು ಚಿಕ್ಕವರಾಗಿದ್ದು ಈ ಶಾಲೆಯಲ್ಲಿ ಸೇರಿಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ! ಆ ಭಾಗ್ಯ ನಮಗೆ ಇಲ್ಲವಲ್ಲ!"

ಸ್ವಾಮೀಜಿಯವರು ಮತ್ತು ರಾಷ್ಟ್ರಕವಿ ಕುವೆಂಪು ಅವರು ಮುಖಾಮುಖಿಯಾಗುವ ಒಂದು ಸನ್ನಿವೇಶ ಸೃಷ್ಟಿಯಾದುದಕ್ಕೆ ನಾನು ಉಪಕರಣವಾದೆ ಎಂಬುದು ಎಂದೆಂದಿಗೂ ನನಗೆ ಸಂತೋಷವನ್ನು ನೀಡುತ್ತಿದೆ. 1984 : ಶ್ರೀ ರಾಜೇಂದ್ರ ಸ್ವಾಮಿಗಳ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಶುಭ ಸಂದರ್ಭದಲ್ಲಿ ಹೊರತಂದ ಅಭಿನಂದನ ಗ್ರಂಥ "ಅರ್ಚನ" ಪ್ರಕಟಣೆಗೆ ಸಿದ್ಧವಾಗಿತ್ತು. ಅದಕ್ಕೆ ರಾಷ್ಟ್ರಕವಿ ಕುವೆಂಪು ಅವರಿಂದ ಮುನ್ನುಡಿ ಬರೆಸಲೂ, ಕುವೆಂಪು ಅವರು ಅದನ್ನು ಬಿಡುಗಡೆ ಮಾಡಲೂ ನಾನು ನಿಮಿತ್ತಮಾತ್ರನಾದೆ ಎಂಬ ಧನ್ಯತಾಭಾವ ನನ್ನದು.

ಸದಾ ಹಸನ್ಮುಖಿಯಾಗಿದ್ದ ಶ್ರೀಗಳನ್ನು ದುಃಖ ಆವರಿಸಿದ್ದ ಸಂದರ್ಭದಲ್ಲಿ ನೋಡಬೇಕಾದ ಪರಿಸ್ಥಿತಿಯೂ ಒದಗಿತು. ಅವರ ಹಿರಿಯರಾದ ಮಂತ್ರಮಹರ್ಷಿಗಳು ನಿಧನರಾಗಿದ್ದರು. ಅವರ ಕಳೇಬರವನ್ನು ನೋಡಲು ಸುತ್ತೂರಿಗೆ ಹೋಗಿದ್ದೆ. ಅಪಾರವಾದ ಜನಸ್ತೋಮ. ಮಠದಲ್ಲಿ ಮಹರ್ಷಿಗಳ ಪಾರ್ಥಿವ ಶರೀರ ಅಲಂಕೃತವಾಗಿ ಮಲಗಿತ್ತು. ಪಕ್ಕದಲ್ಲಿ ದುಃಖವೇ ರೂಪು ತಾಳಿದಂತೆ ರಾಜೇಂದ್ರ ಸ್ವಾಮಿಗಳು ಕುಳಿತಿದ್ದರು.



ಕಾಷಾಯವಸ್ತ್ರ ಅವರ ಸಹಜ ಭಾವನೆಗಳಿಗೆ ತೆರೆಯಾಗಿರಲಿಲ್ಲ. ಅವರು ಆಗ – ಸಾವಿನ ಸನ್ನಿಧಿಯಲ್ಲಿ – ಸಾಮಾನ್ಯ ಮಾನವರಂತೆ ದುಃಖಿಸುತ್ತಾ ಕುಳಿತಿದ್ದರು. ಆ ದೃಶ್ಯ ಅತ್ಯಂತ ಸಹಜವಾಗಿತ್ತು. ಸತ್ತವರು ವೃದ್ಧರು – ಸಾವು ಎಲ್ಲರಿಗೂ ಬರತಕ್ಕದ್ದು – ಇಂಥ ದಿನನಿತ್ಯದ ಬೋಧನೆಯ ಚಿಂತನೆಗಳು ಸ್ವಾಮೀಜಿಯನ್ನು ಅಮಾನವೀಯತೆಯ ಅಂಚಿಗೆ ಒಯ್ದಿರಲಿಲ್ಲ. ರಾಜೇಂದ್ರ ಸ್ವಾಮಿಗಳ ದುಃಖದಲ್ಲಿ ನಾವೂ ಭಾಗಿಗಳಾದೆವು. ಮಂತ್ರಮಹರ್ಷಿಗಳಿಗೆ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸಿದೆವು. ಕೃತಜ್ಞತೆ ಎಂದೆ. ಅದಕ್ಕೆ ವಿಶೇಷ ಕಾರಣ ಇದೆ. ರಾಜೇಂದ್ರ ಸ್ವಾಮಿಗಳು, ತಮ್ಮ ಆಧ್ಯಾತ್ಮಿಕ ತಂದೆಯಾದ ಮಂತ್ರಮಹರ್ಷಿಗಳಿಗೆ ತಿಳಿಸದೆಯೇ ಅವರ ಪರಿಸ್ಥಿತಿಯಲ್ಲಿದ್ದ ಇತರ ಭವಿಷ್ಯತ್ ಸನ್ಯಾಸಿಗಳಂತೆ ಕಾಶಿಯ ವಿದ್ವತ್ತಿನ ಕನಸಿನ ಗುಂಗಿನಲ್ಲಿ ಪಲಾಯನಪಟುಗಳಾಗಿದ್ದರು! ಅದು ತಿಳಿದ ಹಿರಿಯರು ಅವರನ್ನು ಹಿಂದಕ್ಕೆ ಕರೆತಂದರು. ಲಕ್ಷಾಂತರ ವಿದ್ಯಾರ್ಥಿಗಳ ಪುಣ್ಯ ಅವರ ಬೆಂಬಲಕ್ಕೆ ಅಶರೀರಿಯಾಗಿ ನಿಂತಿದ್ದರಿಂದ ಹಿರಿಯರ ಬಯಕೆ ಈಡೇರಿತು. ಅಸಾಧಾರಣ ಕರ್ತೃತ್ವಶಕ್ತಿಯ ರಾಜೇಂದ್ರರು ಹಿಂದಿರುಗಿ ಪೀಠವನ್ನು ಅಲಂಕರಿಸಿದರು.

ಅವರ ಅಂತ್ಯಕ್ರಿಯೆಯಲ್ಲೂ ನಾನು ಭಾಗವಹಿಸಿದ್ದೆ. ಈಗಿನ ದೇಶಿಕೇಂದ್ರ ಸ್ವಾಮಿಗಳು ಸನ್ಯಾಸಗ್ರಹಣದ ಪೂರ್ವಸ್ಥಿತಿಯಲ್ಲಿ ರಾಜೇಂದ್ರರ ಕಳೇಬರದ ಪಕ್ಕದಲ್ಲಿ ಮ್ಲಾನವದನರಾಗಿ ನಿಂತಿದ್ದರು. ಇತಿಹಾಸ ಪುನರಾವರ್ತಿಸಿತು! ಇಬ್ಬರು ಮಹಾನ್ ಸಂತರ ತಪಃಫಲ ದೇಶಿಕೇಂದ್ರ ಸ್ವಾಮಿಗಳಲ್ಲಿ ನೆಲೆಗೊಂಡು ಕರ್ನಾಟಕದ ಒಳಗೆ ಹೊರಗೆ ಅನೇಕ ವಿದ್ಯಾಕ್ಷೇತ್ರಗಳ ಹೆಬ್ಬಾಗಿಲುಗಳನ್ನು ವಿದ್ಯಾತುರರ ಪಾಲಿಗೆ ತೆರೆಯಿತು.

ಈ ಎಲ್ಲ ಘಟನೆಗಳೂ ನನ್ನ ಪಾಲಿಗೆ ಪವಾಡಗಳಂತೆ ತೋರುತ್ತಿವೆ. ಪವಾಡದಂತೆ ತೆರೆದುಕೊಂಡ ವಿದ್ಯಾಮಂದಿರಗಳ ಹೆಬ್ಬಾಗಿಲುಗಳು ಜ್ಞಾನಾಕಾಂಕ್ಷಿಗಳಿಗೆ ತೀರ್ಥಕ್ಷೇತ್ರಗಳಾಗಿ ಉಳಿಯುತ್ತವೆ!

□

## ರಾಜೇಂದ್ರ ಶ್ರೀವಾಣಿ

- ನಾವು ಮಾಡುವ ಕಾಯಕ ಶುದ್ಧವಾಗಿರಬೇಕು. ಕಾಯಕವಿಲ್ಲದವನಿಗೆ ಧರ್ಮವಿಲ್ಲ, ಧರ್ಮವಿಲ್ಲದವನಿಗೆ ದೇವರಿಲ್ಲ. ಎಲ್ಲರೂ ದುಡಿಯಬೇಕು, ಎಲ್ಲರೂ ಉಣ್ಣಬೇಕು.



# ತ್ರಿವೇಣೀ ಸಂಗಮ

**ಡಾ. ಕೆ. ಚಿದಾನಂದಗೌಡ**

**ತ್ರಿವೇಣೀ ಸಂಗಮ:** ಪರಮ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರನ್ನು 'ಮಾನವೀಯ ಪ್ರೀತಿ', 'ವಿದ್ಯಾದಾನದ ಹಂಬಲ' ಮತ್ತು 'ಧಾರ್ಮಿಕ ಜಾಗೃತಿ' ಇವುಗಳ ತ್ರಿವೇಣೀ ಸಂಗಮವೆಂದು ಕರೆದರೆ ಅದು ಉತ್ಪ್ರೇಕ್ಷೆಯಲ್ಲ. ಜೆಎಸ್‌ಎಸ್ ಮಹಾವಿದ್ಯಾಪೀಠಕ್ಕೆ ಸೇರಿದ ಇಂಜಿನಿಯರಿಂಗ್ ಕಾಲೇಜಿಗಾಗಲಿ, ವೈದ್ಯಕೀಯ ಕಾಲೇಜಿಗಾಗಲಿ ಅಥವಾ ಇನ್ನಾವುದೇ ಕಾಲೇಜಿಗಾಗಲಿ ಹೋದಾಗಲೆಲ್ಲಾ ನನಗೆ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮೀಜಿಯವರ ಪ್ರೀತ್ಯಾದರದ ನೆನಪು ಬರುತ್ತದೆ. ನೂರಾರು ವಿದ್ಯಾಸಂಸ್ಥೆ ಗಳನ್ನು ಸ್ಥಾಪಿಸಿ ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅನುಕೂಲತೆಯನ್ನು ಒದಗಿಸಲು ಕಾರಣರಾದವರು ದೂರದರ್ಶಿತ್ವ ಹಾಗೂ ಕರ್ತೃತ್ವಶಕ್ತಿ ಹೊಂದಿದ್ದ ಸ್ವಾಮೀಜಿಯವರು. ಮಾನವೀಯ ಅನುಕಂಪಕ್ಕೆ ಪೂಜ್ಯರು ಒಂದು ಜ್ವಲಂತ ಉದಾಹರಣೆಯಾಗಿದ್ದರು. ಈ ಕುರಿತು ಅವರನ್ನು ಹತ್ತಿರದಿಂದ ಬಲ್ಲ ಅನೇಕ ಮಂದಿ ಹಲವಾರು ಉದಾಹರಣೆಗಳನ್ನು ಕೊಡುತ್ತಾರೆ.

**ಮಾನವೀಯ ಅನುಕಂಪ ಮತ್ತು ಪ್ರೀತಿ:** ಒಮ್ಮೆ ಅವರು ಒಬ್ಬ ಬಡ ವಿದ್ಯಾರ್ಥಿಯನ್ನು ಕಾಲೇಜಿಗೆ ಕಳುಹಿಸಲು ತಮ್ಮ ಮುದ್ರೆಯುಂಗುರವನ್ನು ಒತ್ತೆಯಿಟ್ಟು ಹಣ ಪಡೆದು ಆ ವಿದ್ಯಾರ್ಥಿಯ ವಿದ್ಯಾಭ್ಯಾಸ ಮುಂದುವರಿಸಲು ಸಹಾಯ ಮಾಡಿದರಂತೆ.

ಅವರ ಮಾನವೀಯ ಅನುಕಂಪದ ಪರಿಧಿಯು ಮನುಷ್ಯರನ್ನು ದಾಟಿ ಇತರ ಜೀವಿಗಳನ್ನು ಒಳಗೊಳ್ಳುವಷ್ಟು ವಿಸ್ತಾರವಾಗಿದೆ ಎಂಬುದು 1970ರ ದಶಕದಲ್ಲಿ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಒಂದು ಘಟನೆಯಿಂದ ಸ್ಪಷ್ಟವಾಗುತ್ತದೆ. 1970ರ ದಶಕದಲ್ಲಿ ಪೂಜ್ಯ ಸ್ವಾಮೀಜಿಯವರು ಸಂಜೆ ಹೊತ್ತು ಒಮ್ಮೊಮ್ಮೆ ಇಂಜಿನಿಯರಿಂಗ್ ಕಾಲೇಜಿಗೆ ಬಂದು ಅದರ ಮುಂಭಾಗದಲ್ಲಿ ಆತ್ಮೀಯರ ಜೊತೆ ವಾಯುಸಂಚಾರಕ್ಕೆ ಹೋಗುವ ಪರಿಪಾಠ ಇತ್ತು. ಒಂದು ದಿನ ಅವರು ಈ ರೀತಿ ಹೋಗುತ್ತಿದ್ದಾಗ ಪ್ರಯೋಗಾಲಯದ ಒಳಗಿನಿಂದ ನಾಯಿಯೊಂದು ಕಿರಿಚುತ್ತಿರುವುದು



ಕೇಳಿಸಿತು. ಸಂಜೆಯಾಗಿದ್ದುದರಿಂದ ಪ್ರಯೋಗಾಲಯ ಮುಂಭಾಗದ ರೋಲಿಂಗ್‌ಶಟರನ್ನು ಹಾಕಿ ವಿಭಾಗದವರು ಮನೆಗೆ ಹೊರಟುಹೋಗಿದ್ದರು. ಮರುದಿನ ಬಾಗಿಲು ತೆರೆಯುವವರೆಗೂ ಆ ಬಡಪ್ರಾಣಿ ಅಲ್ಲಿಯೆ ಒಳಗೆ ಉಳಿಯುವ ಪರಿಸ್ಥಿತಿ ಇತ್ತು. ಕಾವಲುಗಾರನ ಬಳಿಯೂ ಮುಂಬಾಗಿಲಿನ ಬೀಗದ ಕೈ ಇರಲಿಲ್ಲ. ಬೇರೆ ಯಾವ ವ್ಯಕ್ತಿ ಆಗಿದ್ದರೂ ಆ ನಾಯಿ ಮರು ದಿನದವರೆಗೆ ಅಲ್ಲಿಯೇ ಬಿದ್ದಿರಲೆಂದು ತಮ್ಮ ಪಾಡಿಗೆ ತಾವು ಹೊರಟು ಹೋಗುತ್ತಿದ್ದರು. ಆದರೆ ಜೀವಾನುಕಂಪ ಇದ್ದ ಸ್ವಾಮೀಜಿಯವರು ಒಬ್ಬ ಆಳನ್ನು ಯಾರು ಬೀಗ ಹಾಕಿದ್ದರೋ ಅವರ ಮನೆಗೆ ಕಳುಹಿಸಿ ಬೀಗದಕೈ ತರಿಸಿ ಆ ಬಡಪ್ರಾಣಿಯನ್ನು ಬಂಧನದಿಂದ ಮುಕ್ತಗೊಳಿಸಿದ ಬಳಿಕವೇ ಶ್ರೀಮಠಕ್ಕೆ ಹಿಂದಿರುಗಿದರು.

ಹೀಗೆ ಅವರ ಅನುಕಂಪದ ಕುರಿತಾಗಿ ಅನೇಕ ನಿದರ್ಶನಗಳನ್ನು ಕೊಡಬಹುದು. ಕಾಲೇಜಿಗೆ ಸಂಬಂಧಿಸಿದ ಮತ್ತು ಮಹಾವಿದ್ಯಾಪೀಠಕ್ಕೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳಿಗಾಗಿ ಅವರನ್ನು ನಾನು ಭೇಟಿ ಯಾಗುವ ಸುಸಂದರ್ಭ ನನಗೆ ಒದಗಿ ಬರುತ್ತಿತ್ತು. ಪ್ರತಿ ಸಲ ಭೇಟಿ ಯಾದಾಗಲೂ ಅವರು ಅತ್ಯಂತ ವಿಶ್ವಾಸದಿಂದ, ಹಾರ್ದಿಕ ಪ್ರೀತಿಯಿಂದ ಬರಮಾಡಿಕೊಳ್ಳುತ್ತಿದ್ದರು. ನನಗೆ ನೆನಪಿರುವಂತೆ ನಾನು ಭೇಟಿಯಾದಾಗಲೆಲ್ಲ, "ಕುವೆಂಪು ಅವರು ಹೇಗಿದ್ದಾರೆ?" ಎಂದು ಅತ್ಯಂತ ಪ್ರೀತಿಯಿಂದ ಮತ್ತು ಆಸಕ್ತಿಯಿಂದ ಕುವೆಂಪು ಅವರ ಯೋಗಕ್ಷೇಮದ ಬಗ್ಗೆ ಪ್ರತಿ ಬಾರಿಯೂ ವಿಚಾರಿಸಿಕೊಳ್ಳುತ್ತಿದ್ದರು. ಆ ರೀತಿಯ ಹೃದಯವಂತಿಕೆ ಅವರದಾಗಿತ್ತು.

ಸ್ವಾಮೀಜಿಯವರು ಬಹುಮುಖ ವ್ಯಕ್ತಿತ್ವ ಮತ್ತು ವರ್ಚಸ್ಸು ಹೊಂದಿದ್ದವರು. ಅವರು ಮೊದಲನೆಯದಾಗಿ ಧಾರ್ಮಿಕ ಮಹಾಗುರುಗಳು. ಹತ್ತನೆಯ ಶತಮಾನದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಸ್ವಾಮೀಜಿಯವರಿಂದ ಸ್ಥಾಪಿಸಲ್ಪಟ್ಟ ಮಹಾಮಠದ ಗುರುಪರಂಪರೆಯಲ್ಲಿ 23 ನೆಯವರಾಗಿ ಬಂದು, ಜನರಿಗೆ ಸದ್ಧರ್ಮದ ಮತ್ತು ಸತ್ಕರ್ಮದ ಮಾರ್ಗದಲ್ಲಿ ದಾರಿ ತೋರಿದ ಉಜ್ವಲ ದಿವ್ಯಜ್ಯೋತಿಯಾಗಿದ್ದವರು.

**ವಿದ್ಯಾದಾನ:** "ಜ್ಞಾನಂ ವಿಜ್ಞಾನಸಹಿತಂ" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುತ್ತಾನೆ. ಸ್ವಾಮೀಜಿಯವರ ವರ್ಚಸ್ಸಿನ ಇನ್ನೊಂದು ಮುಖವೆಂದರೆ ಅವರಿಗಿದ್ದ ವಿದ್ಯೆ, ಶಿಕ್ಷಣ, ವಿಜ್ಞಾನ, ವೈದ್ಯಕೀಯ ವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನಗಳ ಮೇಲಣ ಅತಿಶಯವಾದ ಪ್ರೇಮ ಮತ್ತು ಹಂಬಲ. ವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನದ ಮೇಲೆ ಅವರಿಗಿರುವ ಪ್ರೇಮಕ್ಕೆ ನಿದರ್ಶನಗಳು 1963 ರಲ್ಲಿ ಸ್ಥಾಪಿತವಾದ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಮತ್ತು 1980 ರಲ್ಲಿ ಸ್ಥಾಪಿತವಾದ ಮಹಿಳಾ ತಾಂತ್ರಿಕ ವಿದ್ಯಾಲಯಗಳು ಮತ್ತು ಬಳಿಕ ಬಂದ ವೈದ್ಯಕೀಯ ವಿದ್ಯಾಲಯಗಳು.





ಸ್ವಾಮೀಜಿಯವರ ಬಹುಮುಖ ವ್ಯಕ್ತಿತ್ವದ ಮುಖ್ಯ ಮುಖಗಳಾದ ಧರ್ಮ ಮತ್ತು ಜ್ಞಾನ-ವಿಜ್ಞಾನ-ತಾಂತ್ರಿಕ ವಿಜ್ಞಾನಗಳು ಒಂದು ರಥದ ಎರಡು ಚಕ್ರಗಳಂತೆ ಪರಸ್ಪರ ಪೂರಕಗಳು. ಈಶಾವಾಸ್ಯ ಉಪನಿಷತ್ತಿನಲ್ಲಿ ಧರ್ಮ ಮತ್ತು ವಿಜ್ಞಾನ ಇವುಗಳೆರಡರ ಅವಶ್ಯಕತೆಯನ್ನು ಸಾರುವ ಸುಂದರವಾದ ಕೆಲವು ಶ್ಲೋಕಗಳು ಹೀಗಿವೆ:

'ಅಂಧಂತಮಃ ಪ್ರವಿಶ್ಯಂತಿ ಯ ಅವಿದ್ಯಾಂ ಉಪಾಸತೇ" – ಎಂದರೆ, 'ಯಾರು ಅವಿದ್ಯೆಯನ್ನು ಉಪಾಸನೆ ಮಾಡುತ್ತಾರೋ ಅವರು ಅಂಧಕಾರವನ್ನು ಪ್ರವೇಶಿಸುತ್ತಾರೆ'. ಉಪನಿಷತ್ತಿನಲ್ಲಿ ಆಧ್ಯಾತ್ಮಿಕ ವಿದ್ಯೆಗೆ ಹೊರತಾದ ಎಲ್ಲಾ ಬಗೆಯ ಇತರ ವಿದ್ಯೆಗಳನ್ನು ಎಂದರೆ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ವಿಜ್ಞಾನ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ತಾಂತ್ರಿಕ ವಿಜ್ಞಾನ, ನ್ಯಾಯಶಾಸ್ತ್ರ, ತರ್ಕಶಾಸ್ತ್ರ – ಇವುಗಳನ್ನೆಲ್ಲಾ ಅವಿದ್ಯೆಯೆಂದು ಕರೆಯುತ್ತಾರೆ. ಇದರ ಪ್ರಕಾರ, ತಾಂತ್ರಿಕ ವಿಜ್ಞಾನವೇ ಮೊದಲಾದ ಅವಿದ್ಯೆಯನ್ನು ಉಪಾಸನೆ ಮಾಡುವವನು ಅಂಧಕಾರವನ್ನು ಪ್ರವೇಶಿಸುತ್ತಾನೆ. "ತತೋ ಭೂಯ ಇವತೇ ತಮೋ ಯಾವೂ ವಿದ್ಯಾಯಾಂ ರತಾಃ" – ಎಂದರೆ, "ವಿದ್ಯೆಯೆಂದು ಕರೆಯಲ್ಪಡುವ ವಿವಿಧ ಜ್ಞಾನಗಳ ಮಜಲು ಗಳಲ್ಲೇ ನಿರತನಾದವನು ಇನ್ನೂ ಹೆಚ್ಚಿನ ಅಂಧಕಾರವನ್ನು ಪ್ರವೇಶಿಸು ತ್ತಾನೆ". ಹಾಗಾದರೆ ಯಾವುದು ಬೆಳಕಿನತ್ತ ಒಯ್ಯುತ್ತದೆ? ಅದಕ್ಕೆ ಉತ್ತರ ಇನ್ನೊಂದು ಶ್ಲೋಕದಲ್ಲಿದೆ:

"ವಿದ್ಯಾಂ ಚ ಅವಿದ್ಯಾಂ ಚ ಯಸ್ತದ್ ವೇದೋಽಭಯಂ ಸಹ, ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾ ಅಮೃತಮಶ್ನುತೇ" ಎಂದರೆ, "ಯಾರು ಅಧ್ಯಾತ್ಮ ಮೊದಲಾದ ವಿದ್ಯೆಯನ್ನು ಮತ್ತು ವಿಜ್ಞಾನ, ತಾಂತ್ರಿಕ ವಿಜ್ಞಾನ ಮೊದಲಾದ ಅವಿದ್ಯೆಯನ್ನು, ಎರಡನ್ನೂ ಉಪಾಸನೆ ಮಾಡುತ್ತಾರೋ ಅವರು ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತತ್ವವನ್ನು ಪಡೆಯುತ್ತಾರೆ."

ಅವರ ವ್ಯಕ್ತಿತ್ವದ ಇನ್ನೊಂದು ಮುಖವೆಂದರೆ ಅವರಿಗೆ ವಿಜ್ಞಾನ ಮತ್ತು ತಾಂತ್ರಿಕ ವಿಜ್ಞಾನಗಳ ಮೇಲಿದ್ದ ಅಪಾರ ಪ್ರೇಮ. ಲೋಕದಲ್ಲಿ ತಾಂತ್ರಿಕ ವಿಜ್ಞಾನದ ಅವಶ್ಯಕತೆ ಏನು ಎಂಬುದನ್ನು ಅವರು ಚೆನ್ನಾಗಿ ಮನಗಂಡಿದ್ದರು. ತಾಂತ್ರಿಕ ವಿಜ್ಞಾನವು ಯಾಕೆ ಬೇಕು? ಧರ್ಮವು ಮಾನವನಲ್ಲಿ ಅಡಗಿರುವ ದೈವತ್ವವನ್ನು ಹೆಚ್ಚೆಚ್ಚು ಪ್ರಕಟಪಡಿಸುವ ಉದ್ದೇಶ ವನ್ನು ಹೊಂದಿದೆ. ತಾಂತ್ರಿಕ ವಿಜ್ಞಾನವು ವಿಶ್ವದಲ್ಲಿ ದೇವರ ಸಾಮ್ರಾಜ್ಯವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿದೆ. ವ್ಯವಸಾಯಕ್ಕೆ ನೀರಿಲ್ಲವೆ? ಹಾಗಾದರೆ ನದಿಗೆ ಅಣೆಕಟ್ಟು ಕಟ್ಟಿ ನೀರು ಕಾಲುವೆಯಲ್ಲಿ ಹರಿಯುವಂತೆ ಮಾಡು! ಇದು ತಾಂತ್ರಿಕ ವಿಜ್ಞಾನದ ಕೆಲಸ. ನದಿಯನ್ನು ದಾಟಬೇಕಾಗಿದೆಯೆ? ಹಾಗಾದರೆ ನದಿಗೆ ಸೇತುವೆಯನ್ನು ಕಟ್ಟು? ಬೆಳಕಿಲ್ಲವೆ?



ಹಾಗಾದರೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಿ ಬೆಳಕನ್ನು ಹರಿಸು! ದೂರ ಹೋಗಬೇಕಾಗಿದೆಯೆ? ಹಾಗಾದರೆ ಮಾರ್ಗವನ್ನು ಮಾಡಿ, ಪ್ರಯಾಣಿಸಲು ವಾಹನವನ್ನು ನಿರ್ಮಿಸು! ಇವೆಲ್ಲಾ ತಾಂತ್ರಿಕ ವಿಜ್ಞಾನದ ಕೆಲಸ. ಇದನ್ನು ಪೂಜ್ಯರು ಬಹಳ ಚೆನ್ನಾಗಿ ತಿಳಿದಿದ್ದರು.

ಜನಜೀವನವನ್ನು ಸುಗಮವಾಗಿ ಮಾಡುವುದೇ ತಾಂತ್ರಿಕ ವಿಜ್ಞಾನದ ಕಾರ್ಯವಿಶೇಷ. ಅವರು ನರಕವನ್ನು ಸ್ವರ್ಗವಾಗಿ ಮಾಡಬಲ್ಲರು. ಹಾಗಾಗಿ ಯಮಧರ್ಮರಾಯ ಇಂಜಿನಿಯರುಗಳನ್ನು ನರಕಕ್ಕೆ ಕಳಿಸುವುದೇ ಇಲ್ಲವೆಂಬ ಒಂದು ರೂಪಕ ಕತೆಯಿದೆ. ಹಿಂದೊಮ್ಮೆ ಯಮಧರ್ಮರಾಯ ಒಬ್ಬ ಇಂಜಿನಿಯರನನ್ನು ಅವನು ಮಾಡಿದ ಪಾಪಕ್ಕಾಗಿ ನರಕಕ್ಕೆ ಕಳಿಸಿದನಂತೆ. ಆ ಇಂಜಿನಿಯರು ನೋಡುತ್ತಾನೆ. – ಎಲ್ಲೆಲ್ಲೂ ಕಗ್ಗತ್ತಲು; ಕೆಲವು ಕಡೆ ಪಾಪಿಗಳಿಗೆ ಚಿತ್ರಹಿಂಸೆ ಕೊಡಲು ಸದಾ ಉರಿಯುತ್ತಿರುವ ಬೆಂಕಿ; ಉಗಿ ಹೊರಸೂಸುವ ಕುದಿವ ಬಿಸಿ ಬಿಸಿ ನೀರು, ಪಾಪಿಗಳನ್ನು ಮುಳುಗಿಸಿ ಅವರಿಗೆ ಚಿತ್ರಹಿಂಸೆಯನ್ನು ಕೊಡಲು ಕೆರೆಯ ತುಂಬಾ ಮಂಜುಗಡ್ಡೆಯಷ್ಟು ತಣ್ಣಗಿನ ನೀರು. ಆ ಇಂಜಿನಿಯರ್ ಅಲ್ಲಿದ್ದ ನೀರು ಮತ್ತು ಬೆಂಕಿಗಳನ್ನು ಬಳಸಿ ಉಗಿಯನ್ನು ಉಂಟುಮಾಡಿದ. ಅದರಿಂದ ಒಂದು ಉಗಿಯಂತ್ರವನ್ನು ತಯಾರಿಸಿ ಅದಕ್ಕೆ ಒಂದು ವಿದ್ಯುಜ್ಜನಕವನ್ನು ಜೋಡಿಸಿದ. ಹೀಗೆ ಉಂಟಾದ ವಿದ್ಯುಚ್ಛಕ್ತಿಯನ್ನು ತಂತಿಯ ಮೂಲಕ ನರಕದ ಎಲ್ಲಾ ಸ್ಥಳಗಳಿಗೆ ಕಳಿಸಿ ನರಕದಲ್ಲೆಲ್ಲಾ ಬೆಳಕು ಹರಿಸಿದ. ಬಳಿಕ ತನ್ನ ತಾಂತ್ರಿಕ ವಿಜ್ಞಾನವನ್ನು ಬಳಸಿ ಕ್ರಮೇಣ ನರಕವನ್ನು ಸ್ವರ್ಗವನ್ನಾಗಿಸಿದ. ನರಕದಲ್ಲಿ ಪಾಪಿಗಳಿಗೆ ಹೇಗೆ ಶಿಕ್ಷೆ ದೊರಕುತ್ತಿದೆ ಎಂದು ನೋಡಲು ವರ್ಷಾಂತ್ಯದಲ್ಲಿ ಭಗವಂತನು ನರಕಕ್ಕೆ ಬರುತ್ತಾನೆ. ಆದರೆ ನರಕದ ಗುರುತೇ ಅವನಿಗೆ ಸಿಗುವುದಿಲ್ಲ. ಯಾಕೆಂದರೆ ನರಕದ ಬಾಗಿಲಿನಲ್ಲಿ ಪ್ರಜ್ವಲಿಸುವ ವಿದ್ಯುದ್ದೀಪಗಳು ಭಗವಂತನಿಗೆ ಸ್ವಾಗತ ಬಯಸುತ್ತಿವೆ. ಮೊದಲು ಕತ್ತಲಿನ ಹೊಂಡವಾಗಿದ್ದ ನರಕದಲ್ಲಿ ಈಗ ಬೆಳಕೇ ಬೆಳಕು! ಅವನು ಆಗತಾನೇ ಸಂದರ್ಶಿಸಿದ್ದ ಸ್ವರ್ಗಕ್ಕಿಂತಲೂ ಅದು ಮಿಗಿಲಾಗಿತ್ತು. ನರಕ ಯಾಕೆ ಹೀಗೆ ಪರಿವರ್ತನೆ ಹೊಂದಿತು ಎಂದು ಭಗವಂತ ಚಿತ್ರಗುಪ್ತನನ್ನು ಕೇಳುತ್ತಾನೆ. ಆಗ ಚಿತ್ರಗುಪ್ತ ಆ ಇಂಜಿನಿಯರನ ಕಡೆ ಕೈ ತೋರಿಸಿ, ಎಲ್ಲಾ ಅವನ ಕೆಲಸ ಎಂದು ದೂರುತ್ತಾನೆ. ಆ ಇಂಜಿನಿಯರನ ತಾಂತ್ರಿಕ ಚತುರತೆಯನ್ನು ಕಂಡು ಭಗವಂತ ಆಶ್ಚರ್ಯಪಡುತ್ತಾನೆ. ಇವನಿಂದಾಗಿ ನರಕವು ಸ್ವರ್ಗಕ್ಕಿಂತ ಹೆಚ್ಚು ಪ್ರಭಾವಯುತವಾಗಿದೆ ಎಂದು ಅವನಿಗೆ ಅನಿಸಿತು. ಹೀಗಾದರೆ ಯಮಧರ್ಮರಾಯ ಪಾಪಿಗಳಿಗಾಗಿ ಇನ್ನೊಂದು ಹೊಸ ಕಗ್ಗತ್ತಲಿನ ನರಕವನ್ನು ಸೃಷ್ಟಿಸಬೇಕಾಗುತ್ತದೆ. ಈ ಇಂಜಿನಿಯರುಗಳು ಸಮಸ್ಯೆಯನ್ನು ತಂದಿಡುವ ವ್ಯಕ್ತಿಗಳು; ಅವರನ್ನು ಎಂದೂ ನರಕಕ್ಕೆ ಕಳುಹಿಸಬೇಡ ಎಂದು ಭಗವಂತ ಚಿತ್ರಗುಪ್ತನಿಗೆ ಆಜ್ಞೆ ಮಾಡಿದ. ಅಂದಿನಿಂದ ಇಂಜಿನಿಯರುಗಳಿಗೆ ನರಕಕ್ಕೆ ಪ್ರವೇಶ ಇಲ್ಲವಾಯಿತು ಎನ್ನುತ್ತದೆ ಈ ರೂಪಕ ಕತೆ.

ಇದೊಂದು ಆಲೋಚನೆಗೆ ಅರ್ಹವಾದ ಕತೆ. ಹೀಗೆ ನರಕವನ್ನು ನಾಕವಾಗಿಸಬಲ್ಲಂತಹ ತಾಂತ್ರಿಕ ಜ್ಞಾನದ ಅಗತ್ಯತೆಯನ್ನು ಶ್ರೀ ಸ್ವಾಮೀಜಿಯವರು ಮನಗಂಡಿದ್ದರು. ಅವರು 1963ರಲ್ಲಿ ಸ್ಥಾಪಿಸಿದ ಶ್ರೀ ಜಯ ಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಇಂದು ಕರ್ನಾಟಕದಲ್ಲೆಲ್ಲಾ ಪ್ರಸಿದ್ಧವಾದ ತಾಂತ್ರಿಕ ಕಾಲೇಜು ಎನಿಸಿದೆ. ಅದರ ಸರ್ವತೋಮುಖ ಬೆಳವಣಿಗೆಗೆ ಶ್ರೀ ಸ್ವಾಮೀಜಿಯವರು ಹಿಂದೆ ನೀಡಿದ್ದ ಮಾರ್ಗದರ್ಶನ ಕಾರಣವಾಗಿದೆ. ತಾಂತ್ರಿಕ ವಿಜ್ಞಾನದ ಲಾಭವು ಸ್ತ್ರೀಯರಿಗೂ ಸರಿಸಮವಾಗಿ ಸಿಗಬೇಕೆಂಬ ಉದ್ದೇಶದಿಂದ ಅವರು ಮಹಿಳಾ ಪಾಲಿಟೆಕ್ನಿಕ್ ವಿದ್ಯಾಲಯವನ್ನು ಕೂಡ ಸಂಸ್ಥಾಪಿಸಿದ್ದಾರೆ. ಇಂತಹ ತಾಂತ್ರಿಕ ವಿದ್ಯಾಲಯಗಳ ವ್ಯಾಪ್ತಿಯು ವಿಶಾಲವಾದ ಆಲದ ಮರದಂತೆ ಇತರ ರಾಜ್ಯಗಳಲ್ಲಲ್ಲದೆ, ಹೊರದೇಶಗಳಲ್ಲೂ ತನ್ನ ಬಿಳಲುಗಳನ್ನು ಇಳಿಸಿ ಬೇರೂರಿದೆ. ಇದೇ ರೀತಿ ವೈದ್ಯಕೀಯ ವಿದ್ಯಾಲಯದ ಮಹಾವೃಕ್ಷವು ಹಲವಾರು ಬಲಿಷ್ಠ ಕೊಂಬೆರೆಂಬೆಗಳೊಡನೆ ಇಂದು ಬೆಳೆದು ನಿಂತಿದೆ.

**ಧಾರ್ಮಿಕ ಜಾಗೃತಿ:** ಸ್ವಾಮೀಜಿಯವರು ಪ್ರಥಮವಾಗಿ ಧಾರ್ಮಿಕ ಜಗದ್ಗುರುಗಳು. ಎಲ್ಲರನ್ನೂ ಧರ್ಮದ ಮಾರ್ಗದಲ್ಲಿ ನಡೆಸಿ ಸಮಾಜ ಸುಧಾರಣೆಯನ್ನು ಮಾಡುವ ಮಹಾಮಹಿಮರು. ಧರ್ಮದ ಮುಖ್ಯ ಉದ್ದೇಶವೇನು? ಜನರು ನಿತ್ಯವೂ ದೇವಸ್ಥಾನಕ್ಕೆ ಹೋಗುವಂತೆ ಮಾಡುವುದೆ? ಜನರು ಶಾಸ್ತ್ರೋಕ್ತವಾಗಿ ಜಪ, ಧ್ಯಾನಗಳನ್ನು ಮಾಡುವಂತೆ ಪ್ರೇರೇಪಿಸುವುದೆ? ನಮ್ಮ ಪುರಾಣದ ಕತೆಗಳನ್ನು ತೆಗೆದುಕೊಂಡರೆ, ಧರ್ಮದ ನಿಜವಾದ ಉದ್ದೇಶ ಇದಲ್ಲವೆಂದು ತೋರುತ್ತದೆ. ಉದಾಹರಣೆಗೆ ರಾವಣ, ಕುಂಭಕರ್ಣ, ಭಸ್ಮಾಸುರ, ಮಹಿಷಾಸುರ ಇವರ ಉದಾಹರಣೆ ಗಮನಿಸೋಣ. ರಾವಣ ಮಹಾ ದೈವಭಕ್ತ; ನಿತ್ಯವೂ ದೇವರ ಪೂಜೆ ಮಾಡಿಕೊಂಡಿದ್ದವನು; ತನ್ನ ಧ್ಯಾನ ತಪಸ್ಸುಗಳಿಂದ ಶಿವನನ್ನು ಪ್ರತ್ಯಕ್ಷ ವಾಗಿಸಿಕೊಂಡವನು. ಈ ದೃಷ್ಟಿಯಿಂದ ಅವನು ನಮ್ಮಲ್ಲಿ ಪ್ರಾಯಶಃ ಎಲ್ಲರಿಗಿಂತಲೂ ಹೆಚ್ಚಿನ ದೈವಭಕ್ತ. ಹೀಗಿದ್ದರೂ ನಮ್ಮನ್ನು ಯಾರಾ ದರೂ 'ರಾವಣ' ಎಂದು ಕರೆದರೆ ನಮಗೆ ನಖಶಿಖಾಂತ ಕೋಪ ಬಂದೀತು. ಪ್ರಾಯಶಃ ರಾವಣ ಎಂದು ಕರೆದರೆ ಯಾರೂ ಹಾಗೆ ಕರೆಯುವುದನ್ನು ಮೆಚ್ಚಲಾರರು. ಇದಕ್ಕೆ ಕಾರಣವೇನು? ರಾವಣ ದೇವತಾಧ್ಯಾನ ಮಾಡಿ ದೇವರನ್ನು ಮೆಚ್ಚಿಸಿರಬಹುದು. ಆದರೆ ಅವನು ತನ್ನಲ್ಲಿರುವ ದೇವತ್ವವನ್ನು ಪ್ರಕಟಿಸದೆ ತನ್ನಲ್ಲಿರುವ ರಾಕ್ಷಸತ್ವವನ್ನು ಪ್ರಕಟಪಡಿಸಿದನು. ಹಾಗಾಗಿ ಅವನನ್ನು ನಿಜವಾದ ಧಾರ್ಮಿಕ ಎಂದು ಕರೆಯಲಾಗುವುದಿಲ್ಲ.

ದೈವತ್ವವು ಪ್ರಕಟವಾಗುವ ಕುರಿತಾಗಿ ಸ್ವಾಮಿ ವಿವೇಕಾನಂದರ ಅರ್ಥಗರ್ಭಿತವಾದ ಒಂದು ಸೂಕ್ತಿ ಹೀಗಿದೆ: "ಪ್ರತಿಯೊಂದು ಆತ್ಮದಲ್ಲೂ ದಿವ್ಯತೆಯು ಅಂತಸ್ಥವಾಗಿದೆ. ಆಂತರಿಕ

ಮತ್ತು ಬಾಹ್ಯ ಪ್ರಕೃತಿಯನ್ನು ನಿಯಂತ್ರಿಸುವುದರ ಮೂಲಕ ಆಂತರ್ಯದಲ್ಲಿರುವ ಈ ದೈವತ್ವವನ್ನು ಪ್ರಕಟಪಡಿಸುವುದೇ ಧರ್ಮದ ಉದ್ದೇಶ. ಇದನ್ನು ಕಾಯಕ, ಪೂಜೆ, ಧ್ಯಾನ, ಜ್ಞಾನ ಇವುಗಳಲ್ಲಿ ಒಂದರಿಂದ ಅಥವಾ ಎಲ್ಲದರಿಂದ ಸಾಧಿಸಿ. ಆದರೆ ಯಾವುದಕ್ಕೂ ದಾಸರಾಗದಿರಿ. ಇದುವೇ ಧರ್ಮದ ತಿರುಳು. ತತ್ವಗಳು, ಕ್ರಿಯಾವಿಧಿಗಳು, ಮಂದಿರಗಳು, ಮೂರ್ತಿಗಳು, ಪವಿತ್ರಗ್ರಂಥ ಮೊದಲಾದುವು ಗೌಣ".

ಹೀಗಾಗಿ ಧರ್ಮದ ಮುಖ್ಯ ಉದ್ದೇಶವೆಂದರೆ ಮನುಷ್ಯನಲ್ಲಿ ಅಡಗಿರುವ ದೈವತ್ವವನ್ನು ಪ್ರಕಟಪಡಿಸುವುದು. ಸ್ವಾಮೀಜಿಯವರು ಧರ್ಮದ ನಿಜವಾದ ಅರ್ಥ ಮತ್ತು ಉದ್ದೇಶಗಳನ್ನು ಅರಿತಿದ್ದು, ಜನರಲ್ಲಿ ಅಡಗಿರುವ ದೈವತ್ವದ ವಿಕಾಸಕ್ಕೆ ನೆರವಾಗಿರುವ ಮಹಿಮರು. ಅವರು ದೈವಿಕ ಪುರುಷರು. ಅವರಲ್ಲಿ ದೈವತ್ವವು ಎಲ್ಲಾ ಆಯಾಮಗಳಲ್ಲೂ ವಿಕಾಸಹೊಂದಿತ್ತು. ಈಗಾಗಲೇ ಬೆಳಗುತ್ತಿರುವ ಒಂದು ದೀಪವು ಇನ್ನೊಂದು ದೀಪವನ್ನು ಬೆಳಗುವಂತೆ ಅವರು ಜನರಲ್ಲಿರುವ ದೈವತ್ವವು ಹೆಚ್ಚುಹೆಚ್ಚಾಗಿ ಪ್ರಕಾಶಮಾನವಾಗುವಂತೆ ಮಾಡುತ್ತಿದ್ದರು. ಇದು ಅವರ ವ್ಯಕ್ತಿತ್ವದ ವೈಶಿಷ್ಟ್ಯಪೂರ್ಣವಾದ ಮುಖ.

'ಮಂಕುತಿಮ್ಮನ ಕಗ್ಗ'ದಲ್ಲಿ ಒಂದು ಮಾತು ಬರುತ್ತದೆ: "ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು" ಎಂದು. ಜನಜೀವನ ವೆಂಬ ಮರಕ್ಕೆ ಧರ್ಮವೆಂಬುದು ಬೇರು ಇದ್ದಂತೆ. ವಿಜ್ಞಾನ, ತಾಂತ್ರಿಕ ವಿಜ್ಞಾನಗಳು ಹೊಸ ಚಿಗುರುಗಳಿದ್ದಂತೆ. ಚಿಗುರು ಮರಕ್ಕೆ ಶೋಭೆ ಕೊಡುವುದಲ್ಲದೆ ಸೂರ್ಯನ ಬೆಳಕನ್ನು ಹೀರಿ ಮರ ಬೆಳೆಯಲು ನೆರವಾಗುವುದು. "ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜಸವು ಜನಜೀವನಕೆ ಮಂಕುತಿಮ್ಮ" – ಎಂದರೆ "ಋಷಿವಾಕ್ಯಗಳಾದ ಆಧ್ಯಾತ್ಮಿಕ ಪರಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನಗಳು ಒಟ್ಟಾದಾಗ ಜನಜೀವನಕ್ಕೆ ಶ್ರೇಯಸ್ಸು ಉಂಟಾಗುವುದು."

ಸ್ವಾಮೀಜಿಯವರು ಸ್ಥಾಪಿಸಿದ ಜೆಎಸ್‌ಎಸ್ ವಿದ್ಯಾಸಂಸ್ಥೆಗಳಲ್ಲಿ ಋಷಿವಾಕ್ಯ, ವಿಜ್ಞಾನ, ತಂತ್ರಜ್ಞಾನಗಳ ಸಾಮರಸ್ಯದ ತ್ರಿವೇಣೀ ಸಂಗಮವನ್ನು ನಾವು ನೋಡುತ್ತಿದ್ದೇವೆ. ಇದಕ್ಕೆಲ್ಲಾ ಮೂಲಸ್ರೋತವಾದುದು ಪೂಜ್ಯ ಸ್ವಾಮೀಜಿಯವರ ವ್ಯಕ್ತಿತ್ವದ ತ್ರಿವೇಣೀಸಂಗಮಗಳಾದ 'ಮಾನವೀಯ ಪ್ರೀತಿ', 'ವಿದ್ಯಾದಾನದ ಹಂಬಲ' ಮತ್ತು 'ಧಾರ್ಮಿಕ ಜಾಗೃತಿ'.

□



# ಇದ್ದರೊಬ್ಬರು ಇಂಥ ದಿವ್ಯಚೇತನರು

**ಕೆ.ಸಿ. ಶಿವಪ್ಪ**

**ಲೋ**ಕದ ಜನರು ಸಾಮಾನ್ಯವಾಗಿ ವೈಯಕ್ತಿಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳು ವುದಕ್ಕಷ್ಟೆ ತಮ್ಮ ಜೀವಿತಕಾಲವನ್ನು ಮೀಸಲಾಗಿಡುತ್ತಾರೆ. ಆದರೆ ಇದಕ್ಕೆ ಅಪವಾದವಾಗಿ ಕೆಲವರಿರುತ್ತಾರೆ. ಪರಹಿತ ಚಿಂತನೆ ಹಾಗೂ ಸಮುದಾಯ ಉನ್ನತಿ ಅವರ ಬಾಳಿನ ಉದ್ದೇಶ. ಇಂತಹ ಪ್ರಾತಃಸ್ಮರಣೀಯ ಮಹನೀಯರ ಸಾಲಿಗೆ ಸೇರಿದ ಶ್ರೇಯಸ್ಸು ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರಿಗೆ ಸಲ್ಲುತ್ತದೆ.

ಮಾನವಜನಾಂಗದ ಸೇವೆಯಲ್ಲಿ ನಿರತವಾಗಿರುವ ಮೈಸೂರು ಜಿಲ್ಲೆಯ ಸುತ್ತೂರು ಶ್ರೀಮಠಕ್ಕೆ ಒಂದು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಕಪಿಲಾತೀರದಲ್ಲಿರುವ ಈ ಮಠದ ಸಂತಪರಂಪರೆಯ ಇಪ್ಪತ್ತಮೂರನೆಯ ಪೀಠಾಧಿಪತಿಗಳು ರಾಜೇಂದ್ರ ಶ್ರೀಗಳವರು.

1916ರ ಆಗಸ್ಟ್ 29 ರಂದು ಜನಿಸಿದ ರಾಜೇಂದ್ರರಿಗೆ 1928 ರಲ್ಲಿ ಪೀಠಾರೋಹಣ ವಾದಾಗ ವಯಸ್ಸು 12. ಅನಂತರ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ಮೈಸೂರಿನಲ್ಲಿ ವಾಸ್ತವ್ಯ; ಬಸವರಾಜ ಶಾಸ್ತ್ರಿಗಳವರಲ್ಲಿ ಶಿಕ್ಷಣ ಮುಂದುವರಿಕೆ.

ಕಾಶಿಯಲ್ಲಿದ್ದ ಮೈಸೂರಿನ ಗವಿಮಠದ ಶ್ರೀ ಗೌರೀಶಂಕರ ಸ್ವಾಮಿಗಳ ಧಾರ್ಮಿಕ-ಶೈಕ್ಷಣಿಕ ಪ್ರತಿಭೆಗೆ ಮಾರುಹೋಗಿದ್ದ ತರುಣ ರಾಜೇಂದ್ರರಿಗೆ ತಾನೂ ಅವರಂತಾಗಬೇಕೆಂಬ ಉತ್ಕಟ ಹಂಬಲ. ಅಧ್ಯಯನಕ್ಕಾಗಿ ಯಾರಿಗೂ ಹೇಳದೆ ಕೇಳದೆ ರೈಲು ಹತ್ತಿ ಕಾಶಿಯತ್ತ ಪಯಣ. ಅಲ್ಲಿ ಗೌರೀಶಂಕರರ ಹಿತವಚನ ಹೀಗಿತ್ತು: "ಕಾಶಿಯಲ್ಲಿದ್ದುಕೊಂಡು ನೀವು ಘನ ವಿದ್ವಾಂಸರಾಗಬಹುದು. ಆದರೆ ಸಾವಿರಾರು ಮಂದಿಗೆ ನೆರವಾಗಬಲ್ಲ ಅಂತಶ್ಶಕ್ತಿ ನಿಮ್ಮಲ್ಲಿದೆ. ಸಮಾಜವನ್ನು ಮತ್ತಷ್ಟು ಉತ್ತಮಪಡಿಸಬಲ್ಲ ಸಾಮರ್ಥ್ಯ ನಿಮ್ಮಲ್ಲಿದೆ. ಅತ್ತ ಹೆಜ್ಜೆ ಇಡಿ." ಈ ಮಾತಿಗೆ ಮಣಿದು ರಾಜೇಂದ್ರರು ಮತ್ತೆ ಮೈಸೂರಿಗೆ ಹಿಂದಿರುಗಿದರು. ಮುಂದೆ ಆದದ್ದೆಲ್ಲ ಚರಿತ್ರೆಯ ಸುವರ್ಣ ಅಧ್ಯಾಯದ ಒಂದು ಭಾಗ.

ತಾವು ವಾಸವಾಗಿದ್ದ ಮೈಸೂರಿನ ವಾಣಿವಿಲಾಸ ರಸ್ತೆಯ ಸಂಸ್ಕೃತ ಪಾಠಶಾಲೆಯ ಮುಂದಿನ ಅರಳಿಕಟ್ಟೆಯ ಮೇಲೆ ಚಿಂದಿಬಟ್ಟೆಯ ತಬ್ಬಲಿ ಹುಡುಗನೊಬ್ಬ ರಾಜೇಂದ್ರರ ಕಣ್ಣಿಗೆ ಬೀಳುತ್ತಾನೆ. ಈ ಅಳಲಿನ ನೋಟ ರಾಜೇಂದ್ರರ ಬದುಕಿನ ತಿರುವು ಘಟನೆಯಾಗುತ್ತದೆ. ಆ ಕ್ಷಣದಿಂದ ನಾಡಿನ ಪುಣ್ಯೋದಯವೆಂಬಂತೆ ಇವರ ಶಿವಸಾಹಸಯಾತ್ರೆ ಪ್ರಾರಂಭವಾಗುತ್ತದೆ. ಯಾರ ಬಾಳಿನಲ್ಲಿ ಯಾವಾಗ ಯಾವ ಸನ್ನಿವೇಶ ವರದಾನವಾಗಿ ಪರಿಣಮಿಸುತ್ತದೊ! ಅದು ದೈವಲೀಲೆ!

20ನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿ ಹಳೆಯ ಮೈಸೂರು ಪ್ರಾಂತ್ಯದ ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಗಗನಕುಸುಮವಾಗಿತ್ತು. ಅದರಲ್ಲೂ ಉನ್ನತ ವಿದ್ಯಾಭ್ಯಾಸ ಕೈಗೆಟುಕದ ಪಾರಿಜಾತವಾಗಿತ್ತು. ವಿದ್ಯಾಕ್ಷೇತ್ರದಲ್ಲಿ ಅವಕಾಶಗಳು ಇಂದು ಎಷ್ಟಿವೆಯೊ, ಅಂದು ಅಷ್ಟಿರಲಿಲ್ಲ.

ಮೈಸೂರು ಮಲ್ಲಿಗೆ ಬಡ ವಿದ್ಯಾರ್ಥಿಗಳ ಪಾಲಿಗೆ ದಕ್ಕುವ ಹೂವಾಗಿರಲಿಲ್ಲ. ಅಂಥ ಹೊತ್ತಿನಲ್ಲಿ ಶಾಲೆ ಹಾಗೂ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಮೂಲಕ ಶ್ರೀಗಳು ಶಿಕ್ಷಣಕ್ರಾಂತಿಯ ರೂವಾರಿಗಳಾದರು.

1940ರ ದಶಕದಲ್ಲಿ ಹನ್ನೆರಡು ವಿದ್ಯಾರ್ಥಿಗಳಿಗಾಗಿ ಬಾಡಿಗೆ ಮನೆಯೊಂದರಲ್ಲಿ ಶ್ರೀಗಳು ವಿದ್ಯಾರ್ಥಿನಿಲಯವೊಂದನ್ನು ಪ್ರಾರಂಭಿಸುತ್ತಾರೆ. 1944ರಲ್ಲಿ ಸ್ವಂತ ಕಟ್ಟಡಕ್ಕೆ ವರ್ಗಾಂತರಿಸುತ್ತಾರೆ. ಅವರ ಶುಭೇಚ್ಛೆಯ ಪರಿಣಾಮವಾಗಿ ಮೈಸೂರು ನಗರದಾಚೆ ಯಳಂದೂರು, ಚಾಮರಾಜನಗರ, ಟಿ. ನರಸೀಪುರ ಮೊದಲಾದ ಊರುಗಳಲ್ಲಿ ವಿದ್ಯಾರ್ಥಿನಿಲಯಗಳು ತಲೆಯೆತ್ತುತ್ತವೆ.

ಪ್ರಾರಂಭದ ದಿನಗಳಲ್ಲಿ ಈ ಕಾರ್ಯ ಅಷ್ಟೇನೂ ಹೂವಿನ ಹಾಸಿಗೆಯಾಗಿರಲಿಲ್ಲ. ಅದು ನಿರಂತರ ಹೋರಾಟದ ಬದುಕು, ದಣಿವರಿಯದ ಕಾರ್ಯಚಟುವಟಿಕೆ, ಎಷ್ಟೋ ಸಲ ಪ್ರಸಾದವಿಲ್ಲದೆ ಮಲಗಿದ ಸಂಗತಿಗಳೇನೂ ವಿರಳವಲ್ಲ. ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ವಿದ್ಯಾರ್ಥಿವೃಂದದ ಏಳಿಗೆಗಾಗಿ ತಮ್ಮ ಸಮಯವನ್ನೆಲ್ಲ ಸ್ವಾಮೀಜಿ ಧಾರೆ ಎರೆದರು. ವೈಯಕ್ತಿಕ ಸೌಲಭ್ಯಗಳನ್ನು ಬದಿಗಿಟ್ಟು ನಡೆದ ತ್ಯಾಗದ ಹಾದಿ ಅದು.

ದವಸಧಾನ್ಯಗಳ ಅಭಾವ ಅತ್ಯಂತ ದುರ್ಭರವಾಗಿದ್ದ ಕಾಲ ಅದು. ಅಹರ್ನಿಶಿ ಹಳ್ಳಿಗಳಿಗೆ ಹೋಗಿ ಧಾನ್ಯಸಂಗ್ರಹ ಕಾರ್ಯದಲ್ಲಿ ತೊಡಗಿದರು. ಭಿಕ್ಷೆ ಬೇಡಿದರು. ತಮಗಾಗಿ ಅಲ್ಲ; ಪ್ರಸಾದನಿಲಯಗಳ ನಿರ್ವಹಣೆಗಾಗಿ. ಒಂದು ಹಂತದಲ್ಲಿ ಪೀಠಾರೋಹಣ ಸಂದರ್ಭದಲ್ಲಿ ತಮಗೆ ಉಡುಗೊರೆಯಾಗಿ ಬಂದಿದ್ದ ಚಿನ್ನದ ರುದ್ರಾಕ್ಷಿಗಳನ್ನೊಳಗೊಂಡ ಚಿನ್ನದ ಕರಡಿಗೆಯನ್ನು ಅವರು ಮಾರಿದರು. ಸಾಲಸೋಲಗಳಿಗೆ ಅಂಜಲಿಲ್ಲ.

ಮೊದಮೊದಲಿಗೆ ಮಣ್ಣಿನ ಮಡಕೆಗಳನ್ನು ಖರೀದಿಸಿ ವಿದ್ಯಾರ್ಥಿನಿಲಯ ಆರಂಭಿಸಿದ ಆ ಕತೆಯನ್ನು ನೆನೆದಾಗ ಅವರೆಸಗಿದ ಇಂತಹ ನೈಜ ಘಟನೆಗಳು ಮುಂದೊಂದು ದಿನ ಪವಾಡದಂತೆ ತೋರಿದರೆ ಅಚ್ಚರಿಯೇನಲ್ಲ. ಇದು ಶ್ರೀಗಳವರು ಬಡಮಕ್ಕಳಿಗೆ ತೋರಿದ ಕೃಪಾಕಟಾಕ್ಷ.

ಕಷ್ಟದ ಸನ್ನಿವೇಶಗಳಲ್ಲಿ ಉತ್ತರಕ್ಕಾಗಿ ನಿನ್ನ ಅಂತರಂಗವನ್ನೇ ಅರಸು - ಎಂಬುದು ಅವರ ಆತ್ಮೋದ್ಧಾರದ ಧ್ಯೇಯಸೂತ್ರವಾಗಿತ್ತು.

'ನ ಹಿ ಜ್ಞಾನೇನ ಸದೃಶಂ' - ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ ಎನ್ನುವ ಉಕ್ತಿ ಶ್ರೀಗಳವರ ಸೇವಾದರ್ಶದಲ್ಲಿ ಹೀಗೆ ಅಭಿವ್ಯಕ್ತಿ ಪಡೆಯಿತು. 12 ವರ್ಷದ ಬಾಲಕ ಕೋಣೆಯೊಂದರಲ್ಲಿ ಕುಳಿತು ಕಂಡಿದ್ದ ಕನಸು, ಕಲ್ಪಿಸಿಕೊಂಡಿದ್ದ ಮಹಾಯಾತ್ರೆ ತನ್ನದೇ ಆದ ಗತಿಶೀಲತೆಯನ್ನು ಕಂಡುಕೊಂಡಿತ್ತು.

ಶ್ರೀಗಳವರು ಎಲ್ಲರಿಗೂ ಸಲ್ಲುವ ವಿದ್ಯೆ ಕಲಿಸಿದರು. ಕೂಡ ಬೇಕಾದ್ದನ್ನು ಕೂಡಲು, ಕಳೆಯಬೇಕಾದ್ದನ್ನು ಕಳೆಯಲು ಕಲಿಸಿದರು. ಒಬ್ಬರಿಗೊಬ್ಬರು ಹಂಚಿ ತಿನ್ನುವ ಭಾಗಾಹಾರವನ್ನೂ, ಗುಣಕ್ಕೆ ಗುಣ ಗುಣಿಸಿಕೊಳ್ಳಿರೆಂದು ಗುಣಾಕಾರವನ್ನೂ ಹಾಕಿಕೊಟ್ಟರು. ಧರ್ಮ-ಅರ್ಥ-ಕಾಮವೆಂದು ತ್ರೈರಾಶಿಯನ್ನೂ, ಕೂಡಿ ಬದುಕುವುದಕ್ಕೆ ಬೇಕಾದ ಗಣಿತವನ್ನೆಲ್ಲಾ ಅವರು ತಿಳಿಸಿಕೊಟ್ಟರು (ಡಾ. ಎಲ್. ಬಸವರಾಜು).

ಸಮಾಜದ ಎಲ್ಲ ಸಮಸ್ಯೆಗಳಿಗೂ ಅಜ್ಞಾನವೇ ಮೂಲ ಕಾರಣ ಇದರ ಪರಿಹಾರಕ್ಕೆ ಶಿಕ್ಷಣವೇ ರಾಮಬಾಣ. ಈ ನುಡಿ ಪೂಜ್ಯರ ಖಚಿತ ನಂಬಿಕೆಯಾಗಿತ್ತು. ಈ ನಂಬಿಕೆಗೆ ಸಾಕ್ಷಿ ಎಂಬಂತೆ ಅವರು ತೆರೆದ ಹಲವಾರು ವೇದ-ಸಂಸ್ಕೃತ ಪಾಠಶಾಲೆಗಳು, ಬಾಲೋದ್ಯಾನ-ಶಿಶುವಿಹಾರಗಳು, ಪ್ರಾಥಮಿಕ-ಪ್ರೌಢಶಾಲೆಗಳು, ಪದವಿ-ಸ್ನಾತಕೋತ್ತರ ಕಾಲೇಜುಗಳಲ್ಲದೆ ಇಂಜಿನಿಯರಿಂಗ್ ವೈದ್ಯಕೀಯ ಔಷಧೀಯ- ದಂತವೈದ್ಯ ಕಾನೂನು ಕಾಲೇಜುಗಳು ಹಾಗೂ ಮತ್ತಿತರ ಸಂಸ್ಥೆಗಳು ಶ್ರೀಗಳವರ ಜ್ಞಾನವಿತರಣೆಯ ಕೇಂದ್ರಗಳಾಗಿ ಕಂಗೊಳಿಸುತ್ತಿವೆ.

ಕರ್ನಾಟಕ ರಾಜ್ಯದಲ್ಲಷ್ಟೆ ಅಲ್ಲದೆ, ತಮಿಳುನಾಡಿನ ಊಟಿಯಲ್ಲಿಯೂ ಅವರು ವಿದ್ಯಾಕೇಂದ್ರಗಳನ್ನು ಹುಟ್ಟುಹಾಕಿದರು. ರೋಗಿಗಳು ನಮ್ಮ ಬಂಧುಗಳು ಎನ್ನುವ ಆಶೋತ್ತರದಿಂದ ಬಡವರ ಕಿಸೆಗೆ ಎಟಕುವಂತಹ ಆಸ್ಪತ್ರೆಗಳನ್ನು ಶ್ರೀಗಳು ಪ್ರಾರಂಭಿಸಿದರು.

ಇವನಾರವ, ಇವನಾರವ? ಎನ್ನದೆ, ಇವ ನಮ್ಮವ ಇವ ನಮ್ಮವ - ಎನ್ನುತ್ತ ಅವರು ಮಮತೆಯ ಮಳೆಗರೆದರು. ಈ ಕುಲ ಆ ಕುಲ ಎನ್ನದೆ, ಜಾತಿಮತದ ಪರಿಧಿಯನ್ನು ಮೀರಿ ಎಲ್ಲರನ್ನು ತಮ್ಮ ಬಾಂಧವ್ಯದ ತೆಕ್ಕೆಯಲ್ಲಿ ಸೇರಿಸಿಕೊಂಡರು. ಅವರ ಕಣ್ಣಿಗೆ

ಗೋಚರವಾದದ್ದು ಕೇವಲ ಹಸಿದ ಹೊಟ್ಟೆಗಳು, ವಿದ್ಯೆಗೆ ತುಡಿದ ಮನಸ್ಸುಗಳು. ಇದರಿಂದಾಗಿ ಅವರು ನಿಂತ ನೆಲ ಪವಿತ್ರ ಕ್ಷೇತ್ರವಾಯಿತು; ಕಂಡ ಕನಸು ದಿವ್ಯಾನುಭವವಾಯಿತು. ಈ ಬಗೆಯ ಅಚಲ ದೃಢನಿರ್ಧಾರ, ಸಂಕಲ್ಪಶಕ್ತಿಯಿಂದಾಗಿ ಅವರು ಮುಟ್ಟಿದ್ದೆಲ್ಲ ಅಕ್ಷಯಪಾತ್ರೆಯಾಯಿತು.

ಸಮಾಜೋ-ಧಾರ್ಮಿಕರಂಗದಲ್ಲಿ ಸದ್ದುಗದ್ದಲವಿಲ್ಲದೆ ಶ್ರೀಗಳವರು ಕೈಗೊಂಡ ಮೌನಕ್ರಾಂತಿ ಇದೆನ್ನಬಹುದು. ಅನುಕಂಪ ಮತ್ತು ಸ್ವಾರ್ಥರಹಿತ ಸೇವೆ ಏನೆಲ್ಲ ಸಾಧಿಸಬಲ್ಲದು ಎನ್ನುವುದಕ್ಕೆ ಈ ಸಂಸ್ಥೆಗಳು ಕಣ್ಣೆದುರಿಗಿರುವ ಜೀವಂತ ಮಾದರಿಗಳು.

ಹೀಗೆ ಜ್ಞಾನತೃಷೆಯಿಂದ ಬಳಲಿದವರಿಗೆ ಅರಿವಿನರವಟ್ಟಿಗೆ ತೆರೆದರು. ಬಿಸಿಲಧಗೆಯಿಂದ ತಪ್ತರಾದವರಿಗೆ ವಿಪುಲಾಶ್ರಯವನೀವ ಸುಮಭರಿತ ಪಾದಪದಂತೆ ತಂಪಿನ ನೆರಳನಿತ್ತರು.

ಈ ಸಂಸ್ಥೆಗಳೆಲ್ಲ ಪೂಜ್ಯರು 1954ರಲ್ಲಿ ಸಂಸ್ಥಾಪಿಸಿದ ಜೆಎಸ್ಎಸ್ ಮಹಾವಿದ್ಯಾಪೀಠದ ಅಂಗವಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿವೆ. ಇಂದು ವಿದ್ಯಾಪೀಠ ದಿಗಂತದಂಚನ್ನು ದಾಟಿ ಇಷ್ಟೊಂದು ಅಗಾಧ ಪ್ರಮಾಣದಲ್ಲಿ ಬೆಳೆದು ನಿಂತಿದ್ದರೆ ರಾಜೇಂದ್ರ ಶ್ರೀಗಳವರು ಹಾಕಿದ ಭದ್ರ ಬುನಾದಿ ಸದಾ ಸ್ಮರಣೀಯ. ಅಂದು ಅವರು ನೆಟ್ಟ ಸಸಿ ಇಂದು ಬೆಳೆದು ಹೆಮ್ಮರ.

ಪೂಜ್ಯರ ಕೃಪಾಶೀರ್ವಾದದ ಕಪಿಲೆಯಲ್ಲಿ ಮಿಂದು ಪುನೀತರಾದವರು ಅದೆಷ್ಟು ಮಂದಿಯೊ! ಅವರ ಛತ್ರಛಾಯೆಯಲ್ಲಿ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡವರು ಸಾವಿರ ಸಾವಿರ. ಅವರ ಮಾತೃಹೃದಯದ ಸ್ಫಟಿಕಸದೃಶ ಅಂತಃಕರಣದ ದಿವ್ಯಪ್ರಭೆಯ ಹೆಜ್ಜೆಗುರುತುಗಳಲ್ಲಿ ತಮ್ಮ ಬಾಳ ಶ್ರೀಮಂತಿಕೆಯನ್ನು ಕಂಡುಕೊಂಡವರ ಸಂಖ್ಯೆ ಅಪಾರ. ಈ ಉದ್ದದ ಪಟ್ಟಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಪಾರ ಕೊಡುಗೆ ನೀಡಿರುವ ಅನೇಕ ಪ್ರಾಧ್ಯಾಪಕರು, ಕುಲಪತಿಗಳು, ಪದ್ಮಭೂಷಣರು, ರಾಷ್ಟ್ರಕವಿಗಳು, ಸಾಹಿತಿಗಳು, ಕಲಾವಿದರು, ಸಮಾಜಸೇವಕರು, ಆಡಳಿತಗಾರರು, ಉದ್ಯಮಿಗಳು, ಇಂಜಿನಿಯರ್ ಹಾಗೂ ವೈದ್ಯರು ಮುಂತಾದವರಿದ್ದಾರೆ.

ಇವರಲ್ಲದೆ, ಶಿಕ್ಷಿತರಾದ ಈ ಒಂದೆರಡು ತಲೆಮಾರಿನವರು, ತದನಂತರ ತಮ್ಮ ಮುಂದಿನ ಅನೇಕ ಪೀಳಿಗೆಗಳನ್ನು ಆರ್ಥಿಕವಾಗಿ-ಭಾವನಾತ್ಮಕವಾಗಿ ಶ್ರೀಮಂತಗೊಳಿಸಲು ರಾಜೇಂದ್ರ ಶ್ರೀಗಳವರು ಅಪರೋಕ್ಷವಾಗಿ ಪ್ರೇರಕರಾದರೆಂಬುದು ಗಮನಾರ್ಹ.

ಹೀಗೆ ಉಪಕೃತರಾದವರಲ್ಲಿ ನಾನೂ ಒಬ್ಬ. ಇದು ನನ್ನ ಪುಣ್ಯವಿಶೇಷವೂ ಅಹುದು. 1955ರಲ್ಲಿ ಬೆಂಗಳೂರಿನ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ದೊರಕಿತ್ತು.

ಅಲ್ಲಿನ ವಾಸ್ತವ್ಯ ಹಾಗೂ ಊಟೋಪಚಾರಕ್ಕೆಲ್ಲ ಶ್ರೀಗಳವರೇ ವ್ಯವಸ್ಥೆ ಮಾಡಿಕೊಟ್ಟಿದ್ದರು. ಕೆಲ ವಾರಗಳ ನಂತರ ಊರಿನ ನೆನಪು ನನ್ನನ್ನು ಕಾಡತೊಡಗಿತು. ಬೆಂಗಳೂರನ್ನು ಬಿಟ್ಟು ಮೈಸೂರಿಗೆ ಬಂದೆ. ಮಹಾರಾಜ ಕಾಲೇಜಿನಲ್ಲಿ ಈ ಮೊದಲೇ ದೊರಕಿದ್ದ ಬಿಎಸ್‌ಸಿ (ಆನರ್ಸ್) ಸೀಟು ಇದೀಗ ಕೈತಪ್ಪಿಹೋಗಿತ್ತು. ಒಂದು ವರ್ಷದ ವಿದ್ಯಾಭ್ಯಾಸದ ಭವಿಷ್ಯ ತ್ರಿಶಂಕು ಸ್ಥಿತಿಯಲ್ಲಿತ್ತು. ಈ ಪರಿಸ್ಥಿತಿಯನ್ನರಿತು ಪೂಜ್ಯ ಶ್ರೀಗಳವರು ಕುಲಪತಿಗಳ ಬಂಗಲೆಗೆ ನನ್ನನ್ನು ತಮ್ಮ ಕಾರಿನಲ್ಲಿ ಕರೆದುಕೊಂಡು ಹೋದರು. ಪೂಜ್ಯರೇ ತಮ್ಮ ಮನೆಯ ಬಳಿಗೆ ಬಂದದ್ದು ಕುಲಪತಿಗಳಿಗೆ ತೀರ ಅನಿರೀಕ್ಷಿತವಾಗಿತ್ತು. ನನ್ನ ತೊಂದರೆಯನ್ನು ಕುಲಪತಿಯವರಿಗೆ ಶ್ರೀಗಳು ಮನವರಿಕೆ ಮಾಡಿಕೊಟ್ಟರು. ಅದಾದ ಮೇಲೆ ಕುಲಪತಿಗಳು ಅನುಕೂಲ ಕಲ್ಪಿಸಿಕೊಟ್ಟುದರ ಫಲವಾಗಿ ಪೂಜ್ಯರ ಅಂತಃಕರಣಪೂರಿತ ಸಕಾಲಿಕ ನೆರವಿನಿಂದಾಗಿ ನಾನು ಸ್ನಾತಕೋತ್ತರ ಪದವಿ ಪಡೆಯುವಂತಾಯಿತು.

ಇಂತಹದನ್ನೆಲ್ಲ ನೆನೆದಾಗ ಕಣ್ಣು ತೇವವಾಗುತ್ತದೆ. ಕಂಠ ಗದ್ಗದಿತವಾಗುತ್ತದೆ. ಪ್ರೀತಿವಾತ್ಸಲ್ಯದ ಪ್ರತಿಬಿಂಬದಂತಿದ್ದವರು ಈ ಉದಾರಚರಿತರು.

ದುರಹಂಕಾರಿಯನ್ನು ನಿರಹಂಕಾರಿಯನ್ನಾಗಿಸುವ ಪಾವನಸಂಜೀವಿನಿ. ಶಿವಪರ ಚಿಂತನೆಯ ಸರಳ ಜಂಗಮಮೂರ್ತಿ. ಕರ್ನಾಟಕ ಕಂಡ ಅನುಪಮ ಮಹಿಮಾನ್ವಿತರು. ಪರಹಿತಕೆ ಜೇನಾದ ಕಾರುಣ್ಯಸಿಂಧು. ಮನವಚನ ಒಂದಾದ ನಗೆಮೊಗದ ಧೀರ. ದುಡಿಮೆಯಲ್ಲಿ ದೇವರನ್ನು ಕಂಡ ಕಾಯಕಯೋಗಿ - ಹೀಗೆಲ್ಲ ಶ್ರೀಗಳವರಿಗೆ ತಮ್ಮ ನುಡಿಕುಸುಮಗಳನ್ನು ಅರ್ಪಿಸಿರುವವರು ಅನೇಕರು.

ಅವರದು ಜಗತ್ತಿನ ದುಃಖದುಮ್ಮಾನಗಳಿಗೆ ಸ್ಪಂದಿಸದ ಅಶಕ್ತ, ನೀರಸ, ನಿರ್ಜೀವ ವೈರಾಗ್ಯವಲ್ಲ. ಸದಾ ಲೋಕಾನುಕಂಪೆಯಿಂದ ಅನ್ಯರಿಗಾಗಿಯೇ ಮಿಡಿದ, ಆರ್ದ್ರವಾದ, ಜೀವಮುಖಿ ವೈರಾಗ್ಯ ಎನ್ನುತ್ತಾರೆ ನನ್ನ ಹಿರಿಯ ಆಪ್ತಮಿತ್ರರಾದ ಡಾ. ಪ್ರಭುಶಂಕರ ಅವರು.

ಶ್ರೀಗಳವರು ತೊಡುತ್ತಿದ್ದ ಕಾವಿ ಕಪಣಿ ಹರಿದುಹೋಗಿದ್ದು, ಅದನ್ನವರು ಹೊಲಿಯುತ್ತಿದ್ದುದನ್ನು ನೋಡಿದ ಶಿಷ್ಯರೊಬ್ಬರು ಅದನ್ನು ತಾವು ಹೊಲಿದುಕೊಡುವುದಾಗಿ ಮುಂದಾದರು. ಅದಕ್ಕೆ ಶ್ರೀಗಳವರು ಒಪ್ಪದಿದ್ದಾಗ, ಹೊಸದನ್ನಾದರೂ ಹೊಲಿಸಿಕೊಳ್ಳಬಹುದಲ್ಲವೆ? ಎಂದು ಸೂಚಿಸಿದರು. ಶ್ರೀಗಳವರು ಕೊಟ್ಟ ಉತ್ತರ: 'ನಿಮ್ಮಂಥವರು ಮುಂದೆ ಹರಿದ ಅಂಗಿಯನ್ನು ತೊಡುವಂತಾಗದಿರಲಿ ಎಂದೇ ನಾನೀಗ ಈ ಹರಿದ ಕಪಣಿ ಹಾಕಿಕೊಳ್ಳುತ್ತಿರುವುದು.' ಜಗವೆಲ್ಲ ನಗುತಿರಲಿ, ಜಗದಳುವು ನಮಗಿರಲಿ ಎಂದ ಅನುಕಂಪಶೀಲರು ಅವರು.



ಅಂಗಲಿಂಗ ಸಾಮರಸ್ಯದ ಶಿವಯೋಗ ಸಾಧನೆ ಪೂಜ್ಯರ ಗುಪ್ತ ಕಾಯಕವಾಗಿತ್ತು. ಮುಕ್ತಿಪಥದತ್ತ ತೋರುಬೆರಳಾಗಿತ್ತು. ಅವರದು ಈ ಬಗೆಯ ಉತ್ಕಟತೆ, ಭಾವತೀವ್ರತೆ, ಭೋಗತ್ಯಾಗದ ತನ್ಮಯತೆ, ಮಮಕಾರವನ್ನಳಿಸುವ ನಿಸ್ಸಂಗತ್ವ, ತಾವು ಸಂಕಷ್ಟದಲ್ಲಿದ್ದಾಗಲೆಲ್ಲ ಭಗವಂತನ ಸಹಾಯಹಸ್ತ ನೆರವಿಗೆ ಬಂದೇ ಬರುತ್ತದೆ ಎಂಬ ಅಚಲ ವಿಶ್ವಾಸ ಅವರ ಕೈಹಿಡಿದು ನಡೆಸಿತು. ಅಂಥ ದೈವಶ್ರದ್ಧೆ ಅವರದು.

ಶ್ರೀಗಳವರದು ಸರಳತೆಯ ದ್ಯೋತಕವಾದ ಕಾವಿ ತೊಡುಗೆ. ತಲೆ ಮೇಲೆ ಅದೇ ಮುಸುಕು, ಕೊರಳಲ್ಲಿ ನಿರ್ಮಲ ರುದ್ರಾಕ್ಷಿಮಾಲೆ, ಹಣೆಯಲ್ಲಿ ವಿಭೂತಿ. ಕಾಲಿನಲ್ಲಿ ಮರದ ಹಾವುಗೆ. ಮಿನುಗುವ ತೇಜೋಮಯ ನಯನಕಾಂತಿ, ಮಗುವಿನಂಥ ಮುಗ್ಧ ಮನಸ್ಸು, ಸ್ನಿಗ್ಧ ಮುಗುಳುನಗೆ, ಮೃದುಮಧುರ ಮಾತುಕತೆ, ನಡೆನುಡಿಯಲ್ಲಿ ಏಕರೂಪತೆ, ಎಲ್ಲರಲ್ಲಿ ಆತ್ಮೀಯತೆ, ಹದತಪ್ಪದ ಸಮಚಿತ್ತತೆ, ಅಪರಿಮಿತ ತಾಳ್ಮೆ, ವಿನಯಶೀಲತೆ, ಪ್ರಸನ್ನತೆ, ಮಠವೊಂದರ ಜಗದ್ಗುರು ತಾವೆಂಬ ಸ್ವಲ್ಪವೂ ಬಿಂಕಬಿಗುಮಾನವಿರದ ನಿರಹಂಕಾರ ಮನೋಭಾವ ಇಂತಹ ಸದ್ಗುಣಸಂಪನ್ನತೆ ಅವರನ್ನು ಸುತ್ತೂರು ಶ್ರೀಮಠದ ಭವ್ಯಾಕಾಶದ ಧ್ರುವತಾರೆಯನ್ನಾಗಿಸಿದುದು ಸಹಜವೇ.

ರಾಜೇಂದ್ರಶ್ರೀಗಳವರ ಔದಾರ್ಯಪೂರ್ಣ ಮಾರ್ಗದರ್ಶನ ಹಾಗೂ ಅತ್ಯುತ್ತಮ ತರಬೇತಿ ಇಂದಿನ ಪೀಠಾಧ್ಯಕ್ಷರಾದ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರಿಗೆ ದೊರಕಿತು. ಇವರ ವ್ಯಕ್ತಿತ್ವವನ್ನು ಬಾಲ್ಯದಿಂದಲೂ ರೂಪಿಸಿ, ಶಿಷ್ಯತ್ವ ಪ್ರದಾನ ಮಾಡಿ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಿದುದು ರಾಜೇಂದ್ರ ಶ್ರೀಗಳವರ ದೂರದರ್ಶಿತ್ವ ಎನ್ನಬಹುದು. ದೇಶಿಕೇಂದ್ರ ಶ್ರೀಗಳವರು ನಾಡಿನ ಹೊರ ರಾಜ್ಯಗಳಲ್ಲಿಯೂ, ಸಾಗರದಾಚೆ ಅಮೇರಿಕಾ, ದುಬೈ, ಮಾರಿಷಸ್ ದೇಶಗಳಲ್ಲಿಯೂ ಕಾರ್ಯಕ್ಷೇತ್ರವನ್ನು ವಿಸ್ತರಿಸಿ, ಅಂತಾರಾಷ್ಟ್ರೀಯ ನೆಲೆಯಲ್ಲಿ ಶ್ರೀಮಠದ ಕೀರ್ತಿ ಪತಾಕೆ ಹಾರಿಸಿರುವುದು ಎಲ್ಲರ ಗೌರವ-ಮೆಚ್ಚುಗೆಗೆ ಪಾತ್ರವಾಗಿರುವ ಸಂತಸದ ಸಂಗತಿ.

ಪೂಜ್ಯ ರಾಜೇಂದ್ರಶ್ರೀಗಳವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜೆಎಸ್‌ಎಸ್ ಗ್ರಂಥಮಾಲೆ, ಜೆಎಸ್‌ಎಸ್ ಸಂಗೀತ ಸಭಾ ಮುಂತಾದ ಸಾಹಿತ್ಯಕ-ಸಾಂಸ್ಕೃತಿಕ ಸಂಸ್ಥೆಗಳನ್ನು ಹುಟ್ಟುಹಾಕಿದ ದ್ರಷ್ಟಾರರು. ಈ ತೆರನಾದ ಸೇವಾಕೈಂಕರ್ಯದಿಂದಾಗಿ ಜೆಎಸ್‌ಎಸ್ ಇಂದು ದೇಶದ ಮನೆಮನೆಯಲ್ಲಿ ಚಿರಪರಿಚಿತ ಹೆಸರಾಗಿದೆ.

ಘನಲಿಂಗಿದೇವರ ವಚನಗಳು ಹಾಗೂ ಗೌರೀಶಂಕರ ಸ್ವಾಮಿಗಳ ಅಕ್ಕಮಾದೇವಿ ಚಂಪೂಕಾವ್ಯ ಮೊದಲಾದ ಕೃತಿಗಳನ್ನು ರಾಜೇಂದ್ರ ಶ್ರೀಗಳು ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಮೈಸೂರಿನ ರಾಜಮನೆತನ ಇವರಿಗೆ ರಾಜಗುರುತಿಲಕ ಎಂಬ ಬಿರುದನ್ನಿತ್ತು ಗೌರವಾದರ ಸಲ್ಲಿಸಿದೆ. ಮೈಸೂರು ವಿಶ್ವವಿದ್ಯಾನಿಲಯ ಶಿಕ್ಷಣ ಪುರೋಭಿವೃದ್ಧಿಗೆ ಇವರ ಅಪಾರ ಕೊಡುಗೆಯನ್ನು ಗಮನಿಸಿ ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿದೆ.

ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಬಾಳು ಬಸವತತ್ವದ ಬೆಳಕಿನಾಶಯ. ಈ ಸಂಕೇತವಾಗಿ ಸುತ್ತೂರಿನಲ್ಲಿರುವ ಅವರ ಸಮಾಧಿ ಇಂದು ತೀರ್ಥಕ್ಷೇತ್ರ.

ಜ್ಞಾನಾನ್ನ ದಾಸೋಹದ ಮಣಿಹ ಹೊತ್ತು ಇಂಥವರು ಆಗೊಮ್ಮೆ ಈಗೊಮ್ಮೆ ನಮ್ಮ ನಡುವೆ ಬರುತ್ತಾರೆ. ಮಾಡಿದೆನೆಂಬುದರ ಕಿಂಚಿತ್ತೂ ನೆನಪಿರದೆ ನಿರಾಳವಾಗಿ ಅತ್ತ ನಡೆದು ಹೋಗುತ್ತಾರೆ. ಮಹಾನುಭಾವರಾಗಿ ಜನಮಾನಸದಲ್ಲಿ ನಿರಂತರವಾಗಿ ಉಳಿಯುತ್ತಾರೆ. ಇದು ನಾಡಿನ ಸೌಭಾಗ್ಯ. ರಾಜೇಂದ್ರಶ್ರೀಗಳವರು ಈಗ ನಮ್ಮೊಡನಿಲ್ಲ. ಆದರೆ ಅವರು ಪ್ರಾರಂಭಿಸಿದ ಸೇವಾವಾಹಿನಿ ಈಗಲೂ ಸುತ್ತಮುತ್ತಲಿನ ಪರಿಸರವನ್ನು ಹಚ್ಚಹಸಿರಾಗಿಡುತ್ತಾ ಮುಂದೆ ಮುಂದೆ ಸಾಗುತ್ತಿದೆ.

ಪೂಜ್ಯರು ಹಚ್ಚಿದ ಕಾರ್ತೀಕ ದೀಪ ಜಾಜ್ವಲ್ಯಮಾನವಾಗಿ ಬೆಳಗುತ್ತಿದೆ. ಅವರ ಯಶೋಗಾಥೆ ಚಾರಿತ್ರಿಕ ದಾಖಲೆ ಹೇಗೋ ಹಾಗೇ ಕೃತಜ್ಞತೆಯ ಹಾಡಾಗಿ ನಿನಾದಿಸುತ್ತಿದೆ. ಜನಮನದ ಹೊಂಗಿರಣವಾದ, ಜಗದ ಗುರುವಾದ ಇಂಥವರು ಮತ್ತೆ ಇನ್ನೆಂದೋ!

□

## ರಾಜೇಂದ್ರ ಶ್ರೀವಾಣಿ

- ಅಧ್ಯಾತ್ಮದಲ್ಲಿ ಹಾಗೂ ಮಾನವತೆಯಲ್ಲಿ ಶ್ರದ್ಧೆಯನ್ನು ತಾಳಿದಾಗ ಮಾತ್ರ ಬದುಕು ಹಸನಾಗುತ್ತದೆ.
- ಆತ್ಮಶ್ರದ್ಧೆಯಿಂದ ಮಾಡಿದ ಕಾರ್ಯ ಬದುಕಿಗೆ ಅದ್ಭುತ ಫಲವನ್ನೀಯುತ್ತದೆ.
- ಭಾರತ ಜಗತ್ತನ್ನೇ ಎಚ್ಚರಿಸಬಲ್ಲ ಭವ್ಯ ಪರಂಪರೆಯನ್ನು ಪಡೆದ ರಾಷ್ಟ್ರ.



# ವ್ಯಕ್ತಿ-ಶಕ್ತಿ-ಸಾಧನೆಗಳ ಸಂಗಮ

**ಪ್ರೊ. ಚಂದ್ರಶೇಖರಯ್ಯ**

ಈ ಕಿರು ಲೇಖನದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ವ್ಯಕ್ತಿತ್ವವನ್ನು ಕುರಿತು ಬರೆಯಲು ಪ್ರಯತ್ನಿಸಿದೆ ಯಾದರೂ, ಲೇಖಕನ ಸಾಮರ್ಥ್ಯ, ಲೇಖಕನ ವ್ಯಾಪ್ತಿ ಮತ್ತು ಲೇಖನಕ್ಕೆ ಆರಿಸಿಕೊಂಡಿರುವ 'ವಸ್ತು'ವಾವುದು ಎಂಬ ಸಂಗತಿಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಒಳಿತು. ವಿಶಿಷ್ಟ ವ್ಯಕ್ತಿತ್ವವನ್ನು ಹೊಂದಿದವರನ್ನು ಕುರಿತು ಬರೆಯುವುದು ತುಂಬ ಕಷ್ಟದ ಕೆಲಸ. ಹೆಚ್ಚು ಬರೆದರೆ ಹೊಗಳಿಕೆ ಎನಿಸಬಹುದು; ಹಾಗೆಯೇ, ಕಡಿಮೆ ಬರೆದರೆ ವ್ಯಕ್ತಿತ್ವ ನಿರೂಪಣೆಯಲ್ಲಿ ಕೊರತೆಗಳು ಉದ್ಭವಿಸಬಹುದು. ವಸ್ತುಸ್ಥಿತಿ ಹೀಗಿರುವಾಗ, ನಡುವಿನ ಸುವರ್ಣ ಮಾಧ್ಯಮವನ್ನು ಹುಡುಕುವ ಪ್ರಯತ್ನವನ್ನು ಲೇಖಕ ಬಹು ಎಚ್ಚರಿಕೆಯಿಂದ ಮಾಡಬೇಕು.

ಮೊದಲನೆಯದಾಗಿ, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಒಬ್ಬ ವ್ಯಕ್ತಿಯೆಂದು ತಿಳಿದಿರುವುದನ್ನು ನಾನು ಅಷ್ಟಾಗಿ ಸ್ವಾಗತಿಸುವುದಿಲ್ಲ. ಇನ್ನೂ ಕೆಲವರು ಅವರನ್ನು ಒಂದು ಶಕ್ತಿಯೆಂದು ಸಂಬೋಧಿಸುವುದುಂಟು. ಹೀಗೆ ಕರೆಯಲು ನನ್ನದೇನು ಅಭ್ಯಂತರವಿಲ್ಲ. ಆದರೆ, ಇಲ್ಲಿ ನನ್ನದೊಂದು ಪ್ರಶ್ನೆ: ಅವರ ವ್ಯಕ್ತಿತ್ವದ ಅಥವಾ ಶಕ್ತಿಯ ಪೂರ್ಣ ಪರಿಚಯ ಅದೆಷ್ಟು ಮಂದಿಗಿದೆ? ಬಹುಶಃ ಅವರಲ್ಲಿ ಅಡಗಿರುವ ಅಪಾರ ಶಕ್ತಿಯ ಅರಿವು ಅವರಿಗೂ ಇದೆಯೊ ಇಲ್ಲವೊ ನನಗೂ ಸಂಶಯ! ದೇವನ ಶಕ್ತಿಯ ಅರಿವು ದೇವನಿಗೆ ಇದ್ದಿದ್ದರೆ, ಅವನು ನಮ್ಮೆಲ್ಲರಿಗಿಂತಲೂ ಸ್ವಾರ್ಥಿಯಾಗುತ್ತಿದ್ದನೇನೊ! ಸಮಾಜದ ಹಿತದೃಷ್ಟಿಯಿಂದ ಜಗದ್ಗುರುಗಳವರ ಶಕ್ತಿಯ ಅರಿವು ಅವರಿಗೂ ಆಗದೇ ಇರುವುದು ಒಳಿತೇ ಆಗಿದೆ ಎಂದರೆ, ನನ್ನನ್ನು ಮತ್ತು ನನ್ನಂತಹ ಅನೇಕರನ್ನು ಸ್ವಾರ್ಥಿಗಳೆಂದು ಕರೆಯುವುದಿಲ್ಲ ತಾನೆ? ಅವರನ್ನು ಒಂದು ಶಕ್ತಿಯೆಂದು ಕರೆಯಲು ನಮ್ಮ ಅಲ್ಪ ಅರಿವು ಅಡ್ಡ ಬರುವುದಾದರೆ ಒಬ್ಬರು ವ್ಯಕ್ತಿಯೆಂದು ಕರೆಯಬಹುದೆ ಎಂಬುದನ್ನು (ಇದಕ್ಕೆ ನನ್ನ ವೈಯಕ್ತಿಕ ವಿರೋಧವಿರುವುದಾದರೂ) ವಿಚಾರ ಮಾಡಬಹುದು. ಲೌಕಿಕವಾಗಿ, ಎಲ್ಲರ ಕಣ್ಣಿಗೂ ಕಾಣುವಂತಹ ಒಂದು ವ್ಯಕ್ತಿತ್ವ ಅವರಿಗೂ ಇರುವುದು ಸಹಜ. ಮಾನವನಾಗಿ ಈ ಮಣ್ಣಿನ ಮೇಲೆ ನಡೆದಾಡುವ ತನಕ ಅದರ ಅಗತ್ಯವಿರುವುದು ಎಲ್ಲರಿಗೂ ತಿಳಿದ

ವಿಷಯವೇ ಆಗಿದೆ. ಹಾಗಾದರೆ ಜಗದ್ಗುರುಗಳನ್ನು ಒಬ್ಬರು ವ್ಯಕ್ತಿಯೆಂದು ಕರೆಯುವುದರಲ್ಲಿ ತಪ್ಪೇನಿದೆ? ತಪ್ಪೇನಿಲ್ಲ, ಕರೆಯಬಹುದು. ಆದರೆ, ಈ ವ್ಯಕ್ತಿತ್ವ ನಮ್ಮಂತಹ ನೂರು ಮಂದಿಗೆ, ಅಷ್ಟೇಕೆ ಅವರಿಗೂ ಅರಿವಿಲ್ಲದ ಅಪಾರ ಅಲೌಕಿಕ ಶಕ್ತಿಯನ್ನು ಮೈಗೂಡಿಸಿಕೊಂಡು ಈ ಭೂಮಿಯ ಮೇಲೆ ಬಂದ ಒಬ್ಬರು 'ವ್ಯಕ್ತಿ' ಯೆಂದರೆ ನನ್ನದೇನೂ ಅಭ್ಯಂತರವಿಲ್ಲ. ಇಂತಹ ವ್ಯಕ್ತಿ-ಶಕ್ತಿಗಳ ಅಪೂರ್ವ ಸಂಗಮವನ್ನು ಶ್ರೀಗಳವರಲ್ಲಿ ನಾವಿಂದು ಕಾಣುತ್ತಿದ್ದೇವೆ.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ನಾವಿಂದು ಎದುರುಗೊಂಡಾಗ ತಕ್ಷಣದ ನಮ್ಮ ಅನಿಸಿಕೆಗಳನ್ನು ಕುರಿತು ಒಂದು ಮಾತಿನಲ್ಲಿ ಹೇಳುವುದು ಕಷ್ಟ. ಬಹುಜನ ಸಾಧಕರಲ್ಲಿ ವಿಶೇಷವಾಗಿ ಕಾಣುವ ಅಂಶವೆಂದರೆ, ಅವರ ಪ್ರತಿಭೆ, ತೆಂಗಿನ ಮರದಂತೆ ಬೆಳೆದು ಒಂಟಿಯಾಗಿ ತಲೆಯೆತ್ತಿ ನಿಂತಿರುವುದು. ಇನ್ನೂ ಹಲವರಲ್ಲಿ ಪ್ರತಿಭೆ ಒಂದಕ್ಕಿಂತ ಹೆಚ್ಚು ಮುಖಗಳಲ್ಲಿ ಬೆಳಕಿಗೆ ಬರುತ್ತದೆ. ಆದರೆ ಇದು ಬಹಳ ವಿರಳ. ಸಾಧನೆ ಸಿದ್ಧಿಗಳ ಕ್ಷೇತ್ರಗಳು ಹಲವು ಹತ್ತಾದರೂ ಒಬ್ಬ ವ್ಯಕ್ತಿ ತನ್ನ ಜೀವನದ ಅವಧಿಯಲ್ಲಿ ಪರಿಣತಿ ಮತ್ತು ಪರಿಪೂರ್ಣತೆಯನ್ನು ಹಲವು ಕ್ಷೇತ್ರಗಳಲ್ಲಿ ಸಾಧಿಸಬಲ್ಲನೆ ಎಂಬುದು ಜಿಜ್ಞಾಸೆಗೆ ಎಡೆಗೊಡುವ ವಿಷಯ. ಈ ಹಿನ್ನೆಲೆಯಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಾಧನೆ ಮತ್ತು ಸಿದ್ಧಿಗಳನ್ನು ಅವಲೋಕಿಸುವುದರಿಂದ ಅವರ ವ್ಯಕ್ತಿ-ಶಕ್ತಿಯ ಸಮಗ್ರ ಪರಿಚಯವಾಗಬಲ್ಲುದು ಎನಿಸುತ್ತದೆ. ಈ ಅಂಶವನ್ನು ಕುರಿತು ಹೆಚ್ಚಿನ ವಿವರಗಳನ್ನು ನೀಡಿ ಬರೆಯುವುದು ಹೊಗಳಿಕೆಯ ಮಾತಾಗ ಬಹುದು. ಆದರೂ ಒಬ್ಬ ವ್ಯಕ್ತಿ ಸುಮಾರು ಐದು ದಶಕಗಳ ಕಾಲದಲ್ಲಿ ಸ್ವಾರ್ಥವನ್ನು ತೊರೆದು, ಪರಹಿತವನ್ನೇ ಗಮನದಲ್ಲಿಟ್ಟುಕೊಂಡು ದುಡಿದು ಸಮಾಜಕ್ಕೆ ಏನನ್ನು ಕೊಡಬಹುದು ಎಂಬುದರ ಊಹೆ ಯಾರಿಗಾದರೂ ಇರುವುದಾದರೆ, ಜಗದ್ಗುರುಗಳು ಈಗಾಗಲೇ ಕೊಟ್ಟಿರುವುದು ಈ ಊಹೆಯನ್ನು ಮೀರಿ ನಿಲ್ಲುವುದು ಎಂದಷ್ಟೇ ಇಲ್ಲಿ ಹೇಳಬಹುದು.

ನಾನು ಅನೇಕ ಸಂದರ್ಭಗಳಲ್ಲಿ ಶ್ರೀಗಳವರನ್ನು ತುಂಬ ಹತ್ತಿರದಿಂದ ನೋಡಿದ್ದೇನೆ. ಕುಳಿತಿರುವಾಗ, ಮಾತನಾಡುತ್ತಿರುವಾಗ ಮತ್ತು ಆಲೋಚನಾಮಗ್ನರಾಗಿರುವಾಗ ಅವರನ್ನು ನನ್ನದೇ ಆದ ದೃಷ್ಟಿಯಿಂದ ಕಂಡಿದ್ದೇನೆ. ಹೀಗೆ ಅವರನ್ನು ಹಲವು ಹತ್ತು ಬಾರಿ ಕಂಡಾಗಲೆಲ್ಲ, ಇವರೇನು ನಡೆದಾಡುವ ಸಂಘ-ಸಂಸ್ಥೆಗಳೇ? ಅಥವಾ ತಮಗೆ ವೈಯಕ್ತಿಕವಾಗಿ ಏನೊಂದೂ ಲಾಭವಿಲ್ಲದಿದ್ದರೂ ಸಮಾಜಕ್ಕೆ ಮತ್ತು ಪರೋಕ್ಷವಾಗಿ ದೇಶಕ್ಕೆ ಸಾಧ್ಯವಾದ ಏನೆಲ್ಲ ಅನುಕೂಲಗಳನ್ನು ಮಾಡಬೇಕೆಂಬ ಹುಚ್ಚನ್ನು ಹುಟ್ಟಿನಿಂದಲೇ ಮೈಗೂಡಿಸಿಕೊಂಡು ಬಂದು ಸಾಧಿಸಹೊರಟ ಮಹಾನ್ ಹಠಯೋಗಿಯೇ? ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡಿದ್ದೇನೆ. ಅವರು ನುಡಿದು ನಡೆದುದಕ್ಕಿಂತ ನುಡಿಯದೇ ನಡೆದುದು ಹೆಚ್ಚು ಎಂದು ತಿಳಿದಿದ್ದೇನೆ.



ಅವರು ತುಂಬ ಮಿತಭಾಷಿಗಳು. ಅನೇಕ ಸಂದರ್ಭಗಳಲ್ಲಿ ಒಂದೆರಡು ತಾಸುಗಳ ಚರ್ಚೆ ಅಥವಾ ಮಾತುಕತೆಗಳ ವೇಳೆಯಲ್ಲಿ ಅವರ ಮಾತುಗಳನ್ನಷ್ಟೇ ಹೊರತೆಗೆದು ಹೋಲಿಸಿದಾಗ, ಅವರು ನುಡಿಯುವುದಕ್ಕಿಂತಲೂ ಕೇಳಿಸಿಕೊಳ್ಳುವುದೇ ಹೆಚ್ಚು ಎಂಬುದನ್ನು ಗಮನಿಸಿದ್ದೇನೆ. ಆಡಿಯೂ ಮಾಡಲಾಗದಿದ್ದರೆ? ಅಥವಾ ಆಡದೇ ಮಾಡುವುದು ಅವರ ದೃಷ್ಟಿಯಲ್ಲಿ ಪರಮಾತ್ಮನಿಗೆ ಹೆಚ್ಚು ಪ್ರಿಯವಿರಬಹುದು.

ಜಗದ್ಗುರುಗಳು ನಡೆದು ಬಂದ ದಾರಿಯ ನೇರ ಪರಿಚಯ ಹಲವರಿಗೆ ಇದೆಯೆಂದು ನಾನು ಕೇಳಿದ್ದೇನೆ. ಅವರನ್ನು ಬಾಲ್ಯದಿಂದಲೂ ಕಂಡವರು ಬಹಳ ಮಂದಿ ಇದ್ದಾರೆ. ಈ ಒಬ್ಬೊಬ್ಬರನ್ನು ಸಂದರ್ಶಿಸಿ ವಿಷಯ ಸಂಗ್ರಹಿಸಿ ಬರೆಯುವುದಾದರೆ, ಶ್ರೀಗಳವರ ಸೇವಾ ಜೀವನದ ಮೈಲಿಗಲ್ಲುಗಳು, ಹೆಗ್ಗುರುತುಗಳು ಮತ್ತು ಇನ್ನಿತರ ಮುಖ್ಯ ಸಂಗತಿಗಳು ಹೊರ ಬೀಳುತ್ತವೆ. ಬಾಲ್ಯದಲ್ಲಿ ಇವರ ಮೇಲೆ ಹೆಚ್ಚಿನ ಪ್ರಭಾವ ಬೀರಿದವರೆಂದರೆ ಇವರ ಗುರುಗಳೇ ಆಗಿದ್ದ ಜಗದ್ಗುರು ಶ್ರೀ ಪಟ್ಟದ ಶಿವರಾತ್ರೀಶ್ವರ ಸ್ವಾಮಿಗಳು. ಮಂತ್ರಮಹರ್ಷಿಗಳೆಂದು ಹೆಸರಾಗಿದ್ದ ಇವರ ಜೀವನವೇ ಅನುಸರಿಸುವವರಿಗೆ ಒಂದು ಆದರ್ಶವಾಗಿತ್ತು. ಇಂತಹ ಮಹಾತ್ಮರ ಸಾಮೀಪ್ಯ, ಸಾನ್ನಿಧ್ಯ, ಮೇಲಾಗಿ ಇವರ ಉತ್ತರಾಧಿಕಾರಿಗಳಾಗಿರುವ ಸುಯೋಗ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ ಲಭಿಸಿದುದು ಒಂದು ಪುಣ್ಯವಿಶೇಷ ಮತ್ತು ನಾಡಿನ ಭಾಗ್ಯ. ಅಂದ ಮೇಲೆ ಸ್ವಾಭಾವಿಕವಾಗಿಯೇ ತಮ್ಮ ಗುರುಗಳ ಪ್ರಭಾವ ಪ್ರೇರಣೆಗಳಿಗೆ ಇವರು ಬಾಲ್ಯದಿಂದಲೇ ಒಳಗಾದರೆಂದು ಹೇಳಬಹುದು. ಆದರೆ ಇವರು ತಮ್ಮ ಗುರುಗಳಿಂದ ವಿಶೇಷವಾಗಿ ಶಿಸ್ತು ಮತ್ತು ಸಂಪ್ರದಾಯಪ್ರಿಯತೆಯನ್ನು ಪಡೆದುದಾದರೂ ಆಧುನಿಕ ಅವಶ್ಯಕತೆ ಗಳಿಗನುಗುಣವಾಗಿ ತಮ್ಮದೇ ಆದ ಹೊಸ ಹೊಸ ಸಂಪ್ರದಾಯಗಳನ್ನು ಸೃಜಿಸಿಕೊಂಡರು. ಈ ಸೃಜನಶೀಲತೆ ಮತ್ತು ಸಮತಾದೃಷ್ಟಿ ಅವರನ್ನಿಂದು ಕರ್ನಾಟಕದಲ್ಲಿ ಅತಿ ಜನಪ್ರಿಯ ಧರ್ಮಗುರುಗಳಾಗುವಂತೆ ಮಾಡಿವೆ. ಇವರ ಗುರುಗಳ ನಂತರ, ಇವರ ಮೇಲೆ ಹೆಚ್ಚಿನ ಪ್ರಭಾವ ಬೀರಿದವರೆಂದರೆ ಅರಮನೆ ಗವಿಮಠದ ಶ್ರೀ ಗೌರೀಶಂಕರ ಮಹಾಸ್ವಾಮಿಗಳು. ಅಂದಿನ ಉದ್ದಾಮ ಪಂಡಿತರೂ ಮತ್ತು ದಾರ್ಶನಿಕರೂ ಆಗಿದ್ದ ಇವರು ಶಿವಯೋಗದ ಸಾಕಾರಮೂರ್ತಿಯಾಗಿ ಯುವ ಜಗದ್ಗುರುಗಳವರೆಗೆ ಆಧ್ಯಾತ್ಮದ ಔನ್ನತ್ಯವನ್ನು ಪರಿಚಯಿಸಿ ದರು. ಆದರ್ಶ ಮತ್ತು ವಾಸ್ತವತೆಗಳ ತೊಟ್ಟಿಲಲ್ಲಿ ಯುವ ಜಗದ್ಗುರುಗಳ ಆಲೋಚನೆಗಳು ಬೆಳೆಯುವಂತೆ ಮಾಡಿದವರೇ ಈ ಈರ್ವರು ಮಹಾಪುರುಷರುಗಳು. ಜೊತೆಗೆ ಅಂದಿನ ಗಣ್ಯ ವ್ಯಕ್ತಿಗಳೂ, ಸಿರಿವಂತರೂ ಮತ್ತು ನಾಡಿನ ಹಿತಚಿಂತಕರೂ ಎಂದಿನಂತೆ ಶ್ರೀಪೀಠದ ಆದರ್ಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ನಿರೀಕ್ಷೆಗೆ ಮೀರಿದ ನೆರವನ್ನು ನೀಡಿದರು.





ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಂಘಟನಾಚತುರರಾಗಿ, ವೀರಶೈವ ತತ್ವಗಳಲ್ಲಿ ಅನನ್ಯ ನಿಷ್ಠೆಯನ್ನು ಹೊಂದಿ, ಬಸವಾದಿ ಶಿವಶರಣರ ಮಾರ್ಗಾನುಯಾಯಿಯಾಗಿ ನಡೆದುಬಂದಿರುವ ದೂರ ಸಾಮಾನ್ಯರಿಗೆ ಅಗಮ್ಯ! ಜ್ಞಾನಾನ್ನ ದಾಸೋಹದ ಮಹತ್ವ ಮತ್ತು ಅಗತ್ಯತೆಯನ್ನು ಬಹಳ ಹಿಂದೆಯೇ ಮನಗಂಡು ಕಾರ್ಯೋನ್ಮುಖರಾದ ಕನ್ನಡ ನಾಡಿನ ಕೆಲವೇ ಮಠಮಾನ್ಯಗಳಲ್ಲಿ ಸುತ್ತೂರು ಪೀಠದ ಸ್ಥಾನ ಅಗ್ರಮಾನ್ಯವಾದುದು. ಹಿಂದಿನ ಶ್ರೀಗಳಾದ ಪಟ್ಟದ ಶ್ರೀ ಶಿವರಾತ್ರೀಶ್ವರರ ಕಾಲದಲ್ಲೇ ಕಿರು ದೆರೆಯಾಗಿ ಹರಿಯತೊಡಗಿದ ವೀರಶೈವ ಮಠಗಳ ಈ ವಿಶಿಷ್ಟ ದಾಸೋಹ ಪರಂಪರೆಗೆ ಹೆಚ್ಚಿನ ಮಹತ್ವ ಬಂದುದು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕಾಲದಲ್ಲೆ. ಮೈಸೂರು ಜಿಲ್ಲೆಯಲ್ಲಿ ಅದರಲ್ಲೂ ಜಿಲ್ಲೆಯ ಹಳ್ಳಿಗಾಡಿನಲ್ಲಿ, ವಿದ್ಯಾಪ್ರಸಾರದ ಕ್ರಾಂತಿಗೆ ಪ್ರಥಮ ಹೆಜ್ಜೆಯನ್ನಿಟ್ಟು ಈ ದಿಕ್ಕಿನಲ್ಲಿ ಮಹತ್ವಪೂರ್ಣ ಕನಸನ್ನು ಮೊಟ್ಟಮೊದಲ ಬಾರಿಗೆ ಕಂಡ ಕೀರ್ತಿ ಸುತ್ತೂರು ಪೀಠಕ್ಕೆ ಸಲ್ಲಬೇಕು. ಸ್ವಾತಂತ್ರ್ಯಪೂರ್ವದಲ್ಲಿಯೇ ವಿದ್ಯಾರ್ಥಿನಿಲಯವನ್ನು ಎಲ್ಲ ಜನಾಂಗದ ಬಡ ವಿದ್ಯಾರ್ಥಿಗಳಿಗೂ ತೆರೆದು ಈ ಸೀಮೆಯ ಸಹಸ್ರಾರು ವಿದ್ಯಾರ್ಥಿಗಳ ಹೃದಯಗಳಲ್ಲಿ ಜ್ಞಾನದೀವಿಗೆಯನ್ನು ಹಚ್ಚಿಸಿದ ಪ್ರಥಮಾಚಾರ್ಯರೇ ಸುತ್ತೂರಿನ ಇಂದಿನ ಜಗದ್ಗುರುಗಳವರು. ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಸ್ವಾತಂತ್ರ್ಯಾನಂತರದ ದಿನಗಳು ಹೇಗಿರಬೇಕೆಂದು ಊಹಿಸಿ, ಒಂದು ಕಡೆ ಸ್ವಾತಂತ್ರ್ಯಕ್ಕಾಗಿ ರಾಜಕೀಯ ಚಳುವಳಿ ನಡೆಯುತ್ತಿದ್ದರೆ, ಮತ್ತೊಂದು ಕಡೆ ನಮ್ಮ ಸ್ವಾತಂತ್ರ್ಯ ಪರಕೀಯರ ಪಾಲಾಗಲು ಕಾರಣವಾದ ಅಜ್ಞಾನ, ಅಂಧಕಾರ, ಮೌಢ್ಯಗಳನ್ನು ಹೊಡೆದಟ್ಟಲು ವಿದ್ಯಾಪ್ರಸಾರವೇ ಪ್ರಬಲ ಅಸ್ತ್ರವೆಂದು ತಿಳಿದು ಅದನ್ನು ಅಂದೇ ಪ್ರಯೋಗಿಸಲು ಮೊದಲು ಮಾಡಿದ ಕೀರ್ತಿ ಒಟ್ಟಾರೆ ವೀರಶೈವ ಮಠಗಳಿಗೇ ಸಲ್ಲಬೇಕು. ಆದರೆ ಸುತ್ತೂರು ಮಠಕ್ಕೆ ಇದೇನು ಹೊಸದಾಗಿರಲಿಲ್ಲ. ಈ ಮಠದ ಸಾವಿರ ವರ್ಷಗಳ ಇತಿಹಾಸ ಪರಂಪರೆಯಲ್ಲಿ ಈ ಕಾರ್ಯ ಅವ್ಯಾಹತವಾಗಿ ನಡೆದುಕೊಂಡೇ ಬಂದಿದೆ. ಅಂದಂದಿನ ಸಾಮಾಜಿಕ ಮತ್ತು ರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸುವಲ್ಲಿ ಸುತ್ತೂರು ಪೀಠ ಎಂದೂ ಹಿಂದೆ ಬಿದ್ದಿಲ್ಲ. ಇದಕ್ಕೆ ಪೂರಕವಾಗಿ, ಹನ್ನೆರಡನೇ ಶತಮಾನದ ಶಿವಶರಣರ ಆಶೋತ್ತರ ಗಳನ್ನು ಈ ಭಾಗದ ಕರ್ನಾಟಕದಲ್ಲಿ ಕಾರ್ಯರೂಪಕ್ಕೆ ತರುವುದರಿಂದ ಹಿಡಿದು, ಹದಿನೈದನೇ ಶತಮಾನದ ಘನಲಿಂಗದೇವರು ಆದಿಯಾಗಿ ಸಾಮಾಜಿಕ ಕ್ರಾಂತಿಯಲ್ಲಿ ಪಾಲ್ಗೊಂಡ ಅನೇಕ ಸಂದರ್ಭಗಳನ್ನು ಇಲ್ಲಿ ಸ್ಮರಿಸಬಹುದು.

ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಮೇಲೆ ಸೂಚಿಸಿದ ಹಿನ್ನೆಲೆಯಲ್ಲೇ ನೋಡಬೇಕು. ಇವರ ಪೂರ್ವಿಕರು ಸಮಾಜಕ್ಕೆ ಕೊಟ್ಟ ಕೊಡುಗೆ

ಅಪೂರ್ವವಾದುದೇ ಸರಿ. ಇದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ, ಸುತ್ತೂರು ಪೀಠದ ಇಂದಿನ ಸೇವಾಕ್ಷೇತ್ರದ ವಿಸ್ತಾರದ ಕಲ್ಪನೆ ಅವರಿಗಿತ್ತೆ ಎಂದರೆ ಉತ್ತರ ಹೇಳುವುದು ಕಷ್ಟ. ಕಾರಣ, ಹಿಂದಿನವರ ಕಲ್ಪನೆಗೂ ಮೀರಿ ಈ ಪೀಠ ಇಂದು ಬೆಳೆದು ನಿಂತಿದೆ. 1928ರಲ್ಲಿಯೇ, ತನ್ನ ಹನ್ನೆರಡನೇ ವಯಸ್ಸಿನಲ್ಲಿ ಪಟ್ಟಾಧಿಕಾರವನ್ನು ವಹಿಸಿಕೊಂಡ ಶ್ರೀಗಳವರು ಈಗಾಗಲೇ ಅರವತ್ತೈದು ಸಂವತ್ಸರಗಳನ್ನು ದಾಟಿದ್ದಾರೆ. ಅವರು ಅಧಿಕಾರವನ್ನು ವಹಿಸಿಕೊಂಡಾಗ ಇದ್ದ ಉತ್ಸಾಹಕ್ಕೆ ಮಾತ್ರ ವಯಸ್ಸಾಗಿಲ್ಲವೆಂದು ಯಾರಾದರೂ ಹೇಳಬಹುದು. ವರ್ಷದಿಂದ ವರ್ಷಕ್ಕೆ ಅವರ ಸೇವಾಕ್ಷೇತ್ರ ವಿಸ್ತಾರವಾಗುತ್ತಲೇ ಇದೆ. ಹೊಸ ಹೊಸ ಸಂಸ್ಥೆಗಳು ಅವರ ನೇತೃತ್ವದಲ್ಲಿ ಆರಂಭವಾಗುತ್ತಿವೆ. 1954ರಲ್ಲಿ ಅಸ್ತಿತ್ವಕ್ಕೆ ಬಂದ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠದ ಆಶ್ರಯದಲ್ಲಿ ಇಂದು ನಡೆಯುತ್ತಿರುವ ಸಂಘಸಂಸ್ಥೆಗಳು 350ಕ್ಕೂ ಹೆಚ್ಚಿವೆ. ಈ ಪೀಠದ ಕುಲಾಧಿಪತಿಗಳಾಗಿ, ಸುತ್ತೂರು ವೀರಸಿಂಹಾಸನಾಧಿಪತಿಗಳಾಗಿ ಜಗದ್ಗುರುಗಳು ಮುಂಬರುವ ವರ್ಷಗಳಲ್ಲಿ ಹೊಸ ಹೊಸ ಯೋಜನೆಗಳ ಮೂಲಕ ಸೇವಾಕ್ಷೇತ್ರವನ್ನು ಇನ್ನೂ ವಿಸ್ತಾರಗೊಳಿಸುವ ಆಲೋಚನೆಯಲ್ಲಿದ್ದಾರೆ.

ಈ ಸಂದರ್ಭದಲ್ಲಿ ಇಂತಹ ಮಹದುಪಕಾರವನ್ನು ಮಹಾಸ್ವಾಮಿಗಳವರಿಂದ ಪಡೆದಿರುವ ಸಮಾಜ ಅವರಿಗೆ ಏನನ್ನು ತಾನೆ ಮರಳಿ ಕೊಡಬಲ್ಲುದು! ನಮ್ಮಿಂದ ಏನೊಂದನ್ನೂ ಅವರು ನಿರೀಕ್ಷಿಸಿಲ್ಲವೆಂಬುದು ಎಲ್ಲರೂ ತಿಳಿದಿರುವ ವಿಷಯವೇ ಆಗಿದೆ. ಅವರು ರೂಢಿಸಿಕೊಟ್ಟಿರುವುದರ ಸದುಪಯೋಗವನ್ನು ಸಮಾಜ ಮಾಡಿಕೊಂಡರೇನೇ ಅವರಿಗೆ ತೃಪ್ತಿ. ಅವರ ತಪಸ್ಸಿನ ಫಲವಾಗಿ ನಮಗೆ ದೊರೆತಿರುವುದನ್ನು ಇನ್ನೂ ಹತ್ತು ಜನಕ್ಕೆ, ನೂರು ಜನಕ್ಕೆ, ಸಾವಿರಾರು ಜನಕ್ಕೆ ತಲುಪುವಂತೆ ಮಾಡುವ ಗುರುತರ ಹೊಣೆಗಾರಿಕೆ ಈ ಸಂಸ್ಥೆಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಬಂಧಪಟ್ಟ ಎಲ್ಲರ ಮೇಲಿದೆಯೆಂದಷ್ಟೇ ಈ ಸಂದರ್ಭದಲ್ಲಿ ಹೇಳಬಹುದು.

□



# ತಂಪು ನೆಳಲು-ಹಕ್ಕಿ ಸಾವಿರಾರು

**ಪ್ರೊ. ಜಿ.ಎಸ್. ಜಯದೇವ್**

1976ರ ಸಮಯ. ಆಗ ನಾನು ಕೆಲಸಕ್ಕಾಗಿ ಅಲ್ಲಿ ಇಲ್ಲಿ ಅರ್ಜಿ ಹಾಕುತ್ತ ಅಲೆಯುತ್ತಿದ್ದೆ. ತಂದೆಯವರು (ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ) ನನ್ನ ಈ ಸಮಸ್ಯೆ ತಮಗೆ ಯಾವ ರೀತಿಯಲ್ಲೂ ಸಂಬಂಧಿಸಿಲ್ಲವೇನೋ ಎಂಬಂತೆ ಕಾಲೇಜು, ಅಧ್ಯಯನದಲ್ಲಿ ಮುಳುಗಿ ಹೋಗಿದ್ದರು. ಇದು ನನ್ನ ಪಾಲಿಗೆ ತುಂಬಾ ಅನಿರೀಕ್ಷಿತ ಸಂಗತಿಯೇನು ಆಗಿರಲಿಲ್ಲ. ಆದರೆ ನನ್ನ ತಂದೆಯವರ ವಿದ್ಯಾರ್ಥಿಗಳು, ಸ್ನೇಹಿತರು ನನ್ನ ಸಮಸ್ಯೆಗೆ ಸ್ಪಂದಿಸುತ್ತ ನೆರವಿಗೆ ಬರುತ್ತಿದ್ದರು. ಪುಣ್ಯಕ್ಕೆ ಹಿರಿಯ ಕವಿಗಳಾದ ಶ್ರೀ ಕೆ.ಸಿ. ಶಿವಪ್ಪನವರು ಸುತ್ತೂರು ಸ್ವಾಮೀಜಿಯವರು ಬನಶಂಕರಿಯ ಗೆಸ್ಟ್ ಹೌಸ್‌ಗೆ ಬರುತ್ತಾರೆಂದು ತಂದೆಯವರ ಜೊತೆ ಹೋಗಿ ಅವರನ್ನು ಭೇಟಿಯಾದರೆ ನನಗೆ ಕೆಲಸ ಸಿಗಬಹುದೆಂದು ಸೂಚಿಸಿದರು. ಬಡಪೆಟ್ಟಿಗೆ ಬಗ್ಗದ ನನ್ನ ತಂದೆಯವರನ್ನು ಅವರೇ ಒಪ್ಪಿಸಿದರು. ನನಗೆ ಬಹಳ ಆನಂದವಾಯಿತು; ಕೆಲಸ ಸಿಕ್ಕೇಬಿಟ್ಟಿತು ಎಂದು ಭಾವಿಸುತ್ತ ನಿಗದಿತ ದಿನದಂದು ಬನಶಂಕರಿ ದೇವಸ್ಥಾನದ ಎದುರಿಗೆ ಇದ್ದ ಗೆಸ್ಟ್ ಹೌಸ್‌ಗೆ ನಮ್ಮ ಸ್ಟ್ಯಾಂಡರ್ಡ್ ಹೆರಾಲ್ಡ್ ಕಾರಿನಲ್ಲಿ ಹೋದೆವು.

ಸ್ವಾಮೀಜಿಯವರಿಗೆಂದು ಒಂದಷ್ಟು ಹಣ್ಣು, ಹೂ ತೆಗೆದುಕೊಂಡು ಹೋಗಿದ್ದೆವು. ಆ ಗೆಸ್ಟ್‌ಹೌಸ್ ಒಂದು ಸಾಧಾರಣ ಮನೆಯಂತೆ ಇತ್ತು. ಸ್ವಾಮೀಜಿಯವರು ಒಂದು ದೊಡ್ಡ ಕುರ್ಚಿಯ ಮೇಲೆ ಕುಳಿತಿದ್ದರು. ನಮ್ಮನ್ನು ಕಂಡವರೇ ಪ್ರೀತಿಯಿಂದ ನಸುನಗುತ್ತ ಸ್ವಾಗತಿಸಿದರು. ಸ್ವಾಮೀಜಿಯವರ ಬಗ್ಗೆ ನನಗೆ ಇದ್ದ ಭಯ, ಆತಂಕಗಳು ಆ ಕ್ಷಣವೇ ಮಾಯವಾದವು. ಅವರ ನಿಷ್ಕಲ್ಮಶವಾದ ಪ್ರೇಮಭರಿತ ನಗೆ 'ನೀನು ನನ್ನವನು' ಎಂದು ಹೇಳುತ್ತಿತ್ತು. ಅವರ ಈ ಸ್ವೀಕಾರ, ಆ ಪ್ರೀತಿಯ ನಗೆ ಅವರ ಜೀವನದ ಕೊನೆಯವರೆಗೂ ಜೀವಂತವಾಗಿತ್ತು. ಎಂತಹ ತೀಕ್ಷ್ಣಮತಿಯ ವಿಮರ್ಶಾಬುದ್ಧಿಯನ್ನೂ ಬಳಸಿ ಒಳಮನೆಗೆ ಪ್ರವೇಶಿಸಿ ಹೃದಯವನ್ನು ತಟ್ಟುತ್ತಿತ್ತು. ಹಾಗಾಗಿ ಅವರನ್ನು ಟೀಕಿಸಬಲ್ಲವರೂ ಸಹ ಅವರ ಎದುರು ನಿಂತಾಗ ಗರುಡರೇಖೆಯಡಿ ನಿಂತ ಸರ್ಪ ಸುಮ್ಮನಾಗುವಂತೆ ವಿನಮ್ರರಾಗಿ ಬಿಡುತ್ತಿದ್ದರು.

ಸರಿ, ನಾವು ಬಂದ ಉದ್ದೇಶವನ್ನು ವಿವರಿಸಿದೆವು. ನಾನು ಎಂ.ಎಸ್ಸಿಯಲ್ಲಿ ಫಸ್ಟ್‌ಕ್ಲಾಸ್ ತೆಗೆದುಕೊಂಡಿರುವುದಾಗಿ ನಮ್ಮಪ್ಪ ಹೇಳಿದರು. ಸ್ವಾಮೀಜಿಯವರು ಖಚಿತಪಡಿಸಿಕೊಳ್ಳಲು ನನ್ನನ್ನು ಪುನಃ ಕೇಳಿದರು. "ಫೈನಲ್ ಇಯರ್‌ನಲ್ಲಿ ಫಸ್ಟ್‌ಕ್ಲಾಸ್ ಆದರೆ ಫಸ್ಟ್ ಇಯರ್‌ನಲ್ಲಿ ಸೆಕೆಂಡ್ ಕ್ಲಾಸ್" ಎಂದೆ. "ಓ ಹಾಗೋ ವಿಷಯ" ಎಂದು ಉದ್ಗರಿಸಿದರು. ಆದರೆ ನಾನು ಇದ್ದದ್ದನ್ನು ಇದ್ದ ಹಾಗೆ ಹೇಳಿದ್ದರಿಂದ ಅವರಿಗೆ ಸಂತೋಷವೇ ಆಗಿದ್ದು ಕಂಡುಬಂತು. ರಸ್ತೆಯಲ್ಲಿ ನಿಲ್ಲಿಸಿದ್ದ ನಮ್ಮ ಕಾರು ಅವರು ಕುಳಿತಲ್ಲಿಗೆ ಕಾಣುತ್ತಿತ್ತು. 'ಯಾರು ಕಾರನ್ನು ಡ್ರೈವ್ ಮಾಡಿದ್ದು' ಎಂದರು. ಬಹಳ ಹೆಮ್ಮೆಯಿಂದ 'ಸ್ವಾಮೀಜಿ ನಾನೇ ಕಾರ್ ಡ್ರೈವ್ ಮಾಡಿದ್ದು ಎಂದೆ'. ನಸುನಗುತ್ತ ಮತ್ತೆ ಮೆಚ್ಚುಗೆ ವ್ಯಕ್ತಪಡಿಸಿದರು. ಆ ವಯಸ್ಸಿನ ಹುಡುಗರಿಗೆ ಡ್ರೈವಿಂಗ್ ಮಾಡುವುದೇ ಒಂದು ದೊಡ್ಡ ಹೆಮ್ಮೆಯ ವಿಷಯ ಎಂದು ಸ್ವಾಮೀಜಿಯವರಿಗೆ ತಿಳಿದಿತ್ತು. ಹೀಗೆ ನಾನು ಭೇಟಿಯಾದ ಅನೇಕ ಸಂದರ್ಭಗಳಲ್ಲಿ ಒಂದಲ್ಲ ಒಂದು ಕಾರಣಕ್ಕೆ ನನ್ನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ನನ್ನ ಆತ್ಮವಿಶ್ವಾಸವನ್ನು ಹೆಚ್ಚಿಸುತ್ತಿದ್ದರು.

ಕೆಲಸ ಸಿಗುವುದು ಇನ್ನೂ ದೂರವಿದೆ ಎಂದು ನನಗೆ ನಿಧಾನವಾಗಿ ಅರಿವಾಗತೊಡಗಿತು. ಮೈಸೂರಿಗೆ ಬಂದು ಸ್ವಾಮೀಜಿಯವರನ್ನು ಕಂಡು ನಮ್ಮಪ್ಪ ಕೊಟ್ಟ ಕಾಗದವನ್ನು ಕೊಟ್ಟೆ. ಅದರಲ್ಲಿ ತಮ್ಮ ಮಗನಿಗೆ ಕೆಲಸ ಕೊಡಬೇಕೆಂದು ವಿನಯಪೂರ್ವಕವಾಗಿ ಬರೆದಿದ್ದರು. ಆದರೆ ಸ್ವಾಮೀಜಿಯವರು ಕಾಗದ ನೋಡುತ್ತಲೆ 'ನಿಮ್ಮ ತಂದೆಯವರು ಏಕೆ ಬರಲಿಲ್ಲ' ಎಂದರು. ನನ್ನ ಬಳಿ ಉತ್ತರ ಇರಲಿಲ್ಲ. 'ಹೇಳಿ ಕಳಿಸ್ತೀನಿ' ಎಂದರು. ನಾನು ಪುನಃ ಹಿಂದಕ್ಕೆ ಹೋದೆ. ಅನಂತರ ಕೆ.ಸಿ. ಶಿವಪ್ಪನವರಿಗೆ ವಿಷಯ ತಿಳಿಸಿದೆ. 'ಛೇ, ನಿಮ್ಮ ತಂದೆಯವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕಾಗಿತ್ತು' ಎಂದರು. ಇದಾದ ಕೆಲವು ದಿನಗಳ ಬಳಿಕ ಕೆ.ಸಿ. ಶಿವಪ್ಪನವರು ಸ್ವಾಮೀಜಿಯವರನ್ನು ತಮ್ಮ ಮನೆಗೆ ಪಾದಪೂಜೆಗೆ ಕರೆದಿದ್ದಾಗ ನನ್ನ ಕೆಲಸದ ಬಗ್ಗೆ ಪ್ರಸ್ತಾಪಿಸಿದರು. ಇಷ್ಟು ಸಾಲದೆಂಬಂತೆ ನಾನು ಪುನಃ ಮೈಸೂರಿಗೆ ಹೋಗಿ ನಮ್ಮ ತಂದೆಯವರ ಆಪ್ತ ಸ್ನೇಹಿತರಾದ ಮೇ. ರಾಜೇಶ್ವರಯ್ಯ ಅವರನ್ನು ಸ್ವಾಮೀಜಿಯವರ ಬಳಿ ಕರೆದುಕೊಂಡು ಹೋದೆ. ಆಗಲೂ ಸ್ವಾಮೀಜಿಯವರು "ನೀವೆಲ್ಲ ಈ ಹುಡುಗನಿಗಾಗಿ ಬರ್‍ತಾ ಇದ್ದೀರಿ, ಇವರ ತಂದೆ ಏಕೆ ಬರುತ್ತಿಲ್ಲ?" ಎಂದರು. ಆನಂತರ ನಾನು ಏನೋ ಕಾರಣಕ್ಕೆ ತ.ಸು. ಶಾಮರಾಯರ ಮನೆಗೆ ಹೋದೆ, ನನ್ನ ಕಷ್ಟ ಹೇಳಿಕೊಂಡೆ. 'ಶಿವರುದ್ರಪ್ಪ ಬರದೇ ಇದ್ರೆ ಏನು, ನಾನೇ ಬರ್ತೀನಿ, ಬಾ' ಎಂದು ಹೇಳುತ್ತ ಅವರೇ ನನ್ನನ್ನು ಸ್ವಾಮೀಜಿಯವರ ಬಳಿಗೆ ಕರೆದುಕೊಂಡು ಹೋಗಿ 'ಈ ಹುಡುಗನಿಗೆ ಕೆಲಸ ಕೊಡಲೇಬೇಕೆಂದು ಆಗ್ರಹದಿಂದ ಕೇಳಿಕೊಂಡರು'. ಆಗಲೂ ಸ್ವಾಮೀಜಿಯವರು ಹೇಳಿ ಕಳಿಸ್ತೀನಿ ಎಂದು ಹೇಳಿ ನಮ್ಮನ್ನು ಕಳುಹಿಸಿಕೊಟ್ಟರು. ಒಂದೆರಡು ದಿನಗಳಲ್ಲಿ ಸ್ವಾಮೀಜಿಯವರು ಹೇಳಿಕಳುಹಿಸಿರುವುದಾಗಿಯೂ ನಾನು ತಕ್ಷಣ ಸ್ವಾಮೀಜಿಯವರನ್ನು ಹೋಗಿ ಕಾಣಬೇಕೆಂದೂ ಶ್ರೀ ಶಿವಪ್ಪನವರು ತಿಳಿಸಿದರು. ತಕ್ಷಣವೇ ನಾನು ಸುತ್ತೂರು

ಮಠಕ್ಕೆ ಬಂದೆ. ಸ್ವಾಮೀಜಿಯವರು ಒಂದು ಸಣ್ಣದಾದ ಚೀಟಿಯಲ್ಲಿ 'ಕೆಲಸ ಕೊಡುವುದು' ಎಂದು ಬರೆದು ನನ್ನ ಕೈಗೆ ಕೊಟ್ಟು 'ಚಾಮರಾಜನಗರಕ್ಕೆ ಹೋಗು' ಎಂದು ಹೇಳಿದರು.

ಆ ಚೀಟಿ ಪವಾಡಸದೃಶವಾದ ಕೆಲಸ ಮಾಡಿತು. ಚಾಮರಾಜನಗರದ ಕಾಲೇಜಿನಲ್ಲಿ ಯಾವ ಅಡಚಣೆಯೂ ಇಲ್ಲದೆ ನನಗೆ ಅವಕಾಶ ದೊರೆಯಿತು. ನಾನು ಆ ಕಾಲೇಜಿನ ಪ್ರಾಣಿಶಾಸ್ತ್ರದ ಉಪನ್ಯಾಸಕನಾಗಿ ನೇಮಕಗೊಂಡೆ. ಆಗಿನ ಪ್ರಾಂಶುಪಾಲರಾದ ಶ್ರೀ ಮಲ್ಲಿನಾಥಯ್ಯನವರ ಮನೆಯಲ್ಲೇ ತಾತ್ಕಾಲಿಕವಾಗಿ ಇರಲು ಸ್ಥಳವೂ ಸಿಕ್ಕಿತ್ತು. ಬಹಳ ಬೇಗ ಚಾಮರಾಜನಗರದ ವಾತಾವರಣಕ್ಕೆ ಹೊಂದಿಕೊಂಡುಬಿಟ್ಟೆ. ಆದರೆ ತಿಂಗಳುಗಳು ಕಳೆದರೂ ನನಗೆ ಸಂಬಳ ಬರುತ್ತಿಲ್ಲ, ದುಡ್ಡೂ ಇರಲಿಲ್ಲ. ನನ್ನ ತಂದೆಯವರ ಬಳಿ ತೆಗೆದುಕೊಂಡು ಬಂದಿದ್ದ ಹಣವೆಲ್ಲಾ ಖರ್ಚಾಗಿ ಹೋಗಿತ್ತು. ಏನು ಮಾಡುವುದು ಎಂದು ಚಿಂತಿಸುತ್ತಿದ್ದಾಗ ನನ್ನ ಸಹೋದ್ಯೋಗಿಗಳು ಸ್ವಾಮೀಜಿಯವರ ಬಳಿ ಹೋಗಿ ಚೀಟಿ ತಂದು ಕಾಲೇಜಿನ ಸೂಪರಿಂಟೆಂಡೆಂಟ್‌ರ ಬಳಿ ಹಣ ಪಡೆಯುತ್ತಿದ್ದುದು ಗೊತ್ತಾಯಿತು. ನಾನೂ ಇದೇ ವಿಧಾನ ಅನುಸರಿಸಬೇಕೆಂದು ಸ್ವಾಮೀಜಿಯವರನ್ನು ಕಾಣಲು ಹೋದೆ. ಈ ವೇಳೆಗಾಗಲೇ ಸ್ವಾಮೀಜಿಯವರ ಬಳಿ ಹಠ ಹಿಡಿದು ಕುಳಿತುಕೊಳ್ಳದೇ ಇದ್ದರೆ ಕೆಲಸವಾಗುವುದಿಲ್ಲ ಎಂಬ ವಿಷಯ ತಿಳಿದಿತ್ತು. ಹಾಗಾಗಿ ನಾನು ದೃಢ ನಿರ್ಧಾರ ಮಾಡಿ ಸ್ವಾಮೀಜಿಯವರ ಎದುರು ಹಠ ಹಿಡಿದು ಕುಳಿತುಕೊಳ್ಳಬೇಕೆಂದು ನಿರ್ಧರಿಸಿದ್ದೆ. ಸ್ವಾಮೀಜಿಯವರಿಗೆ ನಾನು ಏಕೆ ಬಂದಿದ್ದೇನೆ ಎಂದು ಮೊದಲೇ ತಿಳಿದುಹೋಯಿತು. ಆದರೂ 'ಏನು ಬಂದೆ' ಎಂದರು. ನಾನು ಖರ್ಚಿಗೆ ದುಡ್ಡಿಲ್ಲ, ಹಣ ಬೇಕು ಎಂದೆ. 'ನಿಮ್ಮಪ್ಪನ ಹತ್ರ ಇಸ್ಕೊಂಡಿರು ಇನ್ನೊಂದು ಸ್ವಲ್ಪ ದಿನ ಆದ ಮೇಲೆ ಸಂಬಳ ತಾನಾಗೇ ಬರುತ್ತೆ' ಎಂದರು. ನಾನು 'ನಮ್ಮಪ್ಪ ಕೊಡೋದಿಲ್ಲ ಸ್ವಾಮೀಜಿ, ನೀವೇ ಒಂದು ಚೀಟಿ ಕೊಡಿ ಸೂಪರಿಂಟೆಂಡೆಂಟ್‌ರವರ ಹತ್ತಿರ ದುಡ್ಡು ತಗೋತೀನಿ' ಎಂದೆ. ಅವರಿಗೆ ಸ್ವಲ್ಪ ಸಿಟ್ಟೇ ಬಂತು. 'ಯಾವ ಚೀಟೀನೂ ಕೊಡಲ್ಲ' ಎಂದರು. ಸರಿ ನಾನು ಮೊದಲೇ ನಿರ್ಧಾರ ಮಾಡಿಕೊಂಡಂತೆ ನನಗೆ ಸ್ವಲ್ಪವಾದರೂ ತಿಂಗಳ ಖರ್ಚಿಗೆ ದುಡ್ಡು ಕೊಡಲೇಬೇಕೆಂದು ಹಠ ಹಿಡಿದು ಕುಳಿತೆ. ಅವರಿಗೆ ಮತ್ತಷ್ಟು ಸಿಟ್ಟು ಬಂತು. 'ಬುದ್ಧಿ ಇಲ್ಲ ನಿನಗೆ, ದಡ್ಡ ನೀನು, ಎದ್ದು ನಡೀತಾ ಇರು' ಎಂದು ಗದರಿಸಿದರು. 'ಸರಿ ನನ್ನ ಬೇಳೆ ಯಾಕೋ ಬೇಯ್ತಾ ಇಲ್ಲ, ಚೀಟಿನೂ ಇಲ್ಲ ಎಂದ ಮೇಲೆ ದುಡ್ಡೂ ಇಲ್ಲ' ಎಂದು ಭಾವಿಸುತ್ತ ಹಿಂತಿರುಗಿದೆ. ಆದರೆ ಆಶ್ಚರ್ಯ ಕಾದಿತ್ತು. ಮರುದಿನ ಕಾಲೇಜಿನ ಸೂಪರಿಂಟೆಂಡೆಂಟರು ನನ್ನನ್ನು ಕರೆದು 'ಬುದ್ಯೋರು ನಿಮಗೆ ದುಡ್ಡು ಕೊಡೋಕೆ ಹೇಳಿದಾರೆ' ಎಂದು ಹೇಳಿ ಹಣ ಕೊಟ್ಟರು. ನನಗೆ ಬಹಳ ಸಂತೋಷವಾಯಿತು.



ಮತ್ತೊಂದು ಬಾರಿ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಬಳಿ ವಿಲಕ್ಷಣವಾದ ಒಂದು ಬೇಡಿಕೆಯನ್ನು ಇಟ್ಟೆ. ಏನೆಂದರೆ ಬಿಳಿಗಿರಿರಂಗನ ಬೆಟ್ಟದಲ್ಲಿ ಗಿರಿಜನರಿಗಾಗಿ ಸ್ವಯಂಸೇವಾ ಕೆಲಸ ಮಾಡಲು ಒಂದು ವರ್ಷ ರಜಾ ಬೇಕೆಂದು ಕೇಳಿದೆ. ಸಾವಧಾನವಾಗಿ ನನ್ನ ಅಹವಾಲನ್ನೆಲ್ಲಾ ಕೇಳಿಸಿಕೊಂಡರು. ನನ್ನ ಈ ಯೋಜನೆಯ ಬಗ್ಗೆ ಅವರಿಗೆ ಸಹಮತ ಸಹಾನುಭೂತಿಗಳಿದ್ದುದು ನನ್ನ ಅರಿವಿಗೆ ಬಂತು. 'ಕಾಲೇಜ್ನಲ್ಲಿ ನೆಟ್ಟಗೆ ಪಾಠ ಮಾಡೋದುಬಿಟ್ಟು ಏನೇನೋ ಮಾಡೋಕೆ ಹೋಗ್ತಾನೆ' ಎಂದು ಅನೇಕರು ನನ್ನನ್ನು ಹೀಯಾಳಿಸಿದ್ದುಂಟು. ಆದರೆ ಸ್ವಾಮೀಜಿಯವರ ಪ್ರತಿಕ್ರಿಯೆ ಬೇರೆಯೇ ಆಗಿತ್ತು. ಕೆಲವೇ ದಿನಗಳಲ್ಲಿ ನನಗೆ ರಜೆ ಸಿಕ್ಕೇಬಿಟ್ಟಿತು. ಮತ್ತೆ ಹಲವು ವರ್ಷಗಳು ಪಾಠ ಮಾಡಿದ ಬಳಿಕ ಪುನಃ ಒಂದು ವರ್ಷದ ಸಂಬಳ ವಿಲ್ಲದ ರಜೆಯನ್ನು ಪೂಜ್ಯ ಶ್ರೀಗಳವರು ನನಗೆ ನೀಡಿದರು. ಈ ಬಾರಿ ನಾನು ರಜೆ ತೆಗೆದುಕೊಂಡದ್ದು ದಾವಣಗೆರೆಯ ರಾಮಕೃಷ್ಣ ಆಶ್ರಮದಲ್ಲಿ ನನ್ನ ಗುರುಗಳ ಸನ್ನಿಧಿಯಲ್ಲಿ ಸಾಧನೆ ಮಾಡಲು. ಪೂಜ್ಯ ಶ್ರೀಗಳವರು ನನ್ನ ಈ ಉದ್ದೇಶವನ್ನು ಮೆಚ್ಚಿ ರಜೆ ಮಂಜೂರು ಮಾಡಿದರು. ಅಲ್ಲದೆ ಪೂಜ್ಯರಿಗೆ ನನ್ನ ಸಮಾಜಕಾರ್ಯದ ಅಭಿರುಚಿ ಸಾಮರ್ಥ್ಯಗಳೆರಡೂ ತಿಳಿದಿತ್ತು. ಹಾಗಾಗಿ ಅವರು ಶಕ್ತಿಧಾಮ ಸಂಸ್ಥೆ ಪ್ರಾರಂಭವಾದಾಗ 'ಜಯದೇವ್ ನೀವೇ ಈ ಸಂಸ್ಥೆಯ ಕಾರ್ಯದರ್ಶಿಯಾಗಿ ಕೆಲಸ ಮಾಡಬೇಕು' ಎಂದು ಹೇಳಿದರು. ಗಣ್ಯಾತಿಗಣ್ಯರೇ ಸೇರಿ ಹುಟ್ಟುಹಾಕಿದ ಈ ಸಂಸ್ಥೆಯಲ್ಲಿ ಮುಂಚೂಣಿಯಲ್ಲಿದ್ದುಕೊಂಡು ಕೆಲಸ ಮಾಡಲು ನನಗೆ ಸ್ವಲ್ಪ ಭಯವೇ ಆಯಿತು. ಆದರೂ ಪೂಜ್ಯ ಶ್ರೀಗಳರ ಪ್ರೋತ್ಸಾಹದಿಂದ ಈ ಕೆಲಸವನ್ನೂ ಕೈಗೆತ್ತಿಕೊಂಡೆ. ಸ್ವಾಮೀಜಿಯವರು ನನ್ನನ್ನು ಮೈಸೂರಿಗೆ ವರ್ಗ ಮಾಡಿ ಕಾಲೇಜಿನ ಕೆಲಸದಲ್ಲಿ ಸ್ವಲ್ಪ ರಿಯಾಯಿತಿಯನ್ನು ಮಾಡಿಕೊಟ್ಟರು. ಹಾಗಾಗಿ ಅತ್ಯುತ್ತಮವಾದ ಸಮಾಜಕಾರ್ಯ ಮಾಡಲು ನನಗೆ ಸಾಧ್ಯವಾಯಿತು.

ಪರಮಪೂಜ್ಯ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಹೃದಯವಂತಿಕೆ ಮತ್ತು ಪ್ರೀತಿಯನ್ನು ಮಠದ ಸಂಸ್ಥೆಗಳಲ್ಲಿ ಕೆಲಸ ಮಾಡುವ ಎಲ್ಲರೂ ಅನುಭವಿಸಿದ್ದಾರೆ. ಮಕ್ಕಳ ಊಟಕ್ಕಾಗಿ ಚಿನ್ನದ ಕರಡಿಗೆಯನ್ನೇ ಅಡವಿಟ್ಟ ವಿಚಾರ ಅಥವಾ ನಾಯಿಮರಿಯೊಂದು ವಾಚ್‌ಮನ್ ಅಚಾತುರ್ಯದಿಂದ ಕೊಠಡಿಯಲ್ಲಿ ಬಂಧಿಯಾದಾಗ ಸ್ವಾಮೀಜಿಯವರ ಹೃದಯವಂತಿಕೆ ಎಲ್ಲರಿಗೂ ಅರ್ಥವಾಗುವ ವಿಷಯ. ಸ್ವಾಮೀಜಿಯವರ ಒಳ್ಳೆಯತನವನ್ನು ಶೋಷಣೆ ಮಾಡಿದವರೂ ಇರಬಹುದು. ಆದರೂ ಎಲ್ಲರ ಮೇಲೂ ಅವರ ತಂಪು ನೆಳಲು ಸಮಾನವಾಗಿ ಬೀಳುತ್ತಿತ್ತು. ನನ್ನ ಮಟ್ಟಿಗೆ ಹೇಳುವುದಾದರೆ ನಾನು ಮಾಡಿರುವ ಎಲ್ಲಾ ಒಳ್ಳೆಯ ಕೆಲಸಗಳಿಗೂ ಸುತ್ತೂರು ಶ್ರೀಗಳೇ ಬಹಳಮಟ್ಟಿಗೆ ಕಾರಣ. ಪೂಜ್ಯ ರಾಜೇಂದ್ರ

ಸ್ವಾಮೀಜಿಯವರಾಗಲಿ ಅಥವಾ ಪೂಜ್ಯ ಶ್ರೀ ದೇಶಿಕೇಂದ್ರ ಸ್ವಾಮೀಜಿಯವರಾಗಲಿ ನನ್ನ ಕೆಲಸಕ್ಕೆ ಅನುವು ಮಾಡಿಕೊಡದೆ ಇದ್ದಿದ್ದರೆ ನಾನು ನನ್ನ ಪಾಠಪ್ರವಚನಗಳನ್ನು ಮಾತ್ರ ಮಾಡಿ ಜೀವನದ ಅಧ್ಯಾಯವನ್ನು ಮುಗಿಸಬೇಕಾಗಿತ್ತು. ಪೂಜ್ಯ ಶ್ರೀ ದೇಶಿಕೇಂದ್ರ ಸ್ವಾಮೀಜಿಯವರು ನಾನು ವಾಲೆಂಟರಿ ರಿಟೈರ್ಮೆಂಟ್ ತೆಗೆದುಕೊಳ್ಳುವ ಇಚ್ಛೆ ವ್ಯಕ್ತಪಡಿಸಿದಾಗಲೆಲ್ಲಾ 'ಏಕೆ ಕೆಲಸ ಬಿಡುತ್ತೀರಿ? ನೀವು ನಿಮ್ಮ ಸಂಬಳವನ್ನು ಅನಾಥ ಮಕ್ಕಳಿಗೆ ತಾನೇ ಖರ್ಚು ಮಾಡುವುದು' ಎಂದು ಹೇಳುತ್ತಿದ್ದರು. ಆದರೆ ಸಂಸ್ಥೆಗಳ ಕೆಲಸದ ಒತ್ತಡದ ನಡುವೆ ಪಾಠಪ್ರವಚನಗಳಿಗೆ ತೊಂದರೆಯಾಗುತ್ತಿತ್ತು. ಹಾಗಾಗಿ ನಾನು ಇನ್ನೂ ಹತ್ತು ವರ್ಷ ಸರ್ವೀಸ್ ಇರುವಾಗಲೇ ವಾಲೆಂಟರಿ ರಿಟೈರ್‌ಮೆಂಟ್ ತೆಗೆದುಕೊಂಡೆ. ನನಗೆ ಬರುತ್ತಿದ್ದ ಪೆನ್ಷನ್ ನನಗೆ ಆರ್ಥಿಕ ಸ್ವಾವಲಂಬನೆಯನ್ನು ತಂದುಕೊಟ್ಟಿತು. ಹಾಗಾಗಿ ಜೆಎಸ್‌ಎಸ್ ಸಂಸ್ಥೆಯ ನೌಕರನಾಗಿದ್ದಕ್ಕೆ ನಾನು ಹೆಮ್ಮೆಪಡುತ್ತೇನೆ. ಪೂಜ್ಯ ಶ್ರೀ ರಾಜೇಂದ್ರ ಸ್ವಾಮೀಜಿಯವರ ತಂಪು ನೆಳಲನ್ನು ಇಂದಿಗೂ ಅನುಭವಿಸುತ್ತಿದ್ದೇನೆ.

□

## ರಾಜೇಂದ್ರ ಶ್ರೀವಾಣಿ

- ದುಡಿಮೆಯನ್ನು ಗೌರವಿಸಲು ಕಲಿತರೆ ಆಗ ದುಡಿಯುವವರನ್ನು ಗೌರವಿಸಲು ಕಲಿಯಬಹುದು.
- ಸಮಾಜದಿಂದ ತಂದುದನ್ನು ಸಮಾಜಕ್ಕೆ ಕೊಟ್ಟಿದ್ದೇವೆ, ಇದರಲ್ಲಿ ನಮ್ಮದು ಎನ್ನುವುದು ಏನಿದೆ?
- ಜ್ಞಾನ ದಾಸೋಹದಿಂದ ಮನುಷ್ಯನ ಸರ್ವತೋಮುಖ ಅಭಿವೃದ್ಧಿ ಸಾಧ್ಯ.
- ಹಸಿದವನಿಗೆ ಒಂದು ಹೊತ್ತು ಊಟ ಹಾಕುವುದು ದಾಸೋಹವಲ್ಲ, ಹಸಿದಿರುವ ಕುಟುಂಬಗಳಿಗೆ ಹಸಿವುಬಾರದಂತೆ ಮಾಡುವುದು ನಿಜವಾದ ದಾಸೋಹ.



# ಮತ್ತೂ ಅಷ್ಟು ನೆನಪುಗಳು

**ಪ್ರೊ. ಎ.ಎಸ್. ಜಯರಾಂ**

**ನ**ಮ್ಮ ಜನಪದರು "ಹೊತ್ತಾರೆ ಎದ್ದು ಯಾರ್‍ಯಾರ ನೆನೆಯಲಿ" ಎಂದು ಪ್ರಶ್ನಿಸಿಕೊಂಡು ಅದಕ್ಕೆ ತಮ್ಮ ಅನುಭವದಿಂದ ಉತ್ತರ ಕಂಡುಕೊಂಡಿದ್ದಾರೆ.

ನಾನೊಮ್ಮೆ ನಮ್ಮ ಕೌಟುಂಬಿಕ ಚರ್ಚೆಯಲ್ಲಿ, ನನ್ನ ಕಿರಿಯ ಮಗನೊಡನೆ, ಅಚಾನಕವಾಗಿ, ಅವರೆಲ್ಲರಿಗು ಸ್ವಲ್ಪ ಮುಜುಗರವೆನ್ನ ಬಹುದಾದ ಒಂದು ಹೇಳಿಕೆಯನ್ನು ಹರಿಯಬಿಟ್ಟೆ. "ಹೆತ್ತ ಮಕ್ಕಳು ಅತ್ತ ನಿಲಲಿ....." ಎಂಬ ಕವಿ ಕುಮಾರವ್ಯಾಸನ ನುಡಿ ಎಲ್ಲೋ ಅಂತರಾಳದಲ್ಲಿ ಹೊಳಲು ಕೊಡುತ್ತಿತ್ತು ಎಂದು ಕಾಣಿಸುತ್ತದೆ. ನಾನು ಹೊತ್ತಾರೆ ಎದ್ದು ನೆನೆಯುವುದು ಇಬ್ಬರನ್ನು ಮಾತ್ರ. ನನ್ನ ಜನ್ಮದಾತ ತಂದೆಯವರನ್ನು ಹಾಗೂ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳನ್ನು. ನಾನು ಹಾಗೆ ಮಾತಾಡಬೇಕೆಂದು ಪೂರ್ವಭಾವಿಯಾಗಿ, ಕನಸು ನನಸುಗಳಲ್ಲಿಯೂ ಅಂದುಕೊಂಡಿರಲಿಲ್ಲ. ಆದರೆ ಅದು ಅಂತರಾಳದಿಂದ, ಸುಪ್ತಪ್ರಜ್ಞೆಯಿಂದ ದಿಢೀರನೆ ಸಿಡಿದ ಮಾತಾಗಿತ್ತು. ನನ್ನ ಕಿರಿಯ ಮಗ ನೊಂದುಕೊಂಡು ನಿಮ್ಮ ಮಾತು ತುಂಬ harsh ಆಯ್ತು, ಅಪ್ಪ ಎಂದು ಪೆಚ್ಚಾದ.

ಜೆಎಸ್‌ಎಸ್ ಮಹಾವಿದ್ಯಾಸಂಸ್ಥೆಯ ಪದವಿ ಕಾಲೇಜುಗಳಲ್ಲಿ ಅಧ್ಯಾಪಕನಾಗಿ, ಪ್ರಾಧ್ಯಾಪಕನಾಗಿ, ಪ್ರಾಚಾರ್ಯನಾಗಿ (ಪ್ರಿನ್ಸಿಪಲ್) ಕಾರ್ಯ ನಿರ್ವಹಿಸುವ ಹೊಣೆಗಾರಿಕೆ ನನ್ನ ಪಾಲಿಗೆ ಲಭ್ಯವಾಗಿದ್ದುದರಿಂದ, ಪೂಜ್ಯರನ್ನು ಹತ್ತಿರದಿಂದ ಕಾಣುವ, ಅವರೊಡನೆ ಸಂವಾದಿಸುವ ವಿಶೇಷ ಭಾಗ್ಯ ನನ್ನದಾಗಿತ್ತು.

ಅವರು ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಕೈಗೊಂಡ ಹಲವಾರು ದಿಟ್ಟ ಯೋಜನೆಗಳ ಫಲವಾಗಿ ಇಂದು ಸಹಸ್ರಾರು ಮನೆಗಳಲ್ಲಿ ದೀಪ ಬೆಳಗಿದೆ; ಅಡುಗೆಯ ಒಲೆ ಹಚ್ಚಿದೆ; ಅಸಂಖ್ಯಾತ ಯುವ ಪೀಳಿಗೆಯ ಕಣ್ಣುಗಳಲ್ಲಿ ಕಾಂತಿ ಮೂಡಿದೆ. ಇನ್ನು ಸಾಂಸ್ಕೃತಿಕ, ಅಧ್ಯಾತ್ಮಿಕ, ನೈತಿಕ ಸುಧಾರಣೆಗಳ ಬಗ್ಗೆ ಪ್ರಸ್ತಾಪಿಸುವುದು ಅತ್ತ ಇರಲಿ. ಬುದ್ಧ, ಕ್ರಿಸ್ತ, ಬಸವಣ್ಣ, ವಿವೇಕಾನಂದ, ಗಾಂಧೀಜಿ ಮೊದಲಾದ ವಿಭೂತಿಪುರುಷರಂತೆ ಪೂಜ್ಯರ ಜೀವಿತಾವಧಿಯ ಸಾಧನೆಗಿಂತ, ಪರೋಕ್ಷದಲ್ಲಿ ಅವರು ಸಾಮಾಜಿಕರ, ಪ್ರಭಾವಿಗಳ, ಅವರ

ಸಂಪರ್ಕಕ್ಕೆ ಬಂದವರ ಅಂತರಾಳವನ್ನು ವ್ಯಾಪಿಸಿ, ಸ್ಫೂರ್ತಿಯ ಚಿಲುಮೆಯಾಗಿ, ಶ್ರೀಗಂಧದ ಪರಿಮಳವಾಗಿ, ಬೆಳಕಾಗಿ ಪ್ರತೀತಿಗೆ ಬರುತ್ತಿರುವುದು ನಮ್ಮಲ್ಲಿ ಅನೇಕರ ಅನುಭವಗಮ್ಯ ವಿಸ್ಮಯವಾಗಿದೆ.

* * *

ಕೆಲವು ಪ್ರಸಂಗಗಳನ್ನು ನಾನು "ಪ್ರಸಾದ" ದ್ವೈಮಾಸಿಕದಲ್ಲಿ (ಸಂಪುಟ 7, ಸಂಚಿಕೆ 4) "ನೆನಪಿನ ಬುತ್ತಿಯಿಂದ...." ಲೇಖನದಲ್ಲಿ ಸ್ಮರಿಸಿಕೊಂಡಿದ್ದೇನೆ. ಅವು ಎಷ್ಟೇ ಸ್ವಾರಸ್ಯವಾಗಿದ್ದರೂ ಪುನರುಕ್ತಿ ಆದೀತೆಂದು ಆ ಪ್ರಸಂಗಗಳನ್ನು ಕೈಬಿಟ್ಟು ಇತರ ಕೆಲವು, ಆಪಾತತಃ ಅತಿ ಸಾಮಾನ್ಯವೆನ್ನಬಹುದಾದ ಪ್ರಸಂಗಗಳನ್ನು, ನೆನಪುಗಳನ್ನು ಇಲ್ಲಿ ದಾಖಲಿಸಲು ಪ್ರಯತ್ನಿಸುವೆ.

1967ರಲ್ಲಿ ವಿದ್ಯಾಪೀಠದ ಆಶ್ರಯದಲ್ಲಿ ಎರಡು ಪದವಿ ಕಾಲೇಜುಗಳಿದ್ದವು – ಒಂದು ರಾಮಾನುಜ ರಸ್ತೆಯ ಕಾಲೇಜು, ಮತ್ತೊಂದು ಚಾಮರಾಜನಗರದ ಕಾಲೇಜು. ವಿದ್ಯಾಪೀಠದ ತಜ್ಞರ ಸಮಿತಿಯೊಂದು ವಿವಿಧ ವಿಷಯಗಳಿಗೆ ಸಂಬಂಧಿಸಿದ ಹತ್ತಾರು ಉಪನ್ಯಾಸಕರನ್ನು ಆಯ್ಕೆಮಾಡಿತು. ಶ್ರೀ ಎಂ.ಜಿ. ರೇಣುಕಪ್ರಸನ್ನ ಹಾಗೂ ನಾನು ಕನ್ನಡ ಉಪನ್ಯಾಸಕರಾಗಿ ಆಯ್ಕೆಗೊಂಡೆವು. ಪ್ರಸನ್ನ ಅವರನ್ನು ಮೈಸೂರಿನ ಕಾಲೇಜಿಗೂ ನನ್ನನ್ನು ಚಾಮರಾಜನಗರ ಕಾಲೇಜಿಗೂ ನೇಮಕಾತಿ ಮಾಡಿ ಆದೇಶವನ್ನು ರವಾನಿಸಿದ್ದರು.

ನಾನು ಪೂಜ್ಯರನ್ನು ಕಂಡು, ನನ್ನ ಅಂದಿನ ಕೌಟುಂಬಿಕ ಪರಿಸ್ಥಿತಿಯಲ್ಲಿ ಮೈಸೂರಿನ ಕಾಲೇಜಿನಲ್ಲಿಯೆ ಕೆಲಸ ಕೊಡುವಂತೆ ಪ್ರಾರ್ಥಿಸಿಕೊಂಡೆ. ಸ್ವಾಮೀಜಿಯವರು ನನ್ನನ್ನು ಕಂಡದ್ದು ಅದೇ ಮೊದಲಿರಬೇಕು. ಆದರೆ ನಾನು ಆ ಮುನ್ನ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಒಂದು ವರ್ಷ, ಅನಂತರ ಹನ್ನೊಂದನೆಯ ತರಗತಿಗೆ ಒಪ್ಪೊತ್ತಿನ ಅಧ್ಯಾಪಕನಾಗಿ ಸೇವೆ ಸಲ್ಲಿಸಿದ್ದೆ.

ಸ್ವಾಮೀಜಿಯವರು ನನ್ನ ಸ್ವಂತ ಊರು, ವಿದ್ಯಾಭ್ಯಾಸಗಳ ಬಗ್ಗೆ ಸಹಜವಾಗಿ ವಿಚಾರಿಸಿ, ತಟ್ಟನೆ, "ಅದು ಸರಿ ನಿನ್ನ ಗೈಡು ನಿನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ಕೊಟ್ಟಿಲ್ಲವಲ್ಲ, ಸತ್ಯಸಂಗತಿ ಏನು?" ಎಂದರು. ಒಂದು ಕ್ಷಣ ನಾನು ತಬ್ಬಿಬ್ಬಾದೆ. ನಾನು ಆ ಮುನ್ನ ಎರಡು ವರ್ಷ ಮೈಸೂರು ವಿಶ್ವವಿದ್ಯಾನಿಲಯದಿಂದ ಶಿಷ್ಯವೇತನ ಪಡೆದು ಸಂಶೋಧನಾ ವಿದ್ಯಾರ್ಥಿಯಾಗಿ, ಪಿ.ಎಚ್‌ಡಿ.ಗಾಗಿ ನೋಂದಾಯಿಸಿದ್ದೆ.

ನಾನು ಪೂಜ್ಯರಲ್ಲಿ ದೈನ್ಯವಾಗಿ, ಆದರೆ ದೃಢವಾಗಿ, "ಬುದ್ಧಿ, ನಾನು ನವ್ಯ ಸಾಹಿತ್ಯ ಚಳವಳಿಯಲ್ಲಿ ಗುರುತಿಸಿಕೊಂಡು, ಕವಿ ಗೋಪಾಲಕೃಷ್ಣ ಅಡಿಗರೊಡನೆ ಅನೇಕ ಸಾಹಿತ್ಯಿಕ



ಸಂಕೀರ್ಣಗಳಲ್ಲಿ, ಸಂವಾದಗಳಲ್ಲಿ ಭಾಗವಹಿಸುತ್ತಿದ್ದೆ. ಅದು ನನ್ನ ಮಾರ್ಗದರ್ಶಕರಾದ ಪ್ರಾಧ್ಯಾಪಕರಿಗೆ ಇಷ್ಟವಾಗದೆ ನನ್ನನ್ನು ಅವರ ಕೋಣೆಗೆ ಕರೆಯಿಸಿಕೊಂಡು ಒರಟು ಮಾತುಗಳಲ್ಲಿ ನನ್ನನ್ನು ಖಂಡಿಸಿದ್ದಲ್ಲದೆ, "ನೀನು ಯಾವ ಪಾಳೆಯದಲ್ಲಿದ್ದೀಯ ಎಂದು ನನಗೆ ಗೊತ್ತು, ನೀನು ಹೇಗೆ ಪಿ.ಎಚ್‌ಡಿ. ತಗೋತೀಯ, ಹೇಗೆ ವಿಶ್ವವಿದ್ಯಾನಿಲಯವನ್ನು ಪ್ರವೇಶಿಸುತ್ತೀಯ, ನಾನು ನೋಡಿಕೊಳ್ಳುತ್ತೇನೆ. You get out" ಎಂದು ಸಿಡಿಮಿಡಿಗೊಂಡರು. ಇಷ್ಟೇ ನಡೆದದ್ದು ಎಂದೆ.

ಸ್ವಾಮೀಜಿಯವರು ಪ್ರಸನ್ನ ಮುಖಮುದ್ರೆಯಿಂದ, "ನೋಡು, ಯಾರ ಅನ್ನವನ್ನು ಯಾರೂ ಕಸಿದುಕೊಳ್ಳಲಾರರು. ಶಿವರಾತ್ರೀಶ್ವರರು ಎಲ್ಲರಿಗೂ ಒಳ್ಳೆಯದನ್ನೇ ಮಾಡುತ್ತಾರೆ. ನೀನು ಪ್ರಾಮಾಣಿಕವಾಗಿ ಕೆಲಸ ಮಾಡು. ಇಂದೇ ಕೆಲಸಕ್ಕೆ ಹಾಜರಾಗು, ಅವಕಾಶವಾದಾಗ ಮೈಸೂರಿಗೆ ಬರುವೆಯಂತೆ" ಎಂದರು. ನಾನು ಅವರ ಆದೇಶವನ್ನು ಶಿರಸಾವಹಿಸಿದೆ.

ಮಾರನೆಯ ವರ್ಷವೇ ನಂಜನಗೂಡಿನಲ್ಲಿ ಜೆಎಸ್‌ಎಸ್ ಕಾಲೇಜು ಪ್ರಾರಂಭವಾಗಿ ಬಿ.ಎ. ತರಗತಿಗೆ ಕನ್ನಡ ಒಂದು ಐಚ್ಛಿಕ ವಿಷಯವಾಯಿತು. ನಾನು ಕೇಳದೆಯೇ ಇದ್ದರೂ ನನ್ನನ್ನು ನಂಜನಗೂಡಿಗೆ ವರ್ಗ ಮಾಡಿದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಎರವಲು ಸೇವೆಯ ಮೇಲೆ ಬಂದಿದ್ದ ಪ್ರಾಧ್ಯಾಪಕರು, ಒಂದು ವರ್ಷ ಮಾತ್ರ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸಿ ಮಾತೃಸಂಸ್ಥೆಗೆ ವಾಪಸ್ಸಾದರು. ಆಗ ಕೇವಲ ಎರಡು ವರ್ಷಗಳ ಸೇವಾಹಿರಿತನವಿದ್ದ ನಾನು ಪ್ರಾಚಾರ್ಯನಾಗಬೇಕಾಯಿತು. ಸ್ವಾಮೀಜಿಯವರು ವಿಶ್ವಾಸವಿಟ್ಟು ಆ ಹೊಣೆಯನ್ನು ನನಗೆ ವಹಿಸಿದರು (ಆ ವಿವರಗಳನ್ನು ಬೇರೆಡೆ ಸ್ಮರಿಸಿದ್ದೇನೆ).

ನಾನು ನನ್ನ ಆತ್ಮೀಯರು, ನೆಂಟರಿಷ್ಟರು ಮನೆಗೆ ಬಂದಾಗ, ಅವರಿಗೆ ಸುತ್ತೂರು ಶ್ರೀಕ್ಷೇತ್ರ ದರ್ಶನ ಮಾಡಿಸುವ ಒಂದು ರಿವಾಜು ಇಟ್ಟುಕೊಂಡಿದ್ದೇನೆ. ಒಮ್ಮೆ ತಮಿಳುನಾಡಿನ ತಿರುವಣ್ಣಾಮಲೈ ಕ್ಷೇತ್ರ ದಲ್ಲಿ ಪಶುಸಂಗೋಪನಾ ಇಲಾಖೆಯ ಉಪ ಆಯುಕ್ತರಾಗಿದ್ದ ನನ್ನ ಷಡ್ಡಕ ಮತ್ತು ಅವರ ಕುಟುಂಬದವರೊಡನೆ ಕಾರಿನಲ್ಲಿ ಸುತ್ತೂರಿಗೆ ಪಯಣ ಬೆಳೆಸಿದೆವು.

ನಾವು ಮಠವನ್ನು ಸೇರಿದಾಗ ಸುಮಾರು ಅಪರಾಹ್ನ 2 ಗಂಟೆ ಆಗಿತ್ತು. ಪೂಜ್ಯರು ಮಠದ ಜಗುಲಿಯಲ್ಲಿ ಆಸೀನರಾಗಿದ್ದರು. ನಮ್ಮನ್ನು ನಗುಮುಖದಿಂದ ಬರಮಾಡಿಕೊಂಡರು. ನಾನು ನನ್ನ ಅತಿಥಿಗಳನ್ನು ಪೂಜ್ಯರಿಗೆ ಪರಿಚಯಿಸಿದೆ. ಪೂಜ್ಯರು ತಮಿಳುನಾಡಿನಲ್ಲಿ ಇರುವ ಪಶುಚಿಕಿತ್ಸಾ ಕೇಂದ್ರಗಳು, ಸೌಲಭ್ಯಗಳ ಬಗ್ಗೆ ಕುತೂಹಲ

ದಿಂದ ವಿಚಾರಿಸಿದರು. ನನ್ನ ಷಡ್ಡಕರಿಗೆ ಕನ್ನಡ ಗೊತ್ತಿರಲಿಲ್ಲವಾಗಿ ನಾನೇ ದುಬಾಷಿಯ ಕೆಲಸ ಮಾಡಿದೆ. ಪೂಜ್ಯರು ನನ್ನನ್ನು ಕುರಿತು, ಗದ್ದುಗೆಗೆ ಹೋಗಿ ದರ್ಶನ ಮಾಡಿ ಬನ್ನಿ, ಅಷ್ಟರಲ್ಲಿ ಪ್ರಸಾದ ಸಿದ್ಧವಾಗುತ್ತದೆ, ಪ್ರಸಾದ ಸ್ವೀಕರಿಸಿಯೇ ಹೋಗಬೇಕು ಎಂದು ಅಪ್ಪಣೆ ಕೊಡಿಸಿದರು.

ಹೆಚ್ಚೂಕಡಮೆ ವರ್ಷಕ್ಕೊಮ್ಮೆಯಾದರೂ ನಾನು ಬಂಧುಗಳೊಡನೆ, ಮಿತ್ರರೊಡನೆ ಸುತ್ತೂರಿಗೆ ಹೋಗಿಬರುವ ಪರಿಪಾಟವಿತ್ತು. ಸಾಮಾನ್ಯವಾಗಿ ಜಾತ್ರೆ, ತೇರು, ವಿಶೇಷ ಮಹೋತ್ಸವಗಳಲ್ಲಿ ನಾನು ಹೋಗುತ್ತಿರಲಿಲ್ಲ. ನನಗೆ ಸದ್ದುಗದ್ದಲಕ್ಕಿಂತ ನಿರ್ಜನ, ನೀರವ ವಾತಾವರಣ ಇಷ್ಟ. ಭಾವಸಂವಾದಕ್ಕೆ ಪ್ರಸ್ತುತ ಎಂಬ ಅನಿಸಿಕೆ.

ಒಮ್ಮೆ ನಾವು ಐದಾರು ಮಂದಿ, ಪೂರ್ವಭಾವಿಯಾಗಿ ತಿಳಿಸಿ, ಸುತ್ತೂರು ಶ್ರೀಕ್ಷೇತ್ರಕ್ಕೆ ಕಾರು ಮಾಡಿಕೊಂಡು ಊಟದ ಹೊತ್ತಿಗೆ ಹೋಗಿ ತಲುಪಿದೆವು. ದೇವರ ದರ್ಶನ, ಗದ್ದುಗೆ, ಸ್ಥಳಪುರಾಣದ ಬಗ್ಗೆ ವಿವರಗಳನ್ನು ಹೊಸಬರಿಗೆ ಪರಿಚಯಿಸಿದೆವು. ಪಾರುಪತ್ತೇಗಾರರು ಪ್ರಸಾದದ ವ್ಯವಸ್ಥೆ ಮಾಡಿದ್ದರು. ನಾವು ನಮ್ಮ ಡ್ರೈವರನನ್ನು ನಮ್ಮೊಡನೆ ಊಟಕ್ಕೆ ಬರುವಂತೆ ಎಷ್ಟು ಒತ್ತಾಯ ಮಾಡಿದರೂ ಅವನು ಒಪ್ಪಲಿಲ್ಲ. "ಬೇಡ ಸಾರ್, ನನಗೆ ಅನೇಕ ಮಠಗಳಲ್ಲಿ ಕಹಿ ಅನುಭವಗಳಾಗಿವೆ. ನಾನು ಬರಲಾರೆ" ಎಂದ (ಆತ ಮುಸ್ಲಿಂ) ನಾನು ಈ ವಿಚಾರವನ್ನು ಪಾರುಪತ್ತೇಗಾರರಿಗೆ ತಿಳಿಸಿದಾಗ ಅವರೇ ಖುದ್ದಾಗಿ ಬಂದು "ನಾವು ಶರಣರು, ನಮಗೆ ಭೇದಭಾವ ಇಲ್ಲ. ನಮಗೆ ಪ್ರಸಾದದ ಹೊತ್ತಿಗೆ ಬಂದವರೆಲ್ಲ ಸಾಕ್ಷಾತ್ ಶಿವಸ್ವರೂಪಿಗಳೇ. ಅಲ್ಲದೆ ಪೂಜ್ಯರ ಆದೇಶವೇ ಇದೆ. ನೀವು ಪ್ರಸಾದ ಸ್ವೀಕರಿಸದೆ ಇದ್ದರೆ ಅವರಿಗೆ ನೋವಾಗುತ್ತದೆ" ಎಂದರು. ಹಳೆಯ ಮಠದ ಅಡುಗೆಮನೆಯ ಪಕ್ಕದ ಇಕ್ಕಟ್ಟಾದ ವರಾಂಡದಲ್ಲೇ ನಮ್ಮೆಲ್ಲರಿಗೂ ಸಹಪಂಕ್ತಿ ಭೋಜನವಾಯಿತು. ಡ್ರೈವರನ ಕಣ್ಣಲ್ಲಿ ನೀರಾಡಿತು. ಧನ್ಯತೆಯ ಭಾವದಿಂದ ಅವನು ಕರಗಿಹೋಗಿದ್ದ. ಹೀಗೆ ಸಣ್ಣಪುಟ್ಟ ವಿವರಗಳಲ್ಲಿಯೂ ಪೂಜ್ಯರ ಉದಾತ್ತ ಮನೋಧರ್ಮ, ಯುಗಧರ್ಮದ ಸ್ಪಂದನ ಎದ್ದು ಕಾಣುತ್ತದೆ.

ಕಾಲೇಜು ಶಿಕ್ಷಣ ನಿರ್ದೇಶನಾಲಯವು ಖಾಸಗಿ ಕಾಲೇಜುಗಳಲ್ಲಿ ಪ್ರಾಚಾರ್ಯರನ್ನು ನೇಮಿಸುವ ವಿಶಿಷ್ಟ ಅಧಿಕಾರವನ್ನು ಆಯಾ ಆಡಳಿತಮಂಡಳಿಗೆ ಬಿಟ್ಟಿತ್ತು. 1985ರ ಅನಂತರ ಸೇವಾಹಿರಿತನವನ್ನು ಲಕ್ಷಿಸಿ, ಪ್ರಾಚಾರ್ಯರನ್ನು ನೇಮಿಸಬೇಕೆಂಬ ಷರತ್ತನ್ನು ವಿಧಿಸಿತು. ಈ ಹಿನ್ನೆಲೆಯಲ್ಲಿ ನಮ್ಮ ಆಡಳಿತ ಮಂಡಳಿಯು ಪ್ರಾಚಾರ್ಯರನ್ನು ಇತರ ಖಾಸಗಿ ಸಂಸ್ಥೆಗಳಿಂದಲೋ ಸರ್ಕಾರಿ ಅಥವಾ ವಿಶ್ವವಿದ್ಯಾನಿಲಯದಿಂದಲೋ "ಎರವಲು ಸೇವಾ ಒಪ್ಪಂದದ" ಮೇರೆಗೆ ಆಹ್ವಾನಿಸಿ ನೇಮಿಸಿದ್ದೂ ಉಂಟು. ಕಾಲಾನುಕ್ರಮದಲ್ಲಿ ನಮ್ಮಲ್ಲೇ

ದಕ್ಷರಾದ ಹಿರಿಯ ಪ್ರಾಧ್ಯಾಪಕರು ಲಭ್ಯವಿದ್ದುದರಿಂದ ಇಡೀ ವಿದ್ಯಾಪೀಠದ ಕಾಲೇಜುಗಳಲ್ಲಿರುವ ಅಧ್ಯಾಪಕರ ಜ್ಯೇಷ್ಠತಾಪಟ್ಟಿಯನ್ನು ತಯಾರಿಸಿ, ಸೇವಾಹಿರಿತನವನ್ನು ಗಮನಿಸಿ ಪ್ರಾಚಾರ್ಯರನ್ನು ನೇಮಿಸಲಾಗುತ್ತಿತ್ತು.

ನಮ್ಮ ವಿದ್ಯಾಪೀಠದ ವಿಶೇಷವೇನೆಂದರೆ, ನಮ್ಮಲ್ಲಿ ಪ್ರಾಚಾರ್ಯರಾದವರಲ್ಲಿ ಎಲ್ಲ ಜಾತಿಯ ಎಲ್ಲ ಕೋಮಿನವರು ಇದ್ದಾರೆ. ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು ಎಲ್ಲರೂ – ಸ್ವಇಚ್ಛೆಯಿಂದ ಪದವಿಯನ್ನು ನಿರಾಕರಿಸಿದವರನ್ನು ಹೊರತುಪಡಿಸಿ – ಇದ್ದಾರೆ. ಇದು ಸಣ್ಣ ಮಾತಲ್ಲ.

1984-85ರ ಸುಮಾರು ಇರಬಹುದು. ನಾನು ಚಾಮರಾಜ ನಗರದ ಕಾಲೇಜಿಗೆ ವರ್ಗವಾಗಿ ಹೋಗಿದ್ದೆ. ಕೆಲವು ತಾಂತ್ರಿಕ ಕಾರಣಗಳಿಂದಾಗಿ ಹಾಲಿ ಪ್ರಿನ್ಸಿಪಾಲರನ್ನು ತಕ್ಷಣ ನಿವೃತ್ತಿಗೊಳಿಸಿ, ಬದಲಿ ವ್ಯವಸ್ಥೆ ಮಾಡದಿದ್ದರೆ ಕಾಲೇಜು ನೌಕರರ ವೇತನವನ್ನು ತಡೆಹಿಡಿಯುವುದಾಗಿ ಕಾಲೇಜು ಶಿಕ್ಷಣ ನಿರ್ದೇಶನಾಲಯದಿಂದ ಆದೇಶ ಬಂದ ಹಿನ್ನೆಲೆಯಲ್ಲಿ ಹೊಸಬರನ್ನು ನೇಮಿಸಬೇಕಾಗಿತ್ತು. ನಾನು ತರಗತಿಯಲ್ಲಿದ್ದೆ. ಸ್ವಾಮೀಜಿಯವರಿಂದ ದೂರವಾಣಿ ಕರೆ ಬಂತು – "ನೀನು ಪ್ರಿನ್ಸಿಪಲ್ ಆಗಿ ಅಧಿಕಾರ ವಹಿಸಿಕೋ" ಎಂದು. ನಾನು ಆ ದಿನಗಳಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದು ಹೆಚ್ಚಿನ ದೈಹಿಕ ಶ್ರಮ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ನಾನು ವಿನಯದಿಂದಲೇ ನಿರಾಕರಿಸಿದೆ. ಪೂಜ್ಯರು ಗಟ್ಟಿಯಾದ ದೃಢವಾದ ಧ್ವನಿಯಲ್ಲಿ "ನೀನು ನನ್ನ ಮಾತಿಗೆ ಬೆಲೆ ಕೊಡುತ್ತೀಯ, ಅಲ್ಲವೆ?" ಎಂದರು. ನಾನು ನಡುಗಿಹೋದೆ. "ಚಾರ್ಜು ತೆಗೆದುಕೋ, ರಾತ್ರಿ ಬಂದು ಮಠದಲ್ಲಿ ನನ್ನನ್ನು ಕಾಣು" ಎಂದು ಆದೇಶಿಸಿದರು. ನನಗೆ ಬೇರೆ ಉಪಾಯವಿಲ್ಲದಾಯಿತು.

ನಾನು ಪೂಜ್ಯರನ್ನು ಮಠದಲ್ಲಿ ಕಂಡಾಗ, ಸುಮಾರು ರಾತ್ರಿ 11 ಗಂಟೆ ಇರಬಹುದು. ನೂರಾರು ಸಂದರ್ಶಕರು, ನೂರಾರು ನೆಪ, ಔಪಚಾರಿಕ, ಅನೌಪಚಾರಿಕ, ಅಲ್ಲದೆ ವಿದ್ಯಾಪೀಠದ ಅಂಗಸಂಸ್ಥೆಗಳ ಮುಖ್ಯಸ್ಥರು, ಆಡಳಿತಾಧಿಕಾರಿಗಳು ಫೈಲುಗಳೊಡನೆ ಹಾಜರು. ಕೊನೆಗೆ ನನಗೆ ಭೇಟಿಗೆ ಅವಕಾಶ ಸಿಕ್ಕಾಗ ಮತ್ತೆ ನನ್ನ ವೈಯಕ್ತಿಕ ತೊಂದರೆಗಳನ್ನು ನಿವೇದಿಸಿಕೊಂಡು, 'ಸೇವಾಹಿರಿತನದಲ್ಲಿ ನನಗಿಂತ ಹಿರಿಯರು ಇದ್ದಾರೆ' ಎಂದೆ. 'ಅದೆಲ್ಲ ನನಗೆ ಗೊತ್ತಿದೆ. ಬೇರೆ ಯಾರಾದರೂ ಅರ್ಹರನ್ನು ತೋರಿಸು, ನಿನಗೆ ಬಿಡುಗಡೆ ಕೊಡೋಣ' ಎಂದರು. ನಾನು ಒಂದೆರಡು ಹೆಸರು ಸೂಚಿಸಿದೆ. ಸಾಮಾನ್ಯವಾಗಿ ಪ್ರಸನ್ನರಾಗಿರುವ ಪೂಜ್ಯರು ವ್ಯಗ್ರರಾದರು.

"ನೀನು ಸ್ವಾರ್ಥಿ, ನಿನಗೆ ಸಂಸ್ಥೆಯ ಹಿತಕ್ಕಿಂತ ನಿನ್ನ ಹಿತವೇ ಮುಖ್ಯವಾಯಿತಲ್ಲವೆ? ನಿನ್ನ ಎದೆ ಮುಟ್ಟಿ ಹೇಳು, ಅವರಿಗೆ ಆ ಜವಾಬ್ದಾರಿ ಕೊಡಬಹುದೆ?" ನಾನು ನಾಚಿ ನೀರಾದೆ;

ನಿರುತ್ತರನಾದೆ. "ಕ್ಷಮಿಸಬೇಕು ಬುದ್ಧಿ" ಎಂದು ವಾಪಸ್ಸಾದೆ. ಮನಸ್ಸಿನಾಳದ ಅಂಥ ಸಂಚಲನವನ್ನು ಅರಿಯುವ ಶಕ್ತಿ ಅವರಲ್ಲಿ ಸಹಜವಾಗಿಯೇ ಇತ್ತು.

ಚಾಮರಾಜನಗರದ ಕಾಲೇಜಿನಲ್ಲಿ ಪ್ರಾಚಾರ್ಯನಾಗಿದ್ದಾಗ ವಿದ್ಯಾಪೀಠದ ಇಂಜಿನಿಯರಿಂಗ್ ವಿಭಾಗದ ವತಿಯಿಂದ ಕಟ್ಟಡದ ದುರಸ್ತಿ ಹಾಗೂ ಸುಣ್ಣಬಣ್ಣ ತುಂಬುವ ಕಾಮಗಾರಿ ಆರಂಭವಾಗಿತ್ತು. ಆ ಕೆಲಸಗಳನ್ನು ನೋಡಿಕೊಳ್ಳಲು ಸ್ಥಳೀಯರೇ ಆದ ಸಾರ್ವಜನಿಕ ಸಂಪರ್ಕಾಧಿಕಾರಿಯೊಬ್ಬರಿದ್ದರು. ಆ ಭಾನುವಾರ ಪ್ರಿನ್ಸಿಪಲ್ ಚೇಂಬರಿನ ಸುಣ್ಣಬಣ್ಣದ ಕೆಲಸವಿದ್ದು, ಟೇಬಲ್, ಕುರ್ಚಿ, ಕಪಾಟು, ಗೋಡೆಯ ಅಲಂಕಾರಗಳು, ಫೋನ್, ಗೋಡೆ ಗಡಿಯಾರ, ಕಡತಗಳನ್ನು ತೆರವು ಗೊಳಿಸಬೇಕಾಗಿತ್ತು. ಆದ್ದರಿಂದ ನಾನು ಶನಿವಾರ ಮೈಸೂರಿಗೆ ಬಾರದೆ ಅಲ್ಲೇ ಉಳಿದು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದೆ. ಪೂಜ್ಯರು ಸುತ್ತೂರು ಶ್ರೀಕ್ಷೇತ್ರಕ್ಕೆ ಬಂದವರು ಹಾಗೆಯೇ ಪಯಣವನ್ನು ಮುಂದುವರಿಸಿ ಚಾಮರಾಜನಗರದ ಕಾಲೇಜಿಗೆ ಬಂದರು. ಕಾರಿಡಾರಿನಲ್ಲಿದ್ದ ನನ್ನನ್ನು ಕಂಡು "ಏಕೆ, ಮೈಸೂರಿಗೆ ಹೋಗಲಿಲ್ಲವೆ?" ಎಂದರು. ನಾನು "ಇಲ್ಲ ಬುದ್ಧಿ, ಇಲ್ಲಿ ಕೆಲಸ ನಡೆಯುತ್ತಿದ್ದುದರಿಂದ ಇಲ್ಲೇ ಉಳಿದೆ" ಎಂದೆ. ಅವರಿಗೆ ಸಮಾಧಾನವಾಯಿತು. ಒಳ್ಳೆಯದು ಎಂದು ಹೇಳಿ ಗೋಡೆಯ ಮೇಲೆ ಕೆಲವು ಸುಭಾಷಿತಗಳನ್ನು ಬರೆಸುವ ಬಗ್ಗೆ ಸೂಚನೆ ಕೊಟ್ಟರು.

1970 ರಲ್ಲಿರಬೇಕು. ನಾನು ನಂಜನಗೂಡು ಕಾಲೇಜಿನ ಪ್ರಾಚಾರ್ಯನಾಗಿದ್ದೆ. ಕಾಲೇಜಿನ ವ್ಯವಹಾರದ ನಿಮಿತ್ತ ಮಠದಲ್ಲಿ ಅವರನ್ನು ಕಾಣಲು ಹೋದಾಗ, "ಒಬ್ಬ ಅಧ್ಯಾಪಕನ ಪಾಠದ ಬಗ್ಗೆ ತುಂಬ ದೂರುಗಳಿವೆ. ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದರಂತೆ, ಇಲ್ಲಿಗೂ ಒಂದು ದೂರು ಸಲ್ಲಿಸಿದ್ದಾರೆ. ನೀನೇಕೆ ನನಗೆ ಮೊದಲೇ ತಿಳಿಸಲಿಲ್ಲ? ತಿಳಿಸಿದ್ದರೆ ಈ ವರ್ಷಕ್ಕೆ ಅವನನ್ನು ಮುಂದುವರಿಸುತ್ತಿರಲಿಲ್ಲ" ಎಂದರು. ನಾನು ಕೆಳದನಿಯಲ್ಲಿ "ಹೊಸಬರಲ್ಲವೆ? ಸರಿಹೋಗಬಹುದೆಂದುಕೊಂಡೆ. ಅಲ್ಲದೆ ಅಧ್ಯಾಪಕರ ಬಗ್ಗೆ ಚಾಡಿ ಹೇಳುವುದಕ್ಕೆ ಇಷ್ಟವಿರಲಿಲ್ಲ" ಎಂದೆ. ಪೂಜ್ಯರು ತಟ್ಟನೆ "ನೀನು ಆ ಕಾಲೇಜಿನ ಪ್ರಾಚಾರ್ಯ. ಅಧ್ಯಾಪಕರ ಪಾಠಪ್ರವಚನಗಳನ್ನು ಗಮನಿಸಬೇಕು. ಅವರ ಬಗ್ಗೆ ಆಡಳಿತಮಂಡಳಿಗೆ ನೈಜ ವರದಿ ಕೊಡಬೇಕು. ಅದು ಚಾಡಿ ಆಗುವುದಿಲ್ಲ, ಅದು ನಿನ್ನ ಕರ್ತವ್ಯ" ಎಂದರು. ನಾನು ಆ ಕ್ಷಣಕ್ಕೆ ಒಂದು ಪಾಠ ಕಲಿತೆ.

ಕೊನೆಗೆ ಒಂದು ಹಾಸ್ಯಪ್ರಸಂಗವನ್ನು ನಿರೂಪಿಸಿ ಈ ನೆನಪುಗಳನ್ನು ಮುಗಿಸಬಹುದು. ಪೂಜ್ಯ ಸ್ವಾಮೀಜಿಯವರ ಹುಟ್ಟುಹಬ್ಬವನ್ನು ನೌಕರರ ಸಮಾವೇಶವಾಗಿ, ಶೈಕ್ಷಣಿಕ ಸಂವಾದ ಸಂಕಿರಣಗಳಲ್ಲಿ ಎಲ್ಲರೂ ಪಾಲ್ಗೊಳ್ಳುವ ಮೂಲಕ ಆಚರಿಸಲಾಗುತ್ತಿತ್ತು. ಸಾಮಾನ್ಯವಾಗಿ

ಅಂದು ಪ್ರಾತಃಕಾಲ ಆಯಾ ಸಂಸ್ಥೆಯವರು ತಮ್ಮ ಮುಖ್ಯಸ್ಥರ ನೇತೃತ್ವದಲ್ಲಿ ಮಠಕ್ಕೆ ಹೋಗಿ ಫಲಪುಷ್ಪಗಳನ್ನು ಅರ್ಪಿಸಿ ಅವರಿಗೆ ಶುಭಾಶಯ ಸಲ್ಲಿಸಿ ಬರುವ ಪದ್ಧತಿ ಇತ್ತು. ಗುರುವಂದನೆಗೆಂದು ಬಂದ ಸಾರ್ವಜನಿಕರು, ಗಣ್ಯಾತಿಗಣ್ಯರು ಸಹ ಫಲಪುಷ್ಪಗಳನ್ನು ಅರ್ಪಿಸಿ ಗುರುಗಳ ಆಶೀರ್ವಾದ ಪಡೆಯುತ್ತಿದ್ದರು. ಪೂಜ್ಯರು ಹಾಗೆ ಸಂಗ್ರಹವಾದ ಫಲಗಳನ್ನು ಅಲ್ಲೇ ಎಲ್ಲರಿಗೂ ಹಂಚುತ್ತಿದ್ದರು.

ನಾವು ರಾಮಾನುಜ ರಸ್ತೆಯ ಕಾಲೇಜಿನ ಅಧ್ಯಾಪಕರೆಲ್ಲರು ಒಂದು ಗುಂಪಾಗಿ ನೆರೆದಿದ್ದೇವೆ. ಸಹಾಯಕರು ಸ್ವಾಮೀಜಿಯವರ ಮುಂದೆ ಬಾಳೆಹಣ್ಣಿನ, ದ್ರಾಕ್ಷಿಯ, ಸೇಬಿನ, ಮೋಸಂಬಿಯ ತಟ್ಟೆಗಳನ್ನು ಒಂದು ಖಾಲಿಯಾದಂತೆ ಮತ್ತೊಂದನ್ನು ಹಿಡಿಯುತ್ತಿದ್ದರು. ನಮ್ಮ ಕನ್ನಡ ಪ್ರಾಧ್ಯಾಪಕರಾದ ಕಥೆಗಾರ ವೀರಭದ್ರ ಅವರು ಪಿಸುಮಾತಿನಲ್ಲಿ ನೀವು ಮುಂದೆ ಹೋಗಿ ನಾನು ಸೇಬಿನ ತಟ್ಟೆ ವಿತರಣೆ ಬಂದಾಗ ಬರುತ್ತೇನೆ ಎಂದು ಹೇಳಿ ಹಿಂದೆ ಸರಿದರು. ನಮಗೆ ನಗು ತಡೆಯಲಾಗಲಿಲ್ಲ. ಸನ್ನಿಧಾನದ ಗಾಂಭೀರ್ಯವನ್ನು ಮರೆತು, ನಗು ಸಾಂಕ್ರಾಮಿಕವಾಯಿತು. ಪೂಜ್ಯರು ಹಸನ್ಮುಖರಾಗಿ, "ಏನು ಸಮಾಚಾರ, ಅಷ್ಟು ನಗು? ಎಂದರು. ಈ ಕೀಟಲೆ ಪ್ರಸಂಗವನ್ನು ಹೇಗೆ ಹೇಳುವುದು ಎಂದು "ಹಿಹ್ಹಿ, ಏನೂ ಇಲ್ಲ ಬುದ್ಧಿ" ಎಂದೆವು. ನಗು ಮತ್ತೂ ಹರಡಿಕೊಂಡಿತು. ಆಗ ನಮ್ಮಲ್ಲಿ ಒಬ್ಬ ಅಧ್ಯಾಪಕರು ಮುಂದುವರಿದು "ಬುದ್ಧಿ, ವೀರಭದ್ರ ಅವರು ನಿಮ್ಮ ಕೈಗೆ ಸೇಬಿನ ತಟ್ಟೆ ಬಂದಾಗ ಬರುತ್ತಾರಂತೆ" ಎಂದು ಗುಟ್ಟನ್ನು ರಟ್ಟುಮಾಡಿದರು. ಮತ್ತೊಮ್ಮೆ ನಗೆಯ ಅಲೆ ಎದ್ದಿತು. ಪೂಜ್ಯರು ಪ್ರಾಂಜಲವಾಗಿ ನಕ್ಕು "ಅದಕ್ಕೇನು ಎರಡೆರಡು ಸೇಬು ಕೊಡೋಣ, ವೀರಭದ್ರ ಸೇಬನ್ನು ತಿನ್ನುವ ಅಭ್ಯಾಸ ಬೆಳೆಸಿಕೊಂಡರೆ ನಮಗೂ ಸಂತೋಷವೇ?" ಎಂದರು. ಆ ಹೇಳಿಕೆ ಮಾರ್ಮಿಕವಾಗಿತ್ತು (ವೀರಭದ್ರ ಆ ದಿನಗಳಲ್ಲಿ ಹೆಚ್ಚು ಸಿಗರೇಟು ಸೇದುತ್ತಿದ್ದುದು ಅವರ ಗಮನಕ್ಕೆ ಬಂದಿರಬಹುದೆ ಎಂಬ ಗುಮಾನಿ ನಮ್ಮಲ್ಲಿ ಕೆಲವರಿಗೆ). ಹೀಗೆ ದೂರಕ್ಕೆ ಹಿಮಾಲಯವಾಗಿ, ಹತ್ತಿರಕ್ಕೆ ಇಷ್ಟಲಿಂಗವಾಗಿ ಅವರವರ ಭಾವಕ್ಕೆ, ಅವರವರ ಯೋಗ್ಯತೆಗೆ ತಕ್ಕ ರೀತಿಯಲ್ಲಿ ಅವರು ದಕ್ಕುತ್ತಿದ್ದರು, ದಕ್ಕಿಯೂ ಮಿಕ್ಕಿ ನಿಗೂಢವಾಗಿದ್ದರು.

"ಅವರು ಎಂದೂ ತಮ್ಮನ್ನು ಪರಮಾತ್ಮನ ಅವತಾರವೆಂದಾ ಗಲಿ, ತನ್ನ ಶಕ್ತಿಯಿಂದ, ಆಶೀರ್ವಾದದಿಂದ ಜನತೆಯನ್ನು ಉದ್ಧಾರ ಮಾಡುತ್ತೇನೆ ಎಂದಾಗಲಿ ಭಾವಿಸಿದವರಲ್ಲ; ವಸ್ತುಗಳನ್ನು ಮಂತ್ರಿಸಿಕೊಟ್ಟವರಲ್ಲ; ಅಂಗೈಯಲ್ಲಿ ಲಿಂಗ ಸೃಷ್ಟಿಸಿಕೊಟ್ಟವರಲ್ಲ – ಯಾವೊಂದು ಪವಾಡವನ್ನು ಮಾಡಿದವರಲ್ಲ. ಆದಿ ಭಗವತ್ಪಾದರನ್ನು ಸ್ಮರಿಸಿ, ನಿಮಗೆ ಒಳಿತಾಗಲಿ ಎನ್ನುತ್ತಿದ್ದರು; ಹಣ್ಣನ್ನು ಕೊಡುತ್ತಿದ್ದರು; ಅವರ ಪ್ರಾಂಜಲ ಮುಖಮಂಡಲವೇ ನಮಗೆ ದಾರಿದೀಪ".



# ನನ್ನ ಪುಣ್ಯವಿಶೇಷ

**ಡಾ. ಚನ್ನಬಸಪ್ಪ**

**ನಾ**ನು ಚಾಮರಾಜನಗರ ತಾಲ್ಲೂಕು ಎಚ್. ಮೂಕಳ್ಳಿ ಎಂಬ ಗ್ರಾಮದಲ್ಲಿ ಜನಿಸಿದೆ. ಐದನೆ ವರ್ಷದಲ್ಲೇ ತಂದೆತಾಯಿಗಳನ್ನು ಕಳೆದುಕೊಂಡು ನಾನು ಅನಾಥನಾದೆ. ಆಗ ನನ್ನ ಸೋದರತ್ತೆ ಪುಟ್ಟತಾಯಮ್ಮ ಮತ್ತು ಶಿವರಾತ್ರಿ ದೇವರು ಬಂದು ನನ್ನನ್ನು ಸುತ್ತೂರಿಗೆ ಕರೆದುಕೊಂಡು ಹೋಗಿ, ಮಂತ್ರಮಹರ್ಷಿಗಳಾದ ಪೂಜ್ಯ ಶ್ರೀ ಶಿವರಾತ್ರಿ ಸ್ವಾಮಿಗಳವರ ಕೃಪಾಶೀರ್ವಾದ ಪಡೆದು ನನಗೆ ಮಠದಲ್ಲಿ ಆಶ್ರಯ ದೊರಕಿಸಿಕೊಟ್ಟು, ಸುತ್ತೂರಿನ ಪ್ರೈಮರಿ ಶಾಲೆಗೆ ಸೇರಿಸಿದರು. ಬೆಳಗ್ಗೆ ಪೂಜ್ಯ ಮಂತ್ರಮಹರ್ಷಿಗಳಿಗೆ ಹೂ, ಪತ್ರೆಗಳನ್ನು ಪೂಜೆಗೆ ಎತ್ತಿಕೊಡುವುದು, ಸಾಯಂಕಾಲ ಹತ್ತಿರದ ಊರು ಬಿಲಿಗೆರೆಯಿಂದ ತಾಯಿನಾಡು ಪತ್ರಿಕೆಯನ್ನು ಶ್ರೀಗಳಿಗೆ ತಂದುಕೊಡುವುದು ನನ್ನ ಕರ್ತವ್ಯವಾಗಿತ್ತು. ಅಲ್ಲದೆ ಮಂತ್ರಮಹರ್ಷಿಗಳ ಪೂರ್ವಾಶ್ರಮದ ತಮ್ಮಂದಿರಾದ ಶ್ರೀ ಮಲ್ಲಿಕಾರ್ಜುನ ದೇವರು ಮಠದ ಏಳಿಗೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಅವರು ಊರಿನಲ್ಲಿ ನಡೆದು ಬರುತ್ತಿದ್ದರೆ, ಜನರು ಎದ್ದುನಿಂತು ಅವರಿಗೆ ಗೌರವವನ್ನು ಸಲ್ಲಿಸುತ್ತಿದ್ದರು. ಸುತ್ತಮುತ್ತಲಿನ ಜನಗಳ ಕಷ್ಟಕಾರ್ಪಣ್ಯಗಳಿಗೆ ಮಾರ್ಗದರ್ಶಕರಾಗಿ ವ್ಯಾಜ್ಯಗಳನ್ನು ತೀರಿಸುತ್ತಿದ್ದರು.

ಪೂಜ್ಯ ಶ್ರೀ ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರ ಪೂರ್ವಾಶ್ರಮದ ಅಜ್ಜಿಯವರಾದ ಮಲ್ಲಮ್ಮಯ್ಯನವರು ಜ್ಯೋತಿಷ್ಯದಲ್ಲಿ ಪ್ರವೀಣರು. ಮಠದಲ್ಲಿ ಗೌರವಾನ್ವಿತರಾಗಿ ಬಂದವರಿಗೆ ಊಟೋಪಚಾರಗಳನ್ನು ಮಾಡಿಸಿ ಕಳುಹಿಸುತ್ತಿದ್ದರು ಮತ್ತು ಚಿಕ್ಕಬಸಮ್ಮಯ್ಯನವರು ಆಧ್ಯಾತ್ಮ ವಿಷಯಗಳ ಬಗ್ಗೆ ಮತ್ತು ಕಥೆ ಹೇಳುವುದನ್ನು ಕೇಳುತ್ತಿದ್ದೆ. ಅಲ್ಲದೆ ಮಲ್ಲಮ್ಮಯ್ಯನವರು ಹೊಸ ಹಟ್ಟಿಗೆ ಪ್ರತಿದಿನ ಸ್ನಾನ ಪೂಜೆ ಪ್ರಸಾದ ಸೇವಿಸಲು ಬರುತ್ತಿದ್ದರು. ಪ್ರಸಾದ ಸೇವಿಸುವಾಗ ಕೆಲವು ದಿವಸ ಅವರ ಪಂಕ್ತಿಯಲ್ಲಿ ಊಟ ಮಾಡುವ ಭಾಗ್ಯ ದೊರಕಿದ್ದಕ್ಕೆ ನಾನು ಧನ್ಯ.

ಸಾಹುಕಾರ್ ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರು ಆ ಭಾಗದ ವೀರಶೈವರಲ್ಲಿ ಅತ್ಯಂತ ಶ್ರೀಮಂತರು. ಇವರು ಸುತ್ತೂರು ಮಂತ್ರಮಹರ್ಷಿಗಳ ಶಿಷ್ಯರಾಗಿದ್ದರು. ಇವರು ಮೈಸೂರು ನಗರದಲ್ಲಿ ಸಂಸ್ಕೃತ, ವೇದ, ಜ್ಯೋತಿಷ್ಯದಲ್ಲಿ ವೀರಶೈವ ಮಠಾಧೀಶರಾಗುವವರಿಗೆ ಮತ್ತು



ವಿದ್ಯಾರ್ಥಿಗಳಿಗೆ ಉಚಿತ ಊಟ ವಸತಿ ಒದಗಿಸುವ ಪಾಠಶಾಲೆ ಯನ್ನು ಅವರ ಹೆಸರಿನಲ್ಲಿ ಸ್ಥಾಪಿಸುವ ವಿಷಯದಲ್ಲಿ ಮಂತ್ರಮಹರ್ಷಿಗಳ ಅಪ್ಪಣೆ ಕೋರಿದರು. ಅದರಂತೆ ಈ ಸಂಸ್ಥೆಯನ್ನು ನೋಡಿಕೊಳ್ಳಲು ಮತ್ತು ಬೆಳೆಸಲು ಮಂತ್ರಮಹರ್ಷಿಗಳು ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರೇ ಸೂಕ್ತವೆಂದು ಅವರ ವಿದ್ಯಾಭ್ಯಾಸದ ಜೊತೆಗೆ ಅದನ್ನು ನೋಡಿಕೊಳ್ಳಲು ಅವರನ್ನು ನಿಯಮಿಸಿದರು.

ನನ್ನ ಪ್ರೈಮರಿ ವಿದ್ಯಾಭ್ಯಾಸ ಮುಗಿದ ನಂತರ ಮಂತ್ರಮಹರ್ಷಿಗಳ ಆದೇಶದಂತೆ 1942 ರಲ್ಲಿ ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರ ಪಾಠಶಾಲೆಯಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡಲು ಸೇರಿದೆ. ಅಲ್ಲದೆ ಪೂಜ್ಯ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರು ಈ ಹಾಸ್ಟೆಲಿನ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ಕ್ಯಾತನಹಳ್ಳಿ ಸ್ವಾಮಿಯವರು ಇವರ ಸಹಾಯಕರಾಗಿದ್ದರು. ಅಲ್ಲೇ ಒಂದು ಕಚೇರಿಯನ್ನು ತೆರೆದು ಕೆಲಸಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು. ನಾನು ಪಾಠಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಪುಣ್ಯವಶಾತ್ ಪೂಜ್ಯಪಾದರಿಗೆ ಕೆಲವು ದಿವಸ ಪೂಜೆಗೆ ಅಣಿಮಾಡುವ ಕೆಲಸ ನನ್ನ ಪಾಲಿಗೆ ಬಂದಿತ್ತು. ಅಲ್ಲದೆ ಸುಗ್ಗಿಯ ಕಾಲದಲ್ಲಿ ಅವರು ಧಾನ್ಯಗಳ ಸಂಗ್ರಹಕ್ಕಾಗಿ ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿಗೆ ಕರೆದುಕೊಂಡು ಹೋಗುತ್ತಿದ್ದರು. ಅವರ ಸ್ನಾನ, ಪೂಜೆ, ಪ್ರಸಾದಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ಇದು ನನ್ನ ಪುಣ್ಯವೇ ಸರಿ. ಅವರು ಬೆಳಗ್ಗೆ ಹೋದರೆ, ಕೆಲವು ದಿವಸ ಬರುವುದು ಸಂಜೆಯಾಗುತ್ತಿತ್ತು. ಅಲ್ಲದೆ, ಅವರ ದರ್ಶನಕ್ಕೆ ಊರಿನ ಕೆಲ ಮುಖ್ಯಸ್ಥರು ಬಂದರೆ ಅವರೊಡನೆ ಪ್ರೀತಿಯಿಂದ ಮಾತನಾಡಿ ಸ್ನಾನ, ಪೂಜೆ, ಪ್ರಸಾದ ವಿಲ್ಲದೆ ಮಲಗುತ್ತಿದ್ದರು. ಅಲ್ಲದೆ ಕೆಲವು ದಿವಸ ಪಾಠಶಾಲೆಯಲ್ಲಿ ಆಹಾರಧಾನ್ಯಗಳನ್ನು ತರಿಸಲು ನನ್ನನ್ನು ನೇಮಿಸಿದ್ದರು. ಆ ಸಂದರ್ಭದಲ್ಲಿ ಅವರು ಹಣದ ತೊಂದರೆಯಿಂದ ಕಷ್ಟಪಡುತ್ತಿದ್ದುದು ಜ್ಞಾಪಕಕ್ಕೆ ಬರುತ್ತದೆ. ಪಾಠಶಾಲೆಯಲ್ಲಿ ಬೆಳಗ್ಗೆ 5 ಗಂಟೆಗೆ, ಸಾಯಂಕಾಲ 7 ಗಂಟೆಗೆ ಪ್ರಾರ್ಥನೆ ಮಾಡುವುದು ಕಡ್ಡಾಯವಾಗಿತ್ತು. ಇದನ್ನು ನೋಡಿಕೊಳ್ಳಲು ನನಗೆ ಸೂಚಿಸಿದ್ದರು. ಬೆಳಗ್ಗೆ 7 ರಿಂದ 10 ಗಂಟೆವರೆಗೆ ಎಲ್ಲರೂ ಸಂಸ್ಕೃತ ಅಭ್ಯಾಸ ಮಾಡಿ ನಂತರ ಶಾಲಾಕಾಲೇಜುಗಳಿಗೆ ಹೋಗಿ ಬರುವುದು ರೂಢಿಯಲ್ಲಿತ್ತು.

ವಿಶೇಷ ದಿನಗಳಲ್ಲಿ ಮತ್ತು ಶ್ರಾವಣಮಾಸದಲ್ಲಿ ಪೂಜ್ಯ ಸ್ವಾಮೀಜಿಯವರ ನೇತೃತ್ವದಲ್ಲಿ ಆಧ್ಯಾತ್ಮಿಕ ವಿಷಯಗಳ ಬಗ್ಗೆ, ಗಣ್ಯವ್ಯಕ್ತಿಗಳು, ವಿದ್ವಾಂಸರುಗಳಿಂದ ಉಪನ್ಯಾಸ ಏರ್ಪಾಡು ಮಾಡುತ್ತಿದ್ದರು. ಇವುಗಳಲ್ಲಿ ಮುಖ್ಯವಾಗಿ ಒಂದು ಸಾರಿ ಧಾರವಾಡದ ಪೂಜ್ಯ ಮೃತ್ಯುಂಜಯ ಸ್ವಾಮಿಗಳು ಬಂದು ಆಶೀರ್ವದಿಸಿ ಭಜನಾ ಕಾರ್ಯಕ್ರಮದಲ್ಲಿ ತಾವೂ ಭಾಗಿಗಳಾಗಿ ಕುಣಿಯುತ್ತಿದ್ದರು. ಇದು ಅತ್ಯಂತ ಗೌರವದಿಂದ ನೆನೆಯುವಂಥದ್ದು ಅಲ್ಲದೆ

ಪೂಜ್ಯ ಗೌರೀಶಂಕರ ಮಹಾಸ್ವಾಮಿಯವರು ಪಾಠಶಾಲೆಯಲ್ಲಿ ಸಂಸ್ಕೃತದಲ್ಲಿ ಮಾಡಿದ ಭಾಷಣವನ್ನು ನೂರಾರು ಜನರು ಕೇಳಿ ಸಂತೋಷಪಟ್ಟಿದ್ದು ಸದಾ ನೆನೆಯುವಂಥದ್ದಾಗಿತ್ತು.

ಈ ಕಾರ್ಯಕ್ರಮಗಳ ನಂತರ ಪೂಜ್ಯ ಸ್ವಾಮೀಜಿಯವರು ಪಾಠಶಾಲೆಯಲ್ಲಿ ವಿಶೇಷ ಭೋಜನ ಏರ್ಪಾಡು ಮಾಡುತ್ತಿದ್ದರು. ಅಂತೆಯೇ ಹಬ್ಬ ಹರಿದಿನಗಳಲ್ಲಿ ಸಿಹಿತಿಂಡಿ ಭೋಜನ ಮಾಡಿಸಿ ಬಡಿಸುವುದನ್ನು ನೋಡಿ ಸಂತೋಷ ಪಡುತ್ತಿದ್ದರು. ವಿದ್ಯಾರ್ಥಿಗಳು ಸರಿಯಾಗಿ ಅಭ್ಯಾಸ ಮಾಡುತ್ತಿದ್ದಾರೆಯೇ ಎಂದು ಗಮನಿಸಲು ರಾತ್ರಿ ವೇಳೆ ಪೂಜ್ಯ ಸ್ವಾಮೀಜಿಯವರು ಕೊಠಡಿಗಳಿಗೆ ಬಂದು  ಮಾರ್ಗದರ್ಶನ ಮಾಡುತ್ತಿದ್ದರಲ್ಲದೆ ಚೆನ್ನಾಗಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡುತ್ತಿದ್ದರು.  ರಜಾ ದಿನಗಳಲ್ಲಿ ವಿದ್ಯಾರ್ಥಿಗಳನ್ನು ಪಾಠಕ್ಕೆ ಕರೆಸಿ, ತಪ್ಪು ಮಾಡಿದರೆ ಶಿಕ್ಷಿಸಿ ಸರಿಯಾಗಿ ಅಭ್ಯಾಸ ಮಾಡಲು ತಿಳಿಸುತ್ತಿದ್ದರು. ಅನಂತರ ಬುಟ್ಟಿಗಟ್ಟಲೆ ಹಣ್ಣುಗಳನ್ನು ತರಿಸಿ ಹಂಚುತ್ತಿದ್ದರು. ಒಂದು ದಿನ ಕೊಠಡಿಗಳಲ್ಲಿ ನೋಡಲು ರಾತ್ರಿ ಬಂದಾಗ ನಾನು ಇರಲಿಲ್ಲ. ಕಾರಣ ನಾನು ಮರಿಮಲ್ಲಪ್ಪ ಹೈಸ್ಕೂಲಿನಲ್ಲಿ ಓದುತ್ತಿದ್ದಾಗ, ಒಬ್ಬ ಅಧ್ಯಾಪಕರು ಸತ್ಯಹರಿಶ್ಚಂದ್ರ ಸಿನಿಮಾ ನೋಡುವುದು ಉತ್ತಮ ಎಂದು ಹೇಳಿದ್ದರಿಂದ ನಾನು ಅಪ್ಪಣೆಯನ್ನು ಪಡೆಯದೆ ಹೋಗಿದ್ದೆ. ಸ್ವಾಮೀಜಿಯವರು ಬೆಳಗ್ಗೆ ನನ್ನನ್ನು ಕರೆಸಿ ರಾತ್ರಿ ಎಲ್ಲಿಗೆ ಹೋಗಿದ್ದೆ ನಿನ್ನನ್ನು ಒಳ್ಳೆಯ ವ್ಯಕ್ತಿ ಎಂದು ತಿಳಿದಿದ್ದೆ ಎಂದರು. ನನಗೆ ಈ ವಿಷಯ ಕೇಳಿ ಮೈಯಲ್ಲಿ ಬೆವರು ಬಂದು ತುಂಬಾ ದುಃಖವಾಯಿತು. ಸ್ವಾಮೀಜಿಯವರಲ್ಲಿ ಕ್ಷಮೆ ಕೇಳಿದೆ. ನಂತರ ಅವರು ಕ್ಷಮಿಸಿ, ಇನ್ನು ಮುಂದೆ ಈ ರೀತಿ ಮಾಡಬೇಡ ಎಂದು ಹೇಳಿದರು. ಇದು ನನ್ನ ಮನಸ್ಸಿನ ಮೇಲೆ ಪರಿಣಾಮ ಬೀರಿತು; ಅಂದಿನಿಂದ ಸುಳ್ಳು ಹೇಳುವುದನ್ನು ಬಿಟ್ಟೆ.

ನಾನು ಸಂಸ್ಕೃತದ ಪ್ರೈಮರಿ ಕಾವ್ಯ ಮತ್ತು ಸಾಹಿತ್ಯ ಪರೀಕ್ಷೆಗಳಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದೆ. ಇದನ್ನು ನೋಡಿ ಸ್ವಾಮೀಜಿಯವರು ಕರೆದು ಸಂಸ್ಕೃತದ ಜೊತೆಗೆ ನೀನು ಆಂಗ್ಲಭಾಷೆಯನ್ನು ಕಲಿತರೆ ಒಳ್ಳೆಯದು ಎಂದು ಹೇಳಿದರು. ಆ ಪ್ರಕಾರ ನಾನು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪ್ರಥಮದರ್ಜೆಯಲ್ಲಿ ಪಾಸಾಗಿ ನಂತರ ಮರಿಮಲ್ಲಪ್ಪ ಹೈಸ್ಕೂಲಿಗೆ ಸೇರಿ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ದರ್ಜೆಯಲ್ಲಿ ಪಾಸಾದೆ. ನಂತರ ಇಂಟರ್‌ಮೀಡಿಯಟ್ ಓದಿದೆ. ಆನಂತರ ಆಯುರ್ವೇದ ಪದವಿ ಕೋರ್ಸಿಗೆ ಮತ್ತು ಎಲ್‌ಎಂಪಿ ಕೋರ್ಸಿಗೆ ಸೇರಲು ಅರ್ಜಿ ಹಾಕಿದ್ದೆ. ಎರಡು ಕಡೆಯಲ್ಲಿಯೂ ಸಂದರ್ಶನ ಬಂದಿತ್ತು. ಆಗ ಸ್ವಾಮೀಜಿಯವರನ್ನು ದರ್ಶನ ಮಾಡಿ ಯಾವ ಕೋರ್ಸಿಗೆ ಸೇರಲಿ ಎಂದು ಕೇಳಿ, ಆಯುರ್ವೇದ ಪದವಿಗೆ ಸೇರುವುದು ಸೂಕ್ತ ಎಂದು ಅಪ್ಪಣೆ ಮಾಡಿದರು. ಅದರಂತೆ, ನಾನು ಮೈಸೂರು ಸರ್ಕಾರಿ ಆಯುರ್ವೇದ ಕಾಲೇಜಿಗೆ ಸೇರಿಕೊಂಡು ವಿದ್ಯಾಭ್ಯಾಸ ಮಾಡಿ,

ಆಯುರ್ವೇದ ವಿದ್ವಾನ್, ಎಬಿಎಎಂಎಸ್ 1956ರಲ್ಲಿ ಮುಗಿಸಿ ನಂತರ ಆಯುರ್ವೇದ ವೈದ್ಯನಾಗಿ, ಅನಂತರ ಸ್ನಾತಕೋತ್ತರ ಪದವಿ ಎಚ್‌ಪಿಎಯನ್ನು ಗುಜರಾತ್ ಜಾಮ್ನಗರದಲ್ಲಿ 1966 ರಲ್ಲಿ ಮುಗಿಸಿ ಅಧ್ಯಾಪಕನಾಗಿ, ಸಂಶೋಧಕನಾಗಿ, ಪ್ರಾಚಾರ್ಯನಾಗಿ, ಉಪನಿರ್ದೇಶಕನಾಗಿ ಅಲ್ಲದೆ ಕೇಂದ್ರೀಯ ಔಷಧ ಘಟಕದ ಮುಖ್ಯಸ್ಥನಾಗಿ ಮತ್ತು 10 ವರ್ಷ ಭಾರತೀಯ ವೈದ್ಯಪದ್ಧತಿಗಳು ಮತ್ತು ಹೋಮಿಯೋಪತಿ ನಿರ್ದೇಶಕನಾಗಿ ಸೇವೆ ಸಲ್ಲಿಸಿ 1990 ರಲ್ಲಿ ನಿವೃತ್ತಿ ಹೊಂದಿದೆನು. ನಾನು ಮೈಸೂರು ಆಯುರ್ವೇದಿಕ್ ಕಾಲೇಜಿನಲ್ಲೂ ಪ್ರಾಚಾರ್ಯನಾಗಿದ್ದಾಗ ನನ್ನ ಕೋರಿಕೆ ಮೇರೆಗೆ ಪೂಜ್ಯ ಜಗದ್ಗುರುಗಳು ವಾರ್ಷಿಕೋತ್ಸವಕ್ಕೆ ದಯಮಾಡಿಸಿ ಭಾಷಣ ಮಾಡಿದ್ದರು. ಬೆಂಗಳೂರಿನಲ್ಲಿ ಕೇಂದ್ರೀಯ ಔಷಧ ಘಟಕದಲ್ಲಿ ಮುಖ್ಯಸ್ಥನಾಗಿದ್ದಾಗ, ಅವರು ಅಲ್ಲಿಗೂ ದಯಮಾಡಿಸಿ ನನ್ನ ಕೆಲಸಕಾರ್ಯಗಳನ್ನು ನೋಡಿ ಆಶೀರ್ವಾದ ಮಾಡಿದ್ದು ಇವತ್ತೂ ನನ್ನ ನೆನಪಿನಲ್ಲಿ ಉಳಿದಿದೆ. ನಾನು ಬೆಂಗಳೂರಿನಲ್ಲಿ ನಿರ್ದೇಶಕನಾಗಿದ್ದಾಗ ಕೆಲವು ವೇಳೆ ನಮ್ಮ ಮನೆಗೆ ಕ್ಯಾತನಹಳ್ಳಿ ಸ್ವಾಮಿಯವರೊಡಗೂಡಿ ಪೂಜೆಗೆ ದಯಮಾಡಿಸಿ ಆಶೀರ್ವಾದ ಮಾಡಿ ಭಜನಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಬೀಮಾನಗರದಲ್ಲಿ ಬಸವ ಜಯಂತಿಯಲ್ಲಿ ದಯಮಾಡಿಸಿದ್ದು ಸದಾ ನನ್ನ ಜೀವನದಲ್ಲಿ ಸಾರ್ಥಕತೆಯಿಂದ ಸ್ಮರಿಸುವಂಥಾಗಿದೆ. ಪೂಜ್ಯ ಸ್ವಾಮೀಜಿಯವರು ಬಾಲಜಗತ್ತಿನಿಂದ ಹಿಡಿದು ಅನೇಕ ಸ್ಕೂಲುಗಳು, ಕಾಲೇಜುಗಳು, ಮೆಡಿಕಲ್ ಕಾಲೇಜು, ದಂತವೈದ್ಯ ಕಾಲೇಜು, ಫಾರ್ಮಸಿ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಹೀಗೆ ನೂರಾರು ಸಂಸ್ಥೆಗಳನ್ನು ಕಟ್ಟಿಸಿದ್ದಾರೆ. ಹಾಗೆ ನಿರ್ಮಿಸುವಾಗ ಕೆಲವು ವೇಳೆ ಕ್ಯಾತನಹಳ್ಳಿ ಶ್ರೀಗಳೂ ಪೂಜ್ಯ ಸ್ವಾಮೀಜಿಯವರ ಜೊತೆಗಿರುತ್ತಿದ್ದರು. ವಿದ್ಯಾರ್ಥಿ ನಿಲಯಗಳನ್ನು ಕಟ್ಟಿಸಿ ಅನ್ನದಾತರಾಗಿ ತಮ್ಮನ್ನು ಸ್ಮರಿಸುತ್ತಾರೆ. ಸಾವಿರಾರು ಜನ ಅಧ್ಯಾಪಕರಿಗೆ, ಪ್ರಾಧ್ಯಾಪಕರಿಗೆ ಪ್ರಾಚಾರ್ಯರಿಗೆ ಕೆಲಸ ಕೊಟ್ಟು, ಸಹಸ್ರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅಭ್ಯಾಸ ಮಾಡುತ್ತಿರಲು ಕಾರಣಕರ್ತರಾಗಿದ್ದಾರೆ. ಈ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿದವರು ವಿದ್ಯಾವಂತರಾಗಿ ದೊಡ್ಡ ದೊಡ್ಡ ಅಧಿಕಾರಿಗಳಾಗಿ, ಸಂಶೋಧಕರಾಗಿ, ಬರಹಗಾರರಾಗಿ, ಸಾಹಿತಿಗಳಾಗಿ, ಮಂತ್ರಿಗಳೂ ಆಗಿರುತ್ತಾರೆ.

ಶ್ರೀಮನ್ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್‌ರವರು ಸ್ವಾಮೀಜಿಯವರ ಬಗ್ಗೆ ಅತ್ಯಂತ ಗೌರವ ಉಳ್ಳವರಾಗಿದ್ದರು. ಆಗಾಗ ಸ್ವಾಮೀಜಿಯವರನ್ನು ಕರೆಸಿಕೊಂಡು, ಆಧ್ಯಾತ್ಮಿಕ ವಿಷಯಗಳ ಬಗ್ಗೆ ಮಾತಾಡುತ್ತಿದ್ದರು. ಅಲ್ಲದೆ ರಾಜಗುರುತಿಲಕ ಎಂಬ ಬಿರುದನ್ನು ಕೊಟ್ಟಿರುತ್ತಾರೆ. ಅಲ್ಲದೆ ಸಂಸ್ಥೆಯ ಕಾರ್ಯಕ್ರಮಗಳನ್ನು ನೋಡಿ ಆನೆಕರೋಟಿ ಈಗಿನ ಜೆಎಸ್‌ಎಸ್ ಆಸ್ಪತ್ರೆ ಕಟ್ಟಿರುವ ಸ್ಥಳ, ಹಸುವಿನ ಕರೋಟಿ ಈಗಿನ ವಿದ್ಯಾಪೀಠ ಕಟ್ಟಿರುವ ಸ್ಥಳ. ಮೆಡಿಕಲ್ ಕಾಲೇಜು, ದಂತವೈದ್ಯಕೀಯ ಕಾಲೇಜು,



ಇಂಜಿನಿಯರಿಂಗ್ ಕಾಲೇಜು, ಇವುಗಳನ್ನು ಕಟ್ಟಲು ಬೇಕಾದ ಸ್ಥಳಗಳನ್ನು ಸುಲಭ ಬೆಲೆಗೆ ಕೊಟ್ಟಿರುತ್ತಾರೆ. ಪೂಜ್ಯ ಸ್ವಾಮೀಜಿಯವರ ಸಂಬಂಧಪಟ್ಟ ಉತ್ತಮ ಕಾರ್ಯ ಗಳನ್ನು ನೋಡಿ ಮೈಸೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ಕೊಟ್ಟಿರುತ್ತದೆ.

ಶ್ರೀಗಳವರು 1986ರಲ್ಲಿ ಅಮೆರಿಕ ಮತ್ತು ಇಂಗ್ಲೆಂಡ್‌ಗೆ ಹೋಗುವಾಗ ಕ್ಯಾತನಹಳ್ಳಿ ಬುದ್ಧಿಯವರು, ಹೆಚ್. ಗಂಗಾಧರನ್ ಕೂಡ ಹೋಗಿದ್ದರು. ಅವರು ವಿಮಾನ ನಿಲ್ದಾಣಕ್ಕೆ ಬಂದಾಗ ಅನೇಕ ಜನರು ಅವರನ್ನು ಕಳುಹಿಸಲು ಹಾರತುರಾಯಿಗಳನ್ನು ಅರ್ಪಿಸಲು ಬಂದದ್ದು ಮತ್ತು ಅವರು ಬರುವಾಗಲೂ ಸಾವಿರಾರು ಜನರು ಅವರನ್ನು ಬರಮಾಡಿಕೊಳ್ಳಲು ಕಾಯುತ್ತಿದ್ದುದನ್ನು ನೋಡಿದಾಗ ಅತ್ಯಂತ ಆಶ್ಚರ್ಯವಾಗಿತ್ತು. ಅವರು ಹಿಂದಿರುಗಿ ಬಂದಾಗ ಮೈಸೂರಿನಲ್ಲಿ ಉಕ್ಕಡದ ಹತ್ತಿರ ಸಾವಿರಾರು ಭಕ್ತರು ಕಾಯುತ್ತಿದ್ದರು. ಅವರ ಆರೋಗ್ಯದೃಷ್ಟಿಯಿಂದ ಕಾರಿನಲ್ಲಿಯೇ ಹೋಗಬೇಕಿತ್ತು. ಆದರೆ ಭಕ್ತಸಮೂಹವನ್ನು ನೋಡಿ ಪೂಜ್ಯ ಜಗದ್ಗುರುಗಳವರು ಆರೋಗ್ಯ ಸರಿಯಾಗಿಲ್ಲದಿದ್ದರೂ ಭಕ್ತಸಮೂಹ ವನ್ನು ನೋಡಿ ಆಗದೆ ಇಳಿದು ಜಗನ್ಮೋಹನ ಪ್ಯಾಲೇಸಿಗೆ ನಡೆದುಕೊಂಡೇ ಬಂದರು.

ಅವರು ಸ್ವಾಗತ, ಸತ್ಕಾರಗಳನ್ನು ಇಷ್ಟಪಡಲಿಲ್ಲ. ಅವರ ಆರೋಗ್ಯ ಸರಿಯಿಲ್ಲದಿದ್ದರೂ, ಭಕ್ತರ ಉತ್ಸಾಹವನ್ನು ನೋಡಿ, ಅವರು ಜಗನ್ಮೋಹನ ಅರಮನೆಗೆ ಬಂದಾಗ ಬಹಳ ಜನ ತುಂಬಿದ್ದರಿಂದ ಒಳಗೆ ಹೋಗಲು ಸಾಧ್ಯವಾಗದೆ ಭಕ್ತರು ಮೇಜುಗಳನ್ನು ಹಾಕಿಸಿ, ಪೂಜ್ಯರು ಅದರ ಮೇಲೇ ನಿಂತುಕೊಂಡು ತಮ್ಮ ಪ್ರೇಮ ವಿಶ್ವಾಸಗಳನ್ನು ವ್ಯಕ್ತಪಡಿಸಿ ಭಾಷಣ ಮಾಡಿದರು.

ಇವರು ಸಾಮಾನ್ಯ ಜನರನ್ನು ವಿದ್ಯಾರ್ಥಿಗಳನ್ನು ಬಡವ ಬಲ್ಲಿದರೆಂಬ ಭೇದವಿಲ್ಲದೆ, ಜಾತಿಭೇದವಿಲ್ಲದೆ ನೋಡಿ ಅವರ ಏಳಿಗೆಗೆ ತಮ್ಮನ್ನೇ ಅರ್ಪಿಸಿಕೊಂಡಿರುತ್ತಾರೆ. ಶ್ರೀಗಳವರು ಸರಳ ಮತ್ತು ನಿರಾಡಂಬರ ವ್ಯಕ್ತಿಗಳು. ವಿದ್ವತ್‌ಪ್ರೇಮಿಗಳು, ಹಸನ್ಮುಖಿಗಳು, ಮಾತೃಹೃದಯಿಗಳು, ಸರ್ವರಿಗೂ ಪ್ರಿಯವಾದದ್ದನ್ನು ಮಾಡಿದ ವ್ಯಕ್ತಿಗಳು. ಇವರ ವೈರಾಗ್ಯ' ತಪಸ್ಸು, ಜನಸೇವೆ, ಬಡ ಜನರ ಬಗ್ಗೆ ಇದ್ದ ಅನುಕಂಪ, ಕನಿಕರ ಮತ್ತು ಓದುವ ಮಕ್ಕಳನ್ನು ಕಂಡರೆ ಇದ್ದ ವಾತ್ಸಲ್ಯ ಅತ್ಯಂತ ಜ್ಞಾಪಿಸಿಕೊಳ್ಳುವಂಥಾದ್ದು.

ಬಸವಣ್ಣನವರು ಹೇಳಿದಂತೆ 'ಮೃದುವಚನವೇ ಸಕಲ ಜಪಂಗಳಯ್ಯ ಮೃದುವಚನವೇ ಸಕಲ ತಪಂಗಳಯ್ಯ' ಎಂದು ಬದುಕಿದ ಕಲಿಯುಗದ ಬಸವಣ್ಣನವರು ಎನ್ನಬಹುದು. ಇವರ ಚೈತನ್ಯವೇ ನಮಗೆ ದಾರೀದೀಪ.

ಇವರು ಅಮರರಾಗಿ ನನ್ನಂತೆ ಸಾವಿರಾರು ಜನರಿಗೆ ಅನ್ನ, ವಿದ್ಯೆ ಕೊಟ್ಟ ಬಗ್ಗೆ ಸದಾ ಅವರ ಪಾದಕಮಲಗಳನ್ನು ನೆನೆದುಕೊಂಡು ಮನೆಯಲ್ಲಿ ದೀಪ ಹಚ್ಚುವಂತೆ ಮಾಡಿವೆ.

□



# ಅನನ್ಯ ವ್ಯಕ್ತಿತ್ವ

**ಕೆ.ಎಸ್. ಚಿಕ್ಕಪುಟ್ಟಯ್ಯ**

**ಜ**ನಸಮೂಹದಿಂದ ಪ್ರತ್ಯೇಕವಾಗಿ ನಿಲ್ಲುವಂಥ ಅಗಾಧ ವ್ಯಕ್ತಿತ್ವವನ್ನು ಹೊಂದಿದ್ದವರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು.

ಒಂದು ರೀತಿ ನೇರ ನಡೆ ನುಡಿಯಂಥ ಗುಣವನ್ನು ಹೊಂದಿದ್ದ ರಿಂದಲೇ ಅವರು ಮಹಾನುಭಾವರಾಗಿದ್ದು ಎಲ್ಲರಲ್ಲೂ ಅನುಕಂಪ ವಾತ್ಸಲ್ಯ ಮನೋಭಾವವನ್ನು ಹೊಂದಿದ್ದರು.

ಒಂದು ರೀತಿಯಲ್ಲಿ ಸಂಕೋಚ ಪ್ರವೃತ್ತಿಯವನಾದುದರಿಂದ ಪಕ್ಕದ ಕೊಠಡಿಯಲ್ಲೇ ಇದ್ದರೂ ಸ್ವಾಮೀಜಿಯವರನ್ನು ಭೇಟಿ ಮಾಡುವ ಸಂದರ್ಭವೇ ಬಂದಿರಲಿಲ್ಲ. ಆದರೆ ಅಂಥ ಸುಯೋಗ ಒಂದು ದಿನ ಬಂದೇ ಬಿಟ್ಟಿತು. ರಾಮಾನುಜ ರಸ್ತೆಯಲ್ಲಿ ಆರಂಭವಾಗಿದ್ದ ಪಿಯು ಕಾಲೇಜಿನ ಪ್ರಥಮ ತಂಡದ ವಿದ್ಯಾರ್ಥಿಯಾಗಿದ್ದ ನಾನು ಪಿಸಿಬಿ ಐಚ್ಛಿಕ ತರಗತಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಿದ್ದೆ. ಆ ವರ್ಷದಲ್ಲೇ ಆರಂಭವಾಗುತ್ತಿದ್ದ ಜಯಚಾಮ ರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿಗೆ ಸೇರಲು 440 ರೂ.ಗಳ ಶುಲ್ಕ ನೀಡಲು ಬಡತನದ ಕಾರಣದಿಂದಾಗಿ ಸಾಧ್ಯವಾಗಲಿಲ್ಲ. ಅಷ್ಟು ಹೊತ್ತಿಗಾಗಲೇ ಪೂಜ್ಯ ಸ್ವಾಮೀಜಿಯವರು ತಮ್ಮ ಆಪ್ತರಾಗಿದ್ದ ಮಹದೇವಪ್ಪನವರಿಂದ ಫಲಿತಾಂಶ ತಿಳಿದು ನನ್ನ ಬಗ್ಗೆಯೂ ಕೇಳಿ ತಿಳಿದುಕೊಂಡಿದ್ದರು.

ನಾನು ಇಂಜಿನಿಯರಿಂಗ್ ಸೇರಲಾಗದೆ ನಿರಾಶನಾಗಿ ವಿಧಿಯಿಲ್ಲದೆ ಬಿಎಸ್ಸಿಗೆ ಸೇರಲೆಂದು ಕಾಲೇಜಿಗೆ ಬಂದಾಗ ಮಹದೇವಪ್ಪನವರು ನನ್ನನ್ನು ಕೂಡಲೇ ಸ್ವಾಮೀಜಿಯವರಲ್ಲಿಗೆ ಕರೆದೊಯ್ದರು. ಅವರು ನನ್ನ ಬಡತನದ ಬೇಗೆಯನ್ನು ತಿಳಿದು ಮೊದಲೇ ಏಕೆ ನನ್ನ ಗಮನಕ್ಕೆ ತರಲಿಲ್ಲವೆಂದು ತುಸು ಕೋಪ ತೋರಿ ಕೂಡಲೇ ಜೆಸಿಇ ಕಾಲೇಜಿನ ಪ್ರಾಂಶುಪಾಲರಾಗಿದ್ದ ಪರಶಿವಮೂರ್ತಿಯವರನ್ನು ಸಂಪರ್ಕಿಸಿ ವಿಷಯ ತಿಳಿಸಿ ಕೊನೆಗೆ ಅದು ಸಾಧ್ಯವಾಗದಿದ್ದಾಗ ಬಿಎಸ್ಸಿಗೆ ಸೇರಲು ಸೂಚಿಸಿದರು.

ಮಹಾರಾಜ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ನಾಡಿಗ್ ಕೃಷ್ಣಮೂರ್ತಿಯವರು ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಜೆಎಸ್ಎಸ್ ಕಾಲೇಜಿನ ಪ್ರತಿನಿಧಿಯಾಗಿ ಭಾಗವಹಿಸಿದ್ದ ನನಗೆ ದ್ವಿತೀಯ ಬಹುಮಾನ ಲಭಿಸಿದ್ದು, ಬಹುಮಾನವಾಗಿ

ಹಲವು ಅಮೂಲ್ಯ ಪುಸ್ತಕಗಳನ್ನು ನೀಡಿದ್ದರು. ಇದಕ್ಕೆಲ್ಲ ಪೂಜ್ಯ ಸ್ವಾಮೀಜಿಯವರ ಆಶೀರ್ವಾದವೇ ಕಾರಣ ಜೊತೆಗೆ ನನಗೆ ಸಾಹಿತ್ಯದಲ್ಲಿ ಆಸಕ್ತಿ ಬರಲು ಪ್ರೇರಕವಾಯಿತು.

**20 ರೂ. ಸಂಭಾವನೆ:** ಸಾಹಿತ್ಯದಲ್ಲಿ ಆಸಕ್ತಿಯಿದ್ದ ನನ್ನನ್ನು ಆಗತಾನೇ ಆರಂಭವಾಗುತ್ತಿದ್ದ ಜೀ.ಶಂ. ಪರಮಶಿವಯ್ಯನವರ ಸಂಪಾದಕತ್ವದ ಪ್ರಸಾದ ಸಂಚಿಕೆಗೆ ಸಹಾಯಕನಾಗಿ 20 ರೂ. ಸಂಭಾವನೆ ಆಧಾರದಲ್ಲಿ ನೇಮಿಸಿಕೊಂಡರು. ಇದನ್ನು ಕೊಡಬೇಕಾದರೆ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಯಾರಿಗೂ ಗೊತ್ತಾಗದ ರೀತಿ ಯಲ್ಲಿ, ನೋಟನ್ನು ಚಿಕ್ಕದಾಗಿ ಮಡಿಚಿ ನನ್ನ ಕೈಯಲ್ಲಿಡುತ್ತಿದ್ದರು. ಇದು ತಮ್ಮ ಜೊತೆಯಲ್ಲೇ ಇರುತ್ತಿದ್ದ ಕ್ಯಾತನಹಳ್ಳಿ ಸ್ವಾಮೀಜಿಗಳ ಗಮನಕ್ಕೂ ಬಾರದಂತೆ ಗೌಪ್ಯವಾಗಿಡುತ್ತಿದ್ದರು.

**ನಕಲಿ ಕೀ :** ಪ್ರಸಾದ ಸಂಚಿಕೆಯು ಪ್ರಕಟವಾದಾಗಲೆಲ್ಲಾ ಸಂಪಾದಕ ಮಂಡಲಿ ಮತ್ತು ಚಂದಾದಾರರಿಗೆ ಸೈಕಲ್‌ನಲ್ಲಿ ಹೋಗಿ ಪುಸ್ತಕಗಳನ್ನು ಕೊಟ್ಟು ಮತ್ತೆ ಮಠಕ್ಕೆ ಬರುತ್ತಿದ್ದೆ. ಒಮ್ಮೆ ಪ್ರಸಾದ ಸಂಚಿಕೆ ಕೊಟ್ಟು ಬಂದಾಗ ಮಠದಲ್ಲಿ ವೇಳೆ ಆಯಿತೆಂದು ಊಟದ ಹಾಲಿಗೆ ಬೀಗ ಹಾಕಿದ್ದರು. ಸ್ವಾಮೀಜಿಯವರು ನನ್ನನ್ನು ನೋಡಿ ಊಟ ಆಯಿತೆ? ಎಂದು ಕೇಳಿದರು. ಇಲ್ಲ ಸ್ವಾಮೀಜಿ ಈಗಾಗಲೇ ಸಮಯ ಆಗಿದೆ, ಆದರಿಂದ ಸಂಜೆ ಒಟ್ಟಿಗೆ ಮಾಡುತ್ತೇನೆ ಎಂದಾಗ ವ್ಯವಸ್ಥಾಪಕರಾಗಿದ್ದ ಸಿದ್ಧಲಿಂಗಸ್ವಾಮಿಯವರನ್ನು ಕರೆಸಿ ಊಟದ ಹಾಲಿನ ನಕಲಿ ಕೀ ಮಾಡಿಸಿ 'ನೀನು ಯಾವಾಗ ಬಂದರೂ ನೀನೇ ಕೀ ತೆಗೆದು ಊಟ ಮಾಡು' ಎಂದು ಹೇಳಿ ನನಗೆ ಆ ಕೀಯನ್ನು ಕೊಟ್ಟಿದ್ದರು.

**ಫಾರ್ಮಸಿ ಕಾಲೇಜು:** ಜೆಎಸ್‌ಎಸ್ ಸಂಸ್ಥೆಯಿಂದ ಆರಂಭಿಸಿದ್ದ ಫಾರ್ಮಸಿ ಕಾಲೇಜಿಗೆ ಮೊದಲ ಪ್ರಿನ್ಸಿಪಾಲರನ್ನಾಗಿ ನನ್ನನ್ನೇ ನೇಮಿಸಿದ್ದರು. ಕೇವಲ ಮೂರು ವರ್ಷದಲ್ಲಿಯೇ ಕಾಲೇಜಿಗೆ ಎಂಟು ರ್‍ಯಾಂಕ್ ಬಂದಾಗ ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. ನಾವು ಪಡುತ್ತಿದ್ದ ಪರಿಶ್ರಮವನ್ನು ಗುರುತಿಸಿ ಅದಕ್ಕೆ ಬೆಲೆಯನ್ನು ನೀಡುತ್ತಿದ್ದರು. ನಂತರ ಊಟಿಯಲ್ಲೂ ಫಾರ್ಮಸಿ ಕಾಲೇಜನ್ನು ತೆರೆದಾಗಲೂ ಪ್ರತಿ ವಾರ ಸ್ವಾಮೀಜಿ ಮತ್ತು ಕಾರ್ಯದರ್ಶಿಯಾಗಿದ್ದ ಹೆಚ್.ಸಿ. ಬಸವಣ್ಣನವರೊಂದಿಗೆ ಇಲ್ಲಿಂದ ಪಠ್ಯಸಾಮಗ್ರಿ ಮತ್ತು ಪ್ರಯೋಗಶಾಲೆಯ ಸಾಮಗ್ರಿಗಳನ್ನು ಕೊಂಡೊಯ್ಯುತ್ತಿದ್ದೆವು.

**ಭಾಷಣಗಳನ್ನು ಬರೆಯುತ್ತಿದ್ದೆ :** ಪೂಜ್ಯ ಸ್ವಾಮೀಜಿಯವರು ಪಾಲ್ಗೊಳ್ಳುತ್ತಿದ್ದ ಯಾವುದೇ ಸಭೆ ಸಮಾರಂಭಗಳಾದರೂ ಮೊದಲು ಅದರ ಆಹ್ವಾನ ಪತ್ರಿಕೆಗಳನ್ನು ನನಗೆ ಕಳಿಸಿಕೊಡುತ್ತಿದ್ದರು. ನಾನು ಭಾಷಣಗಳನ್ನು ಬರೆದುಕೊಟ್ಟಾಗ ಅವರು ಅದನ್ನು ಪರಿಶೀಲಿಸದೆ ಸಮಾರಂಭಕ್ಕೆ ಹೋಗುವ 30 ನಿಮಿಷಕ್ಕೆ ಮೊದಲು ಬಂದು ತಮ್ಮ ಕೊಠಡಿಯ ಬಾಗಿಲು



ಹಾಕಿಕೊಂಡು ಆ ಭಾಷಣಗಳನ್ನು ನಾಲ್ಕೈದು ಬಾರಿ ನೋಡಿ ಸಮಾರಂಭಗಳಲ್ಲಿ ಮಾತನಾಡುತ್ತಿದ್ದರು ಯಾವಾಗಲೇ ಆದರೂ ನಾನು ಬರೆದುಕೊಡುತ್ತಿದ್ದ ಭಾಷಣಗಳ ಬಗ್ಗೆ ಆಕ್ಷೇಪ ಇಲ್ಲವೆ ಟೀಕೆಯನ್ನು ಮಾಡುತ್ತಿರ ಲಿಲ್ಲ ಅಂಥ ಸಹೃದಯಿಗಳು.

ಫಾರ್ಮಸಿ ಕಾಲೇಜಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಸಮಸ್ಯೆ ಗಳು ಎದುರಾದರೂ ಅದನ್ನು ಬಗೆಹರಿಸಲು ನನ್ನನ್ನೇ ಕಳಿಸುವಷ್ಟರ ಮಟ್ಟಿಗೆ ನಂಬಿಕೆಯನ್ನು ತಾಳಿದ್ದರು. ನಾನೂ ಸಹ ಅವರ ನಂಬಿಕೆಗೆ ಚ್ಯುತಿಯಾಗದ ರೀತಿಯಲ್ಲಿ ಸೇವೆ ಸಲ್ಲಿಸಿದ್ದೇನೆ.

ಸ್ವಾಮೀಜಿಯವರಲ್ಲಿದ್ದ ನಿಯತ್ತು ವಿಧೇಯತೆ ಅನುಕಂಪ ವಾತ್ಸಲ್ಯಗಳಿಂದಲೇ ಇಂದು ಎಲ್ಲರ ಮನದಲ್ಲೂ ನೆಲೆಯೂರಿದ್ದಾರೆ. ಅಲ್ಲದೆ ಅವರಲ್ಲಿದ್ದ ಗುಣಗಳಿಂದಲೇ ನಾವು ನಮ್ಮ ಜೀವನದಲ್ಲಿ ಒಳ್ಳೆಯ ಸ್ಥಾನಗಳನ್ನು ಪಡೆದುಕೊಳ್ಳಲು ಸಾಧ್ಯವಾಯಿತು.

□

## ರಾಜೇಂದ್ರ ಶ್ರೀವಾಣಿ

- ಸಮಾಜದ ಅಭ್ಯುದಯಕ್ಕೆ ಯಾರು ಪ್ರಾಮಾಣಿಕವಾಗಿ ಶ್ರಮಿಸುತ್ತಾರೋ ಅವರನ್ನು ಯಾವುದೇ ಕಾರಣಕ್ಕೂ ಸಮಾಜ ಕಡೆಗಣಿಸುವುದಿಲ್ಲ.
- ಪ್ರಯತ್ನ ಸಮರ್ಪಕವಾಗಿದ್ದಾಗ ಮಾತ್ರ ಫಲಿತಾಂಶವೂ ಸಮರ್ಪಕವಾಗಿರುತ್ತದೆ.
- ದುಃಖಿಸಬೇಡಿ ಶಿವನಿಚ್ಛೆಯಿದ್ದರೆ ನಿಮ್ಮ ಬಯಕೆ ಈಡೇರುತ್ತದೆ
- ನಾವು ಎಲ್ಲೇ ಇದ್ದರೂ ನಮ್ಮ ಸಂಸ್ಕೃತಿಯನ್ನು ಮರೆಯಬಾರದು, ನಮ್ಮ ಮಕ್ಕಳಿಗೂ ಅದನ್ನು ಕಲಿಸಬೇಕು.
- ಮಠಗಳು ಅರಿವು, ಆಚಾರಗಳನ್ನು ಬಿತ್ತಿ ಬೆಳೆಸುವ ಆಧ್ಯಾತ್ಮಿಕ ಕೇಂದ್ರಗಳಾಗಬೇಕು.



# ವಾರ್ತಾವಿಹಾರ

## ಕುಮಾರಸ್ವಾಮಿ ವಿರಕ್ತಮಠ

**ಸಮಾಜದ ಏಳಿಗೆಗೆ ನಿರಂತರ ಶ್ರಮಿಸುತ್ತಿರುವ ಮಠಗಳು**

ಸಮಾಜದ ಏಳಿಗೆಗಾಗಿ ಮಠಗಳು ತ್ರಿವಿಧ ದಾಸೋಹದ ಮೂಲಕ ನಿರಂತರವಾಗಿ ಶ್ರಮಿಸುತ್ತಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 1ರಂದು ನಂಜನಗೂಡು ತಾಲ್ಲೂಕು ಸೂರಹಳ್ಳಿ ಶ್ರೀ ವಿರಕ್ತಮಠದ ಶ್ರೀ ನಾಗಭೂಷಣ ಸ್ವಾಮಿಗಳವರ ಪುಣ್ಯಾರಾಧನೆಯ ನಿಮಿತ್ತ ಏರ್ಪಡಿಸಿದ್ದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮಠಗಳು ಮತ್ತು ಸಮಾಜ ಒಂದಕ್ಕೊಂದು ಪೂರಕವಾಗಿವೆ. ಯಾವುದೇ ಭೇದ-ಭಾವಗಳಿಲ್ಲದೆ ಎಲ್ಲರಿಗೂ ಮಠಗಳು ಸೇವೆಯನ್ನು ಸಲ್ಲಿಸುತ್ತಿವೆ. ಶ್ರೀ ನಾಗಭೂಷಣ ಸ್ವಾಮಿಗಳು ಪೂಜಾನಿಷ್ಠರಾಗಿದ್ದರು. ಆಧ್ಯಾತ್ಮಿಕ ಚಿಂತನೆಗಳಲ್ಲಿ ಅತೀವ ಒಲವುಳ್ಳವರಾಗಿದ್ದರು. ಅವರ ಉತ್ತರಾಧಿಕಾರಿಗಳಾಗಿರುವ ಶ್ರೀ ಕೆಂಡಗಣ್ಣ ಸ್ವಾಮಿಗಳು ಕ್ರಿಯಾಶೀಲರು. ಜೆಎಸ್‌ಎಸ್ ಗುರುಕುಲದಲ್ಲಿದ್ದುಕೊಂಡು ಅಧ್ಯಯನ ಮಾಡುತ್ತಿದ್ದಾರೆ. ಅವರ ಹಿರಿಯ ಶ್ರೀಗಳಂತೆ ಮಠದ ಎಲ್ಲ ಕಾರ್ಯಗಳನ್ನು ಉತ್ತಮವಾಗಿ ನಡೆಸಿಕೊಂಡು ಹೋಗಲೆಂದು ತಿಳಿಸಿದರು.

ದೇವನೂರು ಶ್ರೀ ಮಹಾಂತ ಸ್ವಾಮಿಗಳು ಸೂರಹಳ್ಳಿ ಶ್ರೀಗಳು ಸರಿಯಾದ ಮಾರ್ಗದಲ್ಲಿ ನಡೆದವರು. ಸಮಾಜದ ಬಗ್ಗೆ ಅತೀವವಾದ ನಿಷ್ಠೆಯನ್ನು ಹೊಂದಿದ್ದರು. ದಾಸೋಹದಲ್ಲೇ ಭಗವಂತನನ್ನು ಕಂಡವರು ಎಂದರು. ಹುಲ್ಲಹಳ್ಳಿ ಶ್ರೀ ವಿರಕ್ತಮಠದ ಶ್ರೀ ಇಮ್ಮಡಿ ಚನ್ನಮಲ್ಲ ದೇಶಿಕೇಂದ್ರ ಸ್ವಾಮಿಗಳು ಸೂರಹಳ್ಳಿ ಶ್ರೀಗಳು ಮೃದು ಸ್ವಭಾವದ ವ್ಯಕ್ತಿತ್ವವನ್ನು ಹೊಂದಿದ್ದವರು. ನಮ್ಮ ಹಿರಿಯ ಗುರುಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದರೆಂದು ತಿಳಿಸಿದರು. ಗೌಡಹಳ್ಳಿ ಶ್ರೀ ಮರಿತೋಂಟದಾರ್ಯ ಸ್ವಾಮಿಗಳು ಸೂರಹಳ್ಳಿ ಶ್ರೀಗಳು ಗಟ್ಟಿ ವ್ಯಕ್ತಿತ್ವ ಹೊಂದಿದ್ದ ಸ್ವಾಭಿಮಾನಿಗಳು. ಏನೇ ಕಷ್ಟ-ನಷ್ಟಗಳಾದರೂ ಸಮಭಾವದಿಂದ ಸ್ವೀಕರಿಸಿ ಶ್ರೀಮಠವನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದರು ಎಂದರು. ಶಿರಮಳ್ಳಿ ಶ್ರೀ ಮುರಘಿ ಸ್ವಾಮಿ ಮಠದ ಶ್ರೀ ಇಮ್ಮಡಿ ಮುರಘಿ ಸ್ವಾಮಿಗಳು ಗುರುವು ಸನ್ಮಾರ್ಗದಲ್ಲಿ ನಡೆಯಲು ದಾರಿ ತೋರುವ ಪರುಷಮಣಿ ಇದ್ದಂತೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ



ನುಡಿಯಂತೆ ಗುರುವಿಗೆ ಶರಣಾದರೆ ಉತ್ತಮ ಮಾರ್ಗ ದೊರೆಯುತ್ತದೆ ಎಂದು ಹೇಳಿದರು. ಕಂತೆ ಮಾದಪ್ಪನ ಬೆಟ್ಟದ ಶ್ರೀಗಳು ನಾಗಭೂಷಣ ಶ್ರೀಗಳನ್ನು ಸ್ಮರಿಸಿದರು.

ಕಿರಿಯ ಶ್ರೀಗಳಾದ ಶ್ರೀ ಕೆಂಡಗಣ್ಣ ಸ್ವಾಮಿಗಳು ನಮ್ಮ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತೇನೆ. ಮಠದ ಎಲ್ಲ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತೇನೆ. ಇದಕ್ಕೆ ನಿಮ್ಮೆಲ್ಲರ ಸಲಹೆ ಮತ್ತು ಸಹಕಾರ ಅಗತ್ಯ ಎಂದರು.

ಕಸುವಿನಹಳ್ಳಿಯ ಶ್ರೀ ಶಿವಮೂರ್ತಿ, ರಾಂಪುರದ ಪಟೇಲ್ ಶ್ರೀ ಮಹದೇವಪ್ಪ, ಸೂರಹಳ್ಳಿ ಶ್ರೀ ಕೆಂಪರಾಜು, ಸೂರಹಳ್ಳಿ ಶ್ರೀ ವೀರಭದ್ರಸ್ವಾಮಿ, ಶ್ರೀ ರಮೇಶ್, ಚುಂಚನಹಳ್ಳಿ ಶ್ರೀಮತಿ ಮಂಗಳ ಮಹದೇವಪ್ಪ, ಬೆಟ್ಟದಮಾದಹಳ್ಳಿ ಶ್ರೀ ಪ್ರಭುಸ್ವಾಮಿ, ಲಕ್ಷ್ಮಣಪುರ ಶ್ರೀ ಚಿನ್ನಸ್ವಾಮಪ್ಪ, ಬಿಳುಗಲಿ ಶ್ರೀಮತಿ ಗೀತಾ ಶಿವಪ್ಪದೇವರುಗಳು ಮಾತನಾಡಿ ಶ್ರೀಗಳು ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದರು. ಈ ಭಾಗದ ಭಕ್ತರನ್ನು ಜಾಗೃತಗೊಳಿಸುವ ಕಾಯಕದಲ್ಲಿ ನಿರತರಾಗಿದ್ದರು. ಕಿರಿಯ ಶ್ರೀಗಳಿಗೂ ಮಠವನ್ನು ಉತ್ತಮವಾಗಿ ಮುನ್ನಡೆಸಿಕೊಂಡು ಹೋಗಲು ನಾವೆಲ್ಲರೂ ಸಹಕಾರ ನಿಡುತ್ತೇವೆ. ಶ್ರೀಗಳು ಸದಾ ಭಕ್ತರ ಬಗ್ಗೆ ಯೋಚಿಸುತ್ತಿದ್ದರು. ಮಠವನ್ನು ಶಕ್ತಿಮೀರಿ ಬೆಳೆಸಿದ್ದಾರೆ. ಇದನ್ನು ಮುಂದುವರೆಸಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಹೇಳಿದರು.

ಚಿಕ್ಕತುಪ್ಪೂರು ಶ್ರೀಗಳು ಪ್ರಾರ್ಥಿಸಿ, ಸ್ವಾಗತಿಸಿದರು. ಶಿರಮಳ್ಳಿ ಶ್ರೀಗಳು ವಂದಿಸಿದರು. ಚುಂಚನಹಳ್ಳಿ ಶ್ರೀಗಳು ಶ್ರೀಗಳ ವ್ಯಕ್ತಿತ್ವದ ಗುಣಗಾನ ಮಾಡಿದರು ಹಾಗೂ ಕಾರ್ಯಕ್ರಮ ನಿರೂಪಿಸಿದರು.

**ಜೀವನದ ಯಶಸ್ಸಿಗೆ ಸದೃಢ ಆಲೋಚನೆಗಳು ಮುಖ್ಯ**

ಜೀವನದಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಸದೃಢವಾದ ಆಲೋಚನೆಗಳಿರಬೇಕು ಎಂದು ಜಿಲ್ಲಾಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತರೆಡ್ಡಿಯವರು ಆಗಸ್ಟ್ 5ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ಕುರಿತ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ವೇಗವಾಗಿ ಸಾಗುತ್ತಿರುವ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮನಸ್ಸಿಗೆ ಶಾಂತಿ, ನೆಮ್ಮದಿ ಇಲ್ಲದಂತಾಗಿದೆ. ಅವೆಲ್ಲವನ್ನೂ ಮರಳಿ ಪಡೆಯಲು ಶ್ರಾವಣಮಾಸ ಅತ್ಯಂತ ಪ್ರಶಸ್ತವಾದುದು. ಈ ತಿಂಗಳಿನಲ್ಲಿ ಅನೇಕ ಧಾರ್ಮಿಕ, ಆಧ್ಯಾತ್ಮಿಕ

ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಅದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು. ಸುತ್ತೂರು ಶ್ರೀಮಠದ ವತಿಯಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಅತ್ಯಂತ ಪ್ರಶಂಸನೀಯವಾದುದು ಎಂದು ತಿಳಿಸಿದರು.

ನಗರ ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್‌ರವರು ಇಂದು ನಾವೆಲ್ಲರೂ ವಿಶ್ರಾಂತಿ ಇಲ್ಲದ ಜೀವನವನ್ನು ಸಾಗಿಸುತ್ತಿದ್ದೇವೆ. ದೈಹಿಕವಾಗಿ ಆರೋಗ್ಯವಾಗಿದ್ದರೂ, ಮಾನಸಿಕವಾಗಿ ದುರ್ಬಲರಾದರೆ ಯಾವುದೇ ಪ್ರಯೋಜನವಿಲ್ಲ. ಮನಸ್ಸು ಸದೃಢಗೊಳ್ಳಬೇಕಾದರೆ ಇಂತಹ ಪ್ರವಚನ ಕಾರ್ಯಕ್ರಮಗಳು ಅತಿ ಅಗತ್ಯ. ಇಂದಿನ ಮಕ್ಕಳಲ್ಲಿ ತಾಳ್ಮೆಯಿಲ್ಲ, ಹಠಮಾರಿ ಧೋರಣೆ ಹೆಚ್ಚುತ್ತಿದೆ. ಅವರಿಗೆ ನೈತಿಕ ಶಿಕ್ಷಣದ ಅಗತ್ಯವಿದೆ, ಹಾಗಾಗಿ ಅವರನ್ನು ಇಂತಹ ಕಾರ್ಯಕ್ರಮಗಳಿಗೆ ಕರೆತರಬೇಕು ಎಂದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಶ್ರೀ ಎ.ಎನ್. ರಘುನಂದನ್‌ರವರು ಶ್ರಾವಣಮಾಸ ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ನೆನಪಿಸುವ ತಿಂಗಳು. ಜೀವನ ಕೇವಲ ವ್ಯಾವಹಾರಿಕವಾಗಿದೆ, ಮಾನವೀಯ ಸಂಬಂಧಗಳಿಗೆ ಬೆಲೆ ಇಲ್ಲದಂತಾಗುತ್ತಿದೆ. ಇಂತಹ ಸಂದರ್ಭದಲ್ಲಿ ಜನರ ಭೌತಿಕ ಮತ್ತು ಮಾನಸಿಕ ಉನ್ನತಿಗಾಗಿ ಶ್ರೀಮಠ ಶ್ರಮಿಸುತ್ತಿರುವುದು ಅಭಿನಂದನಾರ್ಹ ಎಂದು ಹೇಳಿದರು.

ಹರವೆ ಶ್ರೀ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮಿಗಳು ಭಗವಚ್ಚಿಂತನೆಯನ್ನು ಮಾಡಲು ಶ್ರಾವಣ ಮಾಸ ಸುಸಂದರ್ಭ. ಸುತ್ತೂರು ಶ್ರೀಮಠ ಸದಾ ಆಧ್ಯಾತ್ಮಿಕ ಚಟುವಟಿಕೆಗಳ ತಾಣ. ಮನಸ್ಸಿನ ದುಗುಡ-ದುಮ್ಮಾನಗಳು ದೂರವಾಗಬೇಕಾದರೆ ಇಂತಹ ಚಿಂತನೆಗಳನ್ನು ಕೇಳುವುದು ಅಗತ್ಯ. ಇಂದು ಒಳ್ಳೆಯದು ಮತ್ತು ಕೆಟ್ಟದ್ದು ಎಂಬುದು ಮನುಷ್ಯನ ಬೆರಳ ತುದಿಯಲ್ಲಿಯೇ ಇದೆ. ಯಾವುದನ್ನು ಆಯ್ಕೆ ಮಾಡಬೇಕು ಎಂಬುದನ್ನು ಅರಿಯಬೇಕು. ಮನುಷ್ಯ ಪ್ರಕೃತಿಗೆ ವಿರುದ್ಧವಾಗಿ ನಡೆಯುತ್ತಿರುವುದರಿಂದ ಅನೇಕ ದುರಂತಗಳು ನಡೆಯುತ್ತಿವೆ. ಮಾನವ ಜನ್ಮ ಸಾರ್ಥಕವಾಗಬೇಕಾದರೆ ಇಂತಹ ಉತ್ತಮ ವಿಚಾರಗಳನ್ನು ಆರ್ಜಿಸಬೇಕು ಎಂದು ತಿಳಿಸಿದರು.

ಡಾ. ಕೆ. ಅನಂತರಾಮುರವರು ಶ್ರಾವಣಕ್ಕೂ-ಶ್ರವಣಕ್ಕೂ ಅವಿನಾಭಾವ ಸಂಬಂಧವಿದೆ. ಈ ಮಾಸದಲ್ಲಿ ಸದ್ವಿಚಾರಗಳ ಚಿಂತನೆ ಮಾಡಿದರೆ ಸಾಲದು, ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು. ಸುಸಂಸ್ಕೃತರಾಗಿ ಬೆಳೆಯಲು ಇಂತಹ ಸತ್ಸಂಗಗಳು, ಪ್ರವಚನಗಳು ನಡೆಯುತ್ತಲೇ ಇರಬೇಕು. ಇದರಿಂದ ಚಿತ್ತಶುದ್ಧಿಯಾಗುತ್ತದೆ ಮತ್ತು

ಏಕಾಗ್ರತೆ ಹೆಚ್ಚುತ್ತದೆ. ಪೀಳಿಗೆಯಿಂದ ಪೀಳಿಗೆಗೆ ಬುದ್ಧಿ ಬೆಳೆಯುತ್ತಿದೆ, ಆದರೆ ವಿವೇಕ ಬೆಳೆಯುತ್ತಿಲ್ಲ. ಶಾಲಾ–ಕಾಲೇಜುಗಳಲ್ಲಿ ಸರಿಯಾದ ನೈತಿಕ ಶಿಕ್ಷಣ ದೊರೆಯುತ್ತಿಲ್ಲ. ಯುವಜನರು ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳಬೇಕು. ಬದುಕು ಉತ್ತಮ ಮೌಲ್ಯಗಳಿಂದ ರೂಪಗೊಳ್ಳಬೇಕು ಎಂದು ಹೇಳಿದರು.

ವಿದುಷಿ ಎಂ.ವಿ. ಶುಭಾ ರಾಘವೇಂದ್ರ ವಾಚನ ಮಾಡಿದರು. ಶ್ರೀ ಎಸ್. ನಂದೀಶ್ ಸ್ವಾಗತಿಸಿದರು. ಶ್ರೀ ವೀರಭದ್ರಸ್ವಾಮಿ ವಂದಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರೂಪಿಸಿದರು. ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಮೈಸೂರು ಶ್ರೀ ಸುತ್ತೂರು ಮಠದ ಸಿಬ್ಬಂದಿವರ್ಗದವರು ಕಾರ್ಯಕ್ರಮದ ಸೇವಾರ್ಥ ವಹಿಸಿದ್ದರು.

**ಸುಸ್ಥಿರ ಸಮಾಜಕ್ಕೆ ಗುರುಹಿರಿಯರ ಮಾರ್ಗದರ್ಶನ ಅವಶ್ಯ**

ಸುಸ್ಥಿರ ಸಮಾಜಕ್ಕೆ ಗುರುಹಿರಿಯರ ಮಾರ್ಗದರ್ಶನ ಅವಶ್ಯ ಎಂದು ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪ ನಿರ್ದೇಶಕರಾದ ಶ್ರೀ ಎಸ್.ಎಲ್ ಚನ್ನಬಸವಣ್ಣನವರು ಆಗಸ್ಟ್ 4ರಂದು ಶ್ರೀ ಸುತ್ತೂರು ಕ್ಷೇತ್ರದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ ಕುರಿತ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಭಾರತೀಯ ಸಂಸ್ಕೃತಿಯ ಉತ್ತಮ ವಿಚಾರಗಳನ್ನು ಜ್ಞಾನಿಗಳಿಂದ ಅನುಭವಿಗಳಿಂದ ಪಡೆದು ನಾವು ಶಾಂತಿ ಸನ್ನಡತೆಯನ್ನು ರೂಪಿಸಿಕೊಳ್ಳುವುದು ಅಗತ್ಯ. ಶರಣರು, ಗುರುಹಿರಿಯರು, ಪೂಜ್ಯರುಗಳ ಮಾರ್ಗದರ್ಶನದಿಂದ ಸುಸ್ಥಿರ ಸಮಾಜವನ್ನು ಸ್ಥಾಪಿಸಬಹುದು. ಈ ನಿಟ್ಟಿನಲ್ಲಿ ಶ್ರಾವಣ ಮಾಸದ ಪ್ರವಚನ ಕಾರ್ಯಕ್ರಮವು ಜನರ ಮನೋಭಿತ್ತಿಯಲ್ಲಿ ಸಂಸ್ಕಾರ ಮತ್ತು ಮೌಲ್ಯಗಳನ್ನು ಭಿತ್ತುವಲ್ಲಿ ಸಹಕಾರಿಯಾಗಲಿ ಎಂದು ತಿಳಿಸಿದರು.

ಉದ್ಯಮಿಗಳಾದ ಶ್ರೀ ಹೆಚ್.ಎಸ್. ರಾಘವೇಂದ್ರರಾವ್‌ರವರು ಶ್ರೀ ಸುತ್ತೂರು ಮಠವು ಒಂದು ಅಕ್ಷಯಪಾತ್ರೆ ಇದ್ದಂತೆ, ಅದು ನಿರಂತರವಾಗಿ ಜ್ಞಾನಾನ್ನ ದಾಸೋಹವನ್ನು ಸಮಾಜಕ್ಕೆ ನೀಡುತ್ತಾ ಬಂದಿದೆ ಎಂದು ನುಡಿದರು.

ಅಪರ ಜಿಲ್ಲಾಧಿಕಾರಿಗಳಾದ ಡಾ. ಪಿ. ಶಿವರಾಜುರವರು ಪೂಜ್ಯ ಶ್ರೀಗಳವರು ಇಡೀ ಸಮಾಜಕ್ಕೆ ಬೆಳಕಾಗಿದ್ದಾರೆ. ಸೂರ್ಯ ಜಾತಿ ಧರ್ಮ ಎನ್ನದೆ ಹೇಗೆ ಬೆಳಗುತ್ತಾನೋ, ಅದೇ ನಿಟ್ಟಿನಲ್ಲಿ ಪೂಜ್ಯ ಶ್ರೀಗಳವರು ಸಮಾಜದ ಪ್ರತಿಯೊಬ್ಬ ವ್ಯಕ್ತಿಗೂ ಬೆಳಕಾಗಿದ್ದಾರೆ.

ಪವಿತ್ರವಾದ ಶ್ರಾವಣ ಮಾಸದಲ್ಲಿ ನಾವು ಪ್ರವಚನಗಳನ್ನು ಆಲಿಸುವುದರಿಂದ ನಮಗೆ ದೈವಾನುಗ್ರಹ ದೊರೆಯುವುದು. ಲಕ್ಕಣ್ಣ ದಂಡೇಶ ವಿರಚಿತ 'ಶಿವತತ್ತ್ವ ಚಿಂತಾಮಣಿ' ಕೃತಿಯು ಅಪಾರ ಜೀವನ ಮೌಲ್ಯಗಳನ್ನು ಒಳಗೊಂಡಿದ್ದು ಇದನ್ನು ಕೇಳುವುದರಿಂದ ನಮ್ಮ ಜೀವನ ಪಾವನವಾಗುವುದು ಎಂದು ತಿಳಿಸಿದರು.

ಎಂ.ಎಲ್. ಹುಂಡಿಯ ಶ್ರೀ ಬೆಟ್ಟದ ಮಠದ ಶ್ರೀ ಗೌರೀಶಂಕರ ಸ್ವಾಮಿಗಳು ನಮಗೆ ಮಾನವ ಜನ್ಮ ದೊರೆತಿರುವುದೇ ಒಂದು ಪುಣ್ಯ. ಉತ್ತಮ ಮೌಲ್ಯ ಹಾಗೂ ಸಂಸ್ಕಾರಗಳಿಂದ ನಮ್ಮ ಜೀವನವನ್ನು ಸಾಕಾರಗೊಳಿಸಿಕೊಳ್ಳಬೇಕು. ಸುತ್ತೂರು ಶ್ರೀಮಠವು ಬಸವಣ್ಣನವರ ಆದರ್ಶಗಳನ್ನು ಪರಿಪಾಲನೆ ಮಾಡುತ್ತಿದೆ. ಕಾಯಕ ದಾಸೋಹದಲ್ಲಿ ಜಾತಿ ಭೇದವಿಲ್ಲದೆ ಸಮಾಜದ ಎಲ್ಲಾ ಜನರ ಜೀವನಕ್ಕೆ ದಾರಿ ದೀಪವಾಗಿದೆ ಎಂದು ನುಡಿದರು.

ಜೆಎಸ್‌ಎಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎಚ್.ಬಿ. ದೇವಣ್ಣನವರು ಪ್ರವಚನವನ್ನು ನಡೆಸಿಕೊಟ್ಟರು. ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಡಿ.ಎಸ್. ಸಿದ್ಧಲಿಂಗಸ್ವಾಮಿಯವರು ಕಾವ್ಯವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ಶ್ರೀ ಜಯರಾಜೇಂದ್ರರು, ಮಾಡ್ರಳ್ಳಿ, ದಂಡಿಕೆರೆ ಮಠಗಳ ಶ್ರೀಗಳು, ಗುರುಕುಲದ ಸಾಧಕರು, ಜೆಎಸ್‌ಎಸ್ ಸಂಸ್ಥೆಗಳ ಅಧಿಕಾರಿ ವರ್ಗದವರು ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತರು ಭಾಗವಹಿಸಿದ್ದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶಿಕ್ಷಕರಾದ ಶ್ರೀ ಅಂದಯ್ಯ ಶಿರೂರಮಠ ಸ್ವಾಗತಿಸಿ, ನಿರೂಪಿಸಿದರು. ಶ್ರೀ ವಿ. ವಿನೋದ್‌ಕುಮಾರ್ ವಂದಿಸಿದರು.

**ಶಕ್ತಿಹೀನರ ಪರ ವಕಾಲತ್ತು ವಹಿಸಬೇಕು**

ಸಮಾಜದ ಕಟ್ಟಕಡೆಯ ವ್ಯಕ್ತಿ ಹಾಗೂ ಶಕ್ತಿಹೀನರ ಪರ ವಕಾಲತ್ತು ವಹಿಸಬೇಕು ಎಂದು ಸುಪ್ರೀಂ ಕೋರ್ಟ್‌ನ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಸರಸ ವೆಂಕಟನಾರಾಯಣ ಭಟ್ಟಿಯವರು ಆಗಸ್ಟ್ 3ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜು 16ನೇ ಘಟಿಕೋತ್ಸವದಲ್ಲಿ ಮಾತನಾಡುತ್ತಾ ತಿಳಿಸಿದರು. ನಿಸ್ಸಹಾಯಕರ ಪರ ವಕಾಲತ್ತು ವಹಿಸಿ ನ್ಯಾಯಕ್ಕಾಗಿ ಹೋರಾಡಬೇಕು. ಆ ಹೋರಾಟದಲ್ಲಿ ಗೆದ್ದಾಗ ಸಿಗುವ ಸಮಾಧಾನ, ಆತ್ಮತೃಪ್ತಿ ಲಕ್ಷಾಂತರ ರೂಪಾಯಿ ಶುಲ್ಕ ಪಡೆದರೂ ಸಿಗುವುದಿಲ್ಲ. ಪದವಿ ಪಡೆದವರು ಮುಂದೆ ಕಂಪನಿ, ಸರ್ಕಾರಿ ಸಂಸ್ಥೆ ಅಥವಾ ಪ್ರಭಾವಿ ವ್ಯಕ್ತಿಗಳನ್ನು ಪ್ರತಿನಿಧಿಸಬಹುದು. ಅಂತಹ ಅತ್ಯುನ್ನತ ಮಟ್ಟದ ಯಶಸ್ಸು ಗಳಿಸಿದಾಗಲೂ ಸಮಾಜದ ಕುಂದುಕೊರತೆ

ಬಗ್ಗೆ ಧ್ವನಿ ಎತ್ತಲು ಆಗದೆ ಇರುವ ಶ್ರೀ ಸಾಮಾನ್ಯನ ಮನವಿ ಆಲಿಸಿ, ಆತನಿಗೆ ಧ್ವನಿಯಾಗಿ ನಿಲ್ಲುವುದನ್ನು ಯಾವಾಗಲೂ ಮರೆಯಬಾರದು ಎಂದು ಹೇಳಿದರು.

ಗೌ.ನ್ಯಾ. ಶ್ರೀಮತಿ ಎಂ.ಜಿ. ಉಮಾ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಸಿ. ಬಸವರಾಜು ಮಾತನಾಡಿದರು. ಡಾ. ಸಿ.ಜಿ. ಬೆಟಸೂರಮಠ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರೊ. ಕೆ.ಎಸ್. ಸುರೇಶ್ ಸ್ವಾಗತಿಸಿದರು. ಡಾ. ಎನ್.. ವಾಣಿಶ್ರೀ ವಂದಿಸಿದರು. ಕು. ನವ್ಯಶ್ರೀ, ಶ್ರೀ ಗಣೇಶ್, ಕು. ಶಿವಾನಿ ಪಿ.ಮೂರ್ತಿ, ಕು. ಪೂಜಾ, ಕು. ನೀರಜಾ ಚಂದ್ರನ್ ಅನಿಸಿಕೆ ಹಂಚಿಕೊಂಡರು. ಕು. ಲಿಖಿತಾ ಪ್ರಾರ್ಥಿಸಿದರು. ಶ್ರೀ ಎ.ಟಿ. ಜಗದೀಶ್ ಕಾರ್ಯಕ್ರಮ ನಿರೂಪಿಸಿದರು.

**ಆಧ್ಯಾತ್ಮದ ನಂಟಿನಿಂದ ಮಾನವನ ಬದುಕು ಪಾವನ**

ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆಯ ನಂಟಿನಿಂದ ಮಾನವನ ಬದುಕು ಪಾವನವಾಗುತ್ತದೆ ಎಂದು ಶ್ರೀ ಸುತ್ತೂರು ಮಠದ ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 9ರಂದು ಟಿ. ನರಸೀಪುರ ತಾಲ್ಲೂಕು ಮುಡುಕುತೊರೆ ಶ್ರೀ ಕಲ್ಲುಮಠದ ನಿರಂಜನ ಪಟ್ಟಾಧಿಕಾರ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಕರ್ನಾಟಕದಲ್ಲಿ ಸರ್ವರಿಗೂ ಆಶ್ರಯವನ್ನು ನೀಡಿ, ಅಕ್ಷರ ಸಂಸ್ಕೃತಿ ಬೆಳೆಯುವಲ್ಲಿ ಮಠಗಳ ಕೊಡುಗೆ ಪ್ರಮುಖವಾದುದು. ಯಾವುದೇ ಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥ ಮನೋಭಾವದಿಂದ ಮಠಗಳು ಈ ಕಾರ್ಯವನ್ನು ಮಾಡಿಕೊಂಡು ಬರುತ್ತಿವೆ. ಮುಡುಕುತೊರೆಯ ಕಲ್ಲುಮಠ ನದಿ, ಹಸಿರು ಸಸ್ಯ ಸಂಪತ್ತು ಮತ್ತು ಬೆಟ್ಟ–ಗುಡ್ಡಗಳಿಂದ ಕೂಡಿದ ಸುಂದರ ಪ್ರಕೃತಿಯ ಮಧ್ಯದಲ್ಲಿ ಸ್ಥಾಪನೆಯಾಗಿದೆ. ಬಹುದೂರದಿಂದ ಬಂದ ತಪಸ್ವಿಗಳೊಬ್ಬರು ಇಲ್ಲಿ ಒಂದೇ ಹೊತ್ತು ಪ್ರಸಾದ ಸ್ವೀಕರಿಸಿ ಧ್ಯಾನಸ್ಥರಾಗಿದ್ದರಿಂದ ಅವರಿಗೆ ಒಪ್ಪತ್ತೇಶ್ವರ ಸ್ವಾಮಿಗಳು ಎಂದು ಹೆಸರು ಬಂದಿತು ಎಂದು ತಿಳಿದುಬರುತ್ತದೆ. ಹಿಂದಿನ ಶ್ರೀ ಚಂದ್ರಶೇಖರ ಸ್ವಾಮಿಗಳ ಕಾಲದಲ್ಲಿ ಸಾಕಷ್ಟು ಪ್ರಯತ್ನದ ಹೊರತಾಗಿಯೂ ಭಕ್ತರ ನಿರೀಕ್ಷೆಯಂತೆ ಶ್ರೀಮಠದ ಅಭಿವೃದ್ಧಿ ಆಗಲಿಲ್ಲ. ನೂತನ ಶ್ರೀಗಳು ಶ್ರದ್ಧೆ, ನಿಷ್ಠೆಯ ಗುಣಗಳನ್ನು ಮೈಗೂಡಿಸಿಕೊಂಡವರು. ಮಠವನ್ನು ಅಭಿವೃದ್ಧಿಯ ಪಥದಲ್ಲಿ ನಡೆಸಿಕೊಂಡು ಹೋಗುವ ಇಚ್ಛೆಯನ್ನು ಹೊಂದಿದ್ದಾರೆ. ಭಕ್ತರ ಸಲಹೆ ಮತ್ತು ಸಹಕಾರಗಳೊಂದಿಗೆ ಮಠವು ಅಭಿವೃದ್ಧಿ ಹೊಂದಲೆಂದು ಹಾರೈಸಿದರು.

ವಾಟಾಳು ಶ್ರೀ ಸೂರ್ಯಸಿಂಹಾಸನ ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಸುತ್ತೂರು ಶ್ರೀಗಳ ಮಾರ್ಗದರ್ಶನದಲ್ಲಿ ಕಲ್ಲುಮಠದ ಆಶ್ರಮಾಧಿಕಾರದ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆ. ಗ್ರಾಮಸ್ಥರು, ಸುತ್ತಮುತ್ತಲ ಗ್ರಾಮಗಳ ಭಕ್ತರ





ಸಹಕಾರದೊಂದಿಗೆ ನೂತನ ಶ್ರೀಗಳು ಮಠವನ್ನು ಮುನ್ನಡೆಸಿಕೊಂಡು ಹೋಗಬೇಕು ಎಂದರು.

ಕನಕಪುರ ಶ್ರೀ ದೇಗುಲಮಠದ ಶ್ರೀ ಚನ್ನಬಸವ ಸ್ವಾಮಿಗಳು ಮನುಷ್ಯ ಪ್ರಕೃತಿಯ ನಡುವೆ ನಿರ್ಮಲವಾದ ಬದುಕನ್ನು ಬಾಳಬೇಕು. ಪ್ರಕೃತಿಯ ಮಡಿಲಲ್ಲಿರುವ ಶ್ರೀಮಠದ ಅಭಿವೃದ್ಧಿಗೆ ಎಲ್ಲ ರೀತಿಯ ಸಹಕಾರವನ್ನು ಭಕ್ತರು ನೀಡಬೇಕು ಎಂದು ಹೇಳಿದರು.

ಬೆಟ್ಟದಪುರ ಶ್ರೀ ಸಲೀಲಾಖ್ಯ ಮಠದ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮಿಗಳು ಕಾವಿಧಾರಿಗಳು ಸಮಾಜವನ್ನು ತಿದ್ದುವ ಪ್ರಬಲ ಶಕ್ತಿಯುಳ್ಳವರು. ಉದಾಹರಣೆಗೆ ರಾಜೇಂದ್ರ ಶ್ರೀಗಳು ಸಮಾಜಕ್ಕೆ ಅಭೂತಪೂರ್ವ ಕೊಡುಗೆಯನ್ನು ನೀಡಿದರು. ಅವರ ಅಗಣಿತ ಸೇವೆ ಮತ್ತು ದೂರಾಲೋಚನೆಯ ಯೋಜನೆಗಳಿಂದ ಅನೇಕರು ಜೀವನ ರೂಪಿಸಿಕೊಂಡರು. ರಾಜೇಂದ್ರ ಶ್ರೀಗಳಂತೆ ಬದುಕಿದರೆ ಸಮಾಜದ ಏಳಿಗೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ನೂತನ ಶ್ರೀಗಳಾದ ಶ್ರೀ ನಂದಿಕೇಶ್ವರ ಸ್ವಾಮಿಗಳು ಶ್ರೀಮಠದ ಜವಾಬ್ದಾರಿಯನ್ನು ಎಲ್ಲರ ಸಹಕಾರದೊಂದಿಗೆ ನಿರ್ವಹಿಸಿಕೊಂಡು ಹೋಗಲಾಗುವುದು. ಎಲ್ಲ ಪೂಜ್ಯರುಗಳು ಬಂದು ಆಶೀರ್ವದಿಸಿರುವುದು ತಮ್ಮ ಪುಣ್ಯವೆಂದು ಹೇಳಿದರು.

ಬ್ರಾಹ್ಮೀ ಮುಹೂರ್ತದಲ್ಲಿ ಕನಕಪುರ ಶ್ರೀ ದೇಗುಲಮಠದ ಶ್ರೀ ಚನ್ನಬಸವ ಸ್ವಾಮಿಗಳು ನೂತನ ವಟುವಿಗೆ ವಿಧ್ಯುಕ್ತವಾಗಿ ಆಶ್ರಮಾಧಿಕಾರ ಅನುಗ್ರಹಿಸಿ ಶ್ರೀ ನಂದಿಕೇಶ್ವರ ಸ್ವಾಮಿಗಳು ಎಂಬ ನೂತನ ಅಭಿದಾನವನ್ನಿತ್ತು ಆಶೀರ್ವದಿಸಿದರು.

ದಂಡಿಕೆರೆ, ಮುಡುಕನಪುರ, ಮಾಡ್ರಳ್ಳಿ, ತೋಪಿನ ಮಠಗಳ ಶ್ರೀಗಳು. ತಾಲ್ಲೂಕು ವೀರಶೈವ-ಲಿಂಗಾಯತ ಮಹಾಸಭಾ ಅಧ್ಯಕ್ಷರಾದ ಶ್ರೀ ಪ್ರಕಾಶ್‌ರವರುಗಳು ಮಾತನಾಡಿದರು. ಶ್ರೀ ಪ್ರಭುಬುದ್ಧಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕೆ.ಪಿ. ಬಸವರಾಜು ಸಂಪುಟ ವಾಚಿಸಿದರು. ಶ್ರೀ ಎಸ್. ಕುಮಾರಸ್ವಾಮಿ ಸ್ವಾಗತಿಸಿದರು. ಶ್ರೀ ಮಾದಪ್ಪ ಪ್ರಾರ್ಥಿಸಿದರು. ಶ್ರೀ ನಂಜುಂಡಸ್ವಾಮಿ ವಂದಿಸಿದರು. ಶ್ರೀ ಎಸ್. ನಾಗೇಂದ್ರಪ್ರಭು ಕಾರ್ಯಕ್ರಮ ನಿರೂಪಿಸಿದರು.

**ಭಗವಂತ ಕೊಟ್ಟಿದ್ದನ್ನು ಸಮಾಜದ ಅಭಿವೃದ್ಧಿಗಾಗಿ ವಿನಿಯೋಗಿಸಬೇಕು**

ಭಗವಂತ ಕೊಟ್ಟಿದ್ದನ್ನು ಸಮಾಜದ ಅಭಿವೃದ್ಧಿಗಾಗಿ ವಿನಿಯೋಗಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಆಗಸ್ಟ್ 9ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀಮತಿ ಪಾರ್ವತಮ್ಮ ಮತ್ತು ಡಾ. ಶಾಮನೂರು ಶಿವಶಂಕರಪ್ಪ ಅತಿಥಿಗೃಹದ ಉದ್ಘಾಟನೆ ಪ್ರಯುಕ್ತ ಜರುಗಿದ ಪೂಜಾ ವಿಧಿವಿಧಾನಗಳ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ

ಮಾತನಾಡುತ್ತಾ ತಿಳಿಸಿದರು. ಡಾ. ಶಾಮನೂರು ಶಿವಶಂಕರಪ್ಪರವರು ಸಮಾಜೋಪಯೋಗಿ ಕೆಲಸಗಳಿಗೆ ಮಾದರಿಯಾಗಿದ್ದಾರೆ. ಎಲ್ಲ ವಿಧದಲ್ಲೂ ಡಾ. ಶಾಮನೂರು ಶಿವಶಂಕರಪ್ಪರವರು ಪಡೆದದ್ದಕ್ಕಿಂತ ನೀಡಿದ್ದೇ ಹೆಚ್ಚು. ಅನೇಕರಿಗೆ ಸಂಕಷ್ಟದ ಸಂದರ್ಭಗಳಲ್ಲಿ ಶಕ್ತಿ ತುಂಬಿದ್ದಾರೆ. ಅವರು ಇಚ್ಛೆಪಟ್ಟಿದ್ದರೆ, ಇನ್ನೂ ದೊಡ್ಡ ಹುದ್ದೆಗಳನ್ನು ಅಲಂಕರಿಸಬಹುದಿತ್ತು. ಆದರೆ ಅವರದು ನಿರ್ಲಿಪ್ತ ಭಾವ. ಅವರ ಉದಾರ ಮನೋಭಾವಕ್ಕೆ ಸಾಕ್ಷಿ ಎಂಬಂತೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಅತಿಥಿಗೃಹ ನಿರ್ಮಾಣವಾಗಿದೆ ಎಂದು ಹೇಳಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಡಾ. ಶಾಮನೂರು ಶಿವಶಂಕರಪ್ಪರವರು ಸೇವೆಗಾಗಿ ತಮ್ಮ ಶಕ್ತಿ, ಸಮಯ ಮತ್ತು ಸಂಪನ್ಮೂಲಗಳನ್ನು ನಿಸ್ವಾರ್ಥವಾಗಿ ನೀಡುವ ಕೊಡುಗೆಯೇ ದಾನ ಎನಿಸಿಕೊಳ್ಳುತ್ತದೆ. ಈ ರೀತಿಯಾಗಿ ಮಾಡಿದ ದಾನ ಸಮಾಜದ ಅಭ್ಯುದಯಕ್ಕೆ ನೆರವಾಗಬೇಕು ಎಂಬ ಆಶಯದಿಂದ ಮಠಮಾನ್ಯಗಳಿಗೆ, ಸಂಘ-ಸಂಸ್ಥೆಗಳಿಗೆ ತಮ್ಮ ಕೈಲಾದ ನೆರವು ನೀಡುತ್ತಿದ್ದೇನೆ. ಈ ದಿಶೆಯಲ್ಲಿ ಸುತ್ತೂರು ಮಠದ ಅನುಪಮ ಸೇವೆಗೆ ಕೈ ಜೋಡಿಸುವುದೇ ನಮ್ಮಂಥವರ ಭಾಗ್ಯ ಎಂದು ತಿಳಿಸಿದರು.

ಸಚಿವರಾದ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು ವ್ಯಕ್ತಿ ತಾನು ಬೆಳೆಯುವುದರೊಂದಿಗೆ ಸಮಾಜದ ಅಭಿವೃದ್ಧಿಗೂ ಶ್ರಮಿಸಬೇಕು ಎಂದು ತಿಳಿಸಿದರು.

ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ಶಿವಶಂಕರಪ್ಪನವರ ಬಹುಮುಖ ವ್ಯಕ್ತಿತ್ವವನ್ನು ಬಣ್ಣಿಸಿದರು. ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಸುತ್ತೂರು ಸಂಸ್ಥೆಗಳ ಆಡಳಿತಾಧಿಕಾರಿಗಳು ಹಾಗೂ ವಿವಿಧ ಸಂಸ್ಥೆಗಳ ಮುಖ್ಯಸ್ಥರು, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭೆಯ ನೂತನ ಪದಾಧಿಕಾರಿಗಳು, ಸಾರ್ವಜನಿಕರು ಹಾಗೂ ಭಕ್ತಾದಿಗಳು ಪಾಲ್ಗೊಂಡಿದ್ದರು.

❑

## ರಾಜೇಂದ್ರ ಶ್ರೀವಾಣಿ

- ಯಶಸ್ಸನ್ನು ನಾವು ಹುಡುಕಿಕೊಂಡು ಹೋಗಬಾರದು. ಅದು ನಮ್ಮನ್ನು ಹುಡುಕಿಕೊಂಡು ಬರಬೇಕು.
- ಸಂಗೀತವನ್ನು ಕಲಿಯುವ ಸಂಸ್ಕಾರ ಇಲ್ಲದಿದ್ದರೂ ಕೇಳಿ ಆನಂದಿಸುವ ಸಂಸ್ಕಾರವನ್ನಾದರೂ ಬೆಳೆಸಿಕೊಳ್ಳಬೇಕು.



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀಮತಿ ಪಾರ್ವತಮ್ಮ ಮತ್ತು ಡಾ. ಶಾಮನೂರು ಶಿವಶಂಕರಪ್ಪ ಅತಿಥಿಗೃಹದ ಉದ್ಘಾಟನೆ ಪ್ರಯುಕ್ತ ಪೂಜಾ ವಿಧಿವಿಧಾನಗಳನ್ನು ಡಾ. ಶಾಮನೂರು ಶಿವಶಂಕರಪ್ಪನವರು ನೆರವೇರಿಸಿದರು. ಶ್ರೀಮತಿ ಸುನಂದಾ ಗಿರೀಶ್, ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶ್ರೀ ಪುಟ್ಟರಾಜುರವರಿದ್ದಾರೆ (9 ಆಗಸ್ಟ್ 2024)




ಮೈಸೂರು ಜೆಎಸ್‌ಎಸ್ ಕಾನೂನು ಕಾಲೇಜು 16ನೇ ಪದವೀಧರರ ದಿನಾಚರಣೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಡಾ. ಶಿವಾನಂದ ಭಾರತಿ, ಪ್ರೊ. ಕೆ.ಎಸ್. ಸುರೇಶ್, ಸುಪ್ರೀಂ ಕೋರ್ಟ್‌ನ ಗೌರವಾನ್ವಿತ ನ್ಯಾಯಮೂರ್ತಿಗಳಾದ ಶ್ರೀ ಸರಸ ವೆಂಕಟನಾರಾಯಣ ಭಟ್ಟಿ, ಗೌ.ನ್ಯಾ. ಶ್ರೀಮತಿ ಎಂ.ಜಿ. ಉಮಾ, ಪ್ರೊ. ಸಿ. ಬಸವರಾಜು, ಡಾ. ಸಿ.ಜಿ. ಬೆಟಸೂರಮಠ, ಡಾ. ಎನ್. ವಾಣಿಶ್ರೀಯವರುಗಳೊಂದಿಗೆ ಪ್ರಶಸ್ತಿ ಪುರಸ್ಕೃತ ಪದವೀಧರರುಗಳಿದ್ದಾರೆ (2 ಆಗಸ್ಟ್ 2024)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕೇಂದ್ರದ ಸಚಿವರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (10 ಆಗಸ್ಟ್ 2024)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕೇಂದ್ರದ ರಾಜ್ಯ ಸಚಿವರಾದ ಕು. ಶೋಭಾ ಕರಂದ್ಲಾಜೆಯವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (2 ಆಗಸ್ಟ್ 2024)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಆಷಾಢ ಮಾಸದ ಕೊನೆಯ ಶುಕ್ರವಾರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಚಾಮುಂಡೇಶ್ವರಿ ಪಾದದ ದೇವಸ್ಥಾನದಲ್ಲಿ ವಿಶೇಷಪೂಜೆ ಹಾಗೂ ಪ್ರಸಾದ ವಿನಿಯೋಗ (ಅನ್ನದಾನ) ಕಾರ್ಯಕ್ರಮ ನೆರವೇರಿತು (2 ಆಗಸ್ಟ್ 2024)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರಾವಣ ಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳಾದ ಶ್ರೀ ಜಿ. ಲಕ್ಷ್ಮೀಕಾಂತರೆಡ್ಡಿಯವರು ಉದ್ಘಾಟಿಸಿದರು. ಶ್ರೀ ಎ.ಎನ್. ರಘುನಂದನ್, ವಿದುಷಿ ಎಂ.ವಿ. ಶುಭಾ ರಾಘವೇಂದ್ರ, ಶ್ರೀಮತಿ ಸೀಮಾ ಲಾಟ್ಕರ್, ಡಾ. ಕೆ. ಅನಂತರಾಮು ಹಾಗೂ ಹರವೆ ಶ್ರೀಗಳಿದ್ದಾರೆ (5 ಆಗಸ್ಟ್ 2024)



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀಮಠದಲ್ಲಿ ಶ್ರಾವಣಮಾಸದ ಪೂಜಾನುಷ್ಠಾನ ಮತ್ತು ಪ್ರವಚನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಉದ್ಯಮಿಗಳಾದ ಶ್ರೀ ಹೆಚ್.ಎಸ್. ರಾಘವೇಂದ್ರರಾವ್, ಮೈಸೂರು ಕರ್ನಾಟಕ ಪೊಲೀಸ್ ಅಕಾಡೆಮಿಯ ಉಪ ನಿರ್ದೇಶಕರಾದ ಶ್ರೀ ಎಸ್.ಎಲ್. ಚನ್ನಬಸವಣ್ಣನವರು, ಎಂ.ಎಲ್. ಹುಂಡಿಯ ಶ್ರೀ ಬೆಟ್ಟದ ಮಠದ ಶ್ರೀ ಗೌರೀಶಂಕರ ಸ್ವಾಮಿಗಳು, ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ, ಪ್ರೊ. ಹೆಚ್.ಬಿ ದೇವಣ್ಣ ಹಾಗೂ ಅಪರ ಜಿಲ್ಲಾಧಿಕಾರಿಗಳಾದ ಡಾ. ಪಿ. ಶಿವರಾಜುರವರುಗಳಿದ್ದಾರೆ (4 ಆಗಸ್ಟ್ 2024)



ಮುಡುಕುತೊರೆ ಶ್ರೀ ಕಲ್ಲುಮಠದಲ್ಲಿ ಪಟ್ಟಾಧಿಕಾರ ಮಹೋತ್ಸವ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ತೋಪಿನ ಮಠ, ಮುಡುಕನಪುರ, ಬೆಟ್ಟದಪುರ, ಮಾಡ್ರಹಳ್ಳಿ, ಕಲ್ಲುಮಠದ ನೂತನ ಶ್ರೀಗಳಾದ ಶ್ರೀ ನಂದಿಕೇಶ್ವರ ಸ್ವಾಮಿಗಳು, ವಾಟಾಳು ಶ್ರೀಗಳು ಹಾಗೂ ಇತರರಿದ್ದಾರೆ (9 ಆಗಸ್ಟ್ 2024)



Registered with the Registrar of Newspapers in India Under No. 50622 / 1986
'Prasada' Monthly, Vol. 39 Issue No. 8, August 2024



ISSN 2583-7648

ಬಿಡಿ ಪ್ರತಿ : ರೂ.10/-

e-mail: prasada@jssonline.org ⋆ www.jssonline.org